And Clause 1, the Long Title, the Preamble and the Enacting for ula were added to the Bill.

MCTION TO PASS

SRI R. L. JALAPPA (Minister for Co-operation).—Sir, I beg to move.—

"That the Karnataka Co-operative Societies (amendment) Bill 1984, as amended be passed".

MR. DEPUTY SPEAKER.—The question is.—

"That the Karnatrka Co-operative Societies (Amendment) Bill, 1984, as amended be passed".

The Motion was adopted and the Bill was passed

ವಿತ್ತೀಯ ಕಾರ್ಯ ಕಲಾಪಗಳು

ಬೇಡಿಕೆ ನಂ. ೩೨ — ಸಣ್ಣ ನೀರಾವರಿ

,, ೩೩ — ನೀರಾವರಿ, ಜಲಸಂಚಾರ ಒಳ ಚರಂಡಿ ವ್ಯವಸ್ಥೆ, ಹಾಗೂ ಪ್ರವಾಹ ನಿಯಂತ್ರಣ ಯೋಜನೆಗಳ

,, ೪೨ — ಲೋಕೋಪಯೋಗಿ (ನಿರ್ಮಾಣವನ್ನೊಳಪಡಿಸಿ)

,, ೪೩ — ಕಟ್ಟಡಗಳು

,, ೪೪ — ರಸ್ತೆಗಳು ಹಾಗೂ ಸೇತುವೆಗಳು

,, ೪೫ — ರೇವು ಹಾಗೂ ಜಲಸಾರಿಗೆ ಸೇವೆಗಳು.

ಶ್ರೀ ಎಚ್.ಡಿ ದೇವೇಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) ಮಾನ್ಯ ಉಪಾಧ್ಯಕ್ಷರೆ, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗೆ ಸೇರಿದಂತೆ ಬೇಡಿಕೆ ಸಂಖ್ಯೆ ೩೨, ೩೩, ೪೨, ೪೩, ೪೪ ಮತ್ತು ೪೫ನ್ನು ಸಭೆಯು ಒಪ್ಪಿಗೆಗಾಗಿ ಮಂಡನೆ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು.—ಬೇಡಿಕೆಗಳನ್ನು ಸಭೆಯು ಮುಂದೆ ಮಂಡಿಸಲಾಗಿದೆ. All the Demands are before the House. The Discussion will conclude at 5-00 P M. today and the reply of the hon. Minister will start tomorrow. Now, Sri Vodeyaraj will initiate the debate.

ಶ್ರೀ ಮಲ್ಲಾರ ಗೌಡ ಪಾಟೀಲ್.—ಇದು ಬಹಳ ದೊಡ್ಡ ಬೇಡಿಕೆ. ಮಾನ್ಯ ಮಂತ್ರಿಗಳಿಗೆ ಆರೋಗ್ಯ ಸರಿಯಿಲ್ಲದಿರುವುದರಿಂದ ನಾವು ಸಹಕರಿಸುತ್ತೇವೆ. ಇಲಾಖೆಗೆ ಸಂಬಂಧಪಟ್ಟ ವಿವರಗಳನ್ನು ಇವತ್ತು ಮುಂಜಾನೆ ಕೊಟ್ಟಿದ್ದಾರೆ. ನಾವು ಯಾವರೀತಿ ಚರ್ಚೆ ಮಾಡಬೇಕು ? ದಯಮಾಡಿ ನಮಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

† ಶ್ರೀ ಗೋವಿಂದ ಪಿ, ಒಡೆಯರಾಜ್ (ಕಮಲಾಪುರ).—ಸನ್ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಕಾಮಗಾರಿ ಮತ್ತು ನೀರಾವರಿ ಇಲಾಖೆ ಮಂತ್ರಿಗಳು ಎಲ್ಲ ಬೇಡಿಕೆಗಳನ್ನು ನಮ್ಮ ಮುಂದಿಟ್ಟಿದ್ದಾರೆ ಈ ಬೇಡಿಕೆಗಳನ್ನು ವಿರೋಧಿಸುತ್ತಾ ಇವತ್ತು ನಮ್ಮ ರಾಜ್ಯದಲ್ಲಿ ಸಾರ್ವಜನಿಕ ಕಾಮಗಾರಿ ಇಲಾಖೆ ಮತ್ತು ನೀರಾವರಿ ಇಲಾಖೆಗಳು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂಬ ಮಾತನ್ನು ಹೇಳಬಯಸುತ್ತೇನೆ. ರಾಜ್ಯದ ಆರ್ಥಿಕಾಭಿವೃದ್ಧಿಗೆ ಈ ಕಾಮಗಾರಿ ಮತ್ತು ನೀರಾವರಿ ಇಲಾಖೆಗಳು ಬಹಳ ಮಹತ್ವವಾದ ಪಾತ್ರವನ್ನು ವಹಿಸಬೇಕಾಗುತ್ತದೆ. ಮಾನ್ಯ ಮಂತ್ರಿಗಳ ಮೇಲೆ ಬಹಳ ಜವಾಬ್ದಾರಿ ಇದೆ. ಯಾವರೀತಿ ಹೆಮ್ಮೆಯಿಂದ ಕೆಲಸ ಮಾಡಬೇಕೋ ಆ ರೀತಿ ಮಾಡದೆ ಇರುವುದರಿಂದ ಇವತ್ತು ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತಿದೆ ಎಂಬುದು ಬಹಳ ಸ್ಪಷ್ಟವಾಗಿ ರೂಪರೆ

ವರ್ಷಗಳ ಕಾಲದಲ್ಲಿ ಈ ಸರ್ಕಾರ ನಡೆಸಿರುವ ಆಡಳಿತದ ಸಮೀಕ್ಷೆ ಮಾಡಿದರೆ ಗೊತ್ತಾಗುತ್ತದೆ. ಈ ಕಾರ್ಯಕ್ರಮಗಳು ರಾಜ್ಯದ ಅಭಿವೃದ್ಧಿಗೆ ಮಹತ್ವವಾದುದಲ್ಲದೆ ಅಭಿವೃದ್ಧಿ ಕಾರ್ಯಕ್ಕೆ ತಳಪಾಯ ಹಾಕತಕ್ಕ ಕೆಲಸಗಳಾಗಿರುವುದರಿಂದ ಈ ಇಲಾಖೆಗಳು ತಮ್ಮದೇ ಆದ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಬಜೆಟ್ ಮಂಡನೆಯಾಗುತ್ತದೆ. ಇದು ಮಂಡನೆಯಾಗಿ ಐದಾರು ತಿಂಗಳಾದಮೇಲೆ ಎಸ್ಟಿಮೇಟ್ ಹೋಗುತ್ತದೆ. ನಂತರ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್, ಟೆಕ್ನಿಕಲ್ ಸ್ಯಾಂಕ್ಷನ್ ಆಗಿ ಯಾವ ಕೆಲಸ ಕಾರ್ಯಗಳು ಬಜೆಟ್‌ನಲ್ಲಿ ಅಳವಡಿಸಲ್ಪಟ್ಟಿರುತ್ತವೆಯೋ ಅವು ಪ್ರಾರಂಭವಾಗುವುದಕ್ಕೆ ಸಾಕಷ್ಟು ಕಾಲ ಹಿಡಿಯುತ್ತದೆ. ಅಂದರೆ ವರ್ಷ ಮುಗಿಯುವುದಕ್ಕೆ ೧ ತಿಂಗಳು ಅಥವಾ ೧೫ ದಿವಸ ಮುಂಚೆ ಕೆಲಸ ಕಾರ್ಯಗಳು ಅನೇಕ ಸಲ ಪ್ರಾರಂಭವಾಗುತ್ತದೆ. ಇದರಿಂದ ಏನು ಗೊತ್ತಾಗುತ್ತದೆಂದರೆ ಬಜೆಟ್ಟಿನಲ್ಲಿ ಏನು ಕಾಮಗಾರಿಗಳನ್ನು ಹಾಕಿಕೊಂಡಿರುತ್ತಾರೋ ಅವುಗಳ ಬಗ್ಗೆ ಆಸಕ್ತಿ ವಹಿಸಿ ತಕ್ಷಣ ಇದೇ ವರ್ಷವೇ ಕೆಲಸ ಮಾಡಬೇಕು, ಜಾಗ್ರತೆ ಮುಗಿಸಬೇಕು ಎಂಬ ಶ್ರದ್ಧೆ ಈ ಇಲಾಖೆಯಲ್ಲಿ ಕಾಣುತ್ತಿಲ್ಲ. ಇದರಿಂದಾಗಿ ಸರ್ಕಾರದ ಉದ್ದೇಶವೇನಿದೆ ಅದು ಸಫಲವಾಗುವುದಿಲ್ಲ. ಆದ್ದರಿಂದ ಈ ಇಲಾಖೆಗಳು ಕೇವಲ ಮೈಂಟೆನೆನ್ಸ್ ಡಿಪಾರ್ಟ್‌ಮೆಂಟ್‌ಗಳಾಗಿವೆ ಎಂದು ಹೇಳಬೇಕಾಗುತ್ತದೆ. ಒಂದು ವರ್ಷ ಪೂರ್ತಿ ಮಾಡಬೇಕಾದ ಅಭಿವೃದ್ಧಿ ಕಾರ್ಯ ನಡೆಯದೆ ೧೦–೧೧ನೇ ತಿಂಗಳಲ್ಲಿ ಪ್ರಾರಂಭವಾದರೆ ಇಲಾಖೆಗಳು ಯಾವ ರೀತಿ ಕೆಲಸ ಮಾಡುವುದಕ್ಕೆ ಸಶಕ್ತವಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕನ ಮಾಡಬೇಕಾಗುತ್ತದೆ. ಒಟ್ಟಾರೆ ಇದನ್ನು ವಿಚಾರ ಮಾಡಿದರೆ ಈ ಇಲಾಖೆಗಳು ಕೇವಲ ಮೈಂಟೆನೆನ್ಸ್ ಡಿಪಾರ್ಟ್‌ಮೆಂಟ್‌ಗಳಾಗಿವೆಯೋ ಹೊರತು ಡೆವಲಪ್ಮೆಂಟ್ ಡಿಪಾರ್ಟ್‌ಮೆಂಟಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಬಹುದಾಗಿದೆ. ಈ ಇಲಾಖೆಯನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಎಂದು ಹೇಳುವ ಬದಲು ಪಬ್ಲಿಕ್ ವರ್ಕ್ಸ್ ಡಿಲೇ ಡಿಪಾರ್ಟ್‌ಮೆಂಟ್ ಎಂದು ಕರೆದರೆ ಸರಿಹೋಗುತ್ತದೆ. ನಾನು ಈ ಮಾತನ್ನು ಹೇಳುವಾಗ ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಬಜೆಟ್ಟಿನಲ್ಲಿ ಅಡಕವಾಗಿರುವ ಕೆಲಸಕಾರ್ಯಗಳು ಪ್ರಾರಂಭವಾಗುವುದಕ್ಕೆ ೧೧ ತಿಂಗಳಾದರೆ ಹಿಂದಿನ ಬ್ಯಾಕ್‌ಲಾಗು ಪೂರ್ತಿಮಾಡಲು ಯಾವರೀತಿ ಕೆಲಸ ಮಾಡುತ್ತೀರಿ ? ಹಿಂದಿನ ವರ್ಷದ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಲೋಕೋಪಯೋಗಿ ಇಲಾಖೆ ನಿರತವಾಗುತ್ತದೆಯೋ ವಿನಹ ಹೊಸ ಕಾರ್ಯ ಪ್ರಾರಂಭ ಮಾಡಿ ಅದನ್ನು ಆ ವರ್ಷವೇ ಮುಗಿಸಿ ಮುಂದಿನ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಬೇಕು ಎಂಬ ಸೀರಿಯಸ್‌ನೆಸ್ ಅಥವಾ ಧ್ಯೇಯಧೋರಣೆ ಈ ಇಲಾಖೆಯಲ್ಲಿ ಕಾಣುತ್ತಿಲ್ಲ. ನಾನು ತಿಳಿದುಕೊಂಡಿದ್ದೆ ಹೊಸ ಜನತಾ ಸರ್ಕಾರ ಬಂದಮೇಲೆ ಮಂತ್ರಿಗಳು ಈ ಇಲಾಖೆಯಲ್ಲಿ ಹೊಸ ದಿಕ್ಕು ಕೊಡುತ್ತಾರೆ, ಹೊಸ ಧೋರಣೆ ಕೊಡುತ್ತಾರೆ, ಕೆಲಸಕಾರ್ಯಗಳು ತ್ವರಿತವಾಗಿ ಪ್ರಾರಂಭಮಾಡಿ ಅದರ ಫಲ ಜನರಿಗೆ ಸಿಗುತ್ತದೆ ಎಂದು ಯೋಚನೆ ಮಾಡಿದ್ದೆ. ಆದರೆ ವಿಷಾದದಿಂದ ಹೇಳಬೇಕಾಗುತ್ತದೆ ; ಆ ಕೆಲಸ ತಮ್ಮ ಕಡೆಯಿಂದ ಆಗಿಲ್ಲ. ಮಾಡುತ್ತೇನೆ ಎಂದು ಅನೇಕ ಸಾರಿ ಹೇಳಿದ್ದೀರಿ, ಆದರೆ ಈ ಕೆಲಸ ಮಾಡದೆ ತಾವು ಬಹಳಷ್ಟು ಕಾಲವನ್ನು ರಾಜಕೀಯದಲ್ಲಿ ತೊಡಗಿಸಿದ್ದೀರಿ ಎಂಬ ಆಪಾದನೆಯನ್ನು ಮಾಡಬೇಕಾಗಿದೆ. ಈ ಮಾತನ್ನು ಕೊನೆಗೆ ಹೇಳುವ ಬದಲು ಮುಂಚೆಯೇ ಏತಕ್ಕೆ ಹೇಳಿದೆ ಎಂದರೆ ಈ ಮಂತ್ರಿಗಳು ಸರಿಯಾಗಿ ಮನಸ್ಸು ಕೊಟ್ಟು ಕೆಲಸ ಮಾಡಿಲ್ಲದಿರುವುದರಿಂದ ಈ ಇಲಾಖೆಯ ಕೆಲಸ ಕುಂಠಿತವಾಗಿದೆ ಎಂಬುದು ವೇದ್ಯವಾಗುತ್ತದೆ. ಮಂತ್ರಿಗಳು ಎಂದರೆ ಅವರು ಇಡೀ ಸರ್ಕಾರಕ್ಕೆ ಇರುತ್ತಾರೆ. ಕೇವಲ ಒಂದು ಪಕ್ಷಕ್ಕೆ ಅಥವಾ ವಿರೋಧಪಕ್ಷಕ್ಕೆ ವಿರೋಧರಾಗಿರುತ್ತಾರೆ ಎಂದು ನನಗೆ ಅನ್ನಿಸಿರಲಿಲ್ಲ. ನಾನು ತಿಳಿದುಕೊಂಡಿದ್ದು ಮಂತ್ರಿ ಎಂದರೆ ಇಡೀ ರಾಜ್ಯ ಸೇರಿದವರು ಎಂದು. ಒಂದು ಸಾರಿ ಅಧಿಕಾರಕ್ಕೆ ಬಂದಮೇಲೆ ಸರ್ಕಾರ ವಹಿಸಿಕೊಂಡಮೇಲೆ ಅವರು ಇಡೀ ರಾಜ್ಯಕ್ಕೆ, ಸದನಕ್ಕೆ, ಶಾಸಕರಿಗೆ ಮಂತ್ರಿಗಳಾಗಿ ಕೆಲಸ ಮಾಡುತ್ತಾರೆ ಎಂಬ ಕಲ್ಪನೆ ನಮ್ಮದು. ಆದರೆ ದುರ್ದೈವದಿಂದ ಆ ಕೆಲಸ ಆಗುತ್ತಿಲ್ಲ. ಬಜೆಟ್ಟಿನಲ್ಲಿ ತಾವು ಹಾಕಿರುವ ಕೆಲಸಗಳನ್ನು ನೋಡಿದರೆ ತಾವು ಕೇವಲ ತಮ್ಮ ಪಕ್ಷದ ಶಾಸಕರು ಇರುವ ಕಡೆಗಳಲ್ಲಿ ಹೆಚ್ಚು ಕೆಲಸಕಾರ್ಯ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಂತೆ ಕಾಣುತ್ತದೆಂದು ಆಪಾದನೆಯನ್ನು ಮಾಡಬೇಕಾಗುತ್ತದೆ. ಇಲಾಖೆ ಎಷ್ಟು ಅಸ್ತವ್ಯಸ್ತವಾಗಿದೆ ಎಂದರೆ ನಮಗೆ ಪರ್ಫಾರ್ಮೆನ್ಸ್ ಬಜೆಟ್ ಈಗತಾನೇ ಸಿಕ್ಕಿತು. ಈಗ ಇದನ್ನು ಕೊಟ್ಟರೆ ಯಾವಾಗ ಓದಬೇಕು, ನಾವು ಏನು ಅರ್ಥ ಮಾಡಿಕೊಳ್ಳಬೇಕು, ಬೇಡಿಕೆ ಮೇಲೆ ಏನು ಚರ್ಚೆ ಮಾಡಬೇಕು ? ಈಗ ತಾನೇ ಟೇಬಲ್ ಮುಂದೆ ಇದನ್ನು ಇಟ್ಟಿದ್ದಾರೆ. ಅಂದರೆ ಇದರ ಅರ್ಥ ಈ ಇಲಾಖೆಯ ಕೆಲಸ ಕಾರ್ಯಗಳನ್ನು ಶಾಸಕರು ಅರ್ಥ ಮಾಡಿಕೊಳ್ಳಬಾರದು, ಚರ್ಚೆ ಮಾಡಬಾರದು, ನಾವು ಹೇಳಿದಷ್ಟೇ ಸರಿ, ನಾವು ಚರ್ಚೆ ಮಾಡಿದಷ್ಟೇ ಸರಿ, ನಮಗೆ ಮೆಜಾರಿಟಿ ಇದೆ, ನಾವು ಪಾಸ್ ಮಾಡಿಕೊಂಡು

ಹೋಗುತ್ತೇವೆ ಎಂಬ ದುರುದ್ದೇಶ ಇದ್ದಂತೆ ಕಾಣುತ್ತದೆ. ಸರ್ಕಾರದ ಕೆಲಸವನ್ನು ಅವಲೋಕನ **ಮಾಡುವುದಕ್ಕೆ** ಮುಂಚೆಯೇ ನಮಗೆ ಸಾಮಗ್ರಿಗಳನ್ನು ಕೊಡಬೇಕಾಗುತ್ತದೆ. ಆದರೆ ಕೊಟ್ಟಿಲ್ಲ, ಇದು ಎಷ್ಟುಮಟ್ಟಿಗೆ ನಮ್ಮ ಸರ್ಕಾರದ ಇಲಾಖೆ ಅಸ್ತವ್ಯಸ್ತವಾಗಿದೆ ಎಂಬುದು ಗೊತ್ತಾಗುತ್ತದೆ. ಅದಕ್ಕೆ ಮಾನ್ಯ ಮಂತ್ರಿಗಳೂ ಬಹಳಮಟ್ಟಿಗೆ ಕಾರಣ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಶಾಸಕರು ಹೇಳಿದ ಕೆಲಸಗಳನ್ನು ಹೆಚ್ಚಾಗಿ, ಬಿಟ್ಟು, ತಮ್ಮ ಪಕ್ಷದ ಶಾಸಕರನ್ನು ಖುಷಿ ಮಾಡುವುದಕ್ಕೋಸ್ಕರವಾಗಿ ಮೆಜಾರಿಟಿ ಉಳಿಸಿಕೊಳ್ಳುವ ಸಲುವಾಗಿ ಮತ್ತು ಸರ್ಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಜಾಸ್ತಿ ಪ್ರಯತ್ನಪಟ್ಟಿದ್ದೀರಿ. ಆದ್ದರಿಂದ ವಿರೋಧಪಕ್ಷದವರು ಏನೇ ಕೆಲಸ ಹೇಳಿದರೂ ಸಹ ಅದನ್ನು ಸರಿಯಾಗಿ ಮಾಡತಕ್ಕ ಮನಸ್ಸಿಲ್ಲವೆಂಬ ಆಪಾದನೆಯನ್ನು ಮಾಡಬೇಕಾಗುತ್ತದೆ. ಏತಕ್ಕೆ ಹೀಗೆ ಆಗುತ್ತಿದೆಯೆಂದರೆ, ನಾನು ಸರ್ಕಾರದ ಮನೋಭಾವವನ್ನು ಆಳವಾಗಿ ಅರ್ಥ ಮಾಡಿಕೊಂಡಿದ್ದೇನೆ.

೧೨-೦೦ ಮಧ್ಯಾಹ್ನ

ಮಾನ್ಯ ಅಧ್ಯಕ್ಷರೇ, ನಮ್ಮ ಪಕ್ಷದ ಶಾಸಕರು ಯಾವುದೇ ಸಾರ್ವಜನಿಕ ಕೆಲಸಕ್ಕೆ ಅವರ ಹತ್ತಿರ ಹೋದರೂ ಅವರು ತಾರತಮ್ಯ ಮಾಡಬಾರದು. ಅವರು ಮಂತ್ರಿಗಳು ಎಂದ ಮೇಲೆ ಅವರು ಇಡೀ ರಾಜ್ಯಕ್ಕೆ ಸೇರಿದವರಾಗಿರುತ್ತಾರೆ. ಇವತ್ತು ನಮ್ಮ ಪಕ್ಷದ ಶಾಸಕರು ಅವರ ಹತ್ತಿರ ಹೋದರೆ ಅವರ ಕೆಲಸ ಕಾರ್ಯಗಳು ಆಗುವುದಿಲ್ಲ. ಅದು ವರ್ಗಾವಣೆ ವಿಷಯ ಆಗಬಹುದು, ಸೇತುವೆ ಕೆಲಸ ಆಗಿರಬಹುದು, ರಸ್ತೆ ಕೆಲಸ ಆಗಿರಬಹುದು, ಅಥವಾ ನೀರಾವರಿ ಕೆಲಸ ಆಗಿರಬಹುದು. ಅವರು ಇವರ ಹತ್ತಿರ ಹೋದರೆ ಏನು ಹೇಳುತ್ತಾರೆ ? ನೀವು ನಿಮ್ಮ ಪಕ್ಷ ಬಿಟ್ಟು ನಮ್ಮ ಪಕ್ಷಕ್ಕೆ ಬನ್ನಿ, ನಾನು ನಿಮ್ಮ ಕೆಲಸ ಮಾಡುತ್ತೇನೆ ಎಂದು ಹೇಳುವುದರಲ್ಲಿ ಇವತ್ತು ತೊಡಗಿದ್ದಾರೆ. ಸಂದೈವ, ನಮ್ಮ ಪಕ್ಷದ ಜನರು ಆ ಕೆಲಸವನ್ನು ಮಾಡಲಿಲ್ಲ. ಈ ಒಂದು ಕೆಲಸದಲ್ಲಿ ಅವರು ಮಗ್ನರಾಗಿದ್ದಾರೆ. ಇವರು ಈ ಬಗ್ಗೆ ಕೆಲಸ ಮಾಡುತ್ತಿರುವುದರಿಂದ ಇಲಾಖೆಯ ಕೆಲಸ ಕಾರ್ಯಗಳು ನಿಧಾನವಾಗಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ನಾನು ಸಾರ್ವಜನಿಕ ಕಾಮಗಾರಿ ಮತ್ತು ರಸ್ತೆಗಳ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ನನಗೆ ಹಿಂದಿನ ವರ್ಷ ಏನು ಸಾಮಗ್ರಿಗಳನ್ನು ಕೊಟ್ಟಿದ್ದರೋ ಅದನ್ನು ನೋಡಿ ಅದರ ಮೇಲೆ ನಾನು ಮಾತನಾಡಬೇಕಾಗುತ್ತದೆ. ಈ ವರ್ಷದ ಸಾಮಗ್ರಿಗಳು ಈಗ ತಾನೇ ಬಂದಿವೆ. ನಮ್ಮ ರಾಜ್ಯದಲ್ಲಿ ಈಗ ಇರತಕ್ಕ ಹಳ್ಳಿಗಳ ಸಂಖ್ಯೆ ೨೬, ೮೭೧. ಆರನೇ ಯೋಜನೆ ಮುಗಿಯುವುದರಲ್ಲಿ ಇದ್ದರೂ ರಾಜ್ಯದ ಇನ್ನೂ ೧,೨೦೪ ಹಳ್ಳಿಗಳಿಗೆ ಯಾವುದೇ ರೀತಿಯ ರಸ್ತೆಗಳು ಇರುವುದಿಲ್ಲ. ನಮ್ಮ ರಾಜ್ಯದಲ್ಲಿ ಫೇರ್ ವೆದರ್ ರೋಡ್ಸ್, ಆಲ್ ವೆದರ್ ರೋಡ್ಸ್, ಅಸ್ಫಾಲ್ಟ್ ರೋಡ್ಸ್ ನ್ಯಾಷನಲ್ ಹೈವೇ, ಸ್ಟೇಟ್ ಹೈವೇಗಳು ಇದ್ದು ಇವುಗಳಿಂದ ಗ್ರಾಮಾಂತರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಬೇಕಾಗಿದ್ದರೂ ಇನ್ನೂ ೧,೨೦೪ಹಳ್ಳಿಗಳಿಗೆ ರಸ್ತೆಗಳೇ ಇಲ್ಲ ಮುಂದಿನ ವರ್ಷ ಕೂಡಾ ಈ ರಸ್ತೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಕಾರಣ, ಈ ಇಲಾಖೆಯವರು ಕಳೆದ ವರ್ಷ ಏನೇನು ಕೆಲಸಗಳನ್ನು ತೆಗೆದುಕೊಂಡಿರುತ್ತಾರೆ, ಆ ಕೆಲಸ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸದೇ ಸ್ಪಿಲ್ ಓವರ್ ಮಾಡುವ ಪದ್ಧತಿಯನ್ನು ಉದ್ದೇಶಪೂರ್ವಕವಾಗಿ ಬೆಳೆಸಿಕೊಂಡು ಬಂದಿರುವುದರಿಂದ ಇಂತಹ ಕಾರ್ಯಗಳು ಆಗಿವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಎಲ್ಲಾ ಹಳ್ಳಿಗಳಿಗೂ ರಸ್ತೆಗಳು ಆಗಬೇಕಾಗಿವೆ. ಈ ಬಗ್ಗೆ ಕೇಂದ್ರ ಸರ್ಕಾರ ಸಹಾಯ ನೀಡುವಂತಹ ಕಾರ್ಯಕ್ರಮಗಳೂ ಸಹಾ ಇವೆ. ಹೀಗಿದ್ದರೂ ಕೂಡಾ ನಮ್ಮಲ್ಲಿ ೧೧,೫೦೦ ಕಿಲೋಮೀಟರ್ ಕಚ್ಚಾ ರಸ್ತೆಗಳು, ೬,೦೪೪ ಕಿಲೋಮೀಟರ್ ಫೇರ್ ವೆದರ್ ರಸ್ತೆಗಳು, ೭,೭೨೧ ಕಿ. ಮೀ. ಆಲ್ ವೆದರ್ ರಸ್ತೆಗಳು ಇದಕ್ಕೆ ೭ನೇ ಯೋಜನೆಯ ಕೊನೆಯ ಅವಧಿಯಲ್ಲಿ ಈ ರಸ್ತೆಗಳ ಸಂಖ್ಯೆ ಜಾಸ್ತಿಯಾಗಿರುತ್ತದೆ. ಆ ಪ್ರಕಾರ ಆಲ್ ವೆದರ್ ರಸ್ತೆಗಳು ೮,೦೩೯ ಕಿ.ಮೀ. ಆಗಿದ್ದು, ಫೇರ್ ವೆದರ್ ರಸ್ತೆಗಳು ೫,೯೯೪ ಕಿ. ಮೀ. ಆಗಿದ್ದು ಕಚ್ಚಾ ರಸ್ತೆಗಳು ೧೧,೭೩೪ ಕಿಲೋಮೀಟರ್ ಇರುತ್ತವೆ. ಆದರೂ ಇನ್ನೂ ೧,೨೦೪ ಹಳ್ಳಿಗಳಿಗೆ ಇಲ್ಲ ಎಂದು ಹೇಳಬೇಕಾಗುತ್ತದೆ. ಈ ವರ್ಷ ಈ ಬಾಬಿಗಾಗಿ ೨೫ ಕೋಟಿ ರೂಪಾಯಿ ಇಟ್ಟಿರುವ ಬಗ್ಗೆ ನಾನು ಆಯವ್ಯಯದಲ್ಲಿ ನೋಡಿದೆ. ಹೋದ ವರ್ಷ ಈ ಬಗ್ಗೆ ೨೧ ಕೋಟಿ ೭ ಸಾವಿರ ರೂಪಾಯಿ ಇಡಲಾಗಿತ್ತು, ಈ ೨೫ ಕೋಟಿ ರೂಪಾಯಿಗಳಲ್ಲಿ ಹೊಸ ಕೆಲಸಗಳಿಗೆ ಕೇವಲ ೬ ಕೋಟಿ ರೂಪಾಯಿ ಇಡಲಾಗಿದೆ. ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಶೇಕಡಾ ೨೭ ಹಳ್ಳಿಗಳಿಗೆ ಮಾತ್ರ ಆಲ್ ವೆದರ್ ರಸ್ತೆಗಳು ಇದ್ದು ಇನ್ನು ಶೇಕಡಾ ೪೩ ಹಳ್ಳಿ

ಗಳಿಗೆ ಕಚ್ಚಾ ರಸ್ತೆಗಳು ಮಾತ್ರ ಇವೆ. ಬಾಕಿ ಹಳ್ಳಿಗಳಿಗೆ ರಸ್ತೆಗಳು ಮಾಡಬೇಕಾಗಿದೆ. ಇವುಗಳನ್ನು ಮಾಡುವುದಕ್ಕೆ ಕೇವಲ ೬ ಕೋಟಿ ರೂಪಾಯಿ ಹಾಗೂ ಒಟ್ಟು ೨೫ ಕೋಟಿ ರೂಪಾಯಿಗಳನ್ನು ಏನು ಇಟ್ಟಿದ್ದೀರಿ ಇದು ಸಾಕಾಗುವುದಿಲ್ಲವೆಂದು ಹೇಳುತ್ತೇನೆ. ಇವತ್ತು ಹಳ್ಳಿಗಳ ಸಂಪರ್ಕ ಮಹತ್ವದ ವಿಷಯವಾಗಿರುವುದರಿಂದ ಈ ಬಗ್ಗೆ ಮಂತ್ರಿಗಳು ಅದಷ್ಟು ಗಮನವನ್ನು ಕೊಡಬೇಕಾಗಿದೆ. ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ಎಂ. ಎನ್. ಪಿ. ರಸ್ತೆ ಕಾರ್ಯಕ್ರಮ ೧೯೮೦-೮೧ರಲ್ಲೇ ಪ್ರಾರಂಭವಾಗಿವೆ. ಐ.ಸಿ.ಆರ್.ಎಸ್ ರಸ್ತೆಗಳು, ಬರಗಾಲ ಪರಿಹಾರಕ್ಕಾಗಿ ತೆಗೆದುಕೊಳ್ಳುವ ರಸ್ತೆಗಳು. ಟಿ.ಡಿ.ಬಿ. ರಸ್ತೆಗಳು, ಎಸ್. ಆರ್. ಇ.ಪಿ. ರಸ್ತೆಗಳು ಈಗಾಗಲೇ ಅಸ್ತಿತ್ವದಲ್ಲಿ ಇವೆ. ಹಾಗೂ ಆರ್. ಎಲ್. ಇ. ಪಿ. ಹೊಸ ಕಾರ್ಯಕ್ರಮ ಪ್ರಾರಂಭವಾಗಿದೆ. ಅಧ್ಯಕ್ಷರೇ ಈ ಎಲ್ಲ ಕಾರ್ಯಕ್ರಮಗಳು ಇದ್ದರೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಹೆಮ್ಮೆಯಿಂದ ಹಳ್ಳಿ ಹೆದ್ದಾರಿ ಸೇತು ಬಂಧನ ಎಂಬ ಕಾರ್ಯಕ್ರಮಗಳನ್ನು ತಂದಿದ್ದೇವೆಂದು ಹೇಳಿದ್ದಾರೆ. ಕೂಲಂಕಷವಾಗಿ ಈ ಬಗ್ಗೆ ನಾನು ಓದಿ ನೋಡಿದೆ. ಯಾವುದೇ ಸರ್ಕಾರ ಬಂದರೂ ಎಂ. ಎನ್. ಪಿ. ರಸ್ತೆಗಳನ್ನು ಐ.ಸಿ.ಆರ್.ಸಿ. ರಸ್ತೆಗಳನ್ನು ಮಾಡುತ್ತೇವೆ. ಹೊಸ ಯೋಜನೆಗಳು ಏನು ಬಂದವು? ಹಳ್ಳಿ ಹೆದ್ದಾರಿ ಎಂದು ಆಯವ್ಯಯದಲ್ಲಿ ಇದೆ. ಹಳೇ ಕಾರ್ಯಕ್ರಮಗಳು ಏನು ಇವೆಯೋ ಅದಕ್ಕೆ ಉಪಯೋಗಿಸುವ ಹಣವನ್ನು ಉಪಯೋಗಿಸಿಕೊಂಡು ಹೊಸ ಹೆಸರನ್ನು ತಾವು ಕೊಟ್ಟಿದ್ದೀರಿ. ಆದ್ದರಿಂದ ಇದು ಒಂದು ಗಿಮ್ಮಿಕ್ ಎಂದು ನಾನು ಹೇಳಬೇಕಾಗಿದೆ. ಈ ಬಗ್ಗೆ ನಾನು ೧೯೮೦-೮೧ನೇ ಇಸವಿಯ ಆನ್ಯುಯಲ್ ರಿಪೋರ್ಟ್ ಓದುತ್ತೇವೆ.

"A master plan estimated to cost Rs. 949 crores has been prepared for connecting all the inhabited villages in the State with all weather roads. As a first phase of the above master plan, a resource based plan costing Rs 36 crores has been drawn up for constructing C. works having a linear water way of less than six metres and side drains. Under this plan it is proposed to cover 65 percent of the total inhabited villages with C.D. works and side drains, This plan is being implemented from the year 1980-81 and there is a budget provision of Rs. 4.95 crores for this programme during the year. During 1981-82, Rs. 1.5 crores is provided for this programme"

ಮಾನ್ಯ ಅಧ್ಯಕ್ಷರೇ, ರಸ್ತೆಗಳು ಮಾಸ್ಟರ್ ಪ್ಲಾನ್‌ನಲ್ಲಿ ಜಾರಿಯಲ್ಲಿ ಇವೆ. ಎಂ. ಎನ್.ಪಿ. ಕಾರ್ಯಕ್ರಮಗಳು ಈಗಾಗಲೇ ಇವೆ. ಆದರೆ ಈ ಸರ್ಕಾರ ಇದಕ್ಕೆ ಹೊಸ ಹೆಸರು ಇಟ್ಟು "ಹಳ್ಳಿ ಹೆದ್ದಾರಿ ಎಂದು ಮಾಡಿದರು. ಇವತ್ತಿನ ದಿವಸ ಹಳ್ಳಿಗಳಿಗೆ ಒಳ್ಳೆಯ ಕಚ್ಚಾ ರಸ್ತೆಗಳು ಆಗಬೇಕಾಗಿದೆ, ೧೯೮೦-೮೧ನೇ ಸಾಲಿನ ಕಾರ್ಯಕ್ರಮಗಳನ್ನು ನೋಡಿದಾಗ ಸಿ.ಡಿ. ವರ್ಕ್ಸ್‌ನ್ನು ಯಾವ ಸರ್ಕಾರ ಇದ್ದರೂ ಮಾಡುತ್ತದೆಂದು ಗೊತ್ತಾಗುತ್ತದೆ. ಆದರೆ ಇದಕ್ಕೆ ದೊಡ್ಡ ಹೆಸರು ಇಟ್ಟು ಸೇತು ಬಂಧನ ಎಂದು ಮಾಡಿದ್ದೀರಿ. ಇನ್ನು ಹರಿಜನ ವಾಡ ಮತ್ತು ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್‌ಗೋಸ್ಕರ ೨ ಕೋಟಿ ರೂಪಾಯಿಗಳನ್ನು ಇಟ್ಟಿರುವುದು ಸ್ವಾಗತಾರ್ಹ. ಆದರೆ ಹರಿಜನ ವಾಡಾಗಳ ಬಗ್ಗೆ ಇಷ್ಟು ಹಣ ಸಾಕಾಗುವುದಿಲ್ಲ. ಈ ಬಗ್ಗೆ ಇನ್ನೂ ಹೆಚ್ಚು ಹಣ ಇಡಬೇಕೆಂದು ಹೇಳುತ್ತೇನೆ. ಏಕೆಂದರೆ ಹಿಂದುಳಿದ ಜನರಿಗೆ ಅನುಕೂಲ ಮಾಡಬೇಕಾದರೆ ಹೆಚ್ಚು ಹಣ ಬೇಕಾಗುತ್ತದೆ. ಈ ಒಂದು ದೊಡ್ಡ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಈ ಬಗ್ಗೆ ಒಂದು ಕ್ರ್ಯಾಶ್ ಪ್ರೋಗ್ರಾಮನ್ನು ಹಾಕಿಕೊಂಡು ಎಲ್ಲಾ ಹಳ್ಳಿಗಳಿಗೆ ರಸ್ತೆ ಒದಗಿಸುವುದಕ್ಕೆ ಏನಾದರೂ ಏರ್ಪಾಡು ಮಾಡಬೇಕು. ಈ ಬಗ್ಗೆ ತಾವು ವಿಶ್ವ ಬ್ಯಾಂಕಿನಿಂದ, ಹಣ ಕಾಸಿನ ಸಂಸ್ಥೆಗಳಿಂದ ಸಹಾಯವನ್ನು ತೆಗೆದುಕೊಳ್ಳಿ. ಈ ಬಗ್ಗೆ ಹಣ ನಿಮ್ಮಲ್ಲಿ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ತಾವು ಏನು ರಸ್ತೆ ನಿರ್ವಹಣೆಗಾಗಿ ಹಣವನ್ನು ವ್ಯಯ ಮಾಡುತ್ತಿದ್ದೀರಿ ಅದರಿಂದ ಏನೂ ಉಪಯೋಗವಾಗಿಲ್ಲ. ಹೋದ ವರ್ಷ ತಾವು ರಸ್ತೆಗಳ ಹಾಗೂ ಸೇತುವೆಗಳ ನಿರ್ವಹಣೆಗಾಗಿ ೩೪ ಕೋಟಿ ರೂಪಾಯಿ ಖರ್ಚು ಮಾಡಿದ್ದರೂ ಆ ಬಗ್ಗೆ ಸರಿಯಾದ ನಿರ್ವಹಣೆ ಆಗಿಲ್ಲ. ಆದ್ದರಿಂದ ಈ ಬಾಬಿಗೆ ಖರ್ಚು ಮಾಡುವ ಹಣವನ್ನು ೨ ವರ್ಷ ನಿಲ್ಲಿಸಿ ಆ ಹಣವನ್ನು ನೀರಾವರಿಗೆ ಖರ್ಚು ಮಾಡಿದರೂ ಅಭ್ಯಂತರವಿಲ್ಲ, ಆ ಹಣವನ್ನೇ

ತಾವು ಬೇರೆ ರೀತಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಉಪಯೋಗ ಮಾಡುವ ಬಗ್ಗೆ ಒಂದು ಕ್ರ್ಯಾಷ್ ಪ್ರೋಗ್ರಾಮ್ ಹಾಕಿಕೊಂಡು ಕೆಲಸ ಮಾಡಿ. ಈ ಬಗ್ಗೆ ವಿಶ್ವ ಬ್ಯಾಂಕಿನಿಂದ ಹಾಗೂ ಇತರೆ ಸಂಸ್ಥೆಗಳಿಂದ ಹಣ ಪಡೆದುಕೊಂಡು ಕನಿಷ್ಠ ಪಕ್ಷ ಒಂದೆರಡು ವರ್ಷಗಳಲ್ಲಿ ಉಳಿದ ಎಲ್ಲಾ ಹಳ್ಳಿಗಳಿಗೂ ರಸ್ತೆ ಸಂಪರ್ಕ ಕಲ್ಪಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಿ. ತಾವು ಜನರ ಸಲುವಾಗಿ, ಜನರ ಪರವಾಗಿ ಬಂದಿದ್ದೇವೆಂದು ಹೇಳುವಾಗ ಈ ಕಾರ್ಯಕ್ರಮಗಳನು ಅಷ್ಟೇ ಶ್ರದ್ಧೆಯಿಂದ ಹಾಕಿಕೊಂಡು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡಬಯಸುತ್ತೇವೆ,

ಮೈಂಟೆನೆನ್ಸ್ ಆಫ್ ರೋಡ್‌ಗಳ ಬಗ್ಗೆ ಹೋದ ವರ್ಷ ಇಟ್ಟಿರುವುದು ೨೬.೯೨ ಕೋಟಿ ರೂಪಾಯಿಗಳು. ಬಿಲ್ಡಿಂಗ್ ಸಲುವಾಗಿ ಇಟ್ಟಿರುವುದು ೭.೫ ಕೋಟಿ ರೂಪಾಯಿಗಳು. ಇದರಲ್ಲಿ ಒಂದೆರಡು ನಿಲ್ಲಿಸಿದರೂ ವಿಷಯ ಆಗುವುದಿಲ್ಲ, ಆ ದುಡ್ಡನ್ನು ಸರಿಯಾಗಿ ಉಪಯೋಗ ಮಾಡಬೇಕು. ಇನ್ನು ಎಂ ಎನ್ ಪಿ, ಐಸಿ ಆರ್ ಎಸ್‌ನಲ್ಲಿ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ರಸ್ತೆ ಮಾಡ ತಕ್ಕದ್ದು ಒಂದು ಸ್ವಾಗತಾರ್ಹವಾದ ಮಾತು. ಒಂದು ತಾಲ್ಲೂಕಿನಲ್ಲಿ ಕನಿಷ್ಠ ಪಕ್ಷ ೨೫ ಕಿಲೋಮೀಟರ್ ರಸ್ತೆಯನ್ನಾದರೂ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಮುಂಚೆ ಆ ರೀತಿ ಇರಲಿಲ್ಲ. ಮೊದಲು ಮಂತ್ರಿಗಳು ಅವರ ಇಷ್ಟ ಬಂದ ಹಾಗೆ ತೆಗೆದುಕೊಳ್ಳಬಹುದಾಗಿತ್ತು. ಈಗ ಒಳ್ಳೆಯ ನಿಯಮವನ್ನು ಹಾಕಿಕೊಂಡಿದ್ದಾರೆ. ೨೫ ಕಿಲೋಮೀಟರ್ ಪಿ ಡಬ್ಲ್ಯೂ ಡಿ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ. ೨೩೫ ಕಿಲೋಮೀಟರ್ ನಮ್ಮ ರಾಜ್ಯದ ರಸ್ತೆ ಆಸ್‌ಫಾಲ್ಟಿಂಗ್ ಮಾಡಬೇಕಾದರೆ ಆ ಕೆಲಸಕ್ಕೆ ದುಡ್ಡು ಬೇಕಾಗುತ್ತದೆ. ಅದಕ್ಕೆ ಸಂಪನ್ಮೂಲ ಕ್ರೋಢೀಕರಿಸಲಿಕ್ಕೆ ಎಲ್ಲಾ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸಲಿಕ್ಕೆ ಇಷ್ಟಪಡುತ್ತೇನೆ. ಇನ್ನು ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಬಹಳ ಒತ್ತಾಯದಿಂದ ಹೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ೧೦.೨೫ ಕಿಲೋಮೀಟರ್ ರಸ್ತೆ ಇದೆ. ಕೇರಳದಲ್ಲಿ ೧೮.೭೯ ಕಿಲೋಮೀಟರ್ ರಸ್ತೆ ಇದೆ. ತಮಿಳು ನಾಡಿನಲ್ಲಿ ೧೩.೪೫ ಕಿಲೋಮೀಟರ್ ರಸ್ತೆ ಇದೆ. ನಮ್ಮ ರಾಜ್ಯದಲ್ಲಿ ಕೇವಲ ೧೦.೨೫ ಕಿಲೋಮೀಟರ್ ರಸ್ತೆ ಇರುವುದಕ್ಕೆ ಯಾರು ಕಾರಣರೋ, ಆ ಬಗ್ಗೆ ನಾನು ಭಾಷಣ ಮಾಡಲಿಕ್ಕೆ ಹೋಗುವುದಿಲ್ಲ. ನಮ್ಮ ಮೇಲೆ ಜವಾಬ್ದಾರಿ ಬಂದ ಮೇಲೆ ಅದರ ಬಗ್ಗೆ ಜಾಗ್ರತೆ ವಹಿಸಿ ಮಾಡಬೇಕು ಎಂದು ಹೇಳಬೇಕಾಗುತ್ತದೆ. ತಾವು ಮಂತ್ರಿಗಳಾಗಿ ಒಂದೂವರೆ ವರ್ಷ ಆಯಿತು. ನಮ್ಮ ರಾಜ್ಯಕ್ಕೆ ರಾಷ್ಟ್ರದ ಹೆದ್ದಾರಿಗಳು ಆಗುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ತಾವು ಕೇಂದ್ರಕ್ಕೆ ಪತ್ರ ಬರೆದು ಸುಮ್ಮನೆ ಕುಳಿತಿದ್ದೀರಿ ಅಷ್ಟೆ ! ತಾವು ಮಂತ್ರಿಗಳಾಗಿ ರಾಜ್ಯ ಸರ್ಕಾರದ ಪರವಾಗಿ ಡೆಲ್ಲಿಗೆ ಹೋಗಬೇಕು, ನಮ್ಮ ರಾಜ್ಯದ ಎಂ. ಪಿಗಳನ್ನು ಸೇರಿಸಿ ಚರ್ಚೆ ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕು. ಕೇಂದ್ರದಲ್ಲಿಯೇ ಬೇರೆ ಸರ್ಕಾರ ಇದೆ. ಅವರು ಮಾಡಿದರೆ ಮಾಡಲಿ ಇಲ್ಲದಿದ್ದರೆ ಬಿಡಲಿ. ಅವರು ಏನೂ ಮಾಡುತ್ತಿಲ್ಲ. ಏನೂ ಕೊಡುತ್ತಿಲ್ಲ, ಎನ್ನುವ ಧೋರಣೆಯನ್ನು ಹೊಂದಿ ಸುಮ್ಮನೆ ಕುಳಿತುಕೊಳ್ಳುವುದಾದರೆ ಬಹಳ ಕಷ್ಟವಾಗುತ್ತದೆ. ನಮ್ಮ ಎಂ. ಪಿ ಗಳು ಇದರ ಬಗ್ಗೆ ಸಹಕಾರ ಕೊಡುವುದಿಲ್ಲ ಎಂದು ಹೇಳುವುದಿಲ್ಲ.

ಶ್ರೀ ಪಿ. ರಾಮದೇವ್.—ನಮ್ಮ ರಾಜ್ಯದ ೨೭ ಜನ ಎಂ. ಪಿ.ಗಳು ಪಾರ್ಲಿಮೆಂಟಿನಲ್ಲಿದ್ದರು. ಮತ್ತೆ ರಾಜ್ಯಸಭೆಯಲ್ಲಿದ್ದರು, ನಮ್ಮ ರಾಜ್ಯದ ಬಗ್ಗೆ ಅವರು ಯಾವ ಒತ್ತಾಯ ಹಾಕಿದ್ದಾರೆ. ಏನೂ ಮಾಡಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾವು ತಮ್ಮಗಳ ಬಗ್ಗೆ ಅದನ್ನೇ ಮಾತನಾಡಬೇಕಾಗುತ್ತದೆ. ಈ ದಿಸೆಯಲ್ಲಿ ನೀವು ಏನು ಮಾಡಿದ್ದೀರಿ ಎಂದು ಪ್ರಶ್ನೆ ಕೇಳುತ್ತೇನೆ. ನಮ್ಮ ಎಂ. ಪಿಗಳು ನಮಗೆ ಸಹಾಯ ಮಾಡುತ್ತಿಲ್ಲ ಎಂದು ಇಲ್ಲ. ನಿಮ್ಮ ಮನಸ್ಸಿನಿಂದ ನೀವು ಏನು ಪ್ರಯತ್ನ ಮಾಡಿದ್ದೀರಿ ? ನಿಮ್ಮ ಧೋರಣೆ ಏನು ಎಂದು ಇವೊತ್ತು ನಾನು ತಮ್ಮಲ್ಲಿ ಕೇಳುತ್ತಿದ್ದೇವೆ. ಅಧಿಕಾರಕ್ಕೆ ಬಂದ ಮೇಲೆ ಧರ್ಮ್ಯ ನಿಷ್ಠೆಯಿಂದ, ತಾವು ಏನು ಮಾಡಿದ್ದೀರಿ. ತಾವು ಡೆಲ್ಲಿಗೆ ಹೋಗಿ ಎಂ. ಪಿಗಳನ್ನು ಭೇಟಿ ಮಾಡಿ, ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ ಒತ್ತಾಯ ಮಾಡಬೇಕಾಗಿತ್ತು. ೧,೦೦೦ ಕಿಲೋ ಮೀಟರ್ ರಸ್ತೆಗೆ ೧೦.೨೫ ಕಿಲೋ ಮೀಟರ್ ರಸ್ತೆ ಅಂದರೆ ಬಹಳ ಕಡಿಮೆ ಆಯಿತು. ಎರಡು ನ್ಯಾಷನಲ್ ಹೈವೇ ಬಗ್ಗೆ ಬಹಳ ಮಹತ್ವ ಕೊಡಬೇಕಾಗಿದ. ಹುಮ್ನಾಬಾದ್, ಗುಲ್ಬರ್ಗ, ಶಹಾಪುರ, ಬಳ್ಳಾರಿ, ಸಿರಗುಪ್ಪ, ಹಿರಿಯೂರಿಗೆ ಸೇರತಕ್ಕದ್ದಕ್ಕೆ ಹೆಚ್ಚಿನ ಆದ್ಯತೆ ಮಹತ್ವ ಕೊಡಬೇಕಾಗಿದೆ. ಅಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಅಚ್ಚುಕಟ್ಟು ಏರಿಯಾ ಬರುತ್ತದೆ. ತುಂಗಭದ್ರ ಪ್ರಾಜೆಕ್ಟ್ ಅಚ್ಚುಕಟ್ಟು ಏರಿಯಾ ಬರುತ್ತದೆ. ಇನ್ನು ಕಾರಂಜಿ ಪ್ರಾಜೆಕ್ಟ್ ಏರಿಯಾ ಬೇರೆ ಇದೆ. ಇಷ್ಟೆಲ್ಲಾ ಆರ್ಥಿಕ ಅಭಿವೃದ್ಧಿಗೆ ಅನುಕೂಲ ಇರು

ವಾಗ ಅದರ ಬಗ್ಗೆ ಆದ್ಯತೆ ಕೊಟ್ಟು ಮಾಡಿದರೆ ಎಕನಾಮಿಕ್ ಡೆವಲಪ್‌ಮೆಂಟ್ ಆಗುತ್ತದೆ. ಕೆಲಸ ಕಾರ್ಯಗಳನ್ನು ಬೇಗ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ನಮಗೆ ಬೇಕಾದ್ದಕ್ಕೆ ಆದ್ಯತೆ ಕೊಟ್ಟರೆ ಸಾಕು ಎಂದು ಹೇಳುವುದು ಸರಿಯಲ್ಲ. ನಮ್ಮ ರಾಜ್ಯದಲ್ಲಿ ಕೆಲವು ರಾಷ್ಟ್ರೀಯ ಹೆದ್ದಾರಿಗಳು ಆಗಬೇಕಾಗುತ್ತದೆ. ಪ್ರಿಯಾರಿಟಿ ಮೇಲೆ ಆಗುವುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವೊತ್ತು ಅಪ್ಪರ್ ಕೃಷ್ಣ, ತುಂಗಭದ್ರ ಕಾರಂಜಿ ಡೆವಲಪ್‌ಮೆಂಟ್ ಆಗಿದೆ. ಇನ್ನು ನ್ಯಾಷನಲ್ ಹೈವೇ ನಂಬರ್ ೯, ಬಳ್ಳಾರಿ ಮಾರ್ಗದಿಂದ ಮಾಡಬಹುದು. ನಮ್ಮ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಇನ್ನು ಸಂಕೇಶ್ವರದಿಂದ ಹಿಡಿದು, ಬೆಳಗಾವಿ, ಮಾರ್ಗ ಬಿಜಾಪುರದ ಮಾರ್ಗವಾಗಿ ಸಿಂಧಗಿ, ಹುಮ್ನಾಬಾದ್ ಅದರ ಮುಂದೆ ಹೈದರಾಬಾದ್‌ಗೆ ಸೇರುತ್ತದೆ. ಮತ್ತೊಂದು ಕಡೆ ಮಹಾರಾಷ್ಟ್ರಕ್ಕೆ ಸೇರುತ್ತದೆ. ಮೂರು ಕಡೆ ಸೇರತಕ್ಕಂತಾದ್ದಕ್ಕೆ ಏತಕ್ಕೆ ಮಾಡಬಾರದು. ಮಲಪ್ರಭ, ಘಟಪ್ರಭ ಅಚ್ಚುಕಟ್ಟು ಏರಿಯಾ ಬರುತ್ತದೆ. ಇನ್ನು ಇತರೆ ಬಾಕಿ ಪ್ರಾಜೆಕ್ಟ್ ಏರಿಯಾ ಬರುತ್ತದೆ. ಡೆವಲಪ್‌ಮೆಂಟ್ ಆಗುವ ಸಾಧ್ಯತೆ ಇದೆ, ಈ ಕೆಲಸಗಳನ್ನು ಗಮನದಲ್ಲಿಟ್ಟುಕೊಂಡು ಆದ್ಯತೆ ಕೊಟ್ಟು ಕೆಲಸ ಮಾಡಿದರೆ ಮಂತ್ರಿಗಳು ಸರಿಯಾಗಿ ಕೆಲಸ ಮಾಡಿದಂತಾಗುತ್ತದೆ. ನಮ್ಮಲ್ಲಿರತಕ್ಕ ಅಪಾದನೆಗಳನ್ನು ದೂರ ಮಾಡಲಿಕ್ಕೆ ಆಗುತ್ತದೆ. ಇನ್ನು ಸಿಕ್ಸ್‌ಲೈನ್ ಪ್ರಾಜೆಕ್ಟ್ ರೋಡ್ ನೆಲಮಂಗಲದಿಂದ ಬೆಂಗಳೂರಿಗೆ ಹಾಕಿಕೊಂಡಿದ್ದಾರೆ, ಇದರ ಬಗ್ಗೆ ಕೇಂದ್ರಕ್ಕೆ ಹೋಗಿ ಚರ್ಚೆ ಮಾಡುತ್ತೀರಾ ? ಇನ್ನು ಎಲ್ಲಿ ರಸ್ತೆಗಳು ಇಲ್ಲ, ಅಲ್ಲಿ ರಸ್ತೆಗಳು ಆಗಬೇಕು, ಅದಕ್ಕೆ ದುಡ್ಡು ಬೇಕು ಎಂದು ಚರ್ಚೆ ಮಾಡಬೇಕು. ಇವೊತ್ತು ತಾವು ಸಿಕ್ಸ್‌ಲೈನ್ ಪ್ರಾಜೆಕ್ಟ್ ರೋಡಿಗೆ ಬಹಳ ಮಹತ್ವ ಕೊಡುತ್ತಿದ್ದೀರಿ. ಇವೊತ್ತು ಬೇರೆ ಮೂವ್‌ಮೆಂಟ್‌ಗೆ ಅನುಕೂಲ ಇಲ್ಲ, ಫಾಸ್ಟ್ ವೆಹಿಕಲ್ಸ್ ಮೂವಿಂಗ್‌ಗೆ ಅನುಕೂಲ ಮಾಡಿ ಕೊಡಬೇಕೆಂದು ಹೊರಟಿದ್ದೀರಿ ಇಂತಾದ್ದು ಮಾಡಬಾರದೆಂದು ಅಲ್ಲ, ಇದಕ್ಕೆ ಎಷ್ಟು ದುಡ್ಡು ಏಗದಿ ಮಾಡಿದ್ದೀರಾ, ಅದನ್ನು ಹೇಳಲಿಕ್ಕೆ ತಯಾರಿಲ್ಲ.

ಶ್ರೀ ಡಿ. ಎಚ್. ಚೌಡಯ್ಯ.—ಸ್ವಾಮಿ, ಲಕ್ಷ ಆದರೆ ಪರವಾಯಿಲ್ಲ, ಕೋಟಿಗಟ್ಟಲೆ ಹಣ ತಂದ್ ರಾಮದೇವ್ ಅವರಿಗೆ ಕೊಟ್ಟರೆ ನಮ್ಮ ಗತಿ ಏನು ?

ಶ್ರೀ ಗೋವಿಂದ ಪಿ. ಒಡೆಯರಾಜ್.—ನೆಲಮಂಗಲದಿಂದ ಬೆಂಗಳೂರು ಮಲ್ಲೇಶ್ವರಂ ಕಾನ್ಸ್‌ಟಿಟ್ಯುಯೆನ್ಸಿವರೆಗೆ ಆದರೆ ರಾಮದೇವ್ ಅವರಿಗೆ ಒಳ್ಳೆಯದು.

ಶ್ರೀ ಪಿ. ರಾಮದೇವ್.—ತಾವು ಬರುವಾಗ ತೊಂದರೆಯಾಗಬಾರದು ಎಂದು ಹೇಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಆಕ್ಸಿಡೆಂಟ್ ಆಗುತ್ತವೆ, ಏನು ತೊಂದರೆ ಇದೆ ಅದನ್ನು ಗಮನಕ್ಕೆ ತೆಗೆದುಕೊಂಡು ಮಾನ್ಯ ಮಂತ್ರಿಗಳು ಸಲಹೆ ಮಾಡಿದ್ದಾರೆಂದು ಕಾಣುತ್ತದೆ,

ಶ್ರೀ ಗೋವಿಂದ ಪಿ. ಒಡೆಯರಾಜ್ —ಆಕ್ಸಿಡೆಂಟ್ ದೃಷ್ಟಿಯಿಂದ ಮಾಡುವುದಾದರೆ ಸರಿಯಿಲ್ಲ. ಆಕ್ಸಿಡೆಂಟುಗಳು ಆಗುತ್ತವೆ ಅಂದರೆ ಟ್ರಾಫಿಕ್ ರೂಲ್ಸ್ ಸರಿಯಾಗಿ ಇಂಪ್ಲಿಮೆಂಟ್ ಮಾಡಬೇಕು. ನೆಲಮಂಗಲದಿಂದ, ಬೆಂಗಳೂರುವರೆಗೆ ರಸ್ತೆ ಮಾಡುವುದಕ್ಕೆ ಹಣ ಖರ್ಚುಮಾಡಿ, ನಮಗೆ ದುಡ್ಡು ಇಲ್ಲದಂತೆ ಮಾಡಿದರೆ ಹೇಗೆ ?

ಶ್ರೀ ಪಿ. ರಾಮದೇವ್.—ಪ್ರತಿ ದಿವಸ ಒಂದು ಸಾವಿರ ಲಾರಿಗಳು ಬೆಂಗಳೂರಿಗೆ ಬರುತ್ತದೆ, ಎಷ್ಟು ರೋಡ್ ಟ್ಯಾಕ್ಸ್ ಬಂದಂತಾಯಿತು, ತಾವೇ ಯೋಚನೆ ಮಾಡಬೇಕು, ಹಳ್ಳಿಯಿಂದ ಎಷ್ಟು ಟ್ಯಾಕ್ಸ್ ಬರುತ್ತದೆ ?

ಶ್ರೀ ಗೋವಿಂದ ಪಿ. ಒಡೆಯರಾಜ್.—ಹಳ್ಳಿಗಾಡಿನ ಜನರಿಗೆ ಧಕ್ಕೆ ತರುವಂತೆ ಮಾಡಬೇಡಿ ನಿಮ್ಮ ಕಾರ್ಪೊರೇಷನ್ ದುಡ್ಡು ಹಾಕಿಕೊಂಡು ಮಾಡಿಕೊಳ್ಳಿ. ಇದು ಸಾಧುವಾದುದಲ್ಲ ಎಂದು ಹೇಳುತ್ತೇನೆ. ಹಳ್ಳಿಗಳಿಗೆ ಯಾವರೀತಿ ಪ್ರಿಯಾರಿಟಿ ಕೊಟ್ಟು ಮಾಡಬೇಕು ಆ ಪ್ರಕಾರ ಮಾಡಬೇಕು. ಮೈನರ್ ಇರಿಗೇಷನ್ ಬಗ್ಗೆ ನಾನು ಹೋದಸಾರಿ ವಾರ್ನಿಂಗ್ ಕೊಟ್ಟಿದ್ದೆ. ದುರ್ದೈವ ಮಂತ್ರಿಗಳಿಗೆ ಕಿವಿ ಇದ್ದರೂ ಕೇಳುವುದಿಲ್ಲ, ಕಣ್ಣು ಇದ್ದರೂ ನೋಡುವುದಿಲ್ಲ, ತಿಳುವಳಿಕೆ ಇದ್ದರೂ ಅರ್ಥಮಾಡಿಕೊಳ್ಳುವುದಿಲ್ಲ.

ಶ್ರೀ ಪಿ. ರಾಮದೇವ್.—ಮಂತ್ರಿಗಳಿಗೆ ಕಿವಿ ಇದ್ದರೂ ಕೇಳುವುದಿಲ್ಲ ಎಂದು ಹೇಳುತ್ತಿದ್ದೀರಿ, ತಾವು ಯಾವಾಗಿನಿಂದ ಹೇಳುತ್ತಿದ್ದೀರಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಹೋದ ವರ್ಷದಿಂದ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ನಮ್ಮ ರಾಜ್ಯ ೭೫ ಪರಸೆಂಟ್ ಬರಗಾಲಕ್ಕೆ ತುತ್ತಾಗುತ್ತದೆ. ಬರಗಾಲ ಪರಿಸ್ಥಿತಿ ಇರುವಾಗ ಬರಗಾಲ ನಿವಾರಣೆಗೆ ಮೈನರ್ ಇರಿಗೇಷನ್ ಕೆಲಸ ಮಾಡುವುದು ಮಹತ್ವ ಪಾತ್ರ ಇದೆ. ಟ್ಯಾಂಕುಗಳು, ಪಿಕ್‌ಅಪ್‌ಗಳು, ಪರಕೊಲೇಷನ್ ಟ್ಯಾಂಕುಗಳು ಆಗುತ್ತವೆ, ಇವೆಲ್ಲವನ್ನೂ ಮಾಡಬೇಕಾಗುತ್ತದೆ. ಈ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಎಷ್ಟರಮಟ್ಟಿಗೆ ನೀವು ತಾರತಮ್ಯವನ್ನು ಮಾಡಿದ್ದೀರೆಂಬುದನ್ನ ನಾನು ಹೇಳಬೇಕಾಗುತ್ತದೆ. ಡ್ರಾಟ್‌ಪ್ರೋನ್ ಏರಿಯ ಜಾಸ್ತಿ ಇರುವುದು ನಮ್ಮ ಭಾಗದಲ್ಲಿ ತಾನೇ. ಅಲ್ಲಿ ಈ ಬರಗಾಲ ಪದೇ ಪದೇ ಬರುತ್ತಲೇ ಇರುತ್ತದೆ. ಅದರಲ್ಲೂ ಚಿತ್ರದುರ್ಗದಿಂದ ಆಚೆಗೆ ಇದು ಹೆಚ್ಚು ಹೆಚ್ಚಾಗಿ ಬರುತ್ತಿರುತ್ತದೆ. ಮೊದಲು ಅಲ್ಲಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕು. ಕಳೆದ ವರ್ಷ ಅಂದರೆ ೧೯೮೩-೮೪ರಲ್ಲಿ ೪೦೦ ಕೆಲಸಕಾರ್ಯಗಳನ್ನು ತಾವು ತೆಗೆದುಕೊಂಡಿದ್ದುದರಲ್ಲಿ ೯೯ ಕೆಲಸ ಕಾರ್ಯಗಳನ್ನು ಮಾಡಿದ್ದೀರಿ. ಈ ವರ್ಷ ಅಂದರೆ ೧೯೮೪-೮೫ರಲ್ಲಿ ೬೨೬ ಕೆಲಸಕಾರ್ಯಗಳನ್ನು ೮ ಜಿಲ್ಲೆಗಳಲ್ಲಿ ತೆಗೆದುಕೊಂಡಿರಿ. ಅದರಲ್ಲಿ ೨೧೪ನ್ನು ಮಾತ್ರ ಆರಿಸಿಕೊಂಡಿದ್ದೀರಿ. ಬಾಕಿ ಉಳಿದ ಕೆಲಸ ಕಾರ್ಯಗಳೆಲ್ಲಾ ಹಳೇ ಮೈಸೂರು ಭಾಗದಲ್ಲಿ ಆಗುತ್ತಿವೆ. ಈ ಭಾಗದಲ್ಲಿ ಕೆಲಸಕಾರ್ಯಗಳು ಆಗಬಾರದೆಂದು ನಾನು ಹೇಳುವುದಿಲ್ಲ. ಮೈನರ್ ಇರಿಗೇಷನ್ ಪೊಟೆನ್‌ಷಿಯಲ್ ಗುಲ್ಬರ್ಗಾ ೨.೩೪, ರಾಯಚೂರು ೨.೨೨ ಬಳ್ಳಾರಿ ೪.೭೮, ಬಿಜಾಪುರದಲ್ಲಿ ೩.೮೫ ಧಾರವಾಡ ೬.೯೨, ಬೀದರ್ ೪.೮೯. ಬೆಳಗಾಂ ೬.೬೪, ಈರೀತಿ ಇದೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ೧೧.೫೪, ಕೋಲಾರ ೧೮.೫೬, ತುಮಕೂರು ೧೩.೪೩, ಚಿತ್ರದುರ್ಗ ೭.೭೪, ಚಿಕ್ಕಮಗಳೂರು ೧೫.೦೪, ಶಿವಮೊಗ್ಗಾ ೨.೫ ದಕ್ಷಿಣ ಕನ್ನಡ ೮.೫, ಮಂಡ್ಯ ೨೯.೪೪ ಇದೆ. ಅಂದರೆ ಉಳಿದ ಮೈನರ್ ಇರಿಗೇಷನ್ ಕೆಲಸಕಾರ್ಯಗಳಿಗೆ ಅವಕಾಶ ಎಲ್ಲಿದೆ ? ಆದ್ದರಿಂದ ನಾನು ಈಗಲೇ ತಮಗೆ ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ? ಇದೇರೀತಿ ನೀವು ಮಾಡುತ್ತಾ ಹೋದರೆ ಇದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಎಲ್ಲಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲಿ ಉದ್ದೇಶಪೂರ್ವಕವಾಗಿ ತಡೆಗಟ್ಟುತ್ತಿದ್ದೀರಿ. ಈ ವರ್ಷ ೬೨೬ ಮೈನರ್ ಇರಿಗೇಷನ್ ಕೆಲಸವನ್ನು ತೆಗೆದುಕೊಂಡಿದ್ದೀರಿ. ಸ್ಪಿಲ್ ಓವರ್ ಕೆಲಸಕಾರ್ಯಗಳು ೫೬೨ ಇವೆ. ಅಂದಮೇಲೆ ಈ ವರ್ಷದಲ್ಲಿ ನೀವು ೧೧೮೮ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಬೇಕಾಗಿದೆ. ಇಷ್ಟೊಂದು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ನಿಮಗೆ ಸಾಧ್ಯ ಇದೆಯೆಂಬ ವಿಶ್ವಬ್ಯಾಂಕ್ ನೆರವಿನಿಂದ ಕೆರೆಗಳ ದುರಸ್ತಿ ಕಾರ್ಯ ಮಾಡುತ್ತೇವೆಂದು ಹೇಳಿದ್ದೀರಿ. ಇನ್ನೂ ಟೆಂಡರ್ ಕರೆದಿಲ್ಲ. ನ್ಯಾಷನಲ್ ಟೆಂಡರ್ ಬಿಡ್ ಆಗಿಲ್ಲ. ಹಾಗಾದರೆ ೧೧೮೮ ಕೆಲಸಗಳನ್ನು ನೀವು ಯಾವಾಗ ಪ್ರಾರಂಭ ಮಾಡುತ್ತೀರಿ ? ನೀವು ಈ ಕೆಲಸಕ್ಕೆ ಅತ್ಯಂತ ಆದ್ಯತೆಯನ್ನು ಕೊಟ್ಟು ಕೆಲಸ ಮಾಡಿದರೆ ಬಹಳ ಜನ ಬಡವರಿಗೆ ಅನುಕೂಲವಾಗುತ್ತದೆ. ಆದರೆ ನೀವು ಇದನ್ನು ಮಾಡುತ್ತಿಲ್ಲ. ಇವತ್ತು ನಿಮ್ಮ ಬಜೆಟ್ ಪ್ರಾವಿಷನ್ ತೆಗೆದುಕೊಂಡರೆ ಒಂದೊಂದು ಕೆರೆಯ ಕೆಲಸಕ್ಕೆ ಒಂದೊಂದು ಸಾವಿರ ರೂ.ಗಳಂತೆ ಒಟ್ಟು ೬.೧೦ ಲಕ್ಷ ರೂ.ಗಳನ್ನು ಇಟ್ಟಿದ್ದೀರಿ. ಕೇವಲ ಇಷ್ಟು ಹಣದಿಂದ ಇಷ್ಟೊಂದು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ ? ಇದು ಖಂಡಿತ ಸಾಧ್ಯವಿಲ್ಲ. ಕೇವಲ ಇಂಜಿನಿಯರ್‌ಗಳಿಗೆ ಲಾಭವನ್ನು ಮಾಡಿಕೊಡಬೇಕೆಂಬ ಉದ್ದೇಶದಿಂದ ಈರೀತಿ ಮಾಡುತ್ತಿದ್ದೀರೆಂದು ನಾವು ಹೇಳಬೇಕಾಗುತ್ತದೆ. ನೀವು ಈ ರೀತಿ ಮಾಡಬೇಡಿ. ಕೆರೆಗಳ ಕೆಲಸ ಬಹಳ ಮುಖ್ಯವಾಗಿ ಆಗಬೇಕಾಗಿರುವುದರಿಂದ ಇದರ ಬಗ್ಗೆ ಹೆಚ್ಚು ಆದ್ಯತೆಯನ್ನು ಕೊಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಇರಿಗೇಷನ್ ವಿಚಾರದಲ್ಲಿ ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳ ಭಾಷಣವನ್ನು ನಾನು ಓದಿದ್ದೇನೆ. ಕಾವೇರಿ ಬೇಸಿನ್ ಯೋಜನೆಗೆ ೬೫.೫೬ ಕೋಟಿ ರೂಪಾಯಿಗಳನ್ನು ಕೊಟ್ಟಿರು ವುದಾಗಿ ಹೇಳಿದ್ದಾರೆ. ಇದರ ಬಗ್ಗೆ ನನ್ನ ಅಭ್ಯಂತರವಿಲ್ಲ. ಇದನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ಕಾವೇರಿ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟ್‌ಗಳು ಬೇಗ ಪೂರ್ತಿಯಾಗಿ ಅವುಗಳ ಪ್ರಯೋಜನ ಜನರಿಗೆ ಸಿಕ್ಕಬೇಕು. ಅದುಬಿಟ್ಟು ನಮ್ಮ ಪಾಲಿನ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳದೆ ಹಾಗೆಯೇ ಇಟ್ಟುಕೊಂಡಿದ್ದರೆ ತಮಿಳ್ನಾಡಿನವರು, ಅಥವಾ ಬೇರೆ ರಾಜ್ಯದವರು ನಮಗೆ ನೀರನ್ನು ಕೊಡಿ ಎಂದು ಕೇಳುತ್ತಾರೆ. ಇತ್ತೀಚೆಗೆ ಬೇರೆ ರಾಜ್ಯದವರು ನೀರನ್ನು ಕೇಳಿದರೆಂದು ಕೊಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ನಮ್ಮ ಭಾಗದ ನೀರನ್ನು ನಮ್ಮ ರಾಜ್ಯದ ಜನರಿಗೆ ಕೊಡುವುದನ್ನು ಬಿಟ್ಟು ಬೇರೆ ರಾಜ್ಯದವರಿಗೆ ಕೊಡುವುದು ಸರಿಯಲ್ಲ. ಎಲ್ಲರಿಗೂ ತಿಳಿದಿರುವಂತೆ ಕಾವೇರಿ ನೀರಿನ ಬಗ್ಗೆ ೧೯೨೪ರ ಪ್ರಕಾರ ಡಿಸ್‌ಪ್ಯೂಟ್ ಇದೆ. ನಮ್ಮ ರಾಜ್ಯದ ಹಿತದೃಷ್ಟಿಯಿಂದ, ನಮ್ಮ ರಾಜ್ಯದ ಜನರ

ಹಿತವನ್ನು ರಕ್ಷಣೆ ಮಾಡಬೇಕಾಗಿರುವುದರಿಂದ ತಾವು ಈಕಡೆ ತಮ್ಮ ಗಮನವನ್ನು ಹರಿಸಬೇಕು. ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್‌ನವರು ನಮಗೆ ಹಣವನ್ನು ಕೊಡದಿದ್ದರೂ ಕೂಡ ನಮ್ಮ ಹಣದಿಂದಲೇ ಈ ಕೆಲಸವನ್ನು ಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡಿದ್ದೀರಿ ಇದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಇವತ್ತು ತಾವು ಈ ಒಂದು ನಿರ್ಧಾರವನ್ನು ತೆಗೆದುಕೊಳ್ಳದಿದ್ದರೆ ನಾವು ಹಿಂದೆ ಬೀಳಬೇಕಾಗಿತ್ತು. ಹಾರಂಗಿ, ಹೇಮಾವತಿ, ಕಬನಿ ಪ್ರಾಜೆಕ್ಟ್‌ಗಳನ್ನು ಪ್ರಾರಂಭಮಾಡಿ ನೀವು ಏನು ಕೆಲಸ ಮಾಡುತ್ತಿದ್ದೀರಿ ಇದು ನಿಜಕ್ಕೂ ಸ್ವಾಗತಿಸತಕ್ಕದ್ದು. ರಾಜ್ಯದ ಹಿತದೃಷ್ಟಿಯಿಂದ ಕಾವೇರಿ ಬೇಸಿನ್‌ಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಹೇಳುತ್ತಿದ್ದೇನೆ. ಆದರೆ ಕೃಷ್ಣಾ ಬೇಸಿನ್‌ಗೆ ಹಣವನ್ನು ಕೊಡದೇ ಇರುವುದನ್ನು ನಾನು ವಿರೋಧಿಸುತ್ತೇನೆ. ಇವತ್ತು ಇರಿಗೇಷನ್ ಮ್ಯಾಪ್‌ನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ೭ ರಿವರ್ ಬೇಸಿನ್‌ಗಳಿವೆ. ಬಿಜಾಪುರ, ಬೆಳಗಾಂ, ರಾಯಚೂರು, ತುಮಕೂರಿನ ಸ್ವಲ್ಪಭಾಗ ಈ ಕೃಷ್ಣಾ ಬೇಸಿನ್‌ನಲ್ಲಿ ಬರುತ್ತವೆ. ನಿನ್ನೆಯ ದಿವಸ ಮಾನ್ಯ ಸದಸ್ಯರೊಬ್ಬರು ಮಾತನಾಡುವಾಗ ಕೃಷ್ಣಾ ಬೇಸಿನ್‌ಗೆ ಹಣವನ್ನು ಕೊಟ್ಟಿಲ್ಲವೆಂದು ಟೀಕೆ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಬಹಳ ಶೌರ್ಯದಿಂದ ಕೆಲವು ಅಂಕಿಅಂಶಗಳನ್ನು ಕೊಟ್ಟರು. ೧೯೬೮ ರಿಂದ ಹಿಡಿದು ಇದುವರೆಗೆ ಕಾವೇರಿ ಬೇಸಿನ್‌ಗೆ ಮತ್ತು ಕೃಷ್ಣಾ ಬೇಸಿನ್‌ಗೆ ಎಷ್ಟು ಹಣ ಕೊಟ್ಟಿದ್ದಾರೆಂದು ಲೆಕ್ಕ ಹಾಕಿ ನೋಡಿದಾಗ ಕೃಷ್ಣಾಕ್ಕೆ ೧೯೬೭-೬೮ ರಿಂದ ಇದುವರೆಗೆ ೬೩೨.೬೨ ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಕಾವೇರಿ ಬೇಸಿನ್‌ಗೆ ೨೮೦.೪೭ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲ. ಕಾವೇರಿ ಬೇಸಿನ್‌ನಲ್ಲಿ ೪ ಮೇಜರ್ ಮತ್ತು ೪ ಮೀಡಿಯಂ ಪ್ರಾಜೆಕ್ಟ್‌ಗಳು ಇವೆ. ಇವುಗಳ ಮೇಲೆ ೫೬೦ ಕೋಟಿ ರೂ. ಖರ್ಚು ಮಾಡಬೇಕಾಗುತ್ತದೆ. ಇಷ್ಟು ಹಣವನ್ನು ಖರ್ಚು ಮಾಡಬೇಕಾಗಿರುವುದರಲ್ಲಿ ಸುಮಾರು ೩೫೦ ಅಥವಾ ೩೬೦ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಆದರೆ ಕೃಷ್ಣಾದಲ್ಲಿ ಮೇಜರ್ ಮತ್ತು ಮೀಡಿಯಂ ಪ್ರಾಜೆಕ್ಟ್‌ಗಳಿಗೆ ೧೯೩೨.೭೯ ಕೋಟಿ ರೂ.ಗಳು ಬೇಕಾಗುತ್ತದೆ. ಇದುವರೆಗೆ ಕೊಟ್ಟಿರುವುದು ಕೇವಲ ೬೩೧ ಕೋಟಿ ರೂಪಾಯಿಗಳು ಅಂದರೆ ಅಲೋಕೇಷನ್ ಮಾಡುವುದರಲ್ಲೂ ಕೂಡ ಬಹಳ ತಾರತಮ್ಯ ಇದೆ. ಕಾವೇರಿಗೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ. ಅದೇರೀತಿ ಕೃಷ್ಣಾಕ್ಕೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ. ಒಂದುಕಡೆ ಕೊಡಿ, ಇನ್ನೊಂದು ಕಡೆ ಬಿಡಿ ಎಂದು ನಾನು ಹೇಳುವುದಿಲ್ಲ. ನಮ್ಮ ಪ್ರಾಜೆಕ್ಟ್ ಕೆಲಸಕಾರ್ಯಗಳು ಎಷ್ಟು ಬೇಗ ಮುಗಿಯುತ್ತವೋ ಅಷ್ಟು ಬೇಗ ನಮ್ಮ ಜನರಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ. ಆದ್ದರಿಂದ ಹೆಚ್ಚು ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಆದರೆ ಕೃಷ್ಣಾ ಬೇಸಿನ್‌ನ್ನು ಮಾತ್ರ ಕಡೆಗಣಿಸಬೇಡಿ. ಈ ಕೆಲಸಗಳನ್ನು ವಾರ್‌ಫುಟಿಂಗ್ ರೀತಿಯಲ್ಲಿ ಮಾಡಿ. ಹಾರಂಗಿ, ಹೇಮಾವತಿ, ಮತ್ತು ಕಬಿನಿ ಪ್ರಾಜೆಕ್ಟ್‌ಗಳನ್ನು ಮೊದಲು ಪೂರ್ತಿಮಾಡಿ.

೧೨-೩೦. ಪಿ.ಎಂ.

ಮುಂದೆ ದುಡ್ಡು ಏನಾದರೂ ಬೇಕಾದರೆ ಮೈನ್‌ಟೆನೆನ್ಸ್ ಗ್ರಾಂಟ್ ಏನು ಇದೆ ಅದನ್ನು ಉಪಯೋಗಿಸಿಕೊಂಡು ಬಹಳ ಬೇಗನೆ ಕೆಲಸಗಳನ್ನು ಮುಗಿಸಬೇಕೆಂದು ಹೇಳುತ್ತೇನೆ. ವರುಣನಾಲೆ ಕೆಲಸ ಪ್ರಾರಂಭವಾಗಿ ನಾಲ್ಕು ತಿಂಗಳು ಆಯಿತು, ಹಾರಂಗಿ, ಹೇಮಾವತಿ, ಕಬಿನಿ ಈ ಡ್ಯಾಮ್‌ಗಳ ಕೆಲಸ ಸಂಪೂರ್ಣವಾಗಿ ಆಗಿದೆ. ಮತ್ತೆ ನೀರನ್ನು ಕೂಡ ಸ್ಟೋರೇಜ್ ಮಾಡಲಾಗಿರುತ್ತದೆ. ಆದರೆ ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂದರೆ ಫೀಡ್ ಚಾನಲ್ಸ್ ಮತ್ತು ಚಾನಲ್ಸ್ ಕೆಲಸ ಯಾವುದೂ ಸಂಪೂರ್ಣವಾಗಿ ಮಾಡಿ ಮುಗಿಸಿಲ್ಲ. ಅದನ್ನು ತೀವ್ರವಾಗಿ ಮುಗಿಸಿ ಅಲ್ಲಿ ಬರತಕ್ಕಂಥ ಲಾಭದಿಂದ ನಮ್ಮ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥ ಎಲ್ಲ ಕೆಲಸಗಳನ್ನು ಕೈಗೆ ತೆಗೆದುಕೊಂಡು ಜಾಗ್ರತೆಯಾಗಿ ಮುಗಿಸ ಬೇಕೆಂದು ಒತ್ತಾಯ ಮಾಡುತ್ತೇನೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಕೃಷ್ಣಾ ಬೇಸಿನ್‌ನಲ್ಲಿ ಯಾವರೀತಿ ವಾಟರ್ ಡಿಸ್‌ಪ್ಯೂಟ್ ಇದೆಯೋ, ಅದೇ ರೀತಿಯಲ್ಲಿ ಕಾವೇರಿ ಬೇಸಿನ್‌ನಲ್ಲಿಯೂ ಡಿಸ್‌ಪ್ಯೂಟ್ ಇರುತ್ತದೆ. ಅದರ ಲಾಭವನ್ನು ಅವರು ಪಡೆದುಕೊಳ್ಳುತ್ತಿದ್ದಾರೆ. ಇದು ಆಗಬಾರದು. ಅದಕ್ಕೋಸ್ಕರವಾಗಿ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಎಲ್ಲ ಕೆಲಸಕಾರ್ಯಗಳನ್ನು ಆದಷ್ಟು ಜಾಗ್ರತೆ ಯಾಗಿ ಮುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಒಡೆಯರಾಜ್‌ರವರು ಅತ್ಯಂತ ಮುಖ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ. ಉಳಿದ ಎಲ್ಲ ಕೆಲಸಗಳನ್ನು ತಡೆಗಟ್ಟಿಯಾದರೂ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ನೀರಾವರಿ ಕಾಮಗಾರಿಗಳನ್ನು ತೆಗದುಕೊಳ್ಳಬೇಕೆಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಇದರಲ್ಲಿ ಯಾರದು ಭಿನ್ನಾಭಿಪ್ರಾಯವಿಲ್ಲ. ಶ್ರೀ ಮಾನ್ ಒಡೆಯರಾಜ್‌ರವರು ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡು ಹೇಳಿದ್ದಾರೆ.

ಶ್ರೀ ಜಿ. ಪಿ ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ನಾನು ಏನು ಸಲಹೆಗಳನ್ನು ಕೊಟ್ಟಿರುತ್ತೇನೆ ಅಷ್ಟೇ ಅವರು ಕೂಡ ಹೇಳಿರುತ್ತಾರೆ. ಅದಕ್ಕಿಂತ ಜಾಸ್ತಿ ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ಕೆ.ಆರ್. ಎಸ್. ವಿಷಯದಲ್ಲಿ ಹಲವಾರು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಎಲ್ಲ ವಿಷಯಗಳು ಜ್ಞಾಪಕ ದಲ್ಲಿರುತ್ತದೆ, ಉತ್ತರವನ್ನು ಕೊಡುವಾಗ ಹೇಳುತ್ತೇನೆ ಎಂದರೆ ಒಂದು ಕತೆ ಇದೆ, ಮಹಾರಾಜರ ಕಥೆ ಅದನ್ನು ಹೇಳಬೇಕಾಗುತ್ತದೆ. ಆದರೆ ಅದನ್ನು ಇಲ್ಲಿ ಹೇಳುವುದು ಸಾಧ್ಯವಾದುದಲ್ಲ. ನಮ್ಮ ಕರ್ತವ್ಯ ನಾವು ಹೇಳುತ್ತೇವೆ. ಮಂಡ್ಯದ ರೈತರು ಮಾಡರ್ನೈಸೇಷನ್ ಸ್ಕೀಮ್ ಬಗ್ಗೆ ಎಷ್ಟೋ ದಿವಸಗಳಿಂದ ಈ ಕೆಲಸ ನಡೆಯುತ್ತಲೇ ಇದೆಂದು ಹೇಳುತ್ತಾರೆ. ಕೆ. ಆರ್. ಎಸ್. ಪ್ರಾಜೆಕ್ಟ್‌ಗೆ ಕೇವಲ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಮಂಡ್ಯ ರೈತರಿಗೆ ಇಷ್ಟೆಲ್ಲ ಅನುಕೂಲತೆಗಳನ್ನು ಕೊಟ್ಟಿದ್ದರೂ ಮದ್ದೂರು ಇತರ ಕಡೆಗಳಲ್ಲಿ ಹರಿಯುತಕ್ಕಂಥ ವಿಶ್ವೇಶ್ವರಯ್ಯ ಚಾನಲ್‌ನಿಂದ ಟೇಲ್ ಎಂಡ್‌ನಲ್ಲಿ ಇರತಕ್ಕಂಥವರಿಗೆ ನೀರು ಸಿಗುತ್ತಿಲ್ಲ. ಆದ್ದರಿಂದ ಕೆ.ಆರ್.ಎಸ್. ಚಾನಲ್ ಮಾಡರ್ನೈಜೇಷನ್‌ಗೋಸ್ಕರವಾಗಿ ಹೊಡೆದಾಡುತ್ತಿದ್ದಾರೆ. ಅದೇ ಪ್ರಮಾಣದಲ್ಲಿ ನೀರು ಸರಬರಾಜು ಮಾಡ ತಕ್ಕಂಥ ಕೆಲಸವನ್ನು ಬೇರೆ ಕಡೆಗೂ ಮಾಡಿಕೊಡಬೇಕು. ಭದ್ರಾ ಚಾನಲ್‌ನ್ನು ಮಾಡರ್ನೈಸ್ ಮಾಡ ಲಿಕ್ಕೆ ಎರಡು ಕೋಟಿ ರೂಪಾಯಿ ಗಳಿಗಿಂತಲೂ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಕೃಷ್ಣಾ ಬೇಸಿನ್ ಬಗ್ಗೆ ಮಾತನಾಡುತ್ತಾ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇರಿಗೇಷನ್ ಪ್ರಾಜೆಕ್ಟ್‌ಗಳ ಬಗ್ಗೆ ಮಾತನಾಡಿ ಕೃಷ್ಣಾ ಬೇಸಿನ್ ಬಗ್ಗೆಯೂ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಈ ಕಡೆ ಭಾಗವನ್ನೆಲ್ಲ ಪೂರ್ಣಗೊಳಿಸುವ ಸಲುವಾಗಿ ಗ್ರಾಂಟ್ ಜಾಸ್ತಿ ಮಾಡುತ್ತೇವೆಂದು ಕೂಡ ಹೇಳಿರುತ್ತಾರೆ. ಎರಡು ಕೋಟಿ ೫೦ ಲಕ್ಷ ರೂಪಾಯಿಗಳಷ್ಟು ಜಾಸ್ತಿ ಕೊಡುತ್ತೇವೆಂದೂ ಕೂಡ ಹೇಳಿರುತ್ತಾರೆ. ಆದರೆ ಅದರ ಗತಿ ಏನಾಗಿದೆ ಎಂಬುದನ್ನು ಈವತ್ತು ನೋಡಬೇಕಾಗಿದೆ. ನಾವು ಎಷ್ಟೇ ಹೇಳಿದರೂ ಕೂಡ ದುಡ್ಡು ಬರಲಾಗಲಿಲ್ಲ ಎಸ್ಟಿಮೇಟ್ ಸ್ಯಾಂಕ್ಷನ್ ಆಗತಕ್ಕಂಥ ಪ್ರಾಜೆಕ್ಟ್‌ಗಳ ಕೆಲಸ ಕಾರ್ಯಗಳು ಕೂಡ ಆಗಿಲ್ಲ. ಬೆಣ್ಣೆ ತೊರೆ ಕೆಲಸ ಏನೂ ಆಗಿಲ್ಲ, ಅಮರ್ಜಾ ಪ್ರಾಜೆಕ್ಟ್ ಕೆಲಸ ಆಗಿಲ್ಲ. ಸ್ವತಃ ಆ ಪ್ರದೇಶದಿಂದ ಬರತಕ್ಕಂಥ ಸದಸ್ಯರು ಯುವಜನ ಸದಸ್ಯರಾಗಿದ್ದಾರೆ. ಅವರು ಹೇಳುತ್ತಾರೆ ಮಂತ್ರಿಗಳು ಎಲ್ಲ ದುಡ್ಡನ್ನು ಕೊಟ್ಟು ಹೋದರು, ಆದರೆ ದುಡ್ಡೇ ಬರಲಿಲ್ಲ, ಎಸ್ಟಿಮೇಟ್ ಸ್ಯಾಂಕ್ಷನ್ ಆಗಿಲ್ಲವೆಂದು ಹೇಳುತ್ತಾರೆ. ಬೆಂಗಳೂರಿಗೆ ಬಂದು ಹೋಗತಕ್ಕಂಥ ಕೆಲಸ ಮಾತ್ರವಾಗಿದೆ ಎಂದು ಹೇಳುತ್ತಾರೆ. ನಮ್ಮ ಭಾಗದಲ್ಲಿ ಮೀಡಿಯಮ್ ಇರಿಗೇಷನ್ ಪ್ರಾಜೆಕ್ಟ್‌ಗಳ ಬಗ್ಗೆ ಒಂದು ಸ್ಥೂಲವಾದ ಚಿತ್ರವನ್ನು ಕೊಡುವುದು ಬಹಳ ಅಗತ್ಯವೆಂದು ಕಾಣುತ್ತದೆ. ಅಮರ್ಜಾ ೧೯೭೫ನೇ ಇಸವಿಯಲ್ಲಿ ಪ್ರಾರಂಭವಾಯಿತು. ಅಮರ್ಜಾ ಪ್ರಾಜೆಕ್ಟ್ ನಮ್ಮ ತಾಲ್ಲೂಕಿನಲ್ಲಿ ಇದೆ. ಇದು ೧೯೮೮-೮೯ಕ್ಕೆ ಪೂರ್ತಿಗೊಳಿಸಬೇಕೆಂದು ತಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಇದರ ಎಸ್ಟಿಮೇಟ್ ಕಾಸ್ಟ್ ೧೧ ಕೋಟಿ ರೂಪಾಯಿಗಳು. ಈವತ್ತಿನವರೆಗೆ ಖರ್ಚು ಮಾಡಿರುವುದು ಈ ಕೆಲಸಕಾರ್ಯಗಳಿಗೆ ಸುಮಾರು ೩ ೭೮ ಕೋಟಿ ರೂಪಾಯಿಗಳು ಮಾತ್ರ. ಹನ್ನೊಂದು ಕೋಟಿ ರೂಪಾಯಿ ಎಸ್ಟಿಮೇಟ್ ಇರತಕ್ಕಂಥ ಪ್ರಾಜೆಕ್ಟ್‌ಗೆ ೫೦-೬೦ ಲಕ್ಷ ರೂಪಾಯಿಗಳನ್ನು ಇಟ್ಟರೆ ಇನ್ನೂ ೧೯೮೮-೮೯ನೇ ಇಸವಿಗೆ ಮುಗಿಸುತ್ತೇವೆಂದು ಹೇಳತಕ್ಕಂಥದ್ದಲ್ಲ ಇನ್ನೂ ಹದಿನೈದು ವರ್ಷಗಳಾದರೂ ಕೂಡ ಬೇಕಾಗುತ್ತದೆಂದು ಹೇಳಬೇಕಾಗುತ್ತದೆ. ಇನ್ನು ಸಣ್ಣ ಮೀಡಿಯಮ್ ಪ್ರಾಜೆಕ್ಟ್ ಆದ ಅಪ್ಪರ್ ಮುಲ್ಲಾಮರಿ ಈ ಪ್ರಾಜೆಕ್ಟ್ ೧೯೭೬ನೇ ಇಸವಿಯಲ್ಲಿ ಪ್ರಾರಂಭವಾದುದು. ಇದರ ಎಸ್ಟಿಮೇಟ್ ಕಾಸ್ಟ್ ೮ ಕೋಟಿ ರೂಪಾಯಿಗಳು ಖರ್ಚುಮಾಡಿರುವುದು ನಾಲ್ಕು ಕೋಟಿ ರೂಪಾಯಿಗಳು. ೧೯೮೬-೮೭ಕ್ಕೆ ಮುಗಿಸುತ್ತೇವೆಂದು ಹೇಳಿರುತ್ತೀರಿ. ಲೋಯರ್ ಮುಲ್ಲಾಮರಿ ೧೯೭೫ರಲ್ಲಿ ಪ್ರಾರಂಭವಾಯಿತು. ಇದರ ಎಸ್ಟಿಮೇಟ್ ಕಾಸ್ಟ್ ೧೫ ಕೋಟಿ ರೂಪಾಯಿಗಳು ಖರ್ಚಾಗಿರತಕ್ಕಂಥದ್ದು ಕೇವಲ ಮೂರು ಕೋಟಿ ರೂಪಾಯಿಗಳು. ಈ ರೀತಿ ಖರ್ಚು ಮಾಡಿ ಇರಿಗೇಷನ್ ಪೊಟೆನ್‌ಷಿಯಲ್ ಕ್ರಿಯೇಟ್ ಮಾಡುತ್ತೇವೆಂದು ಹೇಳಿದರೆ ಇದು ಬಹುದೂರದಲ್ಲಿರುತ್ತದೆ. ಬರಗಾಲ ಪೀಡಿತ ಪ್ರದೇಶಗಳಲ್ಲಿ

ನೀರಾವರಿ ಸೌಲಭ್ಯಗಳನ್ನು ಒದಗಿಸಬೇಕು, ಅನುಕೂಲತೆಗಳನ್ನು ಮಾಡಿಕೊಡಬೇಕು ಎಂದು ಹೇಳುವಾಗ ಎಷ್ಟರಮಟ್ಟಿನ ಆದ್ಯತೆಯನ್ನು ಕೊಟ್ಟಿದ್ದೀರಿ ಎಂಬುದಕ್ಕೆ ಉದಾಹರಣೆಯನ್ನು ಕೊಡಬೇಕಾಗಿದೆ. ಹಿರೆಹಳ್ಳ, ಮಸ್ಕಿನಾಳ, ರಾಣಿಕೆರೆ, ಮಂಜರಾಪಲ್ಲಿ ಸೌದಾಗರ್, ಚುಲ್ಕಿನಾಳ ಪ್ರಾಜೆಕ್ಟ್ ಇವೆಲ್ಲವನ್ನೂ ಮಾಡಿ ಮುಗಿಸಬೇಕೆಂದರೆ ೧೯೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿರತಕ್ಕಂಥ ಪ್ರಾಜೆಕ್ಟ್‌ಗಳು ಆಗಿವೆ. ಈ ಪ್ರಾಜೆಕ್ಟ್‌ಗಳಿಗೆ ಇಲ್ಲಿಯವರೆಗೆ ೪೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಕೃಷ್ಣಾ ಬೇಸಿನ್‌ಗೆ ಪ್ಲಾನಿಂಗ್ ಕಮಿಷನ್‌ನಿಂದ ಸಹಾಯ ಬರುತ್ತದೆ. ಆದರೆ ಕಾವೇರಿ ಬೇಸಿನ್‌ಗೆ ಬರುವುದಿಲ್ಲ ಪ್ಲಾನಿಂಗ್ ಕಮಿಷನ್‌ರವರು ಕೊಡುವುದಿಲ್ಲ. ಕೃಷ್ಣಾ ಬೇಸಿನ್‌ಗೆ ಪ್ಲಾನಿಂಗ್ ಕಮಿಷನ್‌ನಿಂದ ದುಡ್ಡು ಬಂದರೂ ಸಹ ಇಷ್ಟೊಂದು ಮಂದಗತಿಯಿಂದ ಕೆಲಸ ಮಾಡಿದರೆ ಜನರಿಗೆ ಸೌಲಭ್ಯವನ್ನು ಯಾವ ರೀತಿ ಒದಗಿಸಲು ಸಾಧ್ಯವಾಗುತ್ತದೆ. ಮಿಡಿಯಮ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನೆಲ್ಲ ಸಾಧ್ಯವಾದಷ್ಟು ಜಾಗ್ರತೆಯಾಗಿ ಮುಗಿಸಿದರೆ ಇರಿಗೇಷನ್ ಪೊಟೆನ್ಷಿಯಲ್‌ನ್ನು ಜಾಸ್ತಿ ಮಾಡಲಿಕ್ಕೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡರೆ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥ ಹಿಪ್ಪರಗಿ ಪ್ರಾಜೆಕ್ಟ್‌ನ್ನು ೧೯೬೩ನೇ ಇಸವಿಯಲ್ಲಿ ತೆಗೆದುಕೊಂಡದ್ದು. ಈ ಪ್ರಾಜೆಕ್ಟ್‌ನ ಎಸ್ಟಿಮೇಟ್ ಕಾಸ್ಟ್ ೭೪.೫೧ ಕೋಟಿ ರೂಪಾಯಿಗಳು. ಇದಕ್ಕೆ ಖರ್ಚಾಗಿರುವುದು ಈವತ್ತಿನವರೆಗೆ ಎಂದರೆ ಸುಮಾರು ನಾಲ್ಕು ಕೋಟಿ ರೂಪಾಯಿಗಳೆಂದು ಇಟ್ಟುಕೊಂಡರೂ ಈವತ್ತಿನವರೆಗೆ ಇರಿಗೇಷನ್ ಪೊಟೆನ್ಷಿಯಲ್‌ನ್ನು ಕ್ರಿಯೇಟ್ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಮಲಪ್ರಭಾ ೧೯೬೦ರಲ್ಲಿ ಪ್ರಾರಂಭ ಮಾಡಿದರು ೧೯೮೭-೮೮ರಲ್ಲಿ ಮುಗಿಸಬೇಕೆಂಬ ಗುರಿಯನ್ನು ಇಟ್ಟುಕೊಂಡರು, ಇದರ ಎಸ್ಟಿಮೇಟ್ ೨೩೬ ಕೋಟಿ ರೂಪಾಯಿಗಳಿದ್ದರೆ ಇದಕ್ಕೆ ಕೇವಲ ೧೩೬ ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುತ್ತಾರೆ ಬೆಣ್ಣೆತೊರೆ ಪ್ರಾಜೆಕ್ಟ್ ೧೯೬೬ರಲ್ಲಿ ಪ್ರಾರಂಭವಾದದ್ದು, ಇದು ೧೯೯೦-೯೧ಕ್ಕೆ ಮುಗಿಸುತ್ತೇವೆಂದು ವಾಗ್ದಾನವನ್ನು ಕೊಟ್ಟಿದ್ದಾರೆ. ಇದು ೬೬ ಕೋಟಿ ರೂಪಾಯಿಗಳ ಪ್ರಾಜೆಕ್ಟ್, ಇದಕ್ಕೆ ಖರ್ಚುಮಾಡಿರತಕ್ಕಂಥದ್ದು ಕೇವಲ ೫.೧೨ ಕೋಟಿ ರೂಪಾಯಿಗಳು. ಇದು ಒಂದು ಮಲ್ಟಿಪರಪಸ್ ಪ್ರಾಜೆಕ್ಟ್. ಗುಲ್ಬರ್ಗಾಕ್ಕೆ ಕುಡಿಯುವ ನೀರನ್ನು ಸಹ ಒದಗಿಸತಕ್ಕಂಥ ಒಂದು ಪ್ರಾಜೆಕ್ಟ್ ಆಗಿರುತ್ತದೆ. ಇದರ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಮುಗಿಸದೆ ಇರತಕ್ಕಂಥ ಒಂದು ದುರ್ದೈವದ ಸಂಗತಿಯಾಗಿದೆ. ಭದ್ರಾ ಪ್ರಾಜೆಕ್ಟ್‌ನ್ನು ತೆಗೆದುಕೊಂಡರೆ ಇದು ೫೮ ಕೋಟಿ ರೂಪಾಯಿಗಳ ಎಸ್ಟಿಮೇಟೆಡ್ ಪ್ರಾಜೆಕ್ಟ್ ಆಗಿರುತ್ತದೆ. ಇದು ಸಹ ೧೯೮೬-೮೭ಕ್ಕೆ ಮುಗಿಯಬೇಕಾಗಿರುತ್ತದೆ. ಇದುವರೆಗೆ ೫೨ ಕೋಟಿ ರೂಪಾಯಿಗಳು ಖರ್ಚಾಗಿರುತ್ತದೆ. ತುಂಗಭದ್ರಾ ಲೆಫ್ಟ್‌ಬ್ಯಾಂಕ್ ಕೆನಾಲ್, ರೈಟ್ ಬ್ಯಾಂಕ್ ಕೆನಾಲ್ಸ್ ಎಲ್ಲ ಪ್ರಾಜೆಕ್ಟ್‌ಗಳ ಕೆಲಸಗಳು ಆಗಬೇಕಾಗಿರುತ್ತದೆ.

ಇನ್ನು ಕಾರಂಜಾ-ಬೀದರ್ ಜಿಲ್ಲೆಯಲ್ಲಿ ಬಹಳ ಮುಖ್ಯವಾದಂಥ ಪ್ರಾಜೆಕ್ಟ್. ಇದರ ಎಸ್ಟಿಮೇಟ ೫.೩ ಕೋಟಿ ರೂಪಾಯಿಗಳು. ಇನ್ನೂ ಕೆಲಸ ನಡೆಯುತ್ತಿಲ್ಲ. ಅಲ್ಲಿ ಕೆಲಸ ಸ್ಥಗಿತವಾಗಿದೆ. ಇದು ಭೀಮಣ್ಣ ಖಂಡ್ರೆಯವರ ಜಿಲ್ಲೆ. ೧೯೬೭ರಲ್ಲಿ ಪ್ರಾರಂಭವಾಗಿ ೧೯೯೦-೯೧ರಲ್ಲಿ ೫೧ ಕೋಟಿಯಲ್ಲಿ ಇದು ಮುಗಿಯಬೇಕಾಗಿದ್ದು, ಆಗಿರುವ ಖರ್ಚು ೧೬ ಕೋಟಿ ರೂಪಾಯಿ ಮಾತ್ರ. ಈ ವರ್ಷ ಮೂರು ಕೋಟಿ ಇಟ್ಟಿದ್ದಾರೆ. ಮೂರು ಕೋಟಿಯನ್ನು ಖರ್ಚು ಮಾಡಲು ಕೆನಾಲ್ ಸಿಸ್ಟಮ್ ಡೆವಲಪ್‌ಮೆಂಟ್ ಆಗಿಲ್ಲ, ಕೆಲಸಕಾರ್ಯಗಳು ಅಲ್ಲಿ ಸ್ಥಗಿತವಾಗಿವೆ ಎಂದು ಮಾನ್ಯ ಭೀಮಣ್ಣ ಖಂಡ್ರೆಯವರು ಹೇಳುತ್ತಿದ್ದರು, ವಾರಾಹಿ ಪ್ರಾಜೆಕ್ಟ್‌ನ್ನು ಎಂ.ಪಿ.ಸಿ ಯವರು ಮಾಡುತ್ತಿದ್ದಾರೆ. ಮಾಡರ್ನೈಸೇಶನ್ ಆಫ್ ಭದ್ರಾ ಕೆನಾಲ್ಸ್, ಟಿ.ಡಿ.ಬಿ. ಕೆ.ಆರ್.ಎಸ್. ಬಗ್ಗೆ ಮಾತ ಎತ್ತಿದ್ದಾರೆ. ಇವುಗಳೆಲ್ಲಾ ಪ್ಲಾನಿಂಗ್ ಕಮೀಶನ್ ಕ್ಲಿಯರ್ಡ್ ಪ್ರಾಜೆಕ್ಟ್ಸ್. ೧೮೫ ಕೋಟಿ ರೂಪಾಯಿಗಳಲ್ಲಿ ಇದುವರೆಗೂ ಖರ್ಚಾಗಿರುವುದು. ೫೬೭.೩ ಕೋಟಿ ರೂಗಳು ಮಾತ್ರ. ಈ ಮಟ್ಟದಲ್ಲಿ ಕೆಲಸ ಮಾಡಿದರೆ ಹೇಗೆ ? ಪ್ಲಾನಿಂಗ್ ಕಮೀಶನ್‌ನಿಂದ ದುಡ್ಡು ಸಿಗುತ್ತದೆ. ಕೃಷ್ಣಾ ಬೇಸಿನ್ ಪ್ರಾಜೆಕ್ಟ್‌ಗೆ ದುಡ್ಡಿನ ಕೊರತೆ ಇಲ್ಲ. ಪ್ರಾರಂಭವಾಗಿರತಕ್ಕಂಥ ಕೆಲಸ ಕಾರ್ಯಗಳನ್ನು ತ್ವರಿತಗತಿಯಿಂದ ಮಾಡಬೇಕೆಂದು ನಾನು ತಮ್ಮಲ್ಲಿ ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಎರಡು ವಿಷಯಗಳನ್ನು ಹೇಳಬೇಕು. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಎಲ್ಲಾ ಹಿರಿಯ ನಾಯಕರು ಧುರೀಣರು ಮಾನ್ಯ ಮುಖ್ಯಮಂತ್ರಿಗಳು, ದೇವೇಗೌಡರು ಬೊಮ್ಮಾಯಿಯವರು ಹೆಲಿಕಾಪ್ಟರ್‌ನಲ್ಲಿ ಹೋಗಿ ನೋಡಿಕೊಂಡು ಬಂದರು. ಮೂರು ಜನ ಮಂತ್ರಿಗಳೂ ಹೋಗಿದ್ದರಿಂದ ಕೆಲಸ ಬೇಗ ಮುಗಿಯುತ್ತದೆ ಎಂಬ ಆಸೆ ನಮಗೆ ಇತ್ತು. I do not question their *bona fides* as

far as this is concerned. ಇವರು ಹೋಗಿ ನೋಡಿಕೊಂಡು ಬಂದರೂ ಕೂಡ ಇವತ್ತು ಕೆಲಸ ಕಾರ್ಯಗಳು ಏನೂ ನಡೆಯುತ್ತಿಲ್ಲ. ಇದಕ್ಕೆ ಕಾರಣಗಳು ಬಹಳ ಇವೆಯೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದರು. ಕೆಲವು ಕಂಟ್ರಾಕ್ಟರ್‌ಗಳು ಆರ್ಬಿಟ್ರೇಷನ್ ಹೋಗಿದ್ದಾರೆ. ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ೩೫ ಕಿಲೋಮೀಟರ್ ಕೆಲಸ ನಿಂತುಹೋಗಿದೆ. ರಾಜನ ಕೊಲ್ಲೂರು ಟನಲ್ ಹೋದ ವರ್ಷವೇ ಮುಗಿಸಬೇಕಾಗಿತ್ತು. ಇದನ್ನು ಮುಗಿಸಬೇಕು. ಎಲ್ಲಿಯವರೆಗೆ ಈ ಕೆಲಸ ಆಗುವುದಿಲ್ಲ, ಶಹಪುರ ಬ್ರಾಂಚ್ ಕೆನಾಲ್‌ನಿಂದ ನೀರು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಪೊಟೆನ್‌ಶಿಯಲ್ ಕ್ರಿಯೇಟ್ ಮಾಡಿರತಕ್ಕದ್ದು ಎಷ್ಟು ? ೩೫ ಸಾವಿರ ಎಕರೆ ಭೂಮಿಗೆ ನೀರು ಕೊಡಲಿಕ್ಕೆ ಆಗಿಲ್ಲ. ಇದಕ್ಕೆ ಕೆಲವು ತಾಂತ್ರಿಕ ತೊಂದರೆಗಳು ಇರುತ್ತವೆ. ಆದರೆ ಮನಸ್ಸು ಮಾಡಿ, ಕೂತುಕೊಂಡು ಕೆಲಸ ಮಾಡಬೇಕು. ಅದನ್ನು ಮಾಡುವುದು ಬಿಟ್ಟು ಮಾನ್ಯ ಮಂತ್ರಿಗಳು ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ. ಟ್ರಾನ್ಸ್‌ಫರ್ ಅದು ಇದು ಬೇರೆ ಕೆಲಸ ಮಾಡುತ್ತಿದ್ದಾರೆ. ಪ್ರಸಂಗ ಬಂದಾಗ ನಾನು ಅದರ ಬಗ್ಗೆ ಹೇಳುತ್ತೇನೆ ಆದರೆ ನಾನು ನಿಮಗೆ ನೇರವಾಗಿ ಹೇಳುತ್ತಿದ್ದೇನೆ..

ಶ್ರೀ ಬಾಪುಗೌಡ ದರ್ಶನಾಪುರ.—ಹತ್ತು ವರ್ಷಗಳಿಂದ ನೀವು ಏನು ಮಾಡಿದ್ದೀರಿ, ಅದರ ಹಣೆ ಬರಹ ಇವೆಲ್ಲಾ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನೀವು ಬರಬೇಕು. ಎಲ್ಲಾ ಮಂತ್ರಿಗಳನ್ನು ಕರೆದುಕೊಂಡು ನಮ್ಮ ಕಡೆಗೆ ಬನ್ನಿ. ನೀವು ಮಾಡತಕ್ಕದ್ದು ತೊಂದರೆ ಬೇಡ. ನಾವು ಏನಾದರೂ ಸ್ವಲ್ಪ ಮಾಡಿದ್ದರಿಂದ ಈ ಪರಿಸ್ಥಿತಿಯಲ್ಲಿ ಇದ್ದೇವೆ. ನಾವು ಮಾಡಿದ್ದೇ ಎಲ್ಲಾ. ಅದು ರೆಕಾರ್ಡ್‌ನಲ್ಲಿ ಇದೆ

ಶ್ರೀ ಬಾಪುಗೌಡ ದರ್ಶನಾಪುರ.—ಕೃಷ್ಣಾ ನದಿ ನೀರಿನ ವ್ಯವಹಾರದ ಬಗ್ಗೆ ರಾಜಕೀಯ ಮಾಡಿದ್ದೀರಿ. ಈಗ ಈ ವರ್ಷದಲ್ಲಿ ಏನು ಆಗಿದೆ. ಏನು ಆಗಿಲ್ಲವೆಂದು ಕೇಳುತ್ತಿದ್ದೀರಿ, ಕೃಷ್ಣಾ ನದಿ ನೀರಿನ ಬಗ್ಗೆ ಎಷ್ಟು ಖರ್ಚಾಗಿದೆ...

ಶ್ರೀ ಗೋವಿಂದ ಪಿ. ಒಡೆಯರಾಜ್.—ರಾಜಕೀಯ ದುರ್ಲಾಭವನ್ನು ಪಡೆದ ಹೊರೆ ನಿಮ್ಮ ಮೇಲೆ ಬರುತ್ತದೆ.

ಶ್ರೀ ಜಿ. ಡಿ. ಸೋಮಪ್ಪ.—ಇಬ್ಬರೂ ಒಂದೇ ಜಿಲ್ಲೆಯವರು. ಇಲ್ಲಿ ಈಗ ಚರ್ಚೆಯನ್ನೇ ಶುರುಮಾಡಿಬಿಟ್ಟಿದ್ದಾರೆ.

ಚೇರ್ಮನ್.—ಒಡೆಯರಾಜ್ ಅವರೇ, ನೀವು ವಿಷಯದ ಬಗ್ಗೆ ಮಾತನಾಡಿ. ಇನ್ನೂ ಅನೇಕರು ಮಾತನಾಡುವವರಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ತುಂಬಾ ಸದಸ್ಯರು ಮಾತನಾಡಬಹುದು. ಏಕೆಂದರೆ ಒಂದು ದಿನ ಇದಕ್ಕೆ ಮೀಸಲಿಡಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿದೆ. ಆದ್ದರಿಂದ ನಾನು ಮಧ್ಯೆ ಪ್ರವೇಶ ಮಾಡುತ್ತಿಲ್ಲ. ನನ್ನನ್ನು ಕೆಣಕಿದರೂ ಕೂಡ ಸುಮ್ಮನೆ ಕುಳಿತಿದ್ದೇನೆ. ದಯ ಮಾಡಿ ಸದಸ್ಯರು ಮಾತನಾಡುವಾಗ ಇಂಟರ್‌ಫಿಯರ್ ಮಾಡುವುದು ಬೇಡ. ಎಲ್ಲಾ ಡಿಮ್ಯಾಂಡ್‌ಗಳೂ ೧೬ನೇ ತಾರೀಕಿಗೆ ಮುಗಿಯಬೇಕೆಂದು ಒಂದು ಚೌಕಟ್ಟನ್ನು ಹಾಕಿಕೊಂಡಿದ್ದೇವೆ. ಈ ಚೌಕಟ್ಟಿಗೆ ಒಳಪಟ್ಟು ಕೆಲಸ ಮಾಡದೇ ಹೋದರೆ ಇದನ್ನು ಮುಗಿಸುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ವರ್ಲ್ಡ್ ಬ್ಯಾಂಕ್‌ನಿಂದ ೧೯೮೩ರಲ್ಲಿ ಒಪ್ಪಂದದಿಂದಾಗಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಮುಗಿದಿದೆ. ಇದನ್ನು ಮುಂದುವರೆಸಲಿಕ್ಕೆ ಏರ್ಪಾಡು ಮಾಡಿದ್ದೀರೋ, ಅಥವಾ ಮಾಡಿಲ್ಲವೋ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೋ ಗೊತ್ತಿಲ್ಲ. ಈ ಪ್ರಾಜೆಕ್ಟ್‌ಗೆ ೧೦೪೯.೭೧ ಕೋಟಿ ಖರ್ಚಾಗುತ್ತದೆ ಇವತ್ತಿನ ಲೆಕ್ಕದಲ್ಲಿ ಆದರೆ ಖರ್ಚು ಆಗಿರತಕ್ಕದ್ದು ೨೨೩ ಕೋಟಿ ರೂಗಳು ಮಾತ್ರ.

ಶ್ರೀ ಬಾಪುಗೌಡ ದರ್ಶನಾಪುರ.—೧೯೮೩ಕ್ಕೆ ವರ್ಲ್ಡ್ ಬ್ಯಾಂಕಿನ ಹಣ ಉಪಯೋಗ ಮಾಡಬೇಕಾದದ್ದು ಮಾಡಿಲ್ಲ. ೧೯೮೪-೮೫ಕ್ಕೆ ಅವರಿಂದ ೪೫-೬೦ ಕೋಟಿ ಬರಬಹುದು. ಆದರೆ ವರ್ಲ್ಡ್ ಬ್ಯಾಂಕ್‌ನಿಂದ ಹಣ ಪಡೆಯಬೇಕಾದರೆ ಹಾದಿ ಸುಗಮವಾಗಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅದನ್ನು ನೀವು ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಶುರುವಾದಾಗ ಇವರು ಕಾಲು ಊರುವುದಕ್ಕೂ ಜಾಗ ಇರಲಿಲ್ಲ.

ಶ್ರೀ ಗೋವಿಂದ ಬಿ. ಒಡೆಯರಾಜ್.—ಕೆಲಸ ಕಾರ್ಯಗಳನು ಬೇಗ ಮುಗಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ನಿಖರವಾಗಿ ಹೇಳಬೇಕು. ಕೆಲಸಕಾರ್ಯಗಳು ಸರಿಯಾಗಿ ವೇಗವಾಗಿ ನಡೆದರೆ ಪ್ಲಾನಿಂಗ್ ಕಮೀಶನ್ ಅವರು ದುಡ್ಡು ಕೊಡುತ್ತಾರೆ, ವರ್ಲ್ಡ್ ಬ್ಯಾಂಕ್‌ನವರು ದುಡ್ಡು ಕೊಡುತ್ತಾರೆ. ಇದರಲ್ಲಿ ಕೆಲವು ತಾಂತ್ರಿಕ ತೊಂದರೆಗಳು ಇರಬಹುದೆಂಬುದನ್ನು ನಾನು ಒಪ್ಪುತ್ತೇನೆ. ಇವತ್ತು ೧೬ ಕೋಟಿ ರೂಪಾಯಿಯ ತಂಟೆ ಇದೆ. ಅರ್ಬಿಟ್ರೇಶನ್ ಕೇಸುಗಳಿವೆ, ಹೋದವರ್ಷ ಆದದ್ದು. ಒಂದು ವರ್ಷ ಸುಮ್ಮನೆ ಕುಳಿತರು. ಇವುಗಳನ್ನು ಇತ್ಯರ್ಥ ಮಾಡುವುದಕ್ಕೆ ಆಗಲಿಲ್ಲ. ನಿಜವಾಗಿಯೂ ಈ ಕಂಟ್ರಾಕ್ಟರ್‌ಗಳಿಗೆ ಮಾತ್ರ ಯಾವುದೇ ಸಹಾಯ ಮಾಡುವುದಕ್ಕೆ ಹೋಗಬಾರದು. That is my stand. I stand by stand. ಆರ್ಬಿಟ್ರೇಶನ್ ಕೇಸುಗಳನ್ನು ಆದಷ್ಟು ಬೇಗ ಮುಗಿಸಿ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡುವುದಕ್ಕೆ ಒಂದು ವರ್ಷವಾದರೂ ಕೂಡ ಆಗಲಿಲ್ಲ. ಈ ಸರ್ಕಾರ ಏನು ಕೆಲಸ ಮಾಡುತ್ತಿದೆಯೆಂದು ಹೇಳಬೇಕು. ನನಗೆ ತಿಳಿದ ಮಟ್ಟಿಗೆ ಇದರಲ್ಲಿ ವಿಳಂಬವಾಗಿ ಇದರ ದುಡ್ಡನ್ನು ಬೇರೆ ಕಡೆಗೆ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಂದು ವಿವರವನ್ನೂ ಹೇಳತಕ್ಕದ್ದು ಅವಶ್ಯಕತೆ ನನಗೆ ಕಾಣಿಸುವುದಿಲ್ಲ. ೩೫ ಸಾವಿರ ಎಕರೆಗೆ ನೀರು ಈ ವರ್ಷ ಕೊಡುತ್ತೇವೆ ಎಂದು ಮುಖ್ಯಮಂತ್ರಿಗಳು ಮಂತ್ರಿಗಳು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಹೇಳಿದಷ್ಟು ಪ್ರಮಾಣದಲ್ಲಿ ಪೊಟೆನ್‌ಶಿಯಾಲಿಟಿ ಕ್ರಿಯೇಟ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ರಾಜ್ಯದಲ್ಲಿ ೫೫ ಸಾವಿರ ಎಕರೆ ಜಮೀನಿಗೆ ನೀರು ಕೊಡಲಿಕ್ಕೆ ಸಾಧ್ಯ ಇದೆ. ಇರಿಗೇಶನ್ ಡಿಪಾರ್ಟ್ ಪರಫಾರ್ಮೆನ್ಸ್ ಬಡ್ಜೆಟ್ ಪ್ರಕಾರ ೨೩ ಲಕ್ಷ ಎಕರೆ ಭೂಮಿಗೆ ಮಾತ್ರ ನೀರು ಕೊಡಲಿಕ್ಕೆ ಸಾಧ್ಯ ಇದೆ. ೫೦ ಪರ್ಸೆಂಟ್ ಭೂಮಿಗೆ ನೀರು ಕೊಡಲಿಕ್ಕೆ ಆಗಿಲ್ಲ ಮಾನ್ಯ ಬೊಮ್ಮಾಯಿಯವರ ಕಾಲದಲ್ಲಿ ಪಿ.ಎ ಸಿ. ರಿಪೋರ್ಟ್‌ನ್ನು ಕೊಟ್ಟಿದ್ದರು. ಅದನ್ನು ನೋಡಿದರೆ ಇದರ ಹಿನ್ನಲೆ ಗೊತ್ತಾಗುತ್ತದೆ.

> "The Committee observed that the Chief Engineers and the officers at Government Level have vailed to bestow adequate attention to this matter...They have allowed the field officers to proceed with the work. even though the revised estimate was not administratively approved and technically sanctioned This amounts to dereliction of duty and shirking of responsibility. No real purpose would be served if the revised estimates are approved by Government and the Chief Engin er after completion of the work, based on the actual expenditure already incurred. The Committee recommended that Government should ensure strict compliance with the requirements of the financial Rules in future."
>
> ......
>
> "The Committee consider that the Irrigation Department has followed an irregular procedure of keeping the estimates open for indefinite period and incurring expenditure on fresh items not originally contemplated only to cloud the real reasons for excess expenditure and to help the officers to escape from their responsibility for such unauthorised exess expenditure.

ಸ್ವಾಮಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ದೇವೇಗೌಡರು ಕೂಡ ಕೆಲಸ ಮಾಡಿದ್ದಾರೆ. ಅವರಿಗೂ ಕೂಡ ವಿಷಯ ಚೆನ್ನಾಗಿ ಗೊತ್ತಿದೆ. ಆದರೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ತಮ್ಮ ವರದಿಯಲ್ಲಿ ಈ ರೀತಿ ತಿಳಿಸಿದ್ದಾರೆ. ಅದು ಏನೆಂದರೆ ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ಒದಗಿಸಿಕೊಟ್ಟಿದ್ದರೂ ಕೂಡ ಅಧಿಕಾರಿಗಳು ಆ ಹಣವನ್ನು ಖರ್ಚು ಮಾಡದೆ ಲ್ಯಾಪ್ಸ್ ಮಾಡಿದ್ದಾರೆಂದು ಅಧಿಕಾರಿಗಳು ಸರಿಯಾಗಿ ಫಾಲೋ ಅಪ್ ಮಾಡುವುದಿಲ್ಲ. ಈ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಕೆಲವು ಪ್ರಾಜೆಕ್ಟ್‌ಗಳು ಪೂರ್ತಿಯಾಗಿದ್ದರೂ ಸಹ ಕ್ಯಾನಲ್ಸ್ ಮಾಡಿಲ್ಲ. ಬರೀ ಡ್ಯಾಮ್‌ಗಳನ್ನು ಮಾತ್ರ ಕಟ್ಟಿಸಿಕೊಟ್ಟು ಅಲ್ಲಿ ನೀರು ಸಂಗ್ರಹಣೆ ಮಾಡಿದರೆ ಯಾವ ಪ್ರಯೋಜನವಾಗುವುದಿಲ್ಲ. ಅಲ್ಲಿ ಕ್ಯಾನಲ್‌ಗಳನ್ನು ಮಾಡಿ ನೀರು ಬಿಡುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ನಮ್ಮ ರಾಜ್ಯದಲ್ಲಿ ಘಟಪ್ರಭಾ ನೀರಾವರಿ ಯೋಜನೆಗಳು ಇವೆ ಮಲಪ್ರಭ ನೀರಾವರಿ ಯೋಜನೆಗಳು ಇವೆ. ಆದರೆ ಈ ಯೋಜನೆಗಳಿಗೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಕೊಡಿ, ತಮಗೆ ಹಣದ ಕೊರತೆ ಬರುವುದಿಲ್ಲ. ಕಾರಣವೇನೆಂದರೆ ತಮಗೆ ಹಣವನ್ನು ಪ್ಲಾನಿಂಗ್ ಕಮಿಷನ್‌ರವರು ಕೊಡುತ್ತಾರೆ.

ಛೇರ್ಮನ್. ಮಾನ್ಯ ಸದಸ್ಯರು ಸಾಕಷ್ಟು ವೇಳೆಯನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಬೇಗ ಮುಗಿಸಿದರೆ ಒಳ್ಳೆಯದು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ನಾವು ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. ನಮ್ಮ ಮುಂದೆ ಇಟ್ಟಿರತಕ್ಕಂಥ ಬಡ್ಜೆಟ್‌ನಲ್ಲಿ ನೀರಾವರಿ ಯೋಜನೆಗಳಿಗೆ ಎಷ್ಟು ಹಣವನ್ನು ಕೊಡಬಹುದು ಎನ್ನುವ ಬಗ್ಗೆ ಅಂಕಿ ಅಂಶಗಳನ್ನು ಇಟ್ಟಿದ್ದಾರೆ. ಮತ್ತು ಮುಂದಿನ ವರ್ಷದ ಸುಧಾರಣೆಯ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಈ ಇಲಾಖೆ ಬಹಳ ಮಹತ್ವ ಪೂರ್ಣವಾದ ಇಲಾಖೆ. ಆದ್ದರಿಂದ ನಾವು ಮಾತನಾಡಬೇಕಾಗುತ್ತದೆ. ಸ್ವಾಮಿ ನಮ್ಮ ರಾಜ್ಯದಲ್ಲಿ ಮಲಪ್ರಭಾ, ಘಟಪ್ರಭಾ, ಹಾರಂಗಿ ಅಮರಾವತಿ ಈ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತಹ ಒಂದು ಹೇಳಿಕೆಯನ್ನು ನಮ್ಮ ವಿರೋಧ ಪಕ್ಷದ ನಾಯಕರಾದಂಥ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಕೊಟ್ಟಿದ್ದರು. ಅದು ಈ ರೀತಿ ಇದೆ. ಅವರು ಜನತಾ ಸರ್ಕಾರ ೯ ತಿಂಗಳು ಮಾಡಿರತಕ್ಕಂಥ ಕೆಲಸ ಕಾರ್ಯಗಳ ಬಗ್ಗೆ ಅಂಕಿ ಅಂಶಗಳ ಮೂಲಕ ತಿಳಿಸಿದ್ದಾರೆ.

"The Janata Government is showing utmost indifference towards implementing Cauvery Basin Projects, Leader of the Opposition in the Assembly Veerappa Moily challenged here today.

He told newsmen that only one-third of the budget allocation had been spent in the past nine months. The previous Government used to make a budget allocation up to Rs. 40 crores and had planned to increase it. But the Hegde Government had not even spent the earmarked amount for completing the Cauvery Basin project.

The budget allocation for the Kabini canal project was Rs. 18.80 crore and the booked expenditure at the end of October was only Rs. 4.96 crore. The allocation for Varuna canals was Rs. 2.2. crore but only Rs. 98 lakh had been spent. Only Rs 4.13 crore had been spent on the Harangi project for which the allocation was Rs. 9.70 crore.

For the Rs. 25.10 crore plan of modernising the K. R. Sagar and Varuna projects, the Government had allotted only Rs. two crores and so far had spent only Rs. 58 lakhs.

These figures showed that the Government was spending only on establishment charges and salaries of the staff, Moily said. Thus the Government had unofficially declared a budget holiday for Cauvery Basin projects."

ಮಾನ್ಯ ಅಧ್ಯಕ್ಷರೆ: ಈ ಸರ್ಕಾರದಲ್ಲಿ ನಾವು ಏನೂ ಹೆಚ್ಚಿನ ನಿರೀಕ್ಷೆಯನ್ನು ಮಾಡುವಂತೆ ಇಲ್ಲ ಎಂದು ನನಗನಿಸುತ್ತದೆ. ಇನ್ನು ಈ ಇಲಾಖೆಯ ಆಡಳಿತದ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳಲೇಬೇಕಾಗುತ್ತದೆ. ಸ್ವಾಮಿ, ಜನತಾ ಸರ್ಕಾರದವರು ಅನೇಕ ಹರಿಜನ ಮತ್ತು ಗಿರಿಜನ ಹಾಗೂ ಹಿಂದುಳಿದ ವರ್ಗದವರಿಗೆ ಬಡ್ತಿಯನ್ನು ಕೊಟ್ಟಿದ್ದಾರೆ. ಆದರೂ ಕೂಡ ಹರಿಜನ ಮತ್ತು ಗಿರಿಜನರಿಗೆ ಕೊಡಬೇಕಾದಂಥ ಸೌಲಭ್ಯಗಳು ಕೊಟ್ಟಿಲ್ಲ. ಈ ಒಂದು ಆಪಾದನೆಯನ್ನು ನಾನು ನೇರವಾಗಿ ಮಾನ್ಯ ಮಂತ್ರಿಗಳ ಮೇಲೆ ಮಾಡುತ್ತಿದ್ದೇನೆ. ಸ್ವಾಮಿ, ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು ೩೦ ಜನ ಚೀಫ್ ಇಂಜಿನೀಯರ್ಸ್ ಇದ್ದಾರೆ. ಆದರಲ್ಲಿ ೧೮ ಪರ್ಸೆಂಟ್ ಮೀಸಲಾತಿಯನ್ನು ಭರ್ತಿ ಮಾಡಿದ್ದಾರೆಯೆ ? ಅದೇ ರೀತಿ ಸೂಪರಿನ್‌ಟೆಂಡೆಂಟ್ ಇಂಜಿನಿಯರ್ಸ್ ೭೪ ಜನರು ಇದ್ದಾರೆ ಇದರಲ್ಲಿ ೧೮ ಪರ್ಸೆಂಟ್ ಭರ್ತಿ ಮಾಡಿದ್ದಾರಾ ? ಮತ್ತೆ ಎಕ್ಸಿಕ್ಯುಟೀವ್ ಇಂಜಿನಿಯರ್ಸ್ ೨೫೨ ಜನರು ಇದ್ದಾರೆ. ಆದರೆ ಇದರಲ್ಲಿ ಶೇಕಡ ೧೧.೫ ಪರ್ಸೆಂಟ್ ಮಾತ್ರ ಇದೆ. ಅದೇ ರೀತಿಯಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನೀಯರ್ಸ್ ೫೩೮ ಜನರು ಇದ್ದಾರೆ. ಇದರಲ್ಲಿ ಕೂಡ ೧೮ ಪರ್ಸೆಂಟ್ ಭರ್ತಿ ಮಾಡಿಲ್ಲ. ಮತ್ತೆ ಅಸಿಸ್ಟೆಂಟ್ ಇಂಜಿನಿಯರ್ಸ್ ೨೫೩೦ ಜನರು ಇದ್ದಾರೆ. ಇದರಲ್ಲಿ ಕೂಡ ೧೮ ಪರ್ಸೆಂಟ್ ಮೀಸಲಾತಿಯಂತೆ ಭರ್ತಿ ಮಾಡಿಲ್ಲ. ಪ್ರತಿಯೊಂದು ಹಂತದಲ್ಲಿ ಕೂಡ ತಾವು ಹರಿಜನ ಮತ್ತು ಗಿರಿಜನರಿಗೆ ಕೊಡಬೇಕಾದಂಥ ಸೌಲಭ್ಯವನ್ನು ಕೊಟ್ಟಿಲ್ಲವೆಂದು ಹೇಳುತ್ತೇನೆ. ಆದ್ದರಿಂದ ನಾನು ನೇರವಾಗಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಖಾಲಿ ಇರತಕ್ಕಂಥ ಪರ್ಸೆಂಟೇಜ್‌ನ್ನು ತುಂಬಿಕೊಳ್ಳಲು ನೇರವಾಗಿ ರಿಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತಿರೋ ಅಥವಾ ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಿಕೊಳ್ಳುತ್ತೀರೋ ಎಂಬುದನ್ನು ತಿಳಿಸಿದರೆ ಒಳ್ಳೆಯದು. ಇನ್ನು ಈ ಇಲಾಖೆಯಲ್ಲಿ ವಿಜಿಲೆನ್ಸ್ ಸೆಲ್ ತೆಗೆಯುತ್ತೇವೆಂದು ಮಾನ್ಯ ಮಂತ್ರಿಗಳು ಘೋಷಣೆ ಮಾಡಿದ್ದರು. ಆದರೆ ಆ ಬಗ್ಗೆ ತಾವು ಏನಾದರೂ ರೂಪ ರೇಖೆಗಳನ್ನು ಹಾಕಿ ಕೊಂಡಿದ್ದೀರಾ ? ಮತ್ತೆ ಕ್ವಾಲಿಟಿ ಕಂಟ್ರೋಲ್ ಬಗ್ಗೆ ತಿಳಿಸಬೇಕು. ಮತ್ತು ಈ ಇಲಾಖೆಯನ್ನು ಸಪರೇಟ್ ಮಾಡುತ್ತೇವೆಂದು ಘೋಷಣೆ ಮಾಡಿದ್ದರು. ಆ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತೆ ಮಾನ್ಯ ಮಂತ್ರಿಗಳು ಘೋಷಣೆ ಮಾಡಿದ ರೀತಿಯಲ್ಲಿ ಪರಿಪಾಲನೆ ಮಾಡಿದ್ದಾರೆಯೋ ? ತಾವು ಇಡೀ ರಾಜ್ಯದಲ್ಲಿ ಪ್ರವಾಸ ಕೈಗೊಂಡು ಎಲ್ಲೆಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ನಿಂತಿವೆ, ಅಲ್ಲಿಗೆ ಸೂಕ್ತ ರೀತಿಯ ಹಣವನ್ನು ಒದಗಿಸಿಕೊಟ್ಟು ಕೆಲಸ ಪೂರೈಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಆದರೆ ಮಾನ್ಯ ಮಂತ್ರಿಗಳು ಕೇವಲ ಹಾಸನ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಮಾತ್ರ ಪ್ರವಾಸ ಮಾಡುತ್ತಾರೆ. ಆದರೆ ಬೇರೆ ಜಿಲ್ಲೆಗಳಲ್ಲಿ ಹೆಚ್ಚು ಪ್ರವಾಸ ಮಾಡಿಲ್ಲವೆಂದು ನಾನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಬೆಂಗಳೂರಿನಲ್ಲಿ ಕುಳಿತುಕೊಂಡು ಬರೀ ರಾಜಕೀಯ ಮಾಡಲು ಹೊರಟಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ನಮ್ಮ ಕ್ಷೇತ್ರದಲ್ಲಿ ಒಂದು ಸಾರಿ ಪ್ಲೇನ್‌ನಲ್ಲಿ ಬಂದು ಟೂರ್ ಮಾಡಿಕೊಂಡು ಬಂದರು. ಆದರೆ ಅಲ್ಲಿ ಎಷ್ಟರಮಟ್ಟಿನ ಕೆಲಸ ಕಾರ್ಯಗಳು ಮಾಡಿದರು ಎಂಬುದು ನನಗೆ ಗೊತ್ತಿಲ್ಲ. ಅಲ್ಲಿ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳನ್ನು ವೀಕ್ಷಣೆ ಮಾಡಿದರೂ ನನಗೆ ಗೊತ್ತಿಲ್ಲ.

೧-೦೦ ಪಿ. ಎಂ.

ಈ ಜನತಾ ಸರ್ಕಾರವನ್ನು ಹಿಂದೆ ೧೯೭೭ರಲ್ಲಿ ಕೇಂದ್ರದಲ್ಲಿದ್ದ ಜನತಾ ಸರ್ಕಾರಕ್ಕೆ ಹೋಲಿಸಿದರೆ ತಪ್ಪೇನು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವಿ. ಎಸ್. ಆಚಾರ್ಯ. —ಆಗ ನೀವು ಎಲ್ಲಿದ್ರಿ ?

ಶ್ರೀ ಗೋವಿಂದ ಪಿ. ಒಡೆಯರಾಜ್. —ಆಗ ನಾನು ತಪ್ಪು ಮಾಡಿದ್ದೆ ಈಗ ಸುಧಾರಿಸಿಕೊಂಡಿದ್ದೇನೆ. ನೀವು ಸುಧಾರಿಸಿಕೊಳ್ಳಿ. ಈ ಸರ್ಕಾರವನ್ನು ಕೇಂದ್ರದಲ್ಲಿ ೧೯೭೭ರಲ್ಲಿ ಅಧಿಕಾರದಲ್ಲಿದ್ದ ಸರ್ಕಾರಕ್ಕೆ ಹೋಲಿಸಬಹುದು. ಅದೇರೀತಿ ಮಾನ್ಯ ದೇವೇಗೌಡರನ್ನು ಚರಣಸಿಂಗ್‌ರವರಿಗೆ ಹೋಲಿಸಿದರೆ ತಪ್ಪಾಗಲಿಕ್ಕಿಲ್ಲ.

ಶ್ರೀ ಪಿ. ತಿಪ್ಪಯ್ಯ.—ನಿಮ್ಮನ್ನು ಯಾರಿಗೆ ಹೋಲಿಸಬೇಕು ? ಈಗ ನೀವು ಎಲ್ಲಿದ್ರಿ ?

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಸದಸ್ಯರಾದ ತಿಪ್ಪಯ್ಯನವರಿಗೆ ಜನತಾ ಪಕ್ಷ ಅಂದರೇನು ಎಂದು ಗೊತ್ತಿಲ್ಲ. ನೀವು ಆ ರೀತಿ ಹೇಳಬಾರದು. ಮಾನ್ಯ ದೇವೇಗೌಡರನ್ನು ರೈತರ ಮುಖಂಡರಾದ ಚರಣಸಿಂಗ್ ಎಂದು ಕರೆಯಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಬೊಮ್ಮಾಯಿಯವರನ್ನು ಮೊರಾರ್ಜಿದೇಸಾಯಿಯವರಿಗೆ ಹೋಲಿಸಬಹುದು. ಅವರಲ್ಲಿರತಕ್ಕ ಕೆಲವು ಗುಣಗಳು ಇವರಲ್ಲಿ ಇಲ್ಲದೇ ಇರಬಹುದು. ಮಾನ್ಯ ರಾಚಯ್ಯನವರನ್ನು ಜಗಜೀವನರಾಮ್‌ರವರಿಗೆ ಹೋಲಿಸಬಹುದು.

ಶ್ರೀ ಹನುಮಂತರಾವ್ ದೇಸಾಯಿ.—ಮಾನ್ಯ ಒಡೆಯರಾಜ್‌ರವರು ನಿನ್ನೆಯತನಕ ಬಹಳ ಒಳ್ಳೆಯವರಾಗಿದ್ದರು ಇವತ್ತು ಏತಕ್ಕೆ ಈ ತರಹ ಮಾತನಾಡುತ್ತಿದ್ದಾರೆ ?

ಶ್ರೀ ಗೋವಿಂದ ಪಿ. ಒಡೆಯರಾಜ್.—೧೯೭೭ರಲ್ಲಿ ಕೇಂದ್ರದಲ್ಲಿದ್ದ ಜನತಾ ಸರ್ಕಾರ ಯಾವರೀತಿ ಕೆಲಸ ಮಾಡುತ್ತಿತ್ತು, ಅದೇರೀತಿ ಇವರು ಇಲ್ಲಿ ಕೆಲಸ ಮಾಡುತ್ತಿದ್ದಾರೆ

ಛೇರ್ಮನ್.—ಲೋಕೋಪಯೋಗಿ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಿ.

ಶ್ರೀ ಗೋವಿಂದ ಪಿ ಒಡೆಯರಾಜ್.—ಮಾನ್ಯ ಹೆಗಡೆಯವರನ್ನು ಚಂದ್ರಶೇಖರ್‌ರವರಿಗೆ ಹೋಲಿಸಬಹುದು. ಏಕೆಂದರೆ ಚಂದ್ರಶೇಖರ್‌ರವರ ಹಾಗೆ ಹೆಗಡೆಯವರು ಗಡ್ಡ ಬಿಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ದೇವೇಗೌಡರು ಚರಣಸಿಂಗ್ ಆದಮೇಲೆ ಅವರು ಒಮ್ಮೆ ಪ್ರಧಾನ ಮಂತ್ರಿಗಳಾಗಿದ್ದರು. ಅದೇರೀತಿ ದೇವೇಗೌಡರು ಕೂಡ ಇಲ್ಲಿ ಮುಖ್ಯಮಂತ್ರಿಗಳು ಆಗಬಹುದೇ ?

ಶ್ರೀ ಗೋವಿಂದ ಪಿ ಒಡೆಯರಾಜ್.—ಆ ತರಹ ಆದರೂ ಆಗಬಹುದು. ಕೇಂದ್ರದಲ್ಲಿ ರಾಜನಾರಾಯಣ್ ಒಬ್ಬರು ಇದ್ದಾರೆ. ಅವರಿಗೆ ಮಾನ್ಯ ಅಜೀಜ್‌ಸೇಠ್ ಅವರನ್ನು ಹೋಲಿಸಬಹುದು. ಅದೇರೀತಿ ಸಿಕಂದರ್ ಭಕ್ತ ಅವರಿಗೆ ಮಾನ್ಯ ಅಬ್ದುಲ್ ನಜೀರ್‌ಸಾಬ್‌ರವರನ್ನು ಹೋಲಿಸಬಹುದು. ಜಾರ್ಜ್‌ಫರ್ನಾಂಡೀಸ್ ಅವರಿಗೆ ಮಾನ್ಯ ಜೆ. ಎಚ್. ಪಟೇಲ್ ಅವರನ್ನು ಹೋಲಿಸಬಹುದು. ಕರ್ನಾಟಕ ರಾಜ್ಯದ ಜನರಿಗೆ ಏನು ಗತಿಯಾಗಿದೆ ಅದನ್ನು ತಿಳಿದುಕೊಂಡು ಇವರು ಕೆಲಸ ಮಾಡುತ್ತಿಲ್ಲ. ಇದರಲ್ಲಿ ಒಬ್ಬೊಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲ. ಮನಸ್ಸು ಕೊಟ್ಟು ಕೆಲಸ ಮಾಡುವುದಕ್ಕೆ ಇವರಿಗೆ ಆಗುತ್ತಿಲ್ಲ. ಇವರು ಮನಸ್ಸು ಕೊಟ್ಟು ಕೆಲಸ ಮಾಡದೇ ಇರುವುದರಿಂದ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯ ಕೆಲಸ ಕಾರ್ಯಗಳು ಸಫರ್ ಆಗುತ್ತಿವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇವರು ನಾಡಿನ ಜನರಿಗೆ ಬಹಳ ಚೆನ್ನಾಗಿ ಕಾಣಬಹುದು. ಇವರಲ್ಲಿ ಭಿನ್ನಾಭಿಪ್ರಾಯಗಳು ಇರುವುದರಿಂದ, ಜನರಿಗೆ ಒಳ್ಳೆಯ ಕೆಲಸ ಮಾಡುವುದಕ್ಕೆ ಇವರಿಗೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಸದಸ್ಯರಾದ ಗೋವಿಂದ ಪಿ. ಒಡೆಯರಾಜ್‌ರವರು ಮಾತನಾಡುತ್ತಾ ಮಂತ್ರಿಮಂಡಲದ ಹಿರಿಯ ಸದಸ್ಯರುಗಳಿಗೆಲ್ಲಾ ಒಂದೊಂದು ಹೆಸರು ಇಟ್ಟಿದ್ದಾರೆ. ನಮ್ಮ ಒಡೆಯರಾಜ್‌ರವರನ್ನು ಸಂಜಯ್‌ಗಾಂಧಿಗೆ ಹೋಲಿಸಬಹುದೇ ?

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ತುರ್ತುಪರಿಸ್ಥಿತಿಯ ಕಾಲದಲ್ಲಿ ಜೈಲಿನಲ್ಲಿದ್ದವನು ಅಲ್ಲಿದ್ದರೆ ಏನು ಹೇಳಬೇಕು, ಇಲ್ಲಿದ್ದರೆ ಏನು ಹೇಳಬೇಕೆಂಬುದು ನನಗೆ ಗೊತ್ತಿದೆ. ನೀವು ಸಂಜಯ ಗಾಂಧಿಯವರಿಗೆ ಯಾವ ರೀತಿ ಸಪೋರ್ಟ್ ಮಾಡಿದ್ದೀರಿ ಎಂದು ನನಗೆ ಗೊತ್ತಿದೆ. ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿ ಜನರ ಏಳಿಗಾಗಿ ಕೆಲಸ ಮಾಡಲಿಕ್ಕೆ ವಿಫಲರಾಗಿದ್ದಾರೆಂದು ಹೇಳಿ ಈ ಬೇಡಿಕೆಯನ್ನು ವಿರೋಧಿಸುತ್ತಾ ನಾನು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಸಭಾಪತಿಯವರೆ ಈಗ ಸಮಯ ಒಂದು ಗಂಟೆಯ ಮೇಲಾಗಿದೆ. ಎಲ್ಲರೂ ಕೂಡ ಊರುಗಳಿಂದ ಬಂದಿದ್ದಾರೆ. ಸದನದಲ್ಲಿ ಈಗ ಸದಸ್ಯರ ಸಂಖ್ಯೆ ಕಡಿಮೆಯಿದೆ. ಈಗ ಸಭೆಯನ್ನು ಮುಂದೂಡಿ ಪುನಃ ೨-೦೦ ಗಂಟೆಗೆ ಸಭೆ ಸೇರುವ ಹಾಗೆ ಮಾಡಿ.

ಛೇರ್ಮನ್.—ಮಾನ್ಯ ಸದಸ್ಯರು ಅಜೆಂಡಾವನ್ನು ನೋಡಬೇಕು. ಮಧ್ಯೆ ಬ್ರೇಕ್ ಮಾಡುವ ಹಾಗೆ ಇಲ್ಲ. ಲೋಕೋಪಯೋಗಿ ಇಲಾಖೆಯ ಮೇಲಿನ ಚರ್ಚೆ ಇವತ್ತು ಐದು ಗಂಟೆಗೆ ಮುಗಿಯಬೇಕಾಗಿದೆ.

† ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ) ---ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ ನಾನು ಮಲೆನಾಡಿನಲ್ಲಿರತಕ್ಕ ಸಮಸ್ಯೆಗಳನ್ನು ಸಭೆಯ ಮುಂದಿಡಲಿಕ್ಕೆ ಇಷ್ಟಪಡುತ್ತೇನೆ. ಕಳೆದ ೧೫ ವರ್ಷಗಳಲ್ಲಿ ಏನು ಕೆಲಸವಾಗಿದೆ ಕಳೆದ ೧ ವರ್ಷದಲ್ಲಿ ಏನು ಕೆಲಸವಾಗಿದೆ ಎಂಬುದನ್ನು ನೋಡಿದರೆ ಎಂತಹ ಕಠಿಣ ಪರಿಸ್ಥಿತಿ ಇದ್ದರೂ ಲೋಕೋಪಯೋಗಿ ಮಂತ್ರಿಗಳು ಯಾವುದಕ್ಕೂ ಜಗ್ಗದೆ ಮಾಡಿರತಕ್ಕ ಕೆಲಸಗಳನ್ನು ನಾನು ನಿಜವಾಗಿಯೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಯಾವುದೇ ಕೆಲಸ ಮಾಡಬೇಕಾದರೂ ತಜ್ಞರ ಮತ್ತು ತಾಂತ್ರಿಕತೆ ಇರುವವರ ಒಪ್ಪಿಗೆ ಮುಖ್ಯ. ಹಿಂದೆ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯದರ್ಶಿ ಅವರನ್ನು ಐ.ಎ.ಎಸ್. ಆಗಿರತಕ್ಕವರನ್ನು ಇಟ್ಟುಕೊಳ್ಳುತ್ತಿದ್ದರು. ಈಗ ಇಂಜನಿಯರ್‌ಗಳನ್ನೇ ಕಾರ್ಯದರ್ಶಿ ಹುದ್ದೆಗಳಿಗೆ ನೇಮಿಸಿಕೊಂಡಿದ್ದಾರೆ. ಹೀಗೆ ಮಾಡುವುದರಿಂದ ಯಾವುದೇ ಕೆಲಸವನ್ನು ಅವರು ಪರಿಶೀಲನೆ ಮಾಡಿಕೊಂಡು ವೈಜ್ಞಾನಿಕ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಅನುಕೂಲವಾಗಿದೆ ಎನ್ನುವ ಮಾತನ್ನು ನಾನು ಹೆಮ್ಮೆಯಿಂದ ಹೇಳುತ್ತೇನೆ. ನನ್ನ ಕ್ಷೇತ್ರವಾದ ಮೂಡಿಗೆರೆಗೆ ಹಿಂದೆ ಯಾವುದೇ ರೀತಿಯ ಕೆಲಸ ಕಾರ್ಯಗಳು ಆಗಿರಲಿಲ್ಲ ಈಗ ಮೂಡಿಗೆರೆ ಕ್ಷೇತ್ರದಲ್ಲಿ ಆದ್ಯತೆ ಮೇಲೆ ಕೆಲಸ ಕಾರ್ಯಗಳು ನಡೆಯುತ್ತಿವೆ. ಹಿಂದೆ ನನ್ನ ಕ್ಷೇತ್ರವನ್ನು ಮೀಸಲು ಕ್ಷೇತ್ರವೆಂದು ಕಡೆಗಣಿಸಿದ್ದರೋ ಏನೋ ಗೊತ್ತಿಲ್ಲ ನಾನು ಆ ಕ್ಷೇತ್ರಕ್ಕೆ ಹೊಸಬನಾದರೂ ಬಹುಕಾಲದಿಂದ ಆಗದೆ ಇದ್ದಂತಹ ಕೆಲಸಕಾರ್ಯಗಳು ಆಗುವಂತೆ ಮಾನ್ಯ ಲೋಕೋಪಯೋಗಿ ಸಚಿವರು ಮಾಡಿದ್ದಾರೆ. ಕೆಲಸ ಮಾಡತಕ್ಕ ತಜ್ಞರ ಕೊರತೆ ಇತ್ತೋ ಏನೋ ಗೊತ್ತಿಲ್ಲ. ನಮ್ಮ ಭಾಗದಲ್ಲಿ ಪೂರ್ಣ ಕೆಲಸಕಾರ್ಯಗಳು ಆಗಬೇಕಾದರೆ ಬಹಳ ಕಷ್ಟ. ಏಕೆಂದರೆ ವರ್ಷದಲ್ಲಿ ೮ ತಿಂಗಳು ಮಳೆ ಬರುತ್ತದೆ. ಆದ್ದರಿಂದ ತಾಂತ್ರಿಕ ಸಿಬ್ಬಂದಿಯನ್ನು ಎರವಲು ಸೇವೆಯ ಮೇಲೆ ಕೊಟ್ಟರೆ ನಮ್ಮ ಭಾಗಕ್ಕೆ ಇಟ್ಟಿರುವ ಹಣವನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಇರತಕ್ಕ ಇಂಜಿನೀಯರುಗಳ ಕೊರತೆಯನ್ನು ತುಂಬಿದರೆ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕೆಲವು ಕಡೆಗಳಲ್ಲಿ ಎರವಲು ಸೇವೆಯ ಮೇಲೆ ಸಿಬ್ಬಂದಿಯನ್ನು ನೇಮಿಸಿಕೊಂಡು ಕೆಲಸ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ನನ್ನ ಬೇಡಿಕೆ ಏನೆಂದರೆ, ನಾನು ಕಳೆದ ಸಲ ಕೇಳಿದ್ದೇನೆ. ಹೊರನಾಡು ಸೇತುವೆ ಆಗಬೇಕು. ಈ ವರ್ಷ ಆ ಸೇತುವೆ ಮಾಡಲಿಕ್ಕೆ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ನಾವು ಯಾವುದೇ ಕೆಲಸ ಕಾರ್ಯಗಳಿಗೆ ಹಣವನ್ನು ಕೇಳಿದರೆ ಅಪ್ಪರ್ ಭದ್ರಾ ಯೋಜನೆಗೆ ಹಣ ಬೇಡವೆ ಎಂದು ಹೇಳುತ್ತಿದ್ದಾರೆ. ನಮ್ಮ ಭಾಗದಲ್ಲಿ ಹೊರನಾಡು ಸೇತುವೆ ಅಗತ್ಯವಾಗಿ ಆಗಬೇಕಾಗಿದೆ. ನಾನು ಕಳೆದ ಸಲ ಸಹ ಇದರ ಬಗ್ಗೆ ಹೇಳಿದ್ದೇನೆ. ಹೊರನಾಡು ಸೇತುವೆ ಮಾಡಲಿಕ್ಕೆ ಆದ್ಯತೆ ಕೊಟ್ಟು ಮಾನ್ಯ ಲೋಕೋಪಯೋಗಿ ಸಚಿವರು ಆ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ಈ ಸಭೆಯ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ. ಇನ್ನೊಂದು ರಸ್ತೆಗಳಿಗೆ ಸಂಬಂಧಪಟ್ಟ ಹಾಗೆ ಷೆಡ್ಯೂಲ್ ಆಫ್ ರೇಟ್ಸ್ ವ್ಯತ್ಯಾಸ ಆಗಲೇಬೇಕು. ವರ್ಷದಲ್ಲಿ ಬಹುಪಾಲು ಮಳೆ ಬಿದ್ದಾಗ ಈಗ ಕೊಡತಕ್ಕಂಥ ರೇಟ್‌ನಲ್ಲಿ ಕಂಟ್ರಾಕ್ಟರ್ ಕೆಲಸ ಮಾಡುವುದಕ್ಕೆ ಸಿದ್ಧರಿರುವುದಿಲ್ಲ. ಅವರಿಗೆ ಬಹಳ ತೊಂದರೆ ಇದೆ. ಅದಕ್ಕಾಗಿ ಹೆಚ್ಚಿನ ರೀತಿಯಲ್ಲಿ ವಿಶೇಷವಾಗಿ ಪರ್ಸೆಂಟೇಜ್ ಜಾಸ್ತಿ ಕೊಟ್ಟು ಅನುಕೂಲ ಮಾಡಿಕೊಟ್ಟರೆ ಕಂಟ್ರಾಕ್ಟರ್ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಇದನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಇನ್ನು ಚಿಕ್ಕಮಗಳೂರು ಜಿಲ್ಲೆ ವಿಶಾಲವಾದ ಪ್ಲಾಂಟೇಷನ್ ಏರಿಯಾ ಇರತಕ್ಕಂಥ ಜಿಲ್ಲೆ. ನನ್ನ ಒಂದು ಸಲಹೆ ಏನೆಂದರೆ, ಬಾಳೆಹೊನ್ನೂರು, ಕೊಪ್ಪ, ನರಸಿಂಹರಾಜಪುರ, ಶೃಂಗೇರಿ, ಮೂಡಿಗೆರೆಯನ್ನು ಸೇರಿಸಿ ಬಾಳೇಹೊನ್ನೂರಿನಲ್ಲಿ ಡಿವಿಜನಲ್ ಆಫೀಸ್ ಮಾಡಿದರೆ ಮಲೆನಾಡಿನ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯಲು ಸಾಧ್ಯವಾಗುತ್ತದೆ. ವೆಸ್ಟರ್ನ್ ಘಾಟ್ ಫಂಡ್, ಟ್ರೈಬಲ್ ಫಂಡ್ ಇದೆ. ಇವು ಇರತಕ್ಕಂಥ ಸಂದರ್ಭದಲ್ಲಿ ಹಾಸನ ಜಿಲ್ಲೆಯಲ್ಲಿ ಚನ್ನರಾಯಪಟ್ಟಣ, ಬಾಳೆಹೊನ್ನೂರುಗಳಿಗೆ ಸಬ್ ಡಿವಿಜನ್ ಕೊಟ್ಟರೆ ಮಲೆನಾಡಿನ ಕೆಲಸಕಾರ್ಯಗಳು ಉತ್ತಮವಾಗಿ ಆಗುತ್ತವೆ ಎಂದು ನಾನು ಸಲಹೆ ಮಾಡುತ್ತೇನೆ, ಹರಿಜನ ಕೇರಿಗಳಿಗೆ ಎನ್‌ಆರ್‌ಇಪಿಯಲ್ಲಿ ಓಡಬ್ಲ್ಯುಡಿಯಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಮಲೆನಾಡಿನಲ್ಲಿ ಹರಿಜನ ಕಾಲೋನಿಗಳಿಗೆ ಈ ಟ್ರೈಬಲ್ ಫಂಡ್ ಮತ್ತು ವೆಸ್ಟರ್ನ್ ಘಾಟ್ ಫಂಡ್‌ನಿಂದ ಎರಡೂ ಕಡೆಗೆ ರಸ್ತೆಗಳನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ, ಏಕೆಂದರೆ ಹರಿಜನ ಕೇರಿಗಳನ್ನು ಕಡೆಗಣಿಸಿಬಿಟ್ಟಿದ್ದಾರೆ. ತಾಲ್ಲೂಕು

ಬೋರ್ಡ್, ಪಂಚಾಯಿತಿಗಳಿಗೆ ಕೊಡುತ್ತಾರೆ. ಆದರೆ ಹರಿಜನ ಕೇರಿಗಳನ್ನು ಉದಾಸೀನ ಮಾಡಿರುವುದರಿಂದ ಈ ಕೇರಿಗಳಿಗೆ ಸಿಗಬೇಕಾದ ಸೌಲಭ್ಯ ಸಿಕ್ಕುತ್ತಿಲ್ಲ. ಮೆಟಲ್ ರೋಡ್, ಟಾರ್ ರೋಡ್‌ಗಳನ್ನು ಮಾಡಲು ಹದಿನೆಂಟು ಪರ್ಸೆಂಟ್ ಗ್ರಾಂಟ್‌ನ್ನು ಕೊಡುತ್ತಾರೆ. ಭಾಗ್ಯಜ್ಯೋತಿಯು ಹೊರತಾಗಿ ರಸ್ತೆಗಳನ್ನು ಉತ್ತಮಪಡಿಸಲು ಯಾವ ಸೌಲಭ್ಯವೂ ಇಲ್ಲ. ಆದ್ದರಿಂದ ಈ ಹರಿಜನ ಕೇರಿಗಳಿಗೆ ಸೌಲಭ್ಯ ಕಲ್ಪಿಸಿಕೊಡಲು ತೀವ್ರ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯಪಡಿಸುತ್ತೇನೆ. ಇನ್ನು, ಕೆರೆಗಳನ್ನು ಒದಗಿಸುವ ಬಗ್ಗೆ ಬಹುಶಃ ಇವತ್ತು ಷೆಡ್ಯೂಲ್ ಆಫ್ ರೇಟ್ ಮತ್ತು ಇತರ ರೇಟುಗಳು ಜಾಸ್ತಿಯಾಗಿದೆ. ಕೆರೆ ಮಾಡುವುದೆಂದರೆ ವರ್ಷಾನುಗಟ್ಟಲೆ ಆಗುತ್ತದೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ಈ ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟರೆ ರೈತರಿಗೆ ಉಪಯೋಗವಾಗುತ್ತದೆ. ನನ್ನ ಇನ್ನೊಂದು ಸಲಹೆ ಏನೆಂದರೆ ಮೂಡಿಗೆರೆ ಕ್ಷೇತ್ರದಲ್ಲಿ ತರೀಕೆರೆಯಲ್ಲಿ ನನ್ನ ಹೋಮ್ ಕಾನ್ಸ್ಟಿಟ್ಯೂಯೆನ್ಸಿ ಇದೆ. ಅಲ್ಲಿ ಜಂಬರಹಳ್ಳ ಕೆರೆಗೆ ಒಂದು ಅಣೆಕಟ್ಟು ಕಟ್ಟಿ ಹೆಚ್ಚು ನೀರನ್ನು ದೊರಕಿಸಿ ಕೊಟ್ಟರೆ ೭೮ ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಇದರ ಬಗ್ಗೆ ಮುಖ್ಯಮಂತ್ರಿಯವರಿಗೂ ತಿಳಿಸಿದ್ದೇನೆ. ಈ ವರ್ಷದಲ್ಲಿ ಇದನ್ನು ಸೇರಿಸಿಕೊಂಡು ಕೆಲಸ ಮಾಡುತ್ತೇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇನ್ನೂ ಕೆಲಸ ಆಗಿಲ್ಲ. ಇನ್ನಾದರೂ ಇದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಕೆರೆಗಳ ಒಡ್ಡುವರಿ ಬಗ್ಗೆ ಏನಾಗುತ್ತದೆ ಎಂದರೆ ಅಚ್ಚುಕಟ್ಟು ಕೆಲಸ ಆಗುವುದಿಲ್ಲ. ತೂಬಿನಲ್ಲಿ ನೀರು ಹೊರಟುಹೋಗುತ್ತದೆ. ಇದರಿಂದ ಮೂಲ ಅಣೆಕಟ್ಟಿಗೆ ಅಪಾಯ ಆಗುತ್ತದೆ ಕೆರೆಗೆ ಕಟ್ಟೆ ಕಟ್ಟಿದ್ದಾರೆ. ಅದು ಸಿಮೆಂಟಿನಿಂದ ಮಾಡಿದ್ದು ಅಲ್ಲ. ನೀರಿನ ಒತ್ತುವರಿ ಹೆಚ್ಚಾದಾಗ ಕಟ್ಟೆಗೆ ಅಪಾಯ ಇರುತ್ತದೆ.

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ಪಿ. ತಿಪ್ಪಯ್ಯ.—ಆಯಿತು ಮುಗಿಸುತ್ತೇನೆ. ಕೊನೆಯದಾಗಿ ಹೇಳಬೇಕೆಂದರೆ, ಸರ್ಕಾರದವರು ಈಗ ಗಂಗಾಕಲ್ಯಾಣ ಸೇತುಬಂಧ ಯೋಜನೆಯನ್ನು ತಂದಿದ್ದಾರೆ. ಇದು ಕಾರ್ಯರೂಪಕ್ಕೆ ಬರಬೇಕಾದರೆ ವಿರೋಧ ಪಕ್ಷದವರ ಸಹಕಾರ ಬೇಕು. ಈ ಸಂದರ್ಭದಲ್ಲಿ ನನ್ನ ಒಂದು ಸಲಹೆ ಏನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರ ಪಕ್ಷ ಕೇಂದ್ರದಲ್ಲಿದೆ. ನಮ್ಮಿಂದ ಆರಿಸಲ್ಪಟ್ಟ ೨೭ ಮಂದಿ ಲೋಕಸಭಾ ಸದಸ್ಯರು ಅಲ್ಲಿ ಹೋಗಿದ್ದಾರೆ. ಆದರೆ ಅವರಿಗೆ ನಮ್ಮ ರಾಜ್ಯದ ಬಗ್ಗೆ ಕಳಕಳಿ ಇಲ್ಲ. ವಿರೋಧ ಪಕ್ಷದವರು ಮಾತೆತ್ತಿದರೆ ನೀವು ಒಂದು ವರ್ಷದಲ್ಲಿ ಮಾಡಿದ್ದು ಏನು ? ಎಂದು ಕೇಳುತ್ತಾರೆ. ಒಂದು ವರ್ಷದಲ್ಲಿ ಈ ಸರ್ಕಾರ ಸಾಧನೆ ಮಾಡಿರುವುದನ್ನು, ಹಿಂದೆ ಹತ್ತು ವರ್ಷಗಳಲ್ಲಿ ಆದ ಸಾಧನೆಯ ಬಗ್ಗೆ ಹೋಲಿಸಿ ನೋಡಿದರೆ ವಾಸ್ತವಾಂಶ ಅವರಿಗೆ ಅರಿವಾಗಬಹುದೆಂದು ನಾನು ಭಾವಿಸುತ್ತೇನೆ. ಅವರು ಇನ್ನಾದರೂ ಕೇಂದ್ರದಲ್ಲಿ ಪ್ರಭಾವ ಬೀರಿ ಕೇಂದ್ರ ಸರ್ಕಾರದಿಂದ ನಮಗೆ ಬರಬೇಕಾದ ಹಣ ಬರಲಿಕ್ಕೆ ಸಹಾಯ ಮಾಡುತ್ತಾರೆ ಎಂದು ಆಶಿಸುತ್ತೇನೆ. ಇಲ್ಲಿ ಅವರು ತಮ್ಮ ಸ್ವಂತ ದೃಷ್ಟಿಯಿಂದ ನೋಡದೆ, ವಿಶಾಲ ದೃಷ್ಟಿಯಿಂದ ಕರ್ನಾಟಕ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ನೋಡಬೇಕು ಗಂಗಾ ಕಲ್ಯಾಣ ಯೋಜನೆಯಲ್ಲಿ ನೂರು ಬಾವಿಗಳನ್ನು ಹರಿಜನ ಗಿರಿಜನರಿಗೆ ನೇರವಾಗಿ ಕೊಡಲಿಕ್ಕೆ ಅವಕಾಶ ಇದೆ, ಇದನ್ನು ಕಾರ್ಯರೂಪಕ್ಕೆ ತರುವಲ್ಲಿ ಅವರು ತಮ್ಮ ಸಹಕಾರ ಕೊಟ್ಟರೆ ಈಗಿರುವ ಕೊರತೆಯನ್ನು ನೀಗುವುದಕ್ಕೆ ಸಾಧ್ಯವಾಗುತ್ತದೆ. ಮತ್ತೊಮ್ಮೆ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅವರು ಕೇಂದ್ರದಲ್ಲಿ ತಮ್ಮ ಪ್ರಭಾವ ಬೀರಿ ರಾಜ್ಯದ ಅಭಿವೃದ್ಧಿಗೆ ಸಹಕಾರ ಪಡೆದುಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ಸದನದಲ್ಲಿ ಸಣ್ಣ ನೀರಾವರಿಯಿಂದ ತೊಡಗಿ ದೊಡ್ಡ ನೀರಾವರಿಯವರೆಗೆ ಲೋಕೋಪಯೋಗಿ ಇಲಾಖೆಯ ವಿವಿಧ ವಿಭಾಗಗಳಿಗೆ ಮತ್ತು ರಸ್ತೆ, ಸೇತುವೆಗೆ ಸಂಬಂಧಪಟ್ಟಿರುವ ಹಾಗೆ ಇಟ್ಟಿರುವ ಬೇಡಿಕೆ ಬಗ್ಗೆ ನನ್ನ ಬೆಂಬಲವನ್ನು ಸೂಚಿಸುತ್ತಾ ನನ್ನ ಕೆಲವು ಅನಿಸಿಕೆಗಳನ್ನು, ಮತ್ತು ಸೂಚನೆಗಳನ್ನು ಕೊಡಲು

ಇಚ್ಛಿಪಡುತ್ತೇನೆ. ಬಹಳ ತಡವಾಗಿ ಕೆಲವು ವರದಿಗಳು ನಮ್ಮ ಕೈ ಸೇರಿವೆ. ಸದನಕ್ಕೆ ಬಂದಮೇಲೆ ಸಂಬಂಧಪಟ್ಟ ಮಾಹಿತಿಗಳು ಸಿಕ್ಕಿವೆ. ಇದರಿಂದ ವೈಯಕ್ತಿಕವಾಗಿ ಬಹುತೇಕ ವಿಷಯಗಳ ಬಗ್ಗೆ ವಿವರವಾಗಿ ವಿಶ್ಲೇಷಣೆ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಆದರೂ ಅದು ನೀರಾವರಿಯೇ ಇರಬಹುದು, ಅಥವಾ ರಸ್ತೆ ಸೇತುವೆಯ ಕೆಲಸವೇ ಇರಬಹುದು. ಜನರಿಗೆ ಬಹಳ ಉಪಯುಕ್ತವಾದ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸುವ, ಸಾರಿಗೆ ಸೌಕರ್ಯದಿಂದ ಇನ್ನಷ್ಟು ಪ್ರಗತಿ ಕಾರ್ಯ ಆಗುವಂತೆ ಹಲವಾರು ವಿಷಯಗಳ ಬಗ್ಗೆ ಇಲ್ಲಿ ಚರ್ಚಿಸುತ್ತಿದ್ದೇವೆ. ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವ ಮಾನ್ಯ ಸಚಿವರಾದ ದೇವೇಗೌಡರು ಸ್ವತಃ ಈ ವಿಷಯದಲ್ಲಿ ಮಾಹಿತಿ ಉಳ್ಳವರು, ಮತ್ತು ಅನೇಕ ವರ್ಷಗಳ ಕಾಲ ರಾಜ್ಯದ ಅಭಿವೃದ್ಧಿ ವಿಷಯದಲ್ಲಿ ಅನುಭವವನ್ನು ಪಡೆದಿರತಕ್ಕಂಥವರು. ಹೀಗಾಗಿ ನಾವು ಸಹಜವಾಗಿ ಅವರ ಬಗ್ಗೆ ಹೆಚ್ಚಿನದನ್ನು ನಿರೀಕ್ಷೆ ಮಾಡಿದ್ದೆವು. ಇಲ್ಲಿ ಅವರು ಕಳೆದ ವರ್ಷದ ಕಾರ್ಯ ಪ್ರಗತಿಯ ವಿಶ್ಲೇಷಣೆ ಮತ್ತು ಮುಂದಿನ ವರ್ಷದ ಚಿತ್ರವನ್ನು ಈ ಬೇಡಿಕೆ ರೂಪದಲ್ಲಿ ಇಟ್ಟಿದ್ದಾರೆ. ಹೀಗೆ ವಿಶ್ಲೇಷಿಸಿದಾಗ ಒಂದು ವಿಷಯ ಗೊತ್ತಾಗುತ್ತದೆ ಎಷ್ಟು ನಮ್ಮ ನಿರೀಕ್ಷೆ ಇತ್ತು, ಆ ನಿರೀಕ್ಷೆಯ ಮಟ್ಟಕ್ಕೆ ಅದು ದೊಡ್ಡ ನೀರಾವರಿ ಕೆಲಸವೇ ಇರಲಿ, ಮಧ್ಯಮ ನೀರಾವರಿ ಕೆಲಸವೇ ಇರಲಿ, ಅಥವಾ ಸಣ್ಣ ನೀರಾವರಿಯೇ ಇರಲಿ, ರಸ್ತೆ ಸೇತುವೆ ಕೆಲಸವೇ ಇರಲಿ ಇದರ ಜೊತೆಗೆ ಪ್ರಥಮ ಬಾರಿಗೆ ತಜ್ಞರೊಬ್ಬರನ್ನು ಇಲಾಖೆಯ ಕಾರ್ಯದರ್ಶಿಯಾಗಿ ಮಾಡಿದ್ದಾರೆ. ಹೀಗಿರುವಾಗ ಅನೇಕ ಕೊರತೆಗಳು ಉಳಿದುಕೊಂಡಿರುವುದು ಕಂಡುಬರುತ್ತದೆ. ಇಲಾಖೆಯ ಎಲ್ಲಾ ಡಿವಿಜನ್‌ಗಳಲ್ಲಿ ಸಿಬ್ಬಂದಿ ಕೊರತೆ ಇರುವುದನ್ನು ನೋಡುತ್ತಿದ್ದೇವೆ. ಸಿಬ್ಬಂದಿ ಕೊರತೆಯಿಂದಾಗಿ ಏನು ಹೆಚ್ಚು ಕೆಲಸವನ್ನು ಮಾಡಬಹುದಾಗಿತ್ತೋ ಆ ಕೆಲಸ ನಿಧಾನವಾಗಿದೆ. ಇದನ್ನು ವಿಶ್ಲೇಷಣೆ ಮಾಡಿದರೆ ಈ ಕೊರತೆಯಿಂದಾಗಿ ಅಭಿವೃದ್ಧಿ ಕಾರ್ಯಗಳಲ್ಲಿ ಎಷ್ಟು ಬೇಕೋ ಅಷ್ಟು ಗಮನ ಕೊಡಲಿಕ್ಕೆ ಸಾಧ್ಯವಾಗದೆ ಪ್ರಗತಿ ಕುಂಠಿತವಾಗಿರುವುದು ಕಂಡುಬರುತ್ತದೆ ಮೊದಲನೆಯದಾಗಿ ಸಿಬ್ಬಂದಿ ಭರ್ತಿ ಮಾಡಬೇಕಾಗಿತ್ತು. ದೊಡ್ಡ ನೀರಾವರಿ ವಿಷಯದ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ವಿಶ್ವಬ್ಯಾಂಕ್‌ನಿಂದ ಸಹಾಯ ಪಡೆದುಕೊಂಡು ಕಾರ್ಯಗತವಾಗುತ್ತಿರುವಂಥದ್ದು. ಅಲ್ಲಿಗೆ ಸಿಬ್ಬಂದಿಯವರನ್ನು ನೇಮಕ ಮಾಡಿ ಕಳಿಸಿದರೆ ಅಲ್ಲಿಗೆ ಹೋಗಲಿಕ್ಕೆ ಒಬ್ಬರಿಗೂ ಮನಸ್ಸಿಲ್ಲದಿರುವುದನ್ನು ಕಾಣುತ್ತಿದ್ದೇವೆ. ಅವರನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಪೋಸ್ಟಿಂಗ್ ಮಾಡಿದರೆ ಹೇಗಾದರೂ ಮಾಡಿ ಅದನ್ನು ರದ್ದುಮಾಡಿಸಿಕೊಳ್ಳಲಿಕ್ಕೆ ಪ್ರಯತ್ನ ಪಟ್ಟಿದ್ದಾರೆ. ಈ ಅನುಭವ ಅಧಿಕಾರಿಗಳಿಗೆ ಬಂದಿರಬಹುದು.

(ಶ್ರೀ ಡಿ. ಬಿ ಚಂದ್ರೇಗೌಡ ಅವರು ಸಭಾಧ್ಯಕ್ಷ ಪೀಠವನ್ನಲಂಕರಿಸಿದರು)

ಇಂಥಾ ಸಂದರ್ಭದಲ್ಲಿ ಸರ್ಕಾರದವರು ಗಂಭೀರವಾಗಿ ಪರಿಗಣಿಸಬೇಕು. ಯಾರು ದಕ್ಷರೀತಿಯಿಂದ ಕೆಲಸ ಮಾಡಿ ನಿವೃತ್ತಿ ಹೊಂದಿದ್ದಾರೆ. ದೈಹಿಕವಾಗಿ ಮಾನಸಿಕವಾಗಿ ಕೆಲಸ ಮಾಡುವುದಕ್ಕೆ ಶಕ್ತರಾಗಿದ್ದಾರೆ ಅಂಥವರನ್ನು ನೇಮಕ ಮಾಡಿ ಅವರಿಂದ ಕೆಲಸವನ್ನು ತೆಗೆಸಿ. ಟಾಸ್ಕ್ ಯೂನಿಟ್ ರೀತಿಯಲ್ಲಿ ತಾವು ಅಗತ್ಯ ಯೋಜನೆಗಳನ್ನು ಆದಷ್ಟು ಸಮಯಬದ್ಧವಾಗಿ ಮುಗಿಸಬೇಕು ಎನ್ನುವುದು ನನ್ನ ಭಾವನೆ. ತಮ್ಮ ಇಲಾಖೆಯನ್ನು ಸರಿಪಡಿಸುವುದಕ್ಕೆ ತಾವೇ ಹಲವಾರು ಕಾರ್ಯಕ್ರಮಗಳನ್ನು ತೆಗೆದುಕೊಂಡಿರುವುದಾಗಿ ತಿಳಿಸಿರುವಿರಿ. ಈ ಸದನದಲ್ಲಿ ಕೂಡಾ ಎತ್ತಿದ ಪ್ರಶ್ನೆಗೆ ಉತ್ತರವಾಗಿ ತಾವೂ ಮತ್ತು ಲೋಕೋಪಯೋಗಿ ಇಲಾಖೆಯ ಸಚಿವರು ಭರವಸೆಯನ್ನು ಕೊಟ್ಟಿದ್ದೀರಿ. ಈ ಇಲಾಖೆಯಲ್ಲಿರುವ ಅಸಿಸ್ಟೆಂಟ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರ ಸೇವಾ ನಿಯಮಾವಳಿಯ ಪ್ರಕಾರ ಅವರಿಗೆ ಸವಲತ್ತು ಕೊಡಬೇಕು. ಆದರೆ ನಿಮ್ಮ ಇಲಾಖೆಯಲ್ಲಿ ಆಡಳಿತ ಫ್ರೇಮ್ ವರ್ಕ್ ಸರಿಯಾಗಿ ಇಲ್ಲದಿದ್ದರೆ ತಾವು ಯಾವ ರೀತಿ ಅವರಿಂದ ಕೆಲಸವನ್ನು ತೆಗೆದುಕೊಳ್ಳುತ್ತೀರಿ. ಇನ್ನು ದೊಡ್ಡ ನೀರಾವರಿ ಮತ್ತು ಸಣ್ಣ ನೀರಾವರಿಯ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಅವರ ಬಜೆಟ್ಟಿನ ಭಾಷಣಕ್ಕೆ ಉತ್ತರ ಕೊಡುವ ಸಂದರ್ಭದ ಪೂರ್ವದಲ್ಲಿ ದೊಡ್ಡ ನೀರಾವರಿ ಯೋಜನೆಗಳಾಗಲೀ ಅಥವಾ ಸಣ್ಣ ನೀರಾವರಿ ಯೋಜನೆಗಳಾಗಲೀ ಅಥವಾ ಯೋಜನೇತರ ಕೆಲಸಗಳಿಗಾಗಲೀ ಹಣದ ಅಭಾವ ಇಲ್ಲ ಎಂದು ಈ ಸದನದಲ್ಲಿ ಹೇಳಿದ್ದಾರೆ. ಇಷ್ಟೊತ್ತು ಈ ಸದನದಲ್ಲಿ ಕೊಟ್ಟಿರತಕ್ಕಂಥಾ ಅಂಕಿಅಂಶಗಳನ್ನು ನೋಡಿದರೆ, ಕಳೆದ ವರ್ಷ ಕೊಟ್ಟಿರತಕ್ಕಂಥ ಒಟ್ಟು ಹಣ ಅಂದರೆ ೮೯ ಕೋಟಿ ರೂಪಾಯಿಗಳನ್ನು ವಿನಿಯೋಗಿಸಿದ್ದಾರೆ. ಈ ವರ್ಷ ೯೮ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ ೯ ಕೋಟಿ ರೂಪಾಯಿಗಳನ್ನು

ಮಾತ್ರ ಹೆಚ್ಚಿಗೆ ಇಟ್ಟಿದ್ದಾರೆ. ನಿನ್ನೆಯ ದಿವಸ ನಾನು ಪತ್ರಿಕೆಯನ್ನು ಓದಿದೆ. ಅದರಲ್ಲಿ ಒಂದು ರೂಪಾಯಿನ ಆಂತರಿಕ ಬೆಲೆ ಎಷ್ಟೆಂದರೆ ೧೨ ಪೈಸೆ ಎಂದು ತಿಳಿಸಿದ್ದಾರೆ. ಒಂದು ವರ್ಷದಲ್ಲಿ ಒಂದು ರೂಪಾಯಿಯ ಬೆಲೆ ಇಷ್ಟು ಸವಕಳಿಯಾಗಿರುವಾಗ ನೀವು ಕೊಟ್ಟಿರುವ ಒಂಭತ್ತು ರೂಪಾಯಿಗಳು ಜಾಸ್ತಿಯಲ್ಲ ಎಂದು ನನಗನ್ನಿಸುತ್ತದೆ. ಈಗ ಸುಮಾರು ೧೨ ನೀರಾವರಿ ಯೋಜನೆಗಳ ಪಟ್ಟಿ ಕೊಟ್ಟಿದ್ದೀರಿ. ಆ ಕಾರ್ಯಕ್ರಮಗಳಿಗೆ ಈ ದುಡ್ಡಿನಿಂದ ಯಾವ ಪ್ರಗತಿಯನ್ನು ಮಾಡುವುದಕ್ಕೆ ಆಗುತ್ತಿಲ್ಲ. ತಾವೇ ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ ಈ ವರ್ಷ ಕೊಟ್ಟಿರತಕ್ಕಂಥಾದ್ದನ್ನೇ ಡಿಸೆಂಬರ್ ಆಖೈರುವರೆಗೆ ಒದಗಿಸಿರುವುದನ್ನು ನೋಡಿದರೆ ಬಹಳ ಸಂಶಯ ಬರುತ್ತದೆ. ತುಂಗಭದ್ರಕ್ಕೆ ಸಂಬಂಧಪಟ್ಟ ಹಾಗೆ ೧೨೦ ಲಕ್ಷ ರೂಪಾಯಿಗಳಲ್ಲಿ ಕೇವಲ ೭೧ ಲಕ್ಷ ರೂಪಾಯಿಗಳು ಖರ್ಚಾಗಿವೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ೪೭೦ ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿವೆ. ಈಗ ಇದಕ್ಕೆ ಇಟ್ಟಿರುವಂಥಾ ಹಣವನ್ನು ಮುಂದಿನ ವರ್ಷದೊಳಗೆ ಸಂಪೂರ್ಣ ಖರ್ಚು ಮಾಡಿ ಕೆಲಸವನ್ನು ಕೂಡಲೇ ಮುಗಿಸಬೇಕು. ಕಾರಂಜಿ ಯೋಜನೆ ೧೯೭೨ರಲ್ಲಿ ಪ್ರಾರಂಭವಾಯಿತು. ೧೮ ಕೋಟಿ ರೂಪಾಯಿಗಳನ್ನು ಸಂಪೂರ್ಣವಾಗಿ ಖರ್ಚು ಮಾಡಿ ನೀರಾವರಿ ಪ್ರದೇಶವನ್ನಾಗಿ ಮಾಡುತ್ತೇವೆಂದು ಹೇಳಿ, ಆ ರೀತಿಯಾಗಿಯೂ ಮಾಡುವುದಕ್ಕೆ ಆಗಿಲ್ಲ, ಕೆನಾಲ್ ಕೆಲಸವನ್ನೂ ಕೂಡಾ ಸರಿಯಾಗಿ ಮಾಡಿಲ್ಲ. ಒಟ್ಟಿನಲ್ಲಿ ಕಾರಂಜಿ ಯೋಜನೆಯ ಕೆಲಸ ಬಹಳ ಮಂದಗತಿಯಿಂದ ನಡೆಯುತ್ತಿದೆ. ಮುಂದಿನ ವರ್ಷವಾದರೂ ಚುರುಕಾಗಿ ಕೆಲಸ ನಡೆಯುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಧ್ಯಮ ನೀರಾವರಿ ಮತ್ತು ಸಣ್ಣ ನೀರಾವರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಕರಾವಳಿ ಜಿಲ್ಲೆಗಳು ಮಲೆನಾಡು ಮತ್ತು ಅರೆ ಮಲೆನಾಡು ಜಿಲ್ಲೆಗಳಲ್ಲಿ ಸಣ್ಣ ನೀರಾವರಿಗಳನ್ನು ಮಾತ್ರ ಅವಲಂಬಿಸಬೇಕಾಗಿದೆ. ಈ ಜಿಲ್ಲೆಗಳಲ್ಲಿನ ನದಿಗಳು ಪ್ರವಾಹಗಳು ತುಂಬಿ ಹರಿಯುವುದರಿಂದ ದೊಡ್ಡ ಅಣೆಕಟ್ಟುಗಳಿಂದ ನೂರು ಎಕರೆ, ಐವತ್ತು ಎಕರೆ ನೀರಾವರಿ ಮಾಡುವುದಕ್ಕೆ ಸಾಧ್ಯವಾಗಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವೆಂಟೆಡ್ ಡ್ಯಾಮುಗಳನ್ನು ಕಟ್ಟಿಸುವುದಕ್ಕೆ ವಿಶೇಷ ಯೋಜನೆಗಳನ್ನು ಮಾಡಿದರೆ, ಆಯ್ದ ಪ್ರದೇಶಗಳಲ್ಲಿ ವೆಂಟೆಡ್ ಡ್ಯಾಮುಗಳನ್ನು ಕಟ್ಟಿದರೆ ಒಂದು ಲಕ್ಷ ಎಕರೆ ಜಮೀನಿಗೆ ನೀರನ್ನು ಒದಗಿಸಿ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ವೆಂಟೆಡ್ ಡ್ಯಾಮುಗಳನ್ನು ಕಟ್ಟಿಸತಕ್ಕಂಥ ವಿಚಾರದಲ್ಲಿ ಮಲೆನಾಡು ಭಾಗದ ರೈತರು ಸನ್ಮಾನ್ಯ ಸಚಿವರಾದಂಥ ಲಕ್ಷ್ಮೀಪತಿಯವರಿಗೆ ಮನವಿ ಮಾಡಿದ್ದಾರೆ. ಮುಂದಿನ ವರ್ಷದ ಆಯವ್ಯಯದಲ್ಲಿ ಹಣ ಒದಗಿಸಿ ಹೆಚ್ಚು ಹೆಚ್ಚಾಗಿ ವೆಂಟೆಡ್ ಡ್ಯಾಮುಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಿದರೆ ಕರಾವಳಿ ಜಿಲ್ಲೆಯ ಹಾಗೂ ಮಲೆನಾಡು ಪ್ರದೇಶ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಹೆಚ್ಚಿನ ಲಾಭವಾಗುತ್ತದೆ. ಈ ವರ್ಷ ಆರು ಕೋಟಿ ರೂಪಾಯಿಗಳನ್ನು ಮೈನರ್ ಇರಿಗೇಷನ್‌ಗೋಸ್ಕರ ಬಜೆಟ್‌ನಲ್ಲಿ ಇಟ್ಟಿದ್ದೀರಿ. ಇನ್ನು ಹೆಚ್ಚಿನ ಹಣವನ್ನು ಇದಕ್ಕೆ ಒದಗಿಸಬೇಕೆಂದು ಹೇಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕೆರೆಗಳಿವೆ. ಮಲೆನಾಡು ಭಾಗದಲ್ಲೂ ಕೂಡಾ ಕೆರೆಗಳಿವೆ. ಆದರೆ ಕಳೆದ ೧೫ ವರ್ಷಗಳಿಂದ ಕೆರೆಯಲ್ಲಿ ಹೂಳು ತುಂಬಿ ನೀರು ನಿಲ್ಲತಕ್ಕಂಥಾ ಪ್ರದೇಶದ ಪ್ರಮಾಣ ಕಡಿಮೆಯಾಗುತ್ತಾ ಬಂದಿದೆ. ಇದರಿಂದ ನೀರಾವರಿ ಆಗತಕ್ಕಂಥ ಪ್ರದೇಶದ ಪ್ರಮಾಣವೂ ಕೂಡಾ ಕಡಿಮೆಯಾಗಿದೆ. ಅಲ್ಲದೆ ಮಲೆನಾಡು ಭಾಗದಲ್ಲಿರತಕ್ಕಂಥ ಕೆರೆಗಳ ಹೂಳುಗಳು ಮತ್ತು ಮಣ್ಣಿನಿಂದ ತುಂಬಿದ್ದು ಸರಾಗವಾಗಿ ನೀರು ಹರಿಯುವುದಕ್ಕೆ ಸಾಧ್ಯವಿಲ್ಲವಾಗಿದೆ. ತೋಡಿನಲ್ಲಿರತಕ್ಕಂಥ ನೀರಿನಿಂದ ಆ ಭಾಗದ ರೈತರು ಎರಡು ಮೂರು ಬೆಳೆಯನ್ನು ಬೆಳೆಯುತ್ತಿದ್ದಾರೆ. ಈವತ್ತಿನ ದಿವಸ ಇವು ಸಂಪೂರ್ಣವಾಗಿ ಮುಚ್ಚಿಹೋಗಿದೆ ಸರ್ಕಾರದವರು ಆದಷ್ಟು ಬೇಗ ತೋಡುಗಳಲ್ಲಿರುವ ಮಣ್ಣನ್ನು ತೆಗೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇದರಿಂದ ಕೃಷಿ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಜೊತೆಗೆ ಲಿಫ್ಟ್ ಇರಿಗೇಷನ್ ಆಗುವಂಥ ಜಾಗಗಳನ್ನು ಗುರುತಿಸಿ ರೈತರಿಗೆ ನೀರಾವರಿ ಮಾಡುವದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಒದಗಿಸದಿದ್ದರೆ ಯಾವ ಪ್ರಯೋಜನ ಕೂಡಾ ಆಗುವುದಿಲ್ಲ. ರಾಜ್ಯದಲ್ಲಿ ಒಟ್ಟು ೧೨ ದೊಡ್ಡ ನೀರಾವರಿ ಯೋಜನೆಗಳನ್ನು ಗುರುತಿಸಿದ್ದಾರೆ. ಅದೇ ರೀತಿ ಮಧ್ಯಮ ನೀರಾವರಿ ಯೋಜನೆಗಳನ್ನು ಹಾಗೂ ಸಣ್ಣ ನೀರಾವರಿ ಯೋಜನೆಗಳನ್ನು ಗುರುತಿಸುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಮುಂದಿನ ವರ್ಷದ ಬಜೆಟ್ಟಿನಲ್ಲಿ ನೀರಾವರಿ ಯೋಜನೆಗಳ ಕಾರ್ಯ ಹೆಚ್ಚಾಗುವಂತೆ ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ.

೧-೩೦ ಪಿ.ಎಂ.

ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ ನೈಸರ್ಗಿಕವಾಗಿ ಹರಿದು ಬರುವಂಥ ನೀರಿಗೆ ತೆರಿಗೆಯನ್ನು ಕೇಳುತ್ತಿದ್ದಾರೆ. ಲೋಕೋಪಯೋಗಿ ಇಲಾಖೆಯವರು ಇದರ ಬಗ್ಗೆ ಲೆಕ್ಕ ಹಾಕಿ ರೆವಿನ್ಯೂ ಇಲಾಖೆಯವರಿಗೆ ವಸೂಲು ಮಾಡಿ ಎಂದು ತಿಳಿಸಿದ್ದಾರೆ. ಕಾರ್ಕಳ ತಾಲ್ಲೂಕು ನಮ್ಮ ವಿರೋಧಪಕ್ಷದ ನಾಯಕರವರ ಕ್ಷೇತ್ರ ಅಲ್ಲಿಂದ ಬಹಳ ದೂರು ಬಂದಿವೆ. ಇನ್ನು ಅನೇಕ ಕಡೆಗಳಿಂದ ದೂರುಗಳು ಬಂದಿವೆ. ಒಂದು ಬೆಳೆಗೆ ಸಂಪೂರ್ಣವಾಗಿ ಬೇಕಾದಷ್ಟು ನೀರು ಸಿಕ್ಕುವುದಿಲ್ಲ. ರೈತರು ಕಷ್ಟಪಟ್ಟು ಮಣ್ಣಿನ ಗೋಡೆಯನ್ನು ಹಾಕಿಕೊಂಡು ಒಂದು ಬೆಳೆಯನ್ನು ಬೆಳೆಯುತ್ತಾರೆ. ನೀರು ಬರದಿದ್ದರೆ ದಯವಿಟ್ಟು ರೈತರ ಹತ್ತಿರ ತೆರಿಗೆಯನ್ನು ವಸೂಲು ಮಾಡಬಾರದು. ಸರ್ಕಾರ ಒಂದು ಕಾಸನ್ನು ಕೂಡ ಖರ್ಚು ಮಾಡಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಸ್ಪಷ್ಟವಾದ ಆದೇಶವನ್ನು ಜಿಲ್ಲಾಧಿಕಾರಿಗಳಿಗೆ ತಿಳಿಸಬೇಕೆಂದು ಕೇಳುತ್ತೇನೆ.

ಇನ್ನು ಕಟ್ಟಡಗಳ ಬಗ್ಗೆ ಹೇಳಬೇಕಾದರೆ ೧೯೮೨-೮೩ರಲ್ಲಿ ೧೨೫ ಕೋಟಿ ರೂಪಾಯಿ ಇಟ್ಟಿದ್ದೀರಿ, ೧೯೮೩-೮೪ರಲ್ಲಿ ೧೩೧ ಕೋಟಿ ರೂಪಾಯಿಗಳು. ೧೩೬ ಕೋಟಿ ರೂಪಾಯಿಗಳಲ್ಲಿ ವಿವಿಧ ಇಲಾಖೆಗಳ ವಿಚಾರವನ್ನು ತಿಳಿಸಿದ್ದೀರಿ. ಇದನ್ನು ನೋಡಿದರೆ ಅತಿ ಕಡಿಮೆ ಹೆಚ್ಚಳವಾದುದು ಅಲೋಕೇಷನ್‌ನಲ್ಲಿ ಕಂಡುಬರುತ್ತಿದೆ. ಇದರಿಂದಾಗಿ ಕಟ್ಟಡಗಳು ಈಗ ಆಗುವುದು ಬಹಳ ಕಷ್ಟವಾಗಿದೆ. ಮತ್ತು ಯಾವುದೇ ರೀತಿಯ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ. ಮೈನ್‌ಟೆನೆನ್ಸ್ ಆಫ್ ಬಿಲ್ಡಿಂಗ್‌ನಲ್ಲಿ ಯಾವುದೋ ಕಾಲಕ್ಕೆ ಕ್ಯಾಪಿಟೇಲ್ ಎಕ್ಸ್‌ಪೆಂಡೀಚರ್ ಗುರುತು ಹಾಕಿಕೊಂಡಿದ್ದೀರಿ. ಶೇಕಡ ಮೈನ್‌ಟೆನೆನ್ಸ್ ಅಂಥ ಹಾಕಿಕೊಂಡಿಲ್ಲ. ಶಾಲಾ ಕಟ್ಟಡ ಇರಬಹುದು, ತಹಸೀಲ್ದಾರ್ ಕಟ್ಟಡ ಇರಬಹುದು ಅಥವಾ ಸರ್ಕಾರಿ ಕಟ್ಟಡ ಇರಬಹುದು. ಸುಣ್ಣ ಬಣ್ಣ ಬಳಿಯುವುದಕ್ಕೆ ತೆಗೆದಿಟ್ಟಿರುವ ಹಣ ಕಿಟಕಿಯ ಬಣ್ಣ ಬಳಿಯುವುದಕ್ಕೆ ಸಾಕಾಗುವುದಿಲ್ಲ. ಸರ್ಕಾರೀ ಕಟ್ಟಡಗಳು ಸಾರ್ವಜನಿಕರು ಬಂದು ಹೋಗುವಂಥಾ ಸ್ಥಳ. ಇದು ಲವಲವಿಕೆಯಿಂದ ತುಂಬಿಕೊಂಡಿರಬೇಕು ರಸ್ತೆಗಳಿರಬಹುದು. ಕಟ್ಟಡಗಳಿರಬಹುದು, ಮೈನ್‌ಟೆನೆನ್ಸ್ ಚೆನ್ನಾಗಿ ಇರಬೇಕು. ಇದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಇವತ್ತು ರಸ್ತೆಯ ಬಗ್ಗೆ ನ್ಯಾಷನಲ್ ಹೈವೇಗೆ ಮುಂದಿನ ವರ್ಷದಲ್ಲಿ ೧೨ ಕೋಟಿ ರೂಪಾಯಿ ಸಿಗುತ್ತದೆ ಎಂದು ಹೇಳುವಂಥಾ ಅಂಶ ಇಲ್ಲಿ ಕೊಟ್ಟಿರುವ ಪುಸ್ತಕದಲ್ಲಿ ಕಾಣುತ್ತದೆ. ನಮ್ಮ ರಾಜ್ಯದಲ್ಲಿರತಕ್ಕ ನ್ಯಾಷನಲ್ ಹೈವೇ ಒಂದೊಂದು ನ್ಯಾಷನಲ್ ಹೈವೇ ಒಂದೊಂದು ಸ್ಟಾಂಡರ್ಡ್‌ನಲ್ಲಿದೆ. ಪಶ್ಚಿಮ ಕರಾವಳಿಯಲ್ಲಿ ೧೭ ನ್ಯಾಷನಲ್ ಹೈವೇ ಇದೆ. ಮಂಗಳೂರಿನಿಂದ ಬೆಂಗಳೂರಿಗೆ ಹೋಗುವಂಥಾ ಒಂದು ರೋಡ್ ವಿಡ್ತ್ ಸರ್‌ಫೇಸ್ ಮಾಡುವುದೇ ಬೇರೆ. ಒಂದು ಜಿಲ್ಲೆಯ ಒಂದು ಡಿವಿಷನ್‌ನಲ್ಲಿ ಒಂದು ಮಟ್ಟ ಇದ್ದರೆ ಅದೇ ರಸ್ತೆ ಇನ್ನೊಂದು ಡಿವಿಷನ್‌ನಲ್ಲಿ ಬೇರೆ ರೀತಿ ಇರುತ್ತದೆ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಹೆದ್ದಾರಿಗಳ ಮಟ್ಟವೇ ಬೇರೆ. ಕರ್ನಾಟಕ, ಕೇರಳ, ಗೋವಾ ಮತ್ತು ಮಹಾರಾಷ್ಟ್ರಗಳಲ್ಲಿ ಒಂದೊಂದು ರಾಜ್ಯಗಳಲ್ಲಿ ಒಂದೊಂದು ರೀತಿ ಇರುತ್ತದೆ. ಇಲ್ಲಿ ಏನಾಗಿದೆ ಎಂದರೆ ಒಂದು ರಾಜ್ಯದ ಒಂದು ಡಿವಿಷನ್‌ನಲ್ಲಿ ಒಂದೊಂದು ರೀತಿ ಇದೆ. ಇದನ್ನು ಜಿಲ್ಲೆಯಿಂದ ಜಿಲ್ಲೆಗೆ ಹೋಗುವಾಗ ಗುರುತಿಗಾಗಿ ಈ ರೀತಿ ಮಾಡಿದ್ದಾರೆ. ಇದರ ಬಗ್ಗೆ ರಾಜ್ಯದ ಮುಖ್ಯ ಇಂಜಿನಿಯರ್‌ರವರು ಗಮನಕೊಡಬೇಕು. ನ್ಯಾಷನಲ್ ಹೈವೇ ಗುಣಮಟ್ಟವನ್ನು ಉತ್ತಮಪಡಿಸಬೇಕು. ಮಾನ್ಯ ಸಚಿವರು ಊರಿಗೆ ಬರಬೇಕಾದರೆ ಈ ರಸ್ತೆಗಳು ಯಾವ ತರಹ ಇದೆ ಎನ್ನುವುದು ಗೊತ್ತಿದೆ. ನ್ಯಾಷನಲ್ ಹೈವೇಗೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಸಂಪೂರ್ಣವಾಗಿ ಸಹಾಯ ಬರತಕ್ಕದ್ದನ್ನು ನೋಡಬೇಕು. ಸಂಪೂರ್ಣ ಉಸ್ತುವಾರಿಯ ಬಗ್ಗೆ ಹೆಚ್ಚಿನ ಗಮನ ಕೊಡಬೇಕು, ಇದರಲ್ಲಿ ಮುಖ್ಯವಾಗಿ ಮಂಗಳೂರು ಬೆಂಗಳೂರು ರಸ್ತೆಯಲ್ಲಿ ಬ್ರಹ್ಮರಕೂಟ್ಲು, ಬಂಟ್ವಾಳದಲ್ಲಿ ಒಂದು ಫರ್ಲಾಂಗ್ ಜಾಗ ಇದೆ. ಅದು ಕೂಡ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುತ್ತದೆ. ಈ ವರ್ಷದ ಮಳೆಗಾಲದಲ್ಲಿಯೂ ಸಹ ೨ ಅಡಿ ೩ ಅಡಿ ನೀರು ತುಂಬಿತ್ತು. ಆ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಬಂದು ನೋಡಿರುತ್ತಾರೆ. ಆಗ ಬ್ರಹ್ಮರಕೂಟ್ಲುನಲ್ಲಿ ಬೈಪಾಸ್ ರಸ್ತೆ ಆಗಬೇಕಾಗಿದೆ ಎಂದು ಹೇಳಿದರು. ೧೦ ವರ್ಷದಿಂದ ನಮ್ಮ ಜಿಲ್ಲಾ ಕೇಂದ್ರದಿಂದ ಕರಾವಳಿ ಪ್ರದೇಶಕ್ಕೆ ಹೋಗಬೇಕಾದರೆ ಬಹಳ ಕಷ್ಟವಾಗುತ್ತದೆ. ಮೂರು-ನಾಲ್ಕು ದಿವಸ ಬಂದಾಗುತ್ತದೆ. ಈ ರಸ್ತೆಯನ್ನು ಎತ್ತರಿಸುವ ಕೆಲಸದ ಬಗ್ಗೆ ಕೇಂದ್ರದ ಶ್ರೀಮಾನ್ ಜನಾರ್ಧನ ಪೂಜಾರಿ ಅವರ ಹತ್ತಿರವು ಸಹ ಕೇಳಿದೆವು, ಅದಕ್ಕೆ ಅವರು ಸಂಬಂಧಪಟ್ಟ ಎಸ್ಟಿಮೇಟ್ ವರದಿಗಳು ಬರದಿದ್ದುದರಿಂದ ತೊಂದರೆಯಾಗಿದೆ ಎನ್ನುವ ಮಾತನ್ನು

ಹೇಳಿದ್ದಾರೆ. ನಾನು ಅತ್ಯಂತ ಕಳಕಳಿಯಿಂದ ಕೇಳುತ್ತಿದ್ದೇನೆ ಬ್ರಹ್ಮರಕೂಟ್ಲು ಇರುವಂಥ ಜಾಗದಲ್ಲಿ ಒಂದು ಫೆರ್ರಿಂಗ್ ರಸ್ತೆಯನ್ನು ಎತ್ತರಿಸಬೇಕು, ಇದರ ಬಗ್ಗೆ ಹೆಚ್ಚಿನ ಗಮನಕೊಟ್ಟು ಈ ವರ್ಷ ಮಳೆ ಗಾಲದಲ್ಲಿ ಯಾವ ಒಂದು ಪಿಡುಗು ಒದಗದಂತೆ ಮಾಡಬೇಕು, ಇನ್ನು ಹೆದ್ದಾರಿ ಬಗ್ಗೆ ಹೇಳಿದ್ದೀರಿ, ರೂರಲ್ ರಸ್ತೆಯ ಬಗ್ಗೆ ನಿಮ್ಮ ಈ ವರದಿಯಲ್ಲಿ ಸುಮಾರು ೬೪ ಸಾವಿರ ಕಿಲೋಮೀಟರ್ ಪ್ರಶ್ನೆ ಬಂದಿದೆ. ಈ ಪೈಕಿ ೧೨ ಕಿಲೋಮೀಟರ್ ನಾನ್‌ಮೆಟಲ್ ಸರಪ್ಲಸ್ ಇರುವಂಥಾದ್ದು. ಏಳು ಸಾವಿರ ಕಿಲೋಮೀಟರ್‌ವರೆಗೆ ಮೋಟಾರು ಹೋಗುತ್ತದೆ ಇನ್ನುಳಿದ ೫ ಸಾವಿರ ಕಿಲೋಮೀಟರ್‌ಗೆ ಮೋಟಾರು ಹೋಗುವುದಿಲ್ಲವೆಂದು ತಿಳಿಸಿ ಇದಕ್ಕೆ ೯೪೯ ಕೋಟಿ ರೂಪಾಯಿಗಳನ್ನು ಒಂದು ಮಾಸ್ಟರ್ ಪ್ಲಾನ್ ಹಾಕಿಕೊಂಡಿದ್ದೀರಿ. ೧೯೮೦-೮೧ರಲ್ಲಿ ಈ ಒಂದು ಯೋಜನೆಗೋಸ್ಕರ ೨ ಕೋಟಿ ೨೫ ಲಕ್ಷ ಆದರೆ ೧ ಕೋಟಿ ೧೪ ಲಕ್ಷ ಖರ್ಚು ಆಯಿತು. ನಂತರ ೧೯೮೨-೮೩ರಲ್ಲಿ ೬೪ ಲಕ್ಷ ಬಂದಿದೆ, ಈ ವರ್ಷ ೫೦ ಲಕ್ಷ ರೂಪಾಯಿಗಳು ಖರ್ಚಾಗಬಹುದೆಂದು ತಾವು ಹೇಳಿದ್ದೀರಿ. ಈ ಹಳ್ಳಿಯ ಹೆದ್ದಾರಿಗೆ ಎಂ.ಎನ್.ಪಿ. ನೀತಿಯಿಂದ ರೂರಲ್ ಎಂಪ್ಲಾಯಿಮೆಂಟ್ ಗ್ಯಾರಂಟಿ ಪ್ರೋಗ್ರಾಮ್‌ಗೆ ೨೫ ಲಕ್ಷ ಕೊಡುತ್ತೇವೆಂದು ಇದೆ. ಇಷ್ಟು ದೊಡ್ಡ ಕಾರ್ಯಕ್ರಮಕ್ಕೆ ಇಷ್ಟೇ ಆರ್ಥಿಕ ವ್ಯವಸ್ಥೆ ವಹಿಸಿಕೊಂಡರೆ ಆಗುವುದಿಲ್ಲ. ಆದಷ್ಟು ಧನಹೂಡಿಕೆ ಆಗಬೇಕು. ನಿಶ್ಚಿತವಾದ ಅವಧಿ ೫ ವರ್ಷವೆಂದು ಇಟ್ಟುಕೊಳ್ಳ ಬೇಕು ಆ ಐದು ವರ್ಷದಲ್ಲಿ ಆಗದಿದ್ದರೂ ಇನ್ನು ಎರಡು ವರ್ಷ ಜಾಸ್ತಿ ಇಟ್ಟುಕೊಂಡರೂ ಕೂಡ ವಿಲೇಜ್ ಕಮ್ಯೂನಿಕೇಷನ್ ದೃಷ್ಟಿಯಿಂದ ಇದರ ಬಗ್ಗೆ ಪ್ರಯತ್ನ ಮಾಡಬೇಕು.

ಇನ್ನು ರೇವು, ಜಲಸಾರಿಗೆ ಬಗ್ಗೆ ಹೇಳಬೇಕೆಂದರೆ ೩೫೦ ಲಕ್ಷ ರೂಪಾಯಿಗಳ ವಿನಿಯೋಗದಲ್ಲಿ ೨೦೦ ಲಕ್ಷ ಚಿಲ್ಲರೆ ಕರಾವಳಿಗೆ ಖರ್ಚಾಗುತ್ತದೆ. ಮಲ್ಪೆಯಲ್ಲಿ ಒಂದು ಕರಾವಳಿ ಪ್ರದೇಶ, ಮಂಗಳೂರಿ ನಲ್ಲಿ ಮೇಜರ್ ಪೋರ್ಟ್ ಇದೆ. ಕಾರವಾರ ರೇವು ಅಭಿವೃದ್ಧಿಗೆ ವಿನಿಯೋಗವಾಗುತ್ತಿದೆ. ಈಗ ನಮ್ಮಲ್ಲಿ ೧೭ ರೇವುಗಳಿವೆ. ಅಂಗರಕಟ್ಟೆ, ಗಂಗೊಳ್ಳಿ, ಮಲ್ಪೆಯಲ್ಲಿ ಕಮರ್ಷಿಯಲ್ ಟ್ರಾಫಿಕ್‌ಗೆ ಬೇಕಾದಂಥ ಬಂದರು ಇವು. ಅನೇಕ ವರ್ಷಗಳಿಂದ ಉಪ್ಪು ಇಲ್ಲಿಂದ ಬರುತ್ತಿದೆ. ಮರಮುಟ್ಟುಗಳು ಇಲ್ಲಿಂದ ಹೋಗಬೇಕಾಗಿದೆ. ಇದರ ಬಗ್ಗೆ ಯೋಗ್ಯವಾದ ಉಸ್ತುವಾರಿ ಇಲ್ಲ. ಲೋಡಿಂಗ್ ಅನ್‌ಲೋಡಿಂಗ್ ಸರಿಯಾಗಿ ಇಲ್ಲ. ಮೀನುಗಾರಿಕೆಗೋಸ್ಕರವಾಗಿ ಬಂದರಿನಲ್ಲಿ ಲಾಂಚಸ್ಸು ಬರುತ್ತಿದೆ. ಅದಕ್ಕೆ ಸಂಬಂಧಪಟ್ಟ ಕೆಲಸಗಳು ಆಗುತ್ತವೆ. ಆದರೆ ರೇವು ಮಲ್ಪೆಯಲ್ಲಿ, ಅಂಗರಕಟ್ಟೆಯಲ್ಲಿ ಮತ್ತು ಗಂಗೊಳ್ಳಿಯಲ್ಲಿ ಅವಶ್ಯಕವಾಗಿ ಬೇಕಾಗಿದೆ. ಮಂಗಳೂರು ಬಂದರಿನಲ್ಲಿ ತೊಂದರೆ ಸಂಭವಿಸಿದ ಸಂದರ್ಭದಲ್ಲಿ ಹಡಗುಗಳು ಮೇಲಕ್ಕೆ ಬರುವಂಥಾ ವ್ಯವಸ್ಥೆ ಇದೆ. ಅಲ್ಲಿರುವಂಥ ಸ್ಥಳದಲ್ಲಿ ಬೇರೆ ಬೇರೆ ರೀತಿಯಾದ ಅಕ್ರಮಣಗಳು ಆಗಿರುವುದು ಕಂಡುಬಂದಿದ್ದು, ಅಂಥ ಅಕ್ರಮಣಗಳನ್ನು ಸರಿಪಡಿಸಬೇಕು. ಮೀನುಗಾರರಿಗೆ ಮನೆ ಜಾಗಬೇಕು ಎಂದರೆ ಸ್ಥಳಕೊಟ್ಟು ರೇವು ಸ್ಥಳವನ್ನು ಸುಸಜ್ಜಿತವಾಗಿ ಮಾಡ ಬೇಕು, ಮಲ್ಪೆ ಮಾತ್ರವಲ್ಲ, ಅಂಗರಕಟ್ಟೆ ಮತ್ತು ಗಂಗೊಳ್ಳಿಯಲ್ಲೂ ಸಹ ಇದೇ ರೀತಿಯಾಗಿದೆ. ಉತ್ತರಕನ್ನಡ ಜಿಲ್ಲೆಯ ಭಟ್ಕಲ್ ಮತ್ತು ಹೊನ್ನಾವರ ಇವನ್ನು ಅಭಿವೃದ್ಧಿಪಡಿಸುವಂತ ಕೆಲಸವು ಆಗಬೇಕಾಗಿದೆ. ಇನ್ನು ಕಡಲ್‌ಕೊರೆತದ ಬಗ್ಗೆ ಹೇಳುತ್ತಿದ್ದಾರೆ. ನಮ್ಮ ದೇಶದ ಕೇರಳ ರಾಜ್ಯದಲ್ಲಿ ಅತ್ಯಂತ ಸುಸಜ್ಜಿತವಾದ ವ್ಯವಸ್ಥೆಯನ್ನು ಮಾಡಿದ್ದಾರೆ. ಇದನ್ನು ಕೇಳಿ ಮತ್ತು ಓದಿ ತಿಳಿದಿದ್ದೇವೆ. ನಮ್ಮ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಅನೇಕ ವರ್ಷಗಳಿಂದ ಮಳೆಗಾಲದಲ್ಲಿ ಸಕ್ರಿಯವಾಗಿ ನೋಡಿದಾಗ ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ಅನೇಕ ಜನರು ಮನೆಗಳನ್ನು ಕಳೆದುಕೊಂಡಿ ದ್ದಾರೆ. ನಮ್ಮ ಉಡುಪಿ ತಾಲ್ಲೂಕಿನ ಉಚ್ಚಿಲ ಬಡ ಗ್ರಾಮ ಸಮುದ್ರದ ಬದಿಯಲ್ಲಿ ಇದ್ದು ಮನೆಗಳು ಮತ್ತು ಸೈಟುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರವಾಗಿ ವಿವಿಧ ಕಡಲ್‌ದಂಡೆ ರಚನೆಯಾಗ ಬೇಕಾಗಿದೆ. ಇದಕ್ಕೆ ಸುಮಾರು ೧೨ ಸಾವಿರ ರೂಪಾಯಿಗಳು ವೆಚ್ಚವಾಗುತ್ತದೆಂದು ಹೇಳುತ್ತಾರೆ.

ಆದರೆ ಅತ್ಯಂತ ಅಗತ್ಯವಾದ ಸೂರತ್‌ಕಲ್, ಉಚ್ಚಿಲ, ಮಂಗಳೂರು ಮತ್ತು ಪೋವು, ಉದ್ಯಾವರ ಮತ್ತು ಮಲ್ಪೆ ಗ್ರಾಮಗಳು ಅತ್ಯಂತ ಜನ ನಿಬಿಡವಾಗಿದ್ದು ಬಡವರೇ ಜಾಸ್ತಿ ವಾಸವಾಗಿರು ತ್ತಾರೆ. ಈ ಪ್ರದೇಶಗಳಲ್ಲಿ ಕಡಲ ದಂಡೆಗಳನ್ನು ರಚನೆ ಮಾಡಬೇಕು. ಕೇಂದ್ರ ಸರ್ಕಾರದಿಂದ ಇದಕ್ಕಾಗಿ ಪೂರ್ತಿ ಹಣ ಬರುತ್ತದೆಂದು ಕೇಳಿದ್ದೇನೆ. ಈ ದೃಷ್ಟಿಯಿಂದ ಇದು ಅಗತ್ಯವಾಗಿ ಆಗ ಬೇಕಾದಂತಹ ಕೆಲಸವಾಗಿದೆ.

ಅಧ್ಯಕ್ಷರು.—ನೀವೇ ಅರ್ಧ ಗಂಟೆ ತೆಗೆದುಕೊಂಡಿದ್ದೀರಿ ? ನಿಮಗೆ ಮಾತ್ರವಲ್ಲದೆ ಇದು ಪೂನ್ಯ ಪಂಪಾಪತಿಯವರಿಗೂ ಅನ್ವಯಿಸುತ್ತದೆ.

ಶ್ರೀ ಎ. ಎಸ್. ಆಚಾರ್ಯ.—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಾನು ಬರುವಾಗಲೇ ಸ್ವಲ್ಪ ತಡವಾಗಿತ್ತು. ಶಾಸಕರ ಭವನದ ನನ್ನ ಕೋಣೆಗೂ ಹೋಗದೆ, ನೇರವಾಗಿ ಇಲ್ಲಿಗೆ ಬಂದಿದ್ದೇನೆ. ಇಲ್ಲಿಗೆ ಬಂದಾಗ ಬಜೆಟ್ ಪುಸ್ತಕ ಕೊಟ್ಟಿದ್ದಾರೆ. ಇದನ್ನು ಇನ್ನೂ ಪೂರ್ತಿಯಾಗಿ ಓದುವುದಕ್ಕಾಗಿಲ್ಲ. ನಮ್ಮ ನಮ್ಮ ಕ್ಷೇತ್ರಗಳಲ್ಲಿನ ಕುಂದುಕೊರತೆಗಳು ವಿಚಾರವನ್ನು ಹೇಳಲಿಕ್ಕೆ ಸಮಯವಿಲ್ಲ ಎಂದರೆ................

ಅಧ್ಯಕ್ಷರು.—ನಿಮ್ಮ ಅಭಿಪ್ರಾಯವೇ ನನ್ನ ಅಭಿಪ್ರಾಯ. ನೀವು ಸಹಕಾರ ಕೊಡದೇ ಹೋದರೆ ನಾನು ನಿಸ್ಸಹಾಯಕನಾಗುತ್ತೇನೆ.

ಶ್ರೀ ಎ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ನಾನು ನನ್ನ ಭಾಷಣವನ್ನು ವಿಸ್ತರಿಸುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಮಾನ್ಯ ಸದಸ್ಯರಾದ ಶ್ರೀ ಒಡೆಯರಾಜ್ ಅವರು ಈಗಾಗಲೇ ಈ ಬಗ್ಗೆ ಅನೇಕ ಸಂಗತಿಗಳನ್ನು ಹೇಳಿದ್ದಾರೆ. ಎಷ್ಟೋ ಆಸೆ ಇಟ್ಟುಕೊಂಡು ಮಾನ್ಯ ಸಚಿವರಿಬ್ಬರೂ ತಮ ತಮಗೆ ಸಂಬಂಧಿಸಿದ ಬೇಡಿಕೆಗಳನ್ನು ಅಂದರೆ, ಸಣ್ಣ ನೀರಾವರಿ. ದೊಡ್ಡ ನೀರಾವರಿ, ರಸ್ತೆ. ರೇವು ಮುಂತಾದವುಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಈ ಯೋಜನೆಗಳನ್ನು ಅವಧಿಬದ್ಧವಾಗಿ ಮಾಡಿ ಕೆಲಸ ಪೂರೈಸಬೇಕು. ನಿಮ್ಮ ಉಸ್ತುವಾರಿಯನ್ನು ಇನ್ನೂ ಸ್ವಲ್ಪ ಬಲಗೊಳಿಸಿ ಕೊಳ್ಳಬೇಕಾಗಿದೆ ಬಜೆಟ್‌ನಲ್ಲಿ ಎಷ್ಟೋ ಅಂಕಿ ಅಂಶಗಳು ಬರುತ್ತವೆ. ಇವೆಲ್ಲವೂ ಆಯಾ ವರ್ಷದಲ್ಲಿಯೇ ಪೂರೈಸಿ ಕೊಡಬೇಕು. ಇಲ್ಲದೇ ಹೋದರೆ, ಇವು ಮುಂದಿನ ವರ್ಷಕ್ಕೆ ಹೋಗಿಬಿಡುತ್ತವೆ. ಅಲ್ಲದೆ ಆಯಾ ಕ್ಷೇತ್ರದ ಜನರು ಈ ಯೋಜನೆಗಳ ಬಗ್ಗೆ ಬಹಳವಾಗಿ ನಿರೀಕ್ಷೆ ಮಾಡಿರುತ್ತಾರೆ. ಮುಖ್ಯವಾಗಿ ಕರಾವಳಿ ಪ್ರದೇಶದ ಜನರಿಗೆ ಸಣ್ಣ ನೀರಾವರಿ ಬಗ್ಗೆ ಹೆಚ್ಚಿನ ಬೇಡಿಕೆಯನ್ನು ಮಂಡಿಸಿದೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕು. ನಾವು ಕೇಳಿದಂತಹ ಕೆಲಸಗಳಿಗೆ ಒಂದು ಸಾವಿರ ರೂಪಾಯಿ ಗಳ ಟೋಕನ್ ಗ್ರಾಂಟ್ ಇಟ್ಟಿದ್ದೀರೆಂದು ಕೇಳಿದ್ದೇನೆ. ಈ ಗ್ರಾಂಟ್ ಜೊತೆಗೆ ಬೇರೆ ಯಾವುದಾದರೂ ಗ್ರಾಂಟ್ ಹಾಕಿ ಕೆಲಸಗಳನ್ನು ಮುಗಿಸಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತು ಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಲೋಕೋಪಯೋಗಿ ಸಚಿವರು ಮತ್ತು ಸಣ್ಣ ನೀರಾವರಿ ಸಚಿವರು ಮಂಡಿಸಿರತಕ್ಕಂತಹ ಬೇಡಿಕೆಯನ್ನು ಬೆಂಬಲಿಸುತ್ತಾ, ನನ್ನ ಅಭಿಪ್ರಾಯವನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಲೋಕೋಪಯೋಗಿ ಇಲಾಖೆ ಬಹಳ ಮಹತ್ವ ವಾದಂತಹ ಇಲಾಖೆ. ಈ ನಮ್ಮ ಸರ್ಕಾರ ಇತ್ತೀಚೆಗೆ ಎಲ್ಲಾ ವ್ಯವಹಾರಗಳನ್ನು ಕೂಡ ಕನ್ನಡ ದಲ್ಲಿಯೇ ನಡೆಸಬೇಕೆಂದು ಹೇಳಿ. ಕನ್ನಡ ಕಾವಲು ಸಮಿತಿಯನ್ನು ರಚನೆ ಮಾಡಿದೆ. ಕನ್ನಡ ಕಾವಲು ಸಮಿತಿಯನ್ನು ರಚನೆ ಮಾಡಿದ್ದಾಗ್ಯೂ ಕೂಡ, ನಮಗೆ ಒದಗಿಸಿರತಕ್ಕಂತಹ ಎಲ್ಲಾ ಪಟ್ಟಿಗಳು ಕೂಡ ಆಂಗ್ಲ ಭಾಷೆಯಲ್ಲಿಯೇ ಇವೆ. ಆದರೆ ಈ ಒಂದು ಪರಿಸ್ಥಿತಿ ಒದಗಬಾರದಾಗಿತ್ತು ಎಂದು ನಾನು ಹೇಳುತ್ತೇನೆ. ಇನ್ನು ಮುಂದಾದರೂ ಯಾವುದೇ ಪಟ್ಟಿಯನ್ನು ಒದಗಿಸತಕ್ಕಂತಹ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಎಲ್ಲವನ್ನೂ ಕನ್ನಡದಲ್ಲಿಯೇ ಒದಗಿಸಲಿ ಎಂದು ಹೇಳಿ, ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇವತ್ತು ಒದಗಿಸಿರತಕ್ಕಂಥ ಪಟ್ಟಿಗಳನ್ನು ಓದಿ ಅರ್ಥ ಮಾಡಿಕೊಳ್ಳು ವುದಕ್ಕೆ ಆಗುತ್ತಿಲ್ಲ. ಈ ಚರ್ಚೆಯಲ್ಲಿ ತೃಪ್ತಿಕರವಾಗಿ ಭಾಗವಹಿಸುವುದಕ್ಕೆ ಆಗುತ್ತಾ ಇಲ್ಲವೆಂದು ನನ್ನ ತೊಂದರೆಯನ್ನು ನಿವೇದಿಸಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರೇ, ಸಣ್ಣ ನೀರಾವರಿ ಈ ರಾಜ್ಯದಲ್ಲಿ ಅತಿ ಅಗತ್ಯ. ಈ ಸಣ ನೀರಾವರಿಯನ್ನು ಚುರುಕುಗೊಳಿಸಬೇಕು. ಈ ನಮ್ಮ ರಾಜ್ಯದಲ್ಲಿ ಅನೇಕ ನದಿಗಳು ಇವೆ. ಈ ನದಿಗಳ ಪಕ್ಕದಲ್ಲಿರತಕ್ಕಂತಹ ಗ್ರಾಮಗಳಿಗೆ ಏತ ನೀರಾವರಿಯನ್ನು ಅಳವಡಿಸಿ, ಈ ಗ್ರಾಮಗಳಿಗೆ ನೀರನ್ನು ಒದಗಿಸಿದರೆ, ಈ ಗ್ರಾಮಗಳ ಜನ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಗ್ರಾಮದ ಜನರ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ ಈ ದಿಕ್ಕಿನಲ್ಲಿ ನಮ್ಮ ಸರ್ಕಾರ ಹೆಚ್ಚಾಗಿ ಗಮನಹರಿಸಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ, ಅನೇಕ ನದಿಗಳಿಂದ, ಹಳ್ಳಗಳಿಂದ ನೀರು ಸುಮ್ಮನೆ ವೃಥಾ ಹರಿದು ಹೋಗುತ್ತದೆ, ಈ ರೀತಿ ಹರಿದು ಹೋಗ

ತಕ್ಕ ನೀರನ್ನು ತಡೆಯುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಪಕ್ಕದ ತಮಿಳುನಾಡಿನಲ್ಲಿ ಕೆಲವು ಕಡೆ ನೋಡಿದ್ದೇವೆ. ಅಲ್ಲಿ ಅವರು ಸೇತುವೆಗಳಿಗೆ ಪಿಕ್ ಅಪ್ ಮಾಡಿ ನೀರನ್ನು ನಿಲ್ಲಿಸಿ, ಆ ಭಾಗದಲ್ಲಿ ನೀರಾವರಿ ಸೌಲಭ್ಯ ಒದಗಿಸಿದ್ದಾರೆ. ಆದ್ದರಿಂದ ಈ ರೀತಿಯಲ್ಲಿ ನಾವು ಕೂಡ ಯೋಚನೆ ಮಾಡಿ ಎಲ್ಲೆಲ್ಲಿ ನೀರನ್ನು ತಡೆದು ನಿಲ್ಲಿಸುವುದಕ್ಕೆ ಸಾಧ್ಯವಿದೆಯೋ ಅಂತಹ ಕಡೆ ನದಿಗಳ ನೀರನ್ನು ತಡೆದು ನಿಲ್ಲಿಸಿಕೊಂಡು ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು ನಮ್ಮ ರಾಜ್ಯದಲ್ಲಿ ಎಷ್ಟೋ ಹಳ್ಳಗಳು, ಹೊಳೆಗಳೂ ಇದ್ದರೂ ಕೂಡ ಬೇಸಿಗೆ ಕಾಲದಲ್ಲಿ ಕುಡಿಯುವುದಕ್ಕೆ ನೀರು ಇರುವುದಿಲ್ಲ. ಏಕೆಂದರೆ, ನೀರೆಲ್ಲಾ ಹರಿದು ಹೋಗಿ ಭೂಮಿಯಲ್ಲಿ ನೀರಿನ ಅಂಶ ಕಡಿಮೆಯಾಗಿ ಇವತ್ತು ಕುಡಿಯುವ ನೀರಿಗೆ ಬರಗಾಲ ಬರುವುದನ್ನು ನಾವು ಕಾಣುತ್ತಿದ್ದೇವೆ. ನಮ್ಮ ಸರ್ಕಾರ ಅನೇಕ ರೀತಿಯಲ್ಲಿ ಕೊಳವೆ ಬಾವಿಗಳ ಮೂಲಕ ನೀರನ್ನು ಒದಗಿಸುತ್ತಿದ್ದಾರೆ. ಆದರೂ ನಮ್ಮ ನೀರಿಗೆ ಕಷ್ಟವಾಗುತ್ತಿದೆ. ಹಳ್ಳ ಮತ್ತು ಹೊಳೆಗಳಲ್ಲಿ ಹರಿದು ಹೋಗತಕ್ಕಂತಹ ನೀರನ್ನು ಉಪಯೋಗಿಸಿಕೊಂಡು, ಗ್ರಾಮಾಂತರ ಪ್ರದೇಶದ ಜನತೆಗೆ ಹೆಚ್ಚಿನ ಅನುಕೂಲ ಮಾಡಿಕೊಡಲು ಪ್ರಯತ್ನ ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂಥ ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಒಡೆಯರಾಜ್ ಮತ್ತು ಮಾನ್ಯ ಆಚಾರ್ಯರವರು ಮಾತನಾಡಿದ್ದಾರೆ. ಈ ಹೆದ್ದಾರಿಗಳು ಅಷ್ಟೊಂದು ಸಮರ್ಪಕವಾಗಿಲ್ಲ. ವಾಹನ ಸಂಚಾರ ಅತ್ಯಂತ ಹೆಚ್ಚಾಗಿದೆ. ಈ ಹೆದ್ದಾರಿಗಳು ಸರಿಯಾದ ರೀತಿಯಲ್ಲಿ ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಲ್ಲದೇ ಇರುವುದರಿಂದ. ಅನೇಕ ಅಪಘಾತಗಳು ಉಂಟಾಗುತ್ತಿವೆ. ಈ ಅಪಘಾತಗಳನ್ನು ತಡೆಯ ಬೇಕಾದರೆ, ನಾವು ಹೆದ್ದಾರಿಯನ್ನು ಇನ್ನೂ ವಿಶಾಲಗೊಳಿಸಬೇಕು. ಈ ರಸ್ತೆಗಳನ್ನು ವ್ಯವಸ್ಥಿತ ರೀತಿಯಲ್ಲಿ ದುರಸ್ತಿ ಮಾಡಬೇಕಾದದ್ದು ಅಗತ್ಯವಾಗಿದೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಶಾಸಕರಾದ ಶರಣಪ್ಪನವರು ಹೋದ ವರ್ಷ ಬಸ್ಸಿನಲ್ಲಿ ಬರುವಾಗ ಅಪಘಾತಕ್ಕೆ ಈಡಾಗಿ ಕಾಲು ಮುರಿದುಕೊಂಡರು. ಇದಕ್ಕೆ ರಸ್ತೆಯೂ ತಿರುವುಗಳು ಇರುವುದು ಕಾರಣವಾಗಿದೆ. ಡ್ರೈವರ್ ಸ್ವಲ್ಪ ಎಚ್ಚರ ತಪ್ಪಿದರೂ ಕೂಡ ಅಪಘಾತಗಳಾಗುತ್ತವೆ ಶಾಸಕರು ಮಾತ್ರವಲ್ಲ ಸಾಮಾನ್ಯ ಜನರೂ ಕೂಡ ಅಪಘಾತದಲ್ಲಿ ಅನೇಕ ತೊಂದರೆಗಳನ್ನು ಎದುರಿಸತಕ್ಕಂಥ ಪರಿಸ್ಥಿತಿ ಇದೆ. ಮಾನ್ಯ ಅಧ್ಯಕ್ಷರೇ, ಬೊಂಬಾಯಿಯಿಂದ ಮದ್ರಾಸ್‌ವರೆಗೂ ೪ ನೇ ರಾಷ್ಟ್ರೀಯ ಹೆದ್ದಾರಿ ಹೋಗುತ್ತದೆ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾವಿರಾರು ಕಿಲೋಮೀಟರ್ ದೂರ ವಾಹನಗಳ ಸಂಚಾರ ಇರುತ್ತದೆ. ಈ ವಾಹನಗಳನ್ನು ಎಲ್ಲಿಯಾದರೂ ನಿಲ್ಲಿಸುವುದಕ್ಕೆ ಈ ಹೆದ್ದಾರಿಯಲ್ಲಿ ವ್ಯವಸ್ಥೆ ಮಾಡಿಕೊಡಬೇಕು. ಈ ಹೆದ್ದಾರಿಗಳಲ್ಲಿ ಎಲ್ಲಿ ನೋಡಿದರೂ ರಸ್ತೆಗಳಲ್ಲೇ ಹೋಟೆಲುಗಳನ್ನು ಮಾಡಿಕೊಂಡಿರುತ್ತಾರೆ. ಲಾರಿಗಳು, ಬಸ್ಸುಗಳು, ಕಾರುಗಳು ಮುಂತಾದ ವಾಹನಗಳಿಗೆ ಸರಿಯಾದ ವ್ಯವಸ್ಥೆ ಇಲ್ಲದೇ ಇರುವುದರಿಂದ. ರಸ್ತೆಯಲ್ಲಿಯೇ ನಿಲ್ಲಿಸಿರುತ್ತಾರೆ ಇದರಿಂದ ಸಂಚಾರಕ್ಕೆ ತೊಂದರೆಯಾಗುತ್ತದೆ. ಈ ವಾಹನಗಳನ್ನು ನಿಲ್ಲಿಸುವುದಕ್ಕೆ ಸರಿಯಾದ ವ್ಯವಸ್ಥೆ ಮಾಡುವುದು ಬಹಳ ಅಗತ್ಯವಿದೆ. ಈ ವಿಷಯದ ಬಗ್ಗೆ ನಮ್ಮ ಲೋಕೋಪಯೋಗಿ ಸಚಿವರು ಸ್ವಲ್ಪ ಗಮನಹರಿಸಬೇಕಾದುದು ಅಗತ್ಯವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಅನೇಕ ದೊಡ್ಡ ದೊಡ್ಡ ಕಾಮಗಾರಿಗಳು ಈವೊತ್ತು ನಡೆದಿವೆ. ಆದರೆ ಆ ಕೆಲಸಗಳು ಬಹಳ ಮಂದಗತಿಯಲ್ಲಿ ನಡೆಯುತ್ತಾ ಇವೆ. ಉದಾಹರಣೆಗೆ ಘಟಪ್ರಭಾ ಯೋಜನೆ. ಈ ಘಟಪ್ರಭಾ ಬಲದಂಡೆ ಕಾಲುವೆ ಕೆಲಸ ಏನು ಇದೆ ಅದರ ಕೆಲಸ ಬಹಳ ಮಂದಗತಿಯಲ್ಲಿ ನಡೆಯುತ್ತಾ ಇರುವುದರಿಂದ ಅಲ್ಲಿಯ ರೈತರು ಅದಕ್ಕಾಗಿ ಚಳುವಳಿ ನಡೆಸುತ್ತಿದ್ದಾರೆ, ಹೋರಾಟ ಮಾಡುತ್ತಿದ್ದಾರೆ ಆದರೆ ಇನ್ನೂ ಆಗಿಲ್ಲ. ಆ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಅಲ್ಲಿಯ ಜನರ ಸಮಸ್ಯೆಯನ್ನು ಆದಷ್ಟು ಬೇಗ ಪರಿಹಾರ ಮಾಡಿಕೊಡುವುದಕ್ಕಾಗಿ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಅವರು ಎಷ್ಟೇ ಚಳುವಳಿ ಮಾಡಿದರೂ, ಎಷ್ಟೇ ಹೋರಾಟ ಮಾಡಿದರೂ ಸಹ ಅಲ್ಲಿಯ ಕಾಲುವೆ ಕೆಲಸ ಮಂದಗತಿಯಲ್ಲಿ ನಡೆಯುತ್ತಾ ಇದೆ. ಅದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಕೂಡ ಇನ್ನೂ ವರೆಗೆ ಸಹ ಅವರಿಗೆ ನೀರನ್ನು ಒದಗಿಸುವ ವ್ಯವಸ್ಥೆ ಇಲ್ಲ. ನೀವೇನೋ ಜಲಾಶಯಗಳನ್ನು ನಿರ್ಮಾಣ ಮಾಡುತ್ತೀರಿ, ಆದರೆ ಅದಕ್ಕೆ ಬೇಕಾದ ಕಾಲುವೆ ಕೆಲಸ ಮಾಡದೇ ಹೋದರೆ ಅವರಿಗೆ ಏನು ಉಪಯೋಗವಾಗುತ್ತದೆ ? ಆದುದರಿಂದ ನೀವು ಜಲಾಶಯಗಳ ಕೆಲಸಗಳನ್ನು ಮಾಡುವಾಗಲೇ ಅದರ ಜೊತೆಯಲ್ಲೇ ಕಾಲುವೆಗಳ ಕೆಲಸಗಳನ್ನೂ

ಮಾಡಿದರೆ ಆ ರೈತರಿಗೆ ಅನುಕೂಲವಾಗುತ್ತದೆ ಈ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ತಮಗೆ ಹೇಳಬೇಕಾದರೆ ಘಟಪ್ರಭಾ ಬಲದಂಡೆ ಕಾಲುವೆ ಕೆಲಸ ಸುಮಾರು ೨೯ ಕಿಲೋಮೀಟರ್ ಅಷ್ಟು ಕಾಮಗಾರಿ ಕೆಲಸ ಆಗಬೇಕಾಗಿದೆ, ಅಲ್ಲಿ ಕಡಬಟ್ಟಿ ಸುರಂಗ ಮಾರ್ಗದ ಕೆಲಸ ಆಗಬೇಕಾಗಿದೆ, ಈ ಕೆಲಸ ಮಂದಗತಿಯಲ್ಲಿ ಆಗುತ್ತಾ ಇದೆ, ತಮಗೆ ಹೇಳಬೇಕಾದರೆ ನಿಂತೇ ಹೋಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅಲ್ಲಿ ಈ ಸುರಂಗ ಮಾರ್ಗದ ಕೆಲಸ ಮಾಡದೇ ಹೋದರೆ ಅವರಿಗೆ ನೀರೇ ಬರುವುದಿಲ್ಲ. ಆದಂದರಿಂದ ಜಲಾಶಯ ನಿರ್ಮಾಣ ಮಾಡಿದರೂ ಸಹ ಏನೂ ಉಪಯೋಗವಾಗುವುದಿಲ್ಲ ಈ ಬಗ್ಗೆ ಸರಕಾರದವರು ಗಮನಹರಿಸಿ ಆ ಕೆಲಸವನ್ನು ಕೈಗೆತ್ತಿಕೊಂಡು ಆ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ರಸ್ತೆಗಳ ವಿಷಯ. ರಾಜ್ಯ ಮಟ್ಟದ ರಸ್ತೆಗಳಾಗಲಿ ಅಥವಾ ಹಳ್ಳಿಗಳಿಗೆ ಸಂಪರ್ಕವನ್ನು ಒದಗಿಸುವ ರಸ್ತೆಗಳಾಗಲಿ ಮಾಡುವ ಕೆಲಸ ಈ ಯೋಜನೆಯಲ್ಲಿ ಇದೆ. ಆದರೆ ಎಲ್ಲವಕ್ಕೂ ಕೂಡ ಒಂದೊಂದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದರಿಂದ ಎಷ್ಟು ಉಪಯೋಗವಾಗುತ್ತದೋ ಏನೋ ಗೊತ್ತಿಲ್ಲ. ಒಂದೊಂದು ಜಿಲ್ಲೆಗೆ ನಾಲ್ಕಾರು ಕೆಲಸಗಳು ಆಗಬೇಕಾಗುತ್ತದೆ. ಸುಮಾರು ೪೨ ಲಕ್ಷ ೫೦ ಸಾವಿರ ರೂಪಾಯಿ ಯಾವುದೋ ಒಂದು ಕೆಲಸಕ್ಕೆ ಅಂದಾಜು ಮಾಡಿದ್ದೀರಿ. ಇದು ಸಾಕಾಗುತ್ತದೆಯೋ ? ತಮಗೆ ಹೇಳಬೇಕಾದರೆ construction of Bridge across Cauvery river near Kadabatti in Arakalagud Taluka. ಇದಕ್ಕೆ ಅಂದಾಜು ೪೨ ಲಕ್ಷ ೫೦ ಸಾವಿರ ರೂಪಾಯಿ ಎಂದು ಮಾಡಿದ್ದೀರಿ. ಇದಕ್ಕೂ ಸಹ ಒಂದು ಸಾವಿರ ರೂಪಾಯಿ ಒದಗಿಸಿದ್ದೀರಿ. ಹೀಗಾದರೆ ಈ ಕಾಮಗಾರಿಯನ್ನು ಮುಗಿಸುವುದಕ್ಕೆ ಇನ್ನೂ ಎಷ್ಟೋ ವರ್ಷಗಳು ಬೇಕಾಗುತ್ತದೆ. ಎಲ್ಲರಿಗೂ ಸರಿಸಮವಾಗಿ ಹಂಚಬೇಕು ಎನ್ನುವ ಉದ್ದೇಶ ಏನೋ ಸರಿಯಾಗಿದೆ. ಆದರೆ ಆ ಕೆಲಸಗಳು ಎಷ್ಟರಮಟ್ಟಿಗೆ ಮುಗಿಯುತ್ತದೋ ಅದು ಗೊತ್ತಿಲ್ಲ. ನನಗೆ ತಿಳಿದಮಟ್ಟಿಗೆ ಈ ರೀತಿಯಾಗಿ ಒಂದೊಂದು ಸಾವಿರ ರೂಪಾಯಿನಲ್ಲಿ ಕೆಲಸ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಗಮನಹರಿಸಬೇಕು ಎಂದು ಹೇಳುತ್ತೇನೆ.

ಇನ್ನು ದಾವಣಗೆರೆ ನಗರದ ಬಗ್ಗೆ ಹೇಳುವುದಾದರೆ ಇದು ಒಂದು ದೊಡ್ಡ ನಗರವಾಗಿ ದಿನೇ ದಿನೇ ಬೆಳೆಯುತ್ತಿದೆ. ಹರಿಹರದಲ್ಲೂ ಸಹ ದೊಡ್ಡ ದೊಡ್ಡ ಕೈಗಾರಿಕೆಗಳು ಬೆಳೆಯುತ್ತಾ ಇದೆ. ಇದು ೪ನೇ ಹೆದ್ದಾರಿಯ ಮಧ್ಯಭಾಗದಲ್ಲಿ ಇದೆ ಇಲ್ಲಿ ಬೈಪಾಸ್ ರೋಡ್ ಮಾಡಿ ವಾಹನಗಳೆಲ್ಲಾ ಊರ ಹೊರಗಡೆಯಿಂದ ಹೋಗುವುದಕ್ಕೆ ಸರ್ಕಾರ ಈಗಾಗಲೇ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಸುಮಾರು ೧೦ ವರ್ಷದಿಂದಲೂ ಸಹ ಈ ಕೆಲಸ ನಡೆಯುತ್ತಾ ಇದೆ ಇನ್ನೂ ಆ ಕೆಲಸ ಮುಗಿದಿಲ್ಲಾ ಸುಮಾರು ೨೦ ಕಿಲೋ ಮೀಟರ್ ಅಷ್ಟು ಆಗಿರಬಹುದು ಈ ಕೆಲಸ ಇನ್ನೂ ಆಗಿಲ್ಲ. ಈ ಲೋಕೋಪಯೋಗಿ ಇಲಾಖೆಯಲ್ಲಿ ಇದರ ಬಗ್ಗೆ ಏನು ತಕರಾರು ಇದೆಯೋ ಏನೋ ಗೊತ್ತಿಲ್ಲ. ಈ ಕೆಲಸ ಹಾಗೆಯೇ ನಿಂತಿದೆ. ಇದು ನಗರದ ಮಧ್ಯಭಾಗದಲ್ಲಿರುವುದರಿಂದ ಈ ಕೆಲಸವನ್ನು ಅತ್ಯವಶ್ಯಕವಾಗಿ ಮಾಡಬೇಕಾಗಿರುತ್ತದೆ, ಇಲ್ಲದೇ ಹೋದರೆ ಆ ಜನರಿಗೆ ಬಹಳ ತೊಂದರೆಯಾಗುತ್ತದೆ, ಈ ಬಗ್ಗೆ ಮಾನ್ಯ ಸಚಿವರು ಗಮನಹರಿಸಿ ಈ ರಸ್ತೆ ಕೆಲಸವನ್ನು ಕೂಡಲೇ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಹರಿಹರ ದಾವಣಗೆರೆ ಮಧ್ಯದಲ್ಲಿ ಎರಡು ರೈಲ್ವೆ ಲೈನ್ಸ್ ಇವೆ. ಇದರಿಂದ ಆ ಜನರಿಗೆ ತೊಂದರೆಯಾಗುತ್ತದೆ. ಇದನ್ನು ತಪ್ಪಿಸುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು ಇದಕ್ಕೆ ದುಡ್ಡು ಏನೂ ಹೆಚ್ಚು ಖರ್ಚಾಗುವುದಿಲ್ಲ. ಅದರ ಪಕ್ಕದಲ್ಲೇ ಒಂದು ರಸ್ತೆ ಮಾಡಿದರೆ ಸಾಕು. ವಾಹನ ಸಂಚಾರಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾನ್ಯ ಸಚಿವರಿಗೂ ಸಹ ತೋರಿಸಿದ್ದೇನೆ. ಅವರು ನೋಡಿದ್ದಾರೆ, ಆದರೂ ಕೂಡ ಅದರ ಬಗ್ಗೆ ಇದುವರೆಗೂ ಸಹ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲವೋ ಗೊತ್ತಾಗಲಿಲ್ಲ. ಈಗಲಾದರೂ ಕೂಡ ಈ ಬಗ್ಗೆ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲದೆ ಇದರ ಬಗ್ಗೆ ಕೂಡಲೇ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈ ೪ನೇ ಹೆದ್ದಾರಿಯಲ್ಲಿ ಒಂದು ರೈಲ್ವೆ ಗೇಟ್ ಬರುತ್ತದೆ. ಅಲ್ಲಿ ಈಗಾಗಲೇ ವಾಹನ ಸಂಚಾರಕ್ಕೆ ಕಷ್ಟವಾಗಿದೆ. ಇಲ್ಲಿಗೆ ಒಂದು ಅಂಡರ್‌ಬ್ರಿಡ್ಜ್ ಕಟ್ಟುತ್ತಿದ್ದಾರೆ. ಇನ್ನೂ ಮುಗಿದಿಲ್ಲ. ಮಾನ್ಯ ಸಚಿವರೂ ಸಹ ನೋಡಿದ್ದಾರೆ. ತುಮಕೂರು ಹತ್ತಿರವೇನು ಅಂಡರ್ ಬ್ರಿಡ್ಜ್ ಕಟ್ಟುತ್ತಿದ್ದಾರೆ ಅಷ್ಟು ದುಡ್ಡನ್ನು ಸಹ ಇಲ್ಲಿಗೆ ಖರ್ಚು ಮಾಡಬೇಕಾಗಿಲ್ಲ. ಆದರ ಪಕ್ಕದಲ್ಲೇ

ಇರುವ ಮಣ್ಣನ್ನು ತೆಗೆದು ಒಂದು ಸೆಂಟರಿ ಕಟ್ಟಿದರೆ ಸಾಕು ಬ್ರಿಡ್ಜ್ ಆಗುತ್ತದೆ, ಆದುದರಿಂದ ಮಾನ್ಯ ಸಚಿವರು ಇದರ ಬಗ್ಗೆಯೂ ಗಮನಹರಿಸಿ ಕೂಡಲೇ ಈ ಕೆಲಸಗಳನ್ನು ತೆಗೆದುಕೊಂಡು ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಒಂದೆರಡು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಏನೆಂದರೆ ಇದು ಲೋಕೋಪಯೋಗಿ ಇಲಾಖೆಗೆ ಒಳಪಡುತ್ತದೆ. ಈಗ ಅನೇಕ ಶಾಲೆಗಳನ್ನು ಏನು ಕಟ್ಟಿದ್ದಾರೆ ಅಲ್ಲಿ ಕೆಲವು ಕಟ್ಟಡಗಳು ಬಿದ್ದು ಹೋಗುವ ಪರಿಸ್ಥಿತಿಯಲ್ಲಿ ಇವೆ. ಇದರ ಬಗ್ಗೆ ಯಾರನ್ನು ಕೇಳಬೇಕೋ ಏನೋ ಗೊತ್ತಿಲ್ಲ. ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ನಮ್ಮ ಹತ್ತಿರ ಹಣ ಇಲ್ಲ ಎಂದು ಹೇಳುತ್ತಾರೆ. ಇದರ ರಿಪೇರಿಗೆ ತಾವು ಅಲ್ಪಸ್ವಲ್ಪ ಹಣ ಕೊಟ್ಟಿದ್ದೀರೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಮಧ್ಯದಲ್ಲಿ ಆ ಕಟ್ಟಡ ಏನಾದರೂ ಬಿದ್ದು ಹೋದರೆ ಆವಾಗ ಹೀಗಾಗಬಾರದಾಗಿತ್ತು, ಮುಂಚೆಯೇ ಮಾಡಬಹುದಾಗಿತ್ತು ಎಂದು ಹೇಳುತ್ತೀರಿ. ಆದುದರಿಂದ ಇದರ ಬಗ್ಗೆ ಸಹ ಮಾನ್ಯ ಸಚಿವರು ಕೂಡಲೇ ಗಮನಹರಿಸಿ ಹೆಚ್ಚು ಹಣ ಕೊಟ್ಟು ಆ ಶಾಲೆಗಳ ದುರಸ್ತಿ ಕೆಲಸವನ್ನು ಕೂಡಲೇ ಕೈಗೊಳ್ಳಬೇಕು ಎಂದು ಹೇಳುತ್ತೇನೆ.

೧-೦೦ ಪಿ. ಎಂ.

ಮತ್ತೆ ಸೇತುವೆಗಳ ವಿಚಾರ. ಸೇತುವೆಗಳ ನಿರ್ಮಾಣ ಮಾಡಿರುವುದರ ಬಗ್ಗೆ, ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಅದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಹತ್ತು ವರ್ಷಗಳಲ್ಲಿ ಸುಮಾರು ೨೦೬ ಸೇತುವೆಗಳನ್ನು ಮಾಡಿದ್ದೇವೆಂದು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಒಟ್ಟು ೯೦೯ ಸೇತುವೆಗಳು ಇವೆ ಇದುದರಿಂದ ಇವೆಲ್ಲಾ ಬಹಳ ಕಡಿಮೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಇವತ್ತು ತಾವು ಮುಂದೆ ಬಂದಿದ್ದೀರಿ ಅಂತಹ ಕಡೆ ಸೇತುವೆಗಳನ್ನು ಜಾಗ್ರತೆಯಾಗಿ ಮಾಡಬೇಕು. ಏತಕ್ಕೆಂದರೆ ಅವರೆಲ್ಲಾ ಬಸ್ಸಿನಲ್ಲಿ ಹೋಗುವವರಲ್ಲ. ಎತ್ತಿನ ಗಾಡಿಗಳಲ್ಲಿ ಹೋಗತಕ್ಕವರು. ಎತ್ತಿನಗಾಡಿಗಳಲ್ಲಿ ಅವರು ಬೆಳೆದಂಥ ಪದಾರ್ಥಗಳನ್ನು ಹಾಕಿಕೊಂಡು ಬರುವಾಗ, ಪ್ರಾಣಿಗಳಿಗೆ ಆಗತಕ್ಕಂಥ ಹಿಂಸೆಯನ್ನು ತಪ್ಪಿಸುವುದಕ್ಕೆ ಸರಕಾರ ಗಮನಹರಿಸಬೇಕು. ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾಗಿದೆ, ಆದರೆ ನನಗೆ ಕಾಲಾವಕಾಶ ಕಡಿಮೆ ಕೊಟ್ಟಿರುವುದರಿಂದ ನಮ್ಮ ಪಿ.ಡಬ್ಲ್ಯು.ಡಿ. ಅಂದರೆ ಲೋಕೋಪಯೋಗಿ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಮಾನ್ಯ ಸಚಿವರಿಗೆ ಎಲ್ಲಾ ವಿಷಯವೂ ಗೊತ್ತಿದೆ. ಗೊತ್ತಿದ್ದರೂ ಒಂದು ವಿಷಯವನ್ನು ಈಗ ನಾನು ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ಕೆಲಸಗಾರರು, ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟ ಕಾರ್ಮಿಕರು ಲೋಕೋಪಯೋಗಿ ಇಲಾಖೆಯಲ್ಲಿ ಹತ್ತಾರು ವರ್ಷಗಳಿಂದ ದಿನಗೂಲಿ ಕೆಲಸ ಮಾಡುತ್ತಿದ್ದಾರೆ. ಅವರು ಪ್ರತಿವರ್ಷವೂ ಕೂಡಾ ಮಾನ್ಯ ಮಂತ್ರಿಗಳನ್ನು ಭೇಟಿ ಮಾಡುವುದು, ಮನವಿಗಳನ್ನು ಅರ್ಪಿಸುವುದು ಅಹವಾಲುಗಳನ್ನು ತಿಳಿಸುವುದು, ಖಾಯಂಗೊಳಿಸಿ ಎಂದು ಕೇಳಿಕೊಳ್ಳುವುದು ನಡೆದಿದೆ. ಅವರು ಬೇರೇನೂ ಕೇಳುವುದಿಲ್ಲ. ಸರಕಾರಿ ನೌಕರರು ಇವತ್ತು ಗೋಡೆಗಳ ಮಧ್ಯೆ ಕೆಲಸ ಮಾಡಬಹುದು, ನಾವು ರಸ್ತೆಗಳಲ್ಲಿ ಕೆಲಸ ಮಾಡುತ್ತೇವೆ ಅಥವಾ ಜಮೀನುಗಳಲ್ಲಿ ನೀರು ಬಿಟ್ಟುಕೊಂಡು ಕೆಲಸ ಮಾಡುತ್ತೇವೆ. ಬಯಲಿನಲ್ಲಿ ಕೆಲಸ ಮಾಡುತ್ತೇವೆ. ನಾವು ಇವತ್ತು ಸರಕಾರಕ್ಕೆ ಬೇಕಾದಷ್ಟು ಕೆಲಸ ಮಾಡಿಕೊಟ್ಟಿರುವುದರಿಂದ ನಮ್ಮ ಬಗ್ಗೆ ಸರಕಾರಕ್ಕೆ ಏಕೆ ಕನಿಕರ ಇಲ್ಲ ಎಂದು ಕೇಳುತ್ತಿದ್ದಾರೆ. ಹಿಂದಿನ ಸರಕಾರಕ್ಕೆ ಕನಿಕರ ಇರಲಿಲ್ಲ ಸರಿ, ಆದರೆ ಈ ಸರಕಾರಕ್ಕೆ ಏಕೆ ನಮ್ಮ ಮೇಲೆ ಕನಿಕರ ಇಲ್ಲ ಎಂದು ಕೇಳುತ್ತಿದ್ದಾರೆ. ನಮ್ಮ ಸಚಿವರು ಅನೇಕ ಜನರನ್ನು ಖಾಯಂಗೊಳಿಸಿದ್ದೇವೆಂದು ಹೇಳಿದರು. ಆದರೆ ನೀರಾವರಿಯಲ್ಲಿ ಕೆಲಸ ಮಾಡತಕ್ಕ ಕೆಲಸಗಾರರಿಗೆ ಖಾಯಂಗೊಳಿಸತಕ್ಕ ಯೋಜನೆ ಮಾಡಲಿ ಅಥವಾ ಅವರು ಅದನ್ನು ಮಾಡಿದ್ದರೆ ಸಂತೋಷ, ಇವತ್ತು ನೀರಾವರಿಯಲ್ಲಾಗಲೀ, ರಸ್ತೆಗಳಲ್ಲಾಗಲೀ ಮತ್ತಿತರ ಯಾವುದೇ ಭಾಗದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿಯ ಮೇಲೆ ಕೆಲಸ ಮಾಡತಕ್ಕಂಥ ಕೆಲಸಗಾರರಿದ್ದಾರೆ, ಅವರ ಸೇವೆಯನ್ನು ಖಾಯಂಗೊಳಿಸಿ, ಅವರಿಗೆ ಇತರೆ ಸರಕಾರಿ ನೌಕರರಿಗೆ ಸಿಗುತ್ತಿರುವ ಸವಲತ್ತುಗಳನ್ನು ಒದಗಿಸಿ ಕೊಡುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ, ಈ ದಿವಸ ನಮ್ಮ ಲೋಕೋಪಯೋಗಿ ಇಲಾಖೆಯವರು ಮತ್ತು ಸಣ್ಣ ನೀರಾವರಿ ಸಚಿವರು ಮಂಡಿಸಿರತಕ್ಕಂಥ ಈ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ, ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಡಿ. ಚೌಡಯ್ಯ (ಕೆರೆಗೋಡು).—ಸನ್ಮಾನ್ಯ ಸಭಾಧ್ಯಕ್ಷರೇ, ಇಂದು ನಮ್ಮ ಮುಂದಿರತಕ್ಕಂಥ ಬೇಡಿಕೆಗಳು ಏನಿವೆ, ಅವುಗಳ ವಿಷಯದಲ್ಲಿ ಹೇಳಬೇಕಾದುದು ಬಹಳ ಇದೆ. ಪ್ರತಿಯೊಂದು ಡಿಮ್ಯಾಂಡ್‌ಗೂ ಕೂಡಾ ಅರ್ಧಗಂಟೆ ಎಂದರೆ, ಕನಿಷ್ಠ ಪಕ್ಷ ಮೂರು ಗಂಟೆಬೇಕು. ಆದರೆ ತಾವು ಕಾಲಮಿತಿಯನ್ನು ಗೊತ್ತುಪಡಿಸಿರತಕ್ಕ ಕಾರಣ, ನಾನು ಅದಕ್ಕೆ ವಿರೋಧವಾಗಿ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ತಮ್ಮ ಅಣತಿ ಏನಿದೆ ಅದಕ್ಕೆ ತಲೆಬಾಗಿ ತಾವು ಕೊಟ್ಟ ಸಮಯದಲ್ಲಿ ಕೆಲವಾರು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಪ್ರಥಮವಾಗಿ ಸಣ್ಣ ನೀರಾವರಿ ಬೇಡಿಕೆ. ಇದರಲ್ಲಿ ಸೂಕ್ಷ್ಮವಾಗಿ ಹೇಳುವುದಾದರೆ, ಮಾನ್ಯ ಒಡೆಯರಾಜ್ ಅವರು ಮಾತನಾಡತಕ್ಕ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ರಾಜ್ಯದಲ್ಲಿ ಶೇಕಡಾ ೭೫ ಭಾಗ ಪದೇ ಪದೇ, ವರ್ಷೇ ವರ್ಷೇ ಕ್ಷಾಮದ ಬವಣೆಗೆ ತುತ್ತಾಗುತ್ತಿವೆ. ಅಲ್ಲಿ ಹೆಚ್ಚು ಸಣ್ಣ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಂಡು, ಒಂದು ಖಾಯಂ ಪರಿಹಾರ ದೊರಕಿಸಿಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಸೂಚನೆ ಮಾಡಿದರು. ಅವರು ಮಾತನಾಡಿದ್ದನ್ನು ನಾನು ಬೆಂಬಲಿಸುತ್ತೇನೆ. ಆದರೆ ಈ ಕಾಮಗಾರಿಗಳನ್ನು ಮಂಜೂರು ಮಾಡತಕ್ಕ ಸಂದರ್ಭದಲ್ಲಿ ನಾವು ಕಳೆದ ೩೦ ವರ್ಷದಿಂದಲೂ ಕೂಡಾ ಕೆಲವು ಎಡರುತೊಡರುಗಳನ್ನು ಅನುಭವಿಸಿಕೊಂಡು ಬಂದಿದ್ದೇವೆ. ಮಾನ್ಯ ಸಚಿವರಿಗೆ ಗೊತ್ತಿದ್ದ ಹಾಗೆ, ಕೆಲವು ವರ್ಷಗಳ ಹಿಂದೆ, ಸಣ್ಣ ನೀರಾವರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಕೊಡಬೇಕಾದರೆ ಒಂದು ಎಕರೆಗೆ ಎಷ್ಟು ಖರ್ಚಾಗುತ್ತದೆ, ಆಕಾಸ್ಟ್ ಪ್ರಕಾರ ಎಂದು ಕನ್‌ಸಿಡರ್ ಮಾಡುತ್ತಿದ್ದರು. ಇತ್ತೀಚಿನ ಧೋರಣೆ ಪ್ರಕಾರ ಈಗ ಬಿ.ಸಿ. ರೇಶಿಯೋ ಎಂದು ಹೇಳಿ, ತಾಂತ್ರಿಕವಾಗಿ ಎರಡು ಪರ್ಸೆಂಟ್ ವರ್ಕ್‌ಔಟ್ ಆಗಬೇಕೆಂದು ಹಣಕಾಸಿನ ದೃಷ್ಟಿಯಿಂದ ಅನುಸರಿಸಿಕೊಂಡು ಬರುತ್ತಿದ್ದಾರೆ. ಇದು ಕಳೆದ ೫–೬ ವರ್ಷಗಳಿಂದ ಇದೆ. ಹೋದ ವರ್ಷ ಬಿ.ಸಿ. ರೇಶಿಯೋ ಕಡಿಮೆ ಮಾಡಿ ಎಂದು ನಾನು ಕೇಳಿಕೊಂಡಿದ್ದೆ. ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡೋಣ ಎಂದು ಹೇಳಿದರು. ಆದರೆ ಅದನ್ನು ಕಡಿಮೆ ಮಾಡುವುದಕ್ಕೆ ಕ್ರಮ ಕೈಗೊಂಡಿಲ್ಲ. ನನ್ನ ಕ್ಷೇತ್ರದಲ್ಲಿ ಕೆರೆ ಕಟ್ಟಬೇಕಾದುದು ಯಾವುದೂ ಇಲ್ಲ. ನನ್ನ ಕ್ಷೇತ್ರದ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿಲ್ಲ. ಆದರೆ ರಾಜ್ಯದಲ್ಲಿರತಕ್ಕಂಥ ಶೇಕಡಾ ೭೫ ಭಾಗ ಕ್ಷಾಮಪೀಡಿತ ಪ್ರದೇಶ ಏನು ಇದೆ, ಅಲ್ಲಿರತಕ್ಕ ರೈತರಿಗೆ ಬಡ ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕಾದರೆ ದಯಮಾಡಿ ಎರಡು ಪರ್ಸೆಂಟ್ ಬಿ.ಸಿ. ರೇಶಿಯೋ ಏನಿದೆ ಅದನ್ನು ಕನಿಷ್ಠ ಪಕ್ಷ ಒಂದೂವರೆ ಪರ್ಸೆಂಟೇಜ್‌ಗಾದರೂ ಇಳಿಸಬೇಕು. ನಾನು ಈ ಮಾತನ್ನು ಬಹಳ ವರ್ಷಗಳ ಹಿಂದೆ ಅಧಿಕಾರಿಗಳ ಗಮನಕ್ಕೆ, ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದಕ್ಕೆ ನಿಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟಿನವರು [illegible] ಬಂದಿದ್ದಾರೆ ಎಂದು ತಿಳಿದು ಬಂದಿದೆ. ಸರಕಾರ ಅಥವಾ ಸರ್ಕಾರದ [illegible] ಇರತಕ್ಕಂಥ [illegible] ಮಂತ್ರಿಗಳು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಅಧೀನರೋ ಅಥವಾ ಹಣಕಾಸಿನ ಇಲಾಖೆ ಮಂತ್ರಿಮಂಡಲಕ್ಕೆ, ಸರ್ಕಾರಕ್ಕೆ ಅಧೀನವೋ ಎಂಬ ಸಂಶಯ ಇದೊಂದರಲ್ಲೇ ಅಲ್ಲ, ಎಲ್ಲಾ ವಿಷಯಗಳಲ್ಲಿ ಕಂಡು ಬರುತ್ತಿದೆ. ದಯಮಾಡಿ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಹೆಚ್ಚು ಗಮನಹರಿಸಬೇಕೆಂದು [illegible] ಪಡುತ್ತೇನೆ.

ಸ್ವಾಮಿ, ಸ್ವಾತಂತ್ರ್ಯ [illegible] ಅಸ್ತಿತ್ವಕ್ಕೆ ಬಂದಮೇಲೆ [illegible] ಬರತಕ್ಕ ಕೆರೆಕಟ್ಟೆಗಳು [illegible] ಮಾಡಿಕೊಂಡು ಬಂದಿವೆ ಮತ್ತು ಹೊಸದಾಗಿ [illegible] ಮಾಡಿಕೊಂಡು ಬಂದಿದ್ದಾರೆ ಮತ್ತು ಇದರ ಜೊತೆಗೆ ನಾವು [illegible] ಯೋಜನೆಗಳಿಂದ ಅನೇಕ ಕೆರೆಕಟ್ಟೆಗಳು ರಾಜ್ಯದಲ್ಲಿ ನಿರ್ಮಾಣವಾಗಿವೆ. [illegible] ಅಚ್ಚುಕಟ್ಟು ಇರತಕ್ಕದ್ದು. [illegible] ಮಾಡಿಕೊಂಡು ಬಂದಿದ್ದಾರೆ. ನನ್ನ ಅನುಭವದಲ್ಲಿ [illegible] ಸಮೀಕ್ಷೆ ನಡೆದಿಲ್ಲ. ಈಗ ಏನಾಗಿದೆ ಎಂದರೆ, [illegible] ಎಕರೆವರೆಗೂ ಕೂಡಾ ಕೆಲವು ಕಾಮಗಾರಿಗಳು [illegible] ಕೇಳಿದರೆ ಹೇಳುತ್ತಾರೆ, ಅದು [illegible] ಬರುತ್ತದೆ ಎಂದು [illegible] ಇಲ್ಲ ಎಂದು ಹೇಳುತ್ತಾರೆ. ಇದನ್ನು ಸರಕಾರದ ಗಮನಕ್ಕೆ [illegible] ಅನೇಕ ಸಲ ವೈಯಕ್ತಿಕವಾಗಿ ತಂದಿದ್ದೇನೆ, ಅನೇಕಬಾರಿ

ಮಂತ್ರಿಗಳಿಗೆ ಖಾಸಗಿಯಾಗಿ ಹೇಳಿದ್ದೇನೆ. ಇದ ಬಗ್ಗೆ ಯಾವ ಒಂದು ಕ್ರಮವನ್ನೂ ಇವರು ಕೈಗೊಂಡಿಲ್ಲ. ಇದು ಸಾರ್ವತ್ರಿಕ ವಿಷಯವಾದುದರಿಂದ, ದಯವಿಟ್ಟು ತಾವು ತಮ್ಮ ಅಧಿಕಾರಿಗಳಿಗೆ, ತಾಲ್ಲೂಕ್ ಬೋರ್ಡ್ ಅಧಿಕಾರಿಗಳಿಗೆ ಆದೇಶಗಳನ್ನು ಕೊಟ್ಟು ಒಂದು ಸರ್ವೆ ನಡೆಸಿ ಹತ್ತು ಎಕರೆಗೆ ಮೇಲ್ಪಟ್ಟು ಅಚ್ಚುಕಟ್ಟು ಯಾವುದು ಬರುತ್ತದೆ ಅದನ್ನು ಸಾರ್ವತ್ರಿಕವಾಗಿ, ರಸ್ತೆಗಳನ್ನು ಟೇಕನ್ ಓವರ್ ಎಂದು ತೆಗೆದುಕೊಳ್ಳುತ್ತೀರಲ್ಲ, ಆ ರೀತಿ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಇನ್ನೂ ಸಣ್ಣ ನೀರಾವರಿ ಕೆರೆಗಳು ಏನಿವೆ, ಆ ಕೆರೆಗಳಲ್ಲಿ ನೀರು ಶೇಖರಣೆ ಆಗತಕ್ಕದ್ದು ಬಹಳ ಅಪರೂಪ. ಮಳೆಗಾಲ ಆದರೆ ಮಾತ್ರ ಉಂಟು, ಇಲ್ಲದೇ ಹೋದರೆ ಇಲ್ಲ. ಮಳೆಗಾಲದಲ್ಲಿ ಕೆರೆಗೆ ನೀರು ಬಂದಾಗ ಏನಾಗುತ್ತದೆ ಎಂದರೆ ಕೆಲವಾರು ಹಳ್ಳಿಗಳಲ್ಲಿ ಪಾರ್ಟಿಗಳು ಇರುತ್ತವೆ, ನಮ್ಮ ರೈತರಲ್ಲಿ ಒಬ್ಬ ಹೋಗಿ ಕೆರೆ ತೂಬನ್ನು ಎತ್ತಿಬಿಡುತ್ತಾನೆ. ಟೈಲ್ ಎಂಡನಲ್ಲಿರತಕ್ಕವನಿಗೆ ನೀರುಬೇಕು ಆದರೆ ಮೊದಲನೆಯವನಿಗೆ ಬೇಕಿರುವುದಿಲ್ಲ ಆದರೆ ಅವನು ಹೋಗಿ ತೂಬನ್ನು ಎತ್ತಿಬಿಡುತ್ತಾನೆ ಇದರಿಂದಾಗಿ ಎಷ್ಟೋ ಸಲ ಹೊಡೆದಾಟಗಳಾಗಿ, ಕ್ರಿಮಿನಲ್ ಕೇಸಾಗಿರತಕ್ಕದ್ದು ಇಲಾಖೆಯ ಅಧಿಕಾರಿಗಳಿಗೊಗೊತ್ತಿದೆ. ಅಲ್ಲಿ ಸವಡಿಗಳನ್ನು ನೇಮಕ ಮಾಡತಕ್ಕ ವಿಚಾರದಲ್ಲಿ ೨೫೦ ಎಕರೆಗೆ ೩೦೦ ಎಕರೆಗೆ ಮಾತ್ರ ಪ್ರಾವಿಷನ್ ಇದೆ, ೫೦, ೭೦ ಎಕರೆಗೆ ಪ್ರಾವಿಷನ್ ಇಲ್ಲ ಎಂಬ ಮಾತನ್ನು ಹೇಳಿದರು. ಅದಕ್ಕೆ ನಾನು ಈ ಸಂದರ್ಭದಲ್ಲಿ ತಮಗೆ ಸಲಹೆ ಕೊಡತಕ್ಕದ್ದು, ೫೦ ಎಕರೆ, ೧೨೦ ಎಕರೆ, ೧೫೦ ಎಕರೆಗೆ ಮೂರು ನಾಲ್ಕು ಕೆರೆಗಳಿಗೆ ಅಕ್ಕಪಕ್ಕದಲ್ಲಿರುವ ಕೆರೆಗಳಿಗೆ ಸವಡಿಗಳನ್ನು ನೇಮಕ ಮಾಡಿ ಹೊಸದಾಗಿ ನೇಮಕ ಮಾಡಿ ಎಂದು ಹೇಳುತ್ತಿಲ್ಲ. ಎನ್.ಎಮ್.ಆರ್ ನಲ್ಲಿ ಕೆಲಸ ಮಾಡತಕ್ಕವರನ್ನು ನೇಮಕ ಮಾಡಿ, ಅವರಿಗೆ ಕೆಲಸವೇ ಇಲ್ಲ.

ಎಕ್ಸಿಕ್ಯೂಟೀವ್ ಇಂಜನಿಯರ್ ಮತ್ತು ಸೂಪರಿಂಟೆಂಡೆಂಟ್ ಇಂಜನಿಯರ್‌ರವರನ್ನು ನನ್ನ ಕ್ಷೇತ್ರಕ್ಕೆ ಕರೆದುಕೊಂಡು ಹೋದಾಗ ಹೇಳಿದ್ದೇನೆ. ಎನ್.ಎಂ.ಆರ್.ನಲ್ಲಿ ಕೆಲಸಗಾರರು ಇದ್ದಾರೆ, ಅವರಿಗೆ ಕೆಲಸ ಇಲ್ಲ, ಮೂರು ತಿಂಗಳು ನನ್ನ ಕೈಗೆ ಕೊಡಿ ಅವರಿಂದ ಕೆಲಸ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಇರತಕ್ಕ ಸಿಬ್ಬಂದಿಗೆ ಕೆಲಸವನ್ನು ಹಂಚಿಹಾಕಿ ಅಪರೂಪಕ್ಕೆ ಶೇಖರಣೆಯಾಗತಕ್ಕ ನೀರನ್ನು ಸದುಪಯೋಗ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಈ ಒಂದು ಸ್ಥಳದಲ್ಲಿರತಕ್ಕ ಜೂನಿಯರ್ ಇಂಜನಿಯರುಗಳು ಅಸಿಸ್ಟೆಂಟ್ ಇಂಜನಿಯರುಗಳನ್ನು ಹೊಣೆಗಾರರನ್ನಾಗಿ ಮಾಡಬೇಕೆಂದು ಹೇಳುತ್ತೇನೆ. ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ಮಾತನಾಡಬೇಕಾದರೆ ಬಹಳ ಕಾಲ ಬೇಕು. ಆದರೂ ಕೂಡ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕೆಲವು ದಿವಸಗಳ ಹಿಂದೆ ಮಾನ್ಯ ಮಂತ್ರಿಯವರು ಮೇಲ್ಮನೆಯಲ್ಲಿ ಗಮನಸೆಳೆಯುವ ಸೂಚನೆಗೆ ಉತ್ತರ ಕೊಡುತ್ತಾ ಒಂದು ಮಾತನ್ನು ಹೇಳಿದ್ದಾರೆ. ರಾಜ್ಯದಲ್ಲಿ ಈಗ ಕೈಗೆ ಎತ್ತಿಕೊಂಡಿರತಕ್ಕ ಯೋಜನೆಗಳನ್ನು ಮುಗಿಸಬೇಕಾದರೆ ಸುಮಾರು ೩೦೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದಾರೆ. ನಾವುಗಳು ಅಂದಾಜು ಸಮಿತಿಯಲ್ಲಿ ಪ್ರವಾಸ ಹೋಗಿ ಯೋಜನೆಗಳನ್ನು ಸಮೀಕ್ಷೆ ಮಾಡಿದಾಗ ಗೊತ್ತಾಯಿತು. ಮಾನ್ಯ ಮಂತ್ರಿಯವರು ಹೇಳಿದಂತೆ, ಸುಮಾರು ೨೦೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ೧೯೮೩-೮೪ನೇ ಇಸವಿಯ ಎಸ್.ಆರ್. ಪ್ರಕಾರ ೨೦೦೦ ಕೋಟಿಯಾಗುತ್ತದೆ. ೧೯೮೪-೮೫ನೇ ಎಸ್.ಆರ್. ತೆಗೆದುಕೊಂಡರೆ. ೨೨೫೦ ಕೋಟಿಯಾಗಬಹುದು, ೩೩೦೦ ಕೋಟಿಯಾಗಬಹುದು, ಎಸ್ಕಲೇಷನ್ ವರ್ಷೇ ವರ್ಷೇ ಹೆಚ್ಚಾಗುತ್ತದೆ ಇದರಿಂದ ಕಾಮಗಾರಿಗಳು ಸ್ಥಗಿತಗೊಂಡು ೧೦ ವರ್ಷಗಳಲ್ಲಿ ಆಗತಕ್ಕ ಕೆಲಸಗಳು ೫೦-೬೦ ವರ್ಷ ತೆಗೆದುಕೊಳ್ಳಬಹುದು. ಎರಡು ವರ್ಷದಲ್ಲಿ ಆಗತಕ್ಕ ಕೆಲಸಗಳು ೨೦ ವರ್ಷ ತೆಗೆದು ಕೊಳ್ಳಬಹುದು. ಇದು, ಇವತ್ತು ನಾವು ಎದುರಿಸತಕ್ಕ ದೊಡ್ಡ ಪತ್ರು ಎಂದು ಹೇಳಬೇಕಾಗುತ್ತದೆ. ಇವತ್ತು, ನಿರ್ದಿಷ್ಟವಾದ ಅವಧಿಯಲ್ಲಿ ಮುಗಿಸತಕ್ಕ ವ್ಯವಸ್ಥೆಯನ್ನು ಮಾಡಲೇಬೇಕಾಗಿದೆ, ಆಂಧ್ರಸರ್ಕಾರದವರು ನಾಗಾರ್ಜುನ ಸಾಗರ ಕಟ್ಟಬೇಕಾದರೆ, ನಮ್ಮ ಹಾಗೆ ಆಗಿದ್ದರೆ ಕಟ್ಟುತ್ತಿದ್ದಕ್ಕೆ ಆಗುತ್ತಿರಲಿಲ್ಲ. ಪಕ್ಷಬೇಧವಿಲ್ಲದೆ, ಯೋಜನೆಗಳನ್ನು ಮುಗಿಸುವ ವಿಚಾರದಲ್ಲಿ ಎಲ್ಲಾ ಪಕ್ಷದವರೊಡನೆ ಸಮಾಲೋಚನೆ ಮಾಡಿ ಸರ್ಕಾರದವರು ಕಾರ್ಯಕ್ರಮಗಳನ್ನು ಹಾಕಿಕೊಳ್ಳದೇ ಹೋದರೆ. ಇದಕ್ಕೆ ಮುಕ್ತಿ ಇಲ್ಲ, ಇದರಿಂದ ಪಾರಾಗುವುದಕ್ಕೆ ಸಾಧ್ಯವಿಲ್ಲ. ಪ್ರತಿವರ್ಷವೂ ಸಾಲದ ಹೊರೆ ಜಾಸ್ತಿಯಾದಂತೆ ಇದು ಕೂಡ ಬೆಳೆದುಕೊಂಡು ಹೋಗುವುದರಿಂದ ಮಾನ್ಯ ಮಂತ್ರಿಯವರು ಇದರ ಕಡೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಯೋಜನೆಗಳಿಗೆ ಕೊಟ್ಟಿರತಕ್ಕ ಹಣ ಕೂಡ ಖರ್ಚಾಗುತ್ತಿಲ್ಲ. ಮೊನ್ನೆ ಶನಿವಾರ ನಾನು ಮೈಸೂರಿಗೆ ಹೋಗಿದ್ದೆ. ಅಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸಿಗೂ ಮತ್ತು ಚೀಫ್ ಇಂಜಿನಿಯರ್ ರವರ ಆಫೀಸಿಗೂ ಹೋಗಿ ಬಹುಶಃ ಸೋಮವಾರವವಗೆ ಅಧ್ಯಕ್ಷರು ಲೋಕೋಪಯೋಗಿ ಇಲಾಖೆಯ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಾರೆ, ಆದುದರಿಂದನನಗೆ ಕೃಷ್ಣರಾಜ ಸಾಗರ ಎಡದಂಡೆ ಮತ್ತು ಬಲದಂಡೆ ನಾಲೆಯ ಫಿಸಿಕಲ್ ಮತ್ತು ಫೈನಾನ್ಷಿಯಲ್ ಪ್ರೋಗ್ರೆಸ್ ಕೊಡಿ ಎಂದು ಕೇಳಿದೆ ಅದರ ಪ್ರಕಾರವಾಗಿ ಕಳೆದ ೩-೪ ವರ್ಷಗಳಿಂದ ಇಲ್ಲಿಯವರೆಗೆ ಖರ್ಚು ಮಾಡಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಎಡದಂಡೆ ನಾಲೆಗೆ ವರ್ಷಕ್ಕೆ ೨ ಕೋಟಿ ರೂಗಳನ್ನು ಖರ್ಚು ಮಾಡಬೇಕೆಂದು ಯೋಜನೆ ಮಾಡಿದ್ದರೆ, ತಿಂಗಳಿಗೆ ೧೦ ಲಕ್ಷದಂತೆ ಖರ್ಚು ಮಾಡಿದ್ದಾರೆ ಅದೇರೀತಿ ಬಲದಂಡೆ ನಾಲೆಗೆ ೧.೨ ಲಕ್ಷ ಖರ್ಚು ಮಾಡಿದ್ದಾರೆ, ಉಳಿದ ಹಣ ಲ್ಯಾಪ್ಸ್ ಆಗಿದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ಹಣವನ್ನು ಖರ್ಚು ಮಾಡುವವರು ಯಾರು? ಅಧಿಕಾರಿಗಳು ಖರ್ಚು ಮಾಡಬೇಕು. ಇದರ ಬಗ್ಗೆ ಒಂದು ಶಿಸ್ತು ಸಂಹಿತೆ ಮಾಡದೇ ಹೋದರೆ ಕಷ್ಟವಾಗುತ್ತದೆ. ಇವತ್ತು ಹಣ ಸಂಗ್ರಹ ಮಾಡುವಂತಾದ್ದು, ಪತ್ತೆ ಮಾಡುವಂತಾದ್ದು ಕಷ್ಟವಾಗಿರುವಾಗ ಕೊಟ್ಟಂತ ಹಣವನ್ನು ಖರ್ಚು ಮಾಡದೇ ಹೋದರೆ ಇದಕ್ಕೆ ಜವಾಬ್ದಾರರು ಯಾರು? ಇದಕ್ಕೆ ಶಾಸಕರು ಜವಾಬ್ದಾರರೇ? ಜನಗಳು ಜವಾಬ್ದಾರರೇ ಅಧಿಕಾರಿಗಳು ಜವಾಬ್ದಾರರೇ ಎಂಬುದನ್ನು ನೋಡಬೇಕು. ಇದರ ಹೊಣೆಗಾರಿಕೆಯನ್ನು ಗೊತ್ತು ಮಾಡಬೇಕು. ಇದು ಏನಾಗಿದೆ ಅಂದರೆ ಕಾಸುಕೊಟ್ಟು ರೋಗ ತಂದುಕೊಂಡಂತಾಗಿದೆ ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಶೀಘ್ರ ಗಮನಕೊಡಬೇಕೆಂದು ಹೇಳುತ್ತೇನೆ. ಇನ್ನು ಏತ ನೀರಾವರಿ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕಳೆದ ಎರಡೂವರೆ ವರ್ಷಗಳಲ್ಲಿ ಒಂದು ಹೊಸ ಯೋಜನೆಯನ್ನೂ ಮಂಜೂರೂ ಮಾಡಿಲ್ಲ. ನಮ್ಮ ಸರ್ಕಾರ ಇದ್ದಾಗಲೂ ಅಷ್ಟೇ ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಒಂದು ಯೋಜನೆಗೆ ೨.೬೬ ಸಾವಿರ ರೂಪಾಯಿ ಮಂಜೂರಾಗಿಲ್ಲ. ಇದರಿಂದ ತೊಂದರೆಯಾಗುವುದು ಜನತೆಗೆ ನಷ್ಟವಾಗುವುದು ಜನತೆಗೆ ಸದ್ಯಕ್ಕೆ ಚುನಾವಣೆ ಇಲ್ಲ, ಆದರೂ ದೇಶದ ಉತ್ಪಾದನೆಯ ಗತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಹಿಂದಿನ ಮುಖ್ಯಮಂತ್ರಿಯವರು ನನ್ನ ಮನವಿ ಮೇಲೆ ಬರೆದಿದ್ದರೂ ಅಡಿಷನಲ್ ಕಾರ್ಯದರ್ಶಿಯವರೂ, ಹಣಕಾಸಿನ ಇಲಾಖೆಯ ಕಾರ್ಯದರ್ಶಿಯವರು ಹಾಗೂ ಅಭಿವೃದ್ಧಿ ಕಮೀಷನರ್ ರವರು ಕ್ರಮ ತೆಗೆದುಕೊಳ್ಳದೇ ಹಾಗೆ ಇಟ್ಟಿದ್ದಾರೆ. ಮಂತ್ರಿಮಂಡಲ ತೀರ್ಮಾನ ಕೈಗೊಂಡರೂ ಅಧಿಕಾರಿಗಳು ಏತಕ್ಕೆ ಹೀಗೆ ವರ್ತನೆ ಮಾಡುತ್ತಾರೋ ಗೊತ್ತಿಲ್ಲ. ಕಳೆದ ಎರಡೂವರೆ ವರ್ಷಗಳಿಂದ ಹಾಗೆಯೇ ಇಟ್ಟಿದ್ದಾರೆ ಸಹಕಾರ ಸಂಘ ಮಾಡಿಕೊಂಡರೆ, ಸಾಲ ಕೊಡಿಸುತ್ತಾರಂತೆ, ಇವರ ಗ್ಯಾರಂಟಿ ಏನೂ ಬೇಕಾಗಿಲ್ಲ. ಇವತ್ತು ರಾಜ್ಯದಲ್ಲಿರತಕ್ಕ ಸಹಕಾರ ಸಂಘಗಳ ಪೈಕಿ ೯೯ ಭಾಗದಷ್ಟು ಡೀಫಂಕ್ಟ್ ಆಗಿ ನಿಂತು ಹೋಗಿವೆ. ಸರ್ಕಾರ ತಪ್ಪು ಹೊಣೆಗಾರಿಕೆಯಿಂದ ಇಂಥ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿಕೊಂಡು ಬಂದಿದ್ದೇವೆ. ಈಗ ಮಾನ್ಯ ಮಂತ್ರಿಯವರು ತೀರ್ಮಾನಕ್ಕೆ ಬಂದಿದ್ದಾರೆಂದು ಕಾಣುತ್ತದೆ. ಲಿಫ್ಟ್ ಇರಿಗೇಷನ್ ಇರಲಿ, ಮೈನರ್ ಇರಿಗೇಷನ್ ಇರಲಿ, ಮೇಜರ್ ಇರಿಗೇಷನ್ ಇರಲಿ ರೈತರಿಗೆ ಸಹಾಯ ಮಾಡುವಂಥ ತೀರ್ಮಾನವನ್ನು ಕೈಗೊಳ್ಳಬೇಕು ಇವತ್ತು ಸರ್ಕಾರದ ಅಧಿಕಾರಿಗಳ ಬಗ್ಗೆ ಬೇಸರವಾಗುತ್ತಿದೆ. ಈ ವ್ಯವಹಾರದಲ್ಲಿ ಚೀಫ್ ಇಂಜಿನಿಯರ್‌ಗೆ ಬೆಲೆ ಇಲ್ಲ, ವಿಶೇಷ ಕಾರ್ಯದರ್ಶಿಯವರಿಗೆ ಬೆಲೆ ಇಲ್ಲ. ಅಡಿಷನಲ್ ಕಾರ್ಯದರ್ಶಿಯವರು, ಹಣಕಾಸಿನ ಕಾರ್ಯದರ್ಶಿಯವರು, ಹಾಗೂ ಡೆವಲಪ್‌ಮೆಂಟ್ ಕಮೀಷನರ್‌ರವರ ತೀರ್ಮಾನವೇ ಅಂತಿಮವಾಗಿದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಸೂಕ್ತ ಗಮನಹರಿಸಬೇಕೆಂದು ಹೇಳುತ್ತೇನೆ.

ಇನ್ನು ಹೇಮಾವತಿ ಯೋಜನೆಯ ಬಗ್ಗೆ ಹೇಳುವುದಾದರೆ ಈ ಸಾರಿ ಹೆಚ್ಚಿನ ಹಣವನ್ನು ಒದಗಿಸಿ ಕೊಟ್ಟಿದ್ದಾರೆ. ಸಾಕಷ್ಟು ಕೊಟ್ಟಿದ್ದಾರೆಂದು ನಾನು ಹೇಳುವುದಿಲ್ಲ. ತಮ್ಮ ಪರ್‌ಫಾರ್‌ಮೆನ್ಸ್ ಬಡ್ಜೆಟ್ಟಿನಲ್ಲಿ ನಿಗದಿ ಮಾಡಿದ್ದೀರಿ. ಎಡದಂಡೆ ನಾಲೆ ೧೫೧ ಕಿ.ಮೀ. ನಿಂದ ೧೮೧ನೇ ಕಿಲೋಮೀಟರ್ ವರೆಗೆ ಮೆಯಿನ್ ಎಸ್ಕಲೇಟ್ ಮಾಡಿದ್ದೀರಿ. ೧೮೧ ರಿಂದ ಮುಂದಕ್ಕೆ ಮುಳ್ಳುಕಟ್ಟೆ ವರೆಗೆ ಎರಡು ಡಿವಿಜನ್ ಬರುತ್ತೆ. ಒಂದು ಬಸರಾಳು ಹಾಗೂ ಒಂದು ನಾಗಮಂಗಲದಲ್ಲಿ ಎರಡು ಡಿವಿಷನ್‌ಗಳು ಇವೆ. ಆ ಡಿವಿಷನ್‌ಗಳಿಗೆ ಕೆಲಸವೇ ಇಲ್ಲ. ೧೮೨ಕ್ಕೆ ಏತಕ್ಕೆ ನಿಲ್ಲಿಸುತ್ತೀರಿ, ೨೧೦ ಕಿಲೋಮೀಟರ್‌ವರೆಗೆ

ಮೇಂಟೇಯಿನ್ ಎಸ್ಟಿಮೇಟ್ ಮಾಡುವುದಕ್ಕೆ ಏನು ತೊಂದರೆ ಇದೆ, ಇದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ರಸ್ತೆ ಮತ್ತು ಸೇತುವೆಗಳ ವಿಷಯದಲ್ಲಿ ವೈಯಕ್ತಿಕವಾಗಿ ನನಗೆ ಬಹಳ ತೊಂದರೆಯಾಗಿದೆ. ಹೋದ ಸಾರಿ ಕೂಡ ಮಾನ್ಯ ಮಂತ್ರಿಯವರ ಗಮನಕ್ಕೆ ತಂದಿದ್ದೆ, ಮಾನ್ಯ ಮಂತ್ರಿಗಳು ಸರಿಪಡಿಸುತ್ತೇನೆಂದು ಹೇಳಿದ್ದರೂ ಸರಿಪಡಿಸಿಲ್ಲ, ಈ ಸಾರಿ ಕೂಡ ಅದೇ ಅನ್ಯಾಯವಾಗಿದೆ. ಮಾನ್ಯ ಒಡೆಯ ರಾಜ್‌ರವರು ಹೇಳಿದಹಾಗೆ ರಾಜಕೀಯ ದುರುದ್ದೇಶದಿಂದ ಮಾಡಿದ್ದರೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ರಸ್ತೆಯಮೇಲೆ ಎಲ್ಲರೂ ಓಡಾಡುತ್ತಾರೆ.

ಅಧ್ಯಕ್ಷರು.—ನನ್ನ ದೂರು ಇದೆ.

ಶ್ರೀ ಹೆಚ್.ಡಿ. ಚೌಡಯ್ಯ.—ನೀವು ಯಾವ ಪಕ್ಷಕ್ಕೂ ಸೇರಿದವರಲ್ಲ.

ಇದರಲ್ಲಿ ವೈಯಕ್ತಿಕವಾಗಿ ಹೇಳತಕ್ಕದ್ದು ಏನೂ ಇಲ್ಲ. ಇದರಲ್ಲಿ ಇರತಕ್ಕ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿ ಅದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ನಿಮಗೆ ಕೆಟ್ಟ ಹೆಸರು ಬರುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ಕಾಮಗಾರಿ ವಿಷಯದಲ್ಲಿ ಸಣ್ಣ ನೀರಾವರಿ ಯೋಜನೆಯಾಗಲೀ ದೊಡ್ಡ ನೀರಾವರಿ ಯೋಜನೆಯಾಗಲೀ, ಸೇತುವೆಗಳನ್ನು ಕಟ್ಟುವ ಕೆಲಸವಾಗಲೀ ಗುಣಮಟ್ಟವನ್ನು ಕಾಪಾಡತಕ್ಕದ್ದು ಬಹಳ ಮುಖ್ಯ. ಗುಣಮಟ್ಟವನ್ನು ಕಾಪಾಡದೇ ಹೋದರೆ ನೀವು ಖರ್ಚು ಮಾಡತಕ್ಕ ಹಣಕ್ಕೆ ಪ್ರತಿಫಲ ಬರುವುದಿಲ್ಲ. ಮತ್ತು ಸಾರ್ವಜನಿಕರಿಗೂ ಕೂಡ ಅದರಿಂದ ಅನುಕೂಲವಾಗುವುದಿಲ್ಲ ? ಉದಾಹರಣೆಗೆ ಯಾವುದಾದರೂ ರಸ್ತೆಗಳನ್ನು ಮಾಡುವ ಬಗ್ಗೆ ಮಂಜೂರಾತಿ ಕೊಡುತ್ತೀರಿ. ಆ ರೀತಿ ಮಂಜೂರಾತಿಯನ್ನು ಕೊಡುವಾಗ ಕನ್‌ಸಲ್‌ಟೇಷನ್ ಮಾಡಬೇಕು. ಆದರೆ ಆ ರೀತಿಯಾಗಿ ಮಾಡುತ್ತಿಲ್ಲ. ಬೇಕಾದರೆ ತಾವು ಅಂಕಿಅಂಶಗಳನ್ನು ತರಿಸಿ ನೋಡಿ ಗೊತ್ತಾಗುತ್ತದೆ. ಮಳೆಗಾಲದಲ್ಲಿ ರಸ್ತೆ ಕೆಲಸಗಳನ್ನು ತೆಗೆದುಕೊಳ್ಳುವ ಬಗ್ಗೆ ಮಲೆನಾಡು ಮತ್ತು ಮೈದಾನ ಪ್ರದೇಶಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಆದುದರಿಂದ ಮಂಜೂರಾತಿಯನ್ನು ಕೊಡುವುದಕ್ಕಿಂತ ಮುಂಚಿತವಾಗಿ ತಾವು ಏತಕ್ಕೆ ಕನ್‌ಸಲ್ಟೇಷನ್ ಮಾಡುತ್ತಿಲ್ಲ ? ಸೇತುವೆಗಳನ್ನು ಕಟ್ಟುವಾಗಲೂ ಅಷ್ಟೇ, ಮಳೆ ಇಲ್ಲದೇ ಇರತಕ್ಕಂಥ ಕಾಲದಲ್ಲಿ ಸೇತುವೆಗಳನ್ನು ಕಟ್ಟುವುದಕ್ಕೆ ತೀರ್ಮಾನ ಮಾಡಿ ಅದರ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಂಡು ಅದನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಈಗ ಮಳೆಗಾಲದಲ್ಲಿ ಸಹ ಮಾಡುತ್ತಿರುವುದರಿಂದ ಅರ್ಧಂಬರ್ಧವಾಗಿರತಕ್ಕ ಕೆಲಸ ಕೂಡ ಮಳೆಯಲ್ಲಿ ಕೊಚ್ಚಿ ಹೋಗುತ್ತಿದೆ. ಉದಾಹರಣೆಗೆ ನನ್ನ ಕ್ಷೇತ್ರಕ್ಕೆ ಬನ್ನಿ, ಹೋದ ವರ್ಷ ಮಂಜೂರು ಮಾಡಿದಂಥ ೩ ಲಕ್ಷ ರೂಪಾಯಿಗಳ ಒಂದು ಆಸ್ಫಾಲ್ಟಿಂಗ್ ಕೆಲಸಕ್ಕೆ ಜೂನ್ ತಿಂಗಳಲ್ಲಿ ಚೀಫ್ ಇಂಜಿನಿಯರ್‌ರವರು ಟೆಕ್ನಿಕಲ್ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಆದರೆ ಇದುವರೆಗೂ ಏತಕ್ಕೆ ಕೆಲಸ ಶುರು ಮಾಡಲಿಲ್ಲ ? ಇನ್ನು ನಿಮ್ಮ ಇಲಾಖೆಯಲ್ಲಿ ಕಳೆದ ೨೦–೩೦ ವರ್ಷದಿಂದಲೂ ಬಂದಿರತಕ್ಕ ಪಿಡುಗು ಒಂದು ರೋಗ ವೇನಿದೆ ಎಂದರೆ, ನಿಮ್ಮಲ್ಲಿ ಸಾಕಷ್ಟು ಸಿಬ್ಬಂದಿ ಇದ್ದಾರೆ ಆದರೆ ಕೊರತೆ ಏನೆಂದರೆ ಮಿಷನರಿ ಅಂಡ್ ಎಕ್ವಿಪ್‌ಮೆಂಟ್ಸ್ ಇಲ್ಲ. ಯಾವ ಅಸಿಸ್ಟೆಂಟ್ ಇಂಜಿನಿಯರ್ ಆಗಲೀ, ಎಗ್ಸಿಕ್ಯುಟಿವ್ ಇಂಜಿನಿಯರ್ ಆಗಲೀ, ಎಲ್ಲರೂ ಇದೇ ದೂರನ್ನು ಹೇಳುತ್ತಾರೆ. ಇವತ್ತಿನ ದಿವಸ ರೋಡ್ ರೋಲರ್ಸ್ ಇರುವುದಿಲ್ಲ, ಕಾಂಕ್ರೀಟ್ ಮಿಕ್ಸರ್ ಇರುವುದಿಲ್ಲ, ಇದೆಲ್ಲಾ ಇದ್ದರೆ ಲಾರಿ ಇರುವುದಿಲ್ಲ ಇದರಿಂದಾಗಿ ಟೈಮ್ ಬಾಂಡ್ ಪ್ರೋಗ್ರಾಂ ಪ್ರಕಾರವಾಗಿ ಯಾವ ಕೆಲಸವನ್ನೂ ಸಹ ಮಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ಇದಕ್ಕೆ ತಾವು ಹೆಚ್ಚಿಗೆ ಹಣವನ್ನು ಪ್ರೊವೈಡ್ ಮಾಡಿ ಇಂಥಾ ಮಿಷನರಿಗಳನ್ನು ತೆಗೆದಿಟ್ಟು ಕೆಲಸಕಾರ್ಯಗಳು ಬೇಗ ಬೇಗ ಆಗುವುದಕ್ಕೆ ವ್ಯವಸ್ಥೆ ಮಾಡಿ. ಇನ್ನು ನಿಮ್ಮಲ್ಲಿ ಸೆಂಟ್ರಲ್ ಮೆಕಾನಿಕ್ ಆರ್ಗನೈಜೇಷನ್ ಸಂಸ್ಥೆ ಒಂದು ಇರಬೇಕು ಅದನ್ನು ಸ್ಟ್ರೆಂತನ್ ಮಾಡಿ. ಯಾವ ಯಾವ ಕಡೆ ಎಷ್ಟೆಷ್ಟು ಯಂತ್ರಗಳು ಬೇಕಾಗುತ್ತವೆ, ಯಾವ ಯಾವ ಯಂತ್ರಗಳು ಬೇಕಾಗುತ್ತವೆ ಎಂಬುದನ್ನು ತಿಳಿದುಕೊಂಡು ಅದಕ್ಕೆಲ್ಲಾ ಹೆಚ್ಚಿಗೆ ಹಣವನ್ನು ಒದಗಿಸಿ ಆ ಸಂಸ್ಥೆಯನ್ನು ಸ್ಟ್ರೆಂತನ್ ಮಾಡದೇ ಹೋದರೆ ನೀವು ಗುಣಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ, ಇದರಿಂದ ನೀವು ಕ್ವಾಲಿಟಿ ಮೇನ್‌ಟೇನ್ ಮಾಡುವುದಕ್ಕೆ ಸಾಧ್ಯವಿಲ್ಲ

ಮತ್ತು ಇದರಿಂದ ದೇಶಕ್ಕೂ ನಷ್ಟವಾಗುತ್ತದೆ ಸಾರ್ವಜನಿಕರಿಗೂ ನಷ್ಟವಾಗುತ್ತದೆ. ಮತ್ತು ನಿಮ್ಮ ಇಲಾಖೆಗೂ ಕೆಟ್ಟ ಹೆಸರು ಬರುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಇನ್ನು ಮಾತನಾಡತಕ್ಕ ವಿಷಯ ಬಹಳ ಇದೆ ಆದರೆ ಕಾಲದ ಅಭಾವವಿರುವುದರಿಂದ ಕೊನೆಯದಾಗಿಒಂದು ಮಾತನುಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬೆಂಗಳೂರು ಮತ್ತು ಮೈಸೂರು ರಸ್ತೆಯನ್ನು ಹೈವೇಯನ್ನಾಗಿ ಮಾಡಬೇಕೆಂದು ಬಹಳ ವರ್ಷಗಳಿಂದ ಬೇಡಿಕೆ ಬರುತ್ತಲೇ ಇದೆ. ಆದುದರಿಂದ ಅದನ್ನು ಆದಷ್ಟು ಬೇಗ ನ್ಯಾಷನಲ್ ಹೈವೇಯನ್ನಾಗಿ ಮಾಡುವ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸೂರ್ಯನಾರಾಯಣ ರಾವ್ (ಮತ್ತೂರು).—ಮಾನ್ಯ ಅಧ್ಯಕ್ಷರೇ, ೧೯೮೪–೮೫ರ ವರದಿಯನ್ನು ನನಗೆ ಈಗ ೨೦ ನಿಮಿಷಗಳ ಮುಂಚಿತವಾಗಿ ಒದಗಿಸಿದ್ದಾರೆ. ಇದು ಪ್ರಿಂಟ್ ಆಗಿ ಆಗಲೇ ೪-೫ ದಿವಸಗಳಾಗಿರಬಹುದು, ಈಗ ಒದಗಿಸಿದರೆ ಇದರ ಬಗ್ಗೆ ನಾವು ಹೇಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಆದುದರಿಂದ ಇನ್ನು ಮುಂದೆ ಈ ರೀತಿಯಾಗದ ಹಾಗೆ ವ್ಯವಸ್ಥೆ ಮಾಡಿ ಎಂದು ಹೇಳ ಬಯಸುತ್ತೇನೆ.

ಈ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆಯಾಗಿದೆ. ಇದರಲ್ಲಿ ರಸ್ತೆ ಬರುತ್ತವೆ, ಸೇತುವೆ ಇರಿಗೇಷನ್ ಎಲ್ಲಾ ಕೆಲಸಗಳೂ ಬರುತ್ತವೆ. ಇದರಲ್ಲಿ ದುಡಿಯತಕ್ಕ ಜನಗಳಲ್ಲಿ ಒಂದು ಅತೃಪ್ತಿ ಇದ್ದರೆ ಕೆಲಸಕಾರ್ಯಗಳು ಸರಿಯಾಗಿ ಆಗುವುದಿಲ್ಲ. ಆದುದರಿಂದ ಈ ಇಲಾಖೆಯಲ್ಲಿರತಕ್ಕ ಅವರು ಉದ್ಯೋಗಿಗಳು ಇರಬಹುದು, ನೌಕರರಿರಬಹುದು, ಇಂಜಿನಿಯರ್ಸ್ ಇರಬಹುದು ಅಥವಾ ಇನ್ನು ಯಾವುದೇ ಅಧಿಕಾರಿ ಇರಬಹುದು ಅವರು ಮೊನ್ನೆ ದಿವಸ ಸ್ಟ್ರೈಕ್ ಮಾಡಿದಾಗ ಕಷ್ಟ ಪರಿಸ್ಥಿತಿಯ ಮೇಲೆ ಅದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. "ಬೀಸುವ ದೊಣ್ಣೆ ತಪ್ಪಿಸಿಕೊಂಡಿರೆ ಸಾಕು ನೂರು ವರ್ಷ" ಎನ್ನುವ ಗಾದೆಯ ತರಹ ಆಗಬಾರದು. ಅವರು ಸಹ ರಾಜ್ಯದ ಅಭಿವೃದ್ಧಿಯ ಕೆಲಸಕಾರ್ಯಗಳಲ್ಲಿ ಸರಿಯಾಗಿ ಕೆಲಸ ಮಾಡುವ ಹಾಗೆ ಮಾಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಇನ್ನು ಎನ್.ಎಂ.ಆರ್. ಬಗ್ಗೆ ಗಮನ ಹರಿಸಿ ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿ ೨೩ ಸಾವಿರ ಜನರನ್ನು ತಕ್ಷಣವೇ ಖಾಯಂ ಮಾಡುತ್ತೇವೆಂದು ಹೇಳಿದ್ದೀರಿ. ಬಾಕಿಯುವರನ್ನು ಹಂತಹಂತವಾಗಿ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಇಲ್ಲಿಯವರೆಗೂ ಇನ್ನೂ ಸರ್ಕಾರೀ ಆರ್ಡರ್ ಆಗಿಲ್ಲ, ಇದರ ಬಗ್ಗೆ ಒಂದು ಸಬ್‌ಕಮಿಟಿ ಬೇರೆ ಮಾಡುತ್ತೇವೆಂದು ಹೇಳಿದ್ದೀರಿ. ಅದರ ರಿಪೋರ್ಟ್ ಕೂಡ ಬಂದಿದೆ. ಅದರ ಆಧಾರದ ಮೇಲೆ ಆದಷ್ಟು ಬೇಗ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ಅವರು ಯುಗಾದಿ ಹಬ್ಬವನ್ನು ಖುಷಿಯಿಂದ ಮಾಡುವ ಹಾಗೆ ವ್ಯವಸ್ಥೆ ಮಾಡಿಕೊಡಿ, ಎಂದು ಬೇಡಬಯಸುತ್ತೇನೆ. ಎನ್. ಎಂ. ಆರ್ ನಲ್ಲಿ ಇಂಟರ್ಮೀಡಿಯಟ್ ಮುಗಿಸಿದವರು ಕೂಡ ಇದ್ದಾರೆ. ಅವರಲ್ಲಿ ಬಿ.ಕಾಂ. ಬಿ.ಎಸ್.ಸಿ. ಮಾಡಿದವರೂ ಇದ್ದಾರೆ. ಅವರಿಗೂ ಸಹ ಬಾವು ೧೫—೨೦ ರೂ. ಕೂಲಿ ಕೊಡಬೇಕಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಎನ್.ಎಂ.ಆರ್. ನಲ್ಲಿ ಕೆಲಸ ಮಾಡತಕ್ಕವನಿಗೆ ಸೆಂಟ್ರಲ್ ಗವರ್ನ್‌ಮೆಂಟಿನ ಕಛೇರಿಯಲ್ಲಿ ಕೆಲಸ ಸಿಕ್ಕಿದೆ.

೨–೧೦ ಪಿ.ಎಂ.

ಆದುದರಿಂದ ನಾವು ದಯವಿಟ್ಟು ಈ ಕಡೆ ಗಮನಕೊಡಬೇಕು. ಉದ್ಯೋಗಿಗಳಲ್ಲಿ ನೀವು ಅಸಮಾಧಾನ ಇಟ್ಟುಕೊಂಡರೆ ಕೆಲಸ ನಡೆಯುವುದಿಲ್ಲ. ಆದುದರಿಂದ ಅದನ್ನು ಮಾಡುತ್ತೀರಿ ಎಂದು ತಿಳಿಯುತ್ತೇನೆ. ಇನ್ನು ನೀರಾವರಿ ಇಲಾಖೆಯನ್ನು ತೆಗೆದುಕೊಂಡರೆ ಅಪ್ಪರ್ ಕೃಷ್ಣ ಇದೆ. ಅದರ ಬಗ್ಗೆ ನಾನು ಹೆಚ್ಚು ಮಾತನಾಡಬೇಕು ಎಂದು ಇದ್ದೆ, ಬೇರೆ ಕೆಲಸಗಳಿಂದಾಗಿ ಆ ಕಡೆ ಗಮನ ಕೊಡುವುದಕ್ಕೆ ಆಗಲಿಲ್ಲ. ಅಪ್ಪರ್ ಕೃಷ್ಣ ಏನಿದೆ ಇದರ ಬಗ್ಗೆ ತನಿಖೆಯಾಗಬೇಕು. ಇದರಲ್ಲಿ ಬಹಳ ದುರ್ವ್ಯವಹಾರ ನಡೆದಿದೆ. ಅಲ್ಲಿಗೆ ಏನು ಹಣ ಮಂಜೂರಾಗಿದೆ ಅದರ ಪ್ರಕಾರ ಕೆಲಸ ನಡೆದಿಲ್ಲ. ಇಲ್ಲಿರತಕ್ಕ ಇಂಜನಿಯರುಗಳಿಗೆ ತೊಂದರೆಯಿದೆ, ಅವರಿಗೆ ಕ್ವಾರ್ಟರ್ಸ್ ಇಲ್ಲ, ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲವಿಲ್ಲ, ಅಲ್ಲಿಗೆ ಹೋದವರು ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡು ಇಲ್ಲಿ ಬಂದು ಕುಳಿತುಕೊಳ್ಳುತ್ತಾರೆ. ಅಪ್ಪರ್‌ಕೃಷ್ಣಾದಲ್ಲಿ ಎರಡು ಕೋಟಿ ರೂಗಳು ಬರೀ ಎಸ್ಟಾಬ್ಲಿಷ್‌ಮೆಂಟ್‌ಗೋಸ್ಕರವಾಗಿ ಖರ್ಚಾಗುತ್ತಿದೆ. ಅಷ್ಟು ಖರ್ಚು ಆಗುವಾಗ ಅದಕ್ಕನುಗುಣವಾಗಿ ಕೆಲಸ

ಆಗಬೇಡವೇ. ಅದರ ಬಗ್ಗೆ ಖಂಡಿತವಾಗಿ ಎಸ್ಟಿಮೇಟ್ ಕಮಿಟಿ ಛೇರ್ಮನ್ನರು ಮಾತನಾಡುತ್ತಾರೆ, ಅದರ ಬಗ್ಗೆ ರಿಪೋರ್ಟ್ ಬರುತ್ತದೆ. ಆದುದರಿಂದ ಆದರ ಬಗ್ಗೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ ನಿಷ್ಪಕ್ಷಪಾತವಾದಂಥ ಒಂದು ಎನ್‌ಕ್ವೈರಿ ಆಗಬೇಕು ಯಾರೇ ಸಿಮೆಂಟನ್ನು ತಿಂದಿರಲಿ ಅವರು ತಕ್ಕ ಶಿಕ್ಷೆಯನ್ನು ಅನುಭವಿಸಬೇಕು. ಅವೇಲ ಕಾಡಾಗಳು ಇವೆ. ಈ ಕಾಡಾಗಳು ಸಮರ್ಪಕವಾಗಿ ಕೆಲಸ ಮಾಡುತ್ತಾ ಇಲ್ಲ. ಅದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ಕಾಡಾಗಳ ಬಗ್ಗೆ ಈ ರೀತಿ ಹೇಳುತ್ತಾರೆ ಸ್ವಾಮಿ,

"The Committee observed that the above position reveals a sorry state of affairs The CADA was formed only to ensure that there was speedy and coordinated development of the achkut and it has been empowered to take up compulsory development of land. But after formation of the CADA in December 1979 field work has practically come to a stand-still. There has been considerable delay in processing the schemes, the precribed notifications have not been issued so far even for schemes approved by AR and DC in December 1980. Over one year has been lost in prouessing the papers. Such delays should have been avoided. The Development Commissioner informed the Committee that the reasons for the delay would be investigated and action taken. The Committee would like to have a report of the action taken in this regard.

In this connection the Committee observed that substantial amounts are being spent on the staff of CADA Rs.60.24 lakhs were spent in 1980-81 on the CADA staff in Malaprabha and Ghataprabha projects, whereas expenditure of CADA on other items and activites was only Rs 24.97 lakhs. Only 136 acres of land were developed during the year."

೧೩೬ ಎಕರೆಗೆ ಅದು ನೀರಾವರಿಯಾಗಿ, ಯಂತ್ರೋಪಕರಣಗಳಿಗೆ, ಬೇರೆ ಮೆಟೀರಿಯಲ್ಸ್‌ಗೆ ೨೪ ಲಕ್ಷ ಆಗಿ ಸ್ಟಾಫ್‌ಗೆ ೬೪ ಲಕ್ಷ ಆದರೆ ತಾವು ವಿಚಾರ ಮಾಡಬೇಕು. ಅದಕ್ಕೆ ಕಾರಣ ಈಗಿನ ಜನತಾ ಸರ್ಕಾರವಲ್ಲ. ಅದು ಬೇರೆ ವಿಚಾರ. ಆದರೆ ಜನಗಳ ದುಡ್ಡನ್ನು ವಿನಿಯೋಗ ಮಾಡುವಾಗ ಅಧಿಕಾರಿಗಳ ಮನಸ್ಸಿನಲ್ಲಿ ಇದನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕು ಎನ್ನತಕ್ಕ ಭಾವನೆ ಇಲ್ಲದೇ ಹೋದರೆ ಯಾವರೀತಿ ಕೆಲಸವಾಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೮೩–೮೪ರ ಪರ್‌ಫಾರ್ಮೆನ್ಸ್ ಬಜೆಟ್ ನೋಡಿ ಹೇಳಿ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಈಗ ನಮಗೆ ಬಂದಿರುವುದನ್ನು ಹೇಳುತ್ತಿದ್ದೇನೆ. ಅದೇ ಅಧಿಕಾರಿಗಳಿದ್ದಾರೆ, ಮಂತ್ರಿಗಳು ಬದಲಾವಣೆಯಾಗಿರಬಹುದು. ಅಮೇಲೆ ಪೇಜ್–೮ ರಲ್ಲಿ ಈ ರೀತಿ ಹೇಳಿದ್ದಾರೆ.

"The Committee hold the Chief Engineers and other senior officers responsible for such bad planning and unfruitful outlay, particularly as the Irrigation Projects have been lingering due to inadequate funds. Such unplanned

expenditure could have been avoided and the available resources utilised on priority items to derive benefits commensurate with the outlay,"

ಇದರ ಬಗ್ಗೆ ಏನು ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಲಿ. ಅಧಿಕಾರಿಗಳಿಗೆ ದೂರದೃಷ್ಟಿ ಇಲ್ಲದೆ ಯೋಜನೆಗಳನ್ನು ತಯಾರು ಮಾಡಿ ಹಣವೆಲ್ಲಾ ದುರ್ವಿನಿಯೋಗವಾದರೆ ಅದರ ಬಗ್ಗೆ ಅವರಿಗೆ ಏನಾದರೂ ಶಿಕ್ಷೆ ಆಗಬೇಡವೇ. ಆ ರೀತಿ ಏಕೆ ಆಯಿತು ಎಂದು ವಿಚಾರವಾಡಬೇಕು. ಇಲ್ಲದೇಹೋದರೆ ಪಿ.ಎ.ಸಿ ಯವರು ಕೊಟ್ಟಂಥ ವರದಿಯಲ್ಲಿರುವುದನ್ನು ಬಿಟ್ಟು ನಮ್ಮ ಹಾದಿಗೆ ನಾವು ಮಾಡಿಕೊಂಡು ಹೋಗೋಣ ಅಂದರೆ ಹೇಗೆ. ಆದುದರಿಂದ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇರೀತಿ ಪೇಜ್-೧೮ರಲ್ಲಿ ಹೀಗೆ ಹೇಳಿದ್ದಾರೆ.

"From these datails it is clear that the work was started with inadequate data and on a tentative design which resulted in delay in finalising the design for 5 piers till September 1979 and entrustment of additional work of over Rs. 25 lakhs without competitive tenders. The Committee recommend that action should be taken against those responsible for this omission, which may be reported to them within 6 months."

ಪ್ಲಾನಿಂಗ್ ಇಲ್ಲ, ಟೆಂಡರ್ಸ್ ಇಲ್ಲ ಏನು ಸ್ವಾಮಿ ಇದು ? ಜನಗಳ ದುಡ್ಡು ಲೂಟಿ ಹೊಡೆಯುತ್ತಿದ್ದಾರೆ ಇದಕ್ಕೆ ಲೆಕ್ಕವೇ ಇಲ್ಲ. ಅಧಿಕಾರಿಗಳ ಮನಸ್ಸಿನಲ್ಲಿ ನಾವು ಜನಗಳಿಗೆ ಅನುಕೂಲ ಮಾಡಬೇಕು ಎಂದು ಇಲ್ಲ, ದುಡ್ಡು ಮಾಡಬೇಕು ಎಂದು ಇದ್ದಾರೆ. ಇಂತಹ ಅಧಿಕಾರಿಗಳನ್ನು ರಾಜ್ಯದಲ್ಲಿ ಕಡಿಮೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಜನಗಳ ದುಡ್ಡನ್ನು ತೆಗೆದುಕೊಂಡು ಸ್ವಲ್ಪವಾದರೂ ಕೆಲಸ ಮಾಡಬೇಕು ಎನ್ನತಕ್ಕ ಮನೋಭಾವ ಅಧಿಕಾರಿಗಳಲ್ಲಿ ಬರಬೇಕು ಎನ್ನುವ ಕಾರಣಕ್ಕೋಸ್ಕರ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಭೂ ಅಭಿವೃದ್ಧಿ ವಿಚಾರದಲ್ಲಿ ಹೇಳುವುದಾದರೆ, ಕೆರೆಗಳಲ್ಲಿ ಹೂಳು ತುಂಬಿಕೊಳ್ಳುತ್ತದೆ. ಕೆನಾಲ್‌ನಲ್ಲಿ ಹೂಳು ತುಂಬಿಕೊಳ್ಳುತ್ತದೆ, ಇದರಿಂದ ಇರಿಗೇಷನ್ ಪೊಟೆನ್‌ಷಿಯಾಲಿಟಿ ಕಡಿಮೆಯಾಗುತ್ತದೆ. ಆದುದರಿಂದ ಇದರ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ತುಂಗಭದ್ರಾದಲ್ಲಿ ಅನೇಕ ಬ್ರೀಚಸ್‌ಗಳಾಗಿ ಬಹಳ ಜನರಿಗೆ ತೊಂದರೆಯಾಗಿದೆ. ಆದುದರಿಂದ ಬ್ರೀಚಸ್ ಆಗದಹಾಗೆ ಮಾನ್ಯ ಮಂತ್ರಿಗಳು ನೋಡಬೇಕು. ಮೊನ್ನೆತಾನೇ ರಾಯಚೂರಿಗೆ ಹೋದಾಗ ಅಲ್ಲಿಯ ಜನಗಳು ಮಾನ್ಯ ಮಂತ್ರಿಗಳ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತಿದ್ದರು. ಸಕಾಲಕ್ಕೆ ಬ್ರೀಚಸ್‌ನ್ನು ಸರಿಪಡಿಸಿದ್ದರಿಂದ ಹತ್ತಿ ಬೆಳೆಗಾರರಿಗೆ ಒಂದು ಕೋಟಿ ರೂಪಾಯಿ ಲಾಸ್ಸು ಆಗುವುದು ಕಡಿಮೆಯಾಯಿತು ಎಂದು ಹೇಳುತ್ತಿದ್ದರು. ಅದಕ್ಕೋಸ್ಕರ ಮಾನ್ಯ ಮಂತ್ರಿಗಳಿಗೆ ನಾನು ಶಹಬಾಶ್‌ಗಿರಿ ಕೊಡುತ್ತೇನೆ. ರೈತರಿಗೆ ಅನಾಹುತವಾಗುವುದನ್ನು ತಡೆಗಟ್ಟದಿದ್ದರೆ ನಾವು ಮಂತ್ರಿಗಳ ಹತ್ತಿರ ಹೋಗುತ್ತೇವೆ, ಇಂತಹ ಕೆಲಸ ಆಗಬೇಕು ಎಂದು ಹೇಳುತ್ತೇನೆ. ಮಂತ್ರಿಗಳು ಇಂಜನಿಯರನ್ನು ಕರೆದು ನೋಡಪ್ಪ ಎಂದು ಹೇಳುತ್ತಾರೆ, ಇದು ಆಗಬಾರದು. ಇದು ಅವರ ಡ್ಯೂಟಿ ಎಂದು ತಿಳಿದುಕೊಂಡು ಮಾಡಬೇಕು. ಇದರಲ್ಲಿ ಅವರ ಅಲಕ್ಷ್ಯ ಸ್ವಲ್ಪ ಇದೆ. ಇದರಲ್ಲಿ ಡೆರಿಲಿಕ್ಷನ್ ಆಫ್ ಡ್ಯೂಟಿ ಆಗುತ್ತದೆ. ರೈತರಿಗೆ ಕೋಟಿಗಟ್ಟಲೆ ಹಣ ನಷ್ಟವಾಗತಕ್ಕ ಕಾಲದಲ್ಲಿ ಬ್ರೀಚಗಳನ್ನು ತಡೆಗಟ್ಟಬೇಕು. ಈಗ ಕಾಡಾಗಳಿಗೆ ೪ ಜನ ಛೇರ್ಮನ್‌ಗಳನ್ನು ಮಾಡಿದ್ದಾರೆ. ಇವತ್ತಿನದಿವಸ ನೀರಾವರಿಯಿಂದ ರೈತರಿಗೆ ನೀರು ಸಿಕ್ಕುತ್ತಿಲ್ಲ. ಇವತ್ತಿನದಿವಸ ರೈತರಲ್ಲಿ ಸಂಘಟನೆ ಇಲ್ಲದೇ ಇರುವುದರಿಂದ ನನ್ನೊಬ್ಬನ ಗದ್ದೆಗೆ ನೀರು ಬಂದರೆ ಸಾಕು ಎನ್ನತಕ್ಕ ಭಾವನೆ ಬರುತ್ತದೆ. ಅವರಲ್ಲಿ ದೊಡ್ಡ ಸಂಘಟನೆ ಇದ್ದರೆ ಉದಾರ ಮನಸ್ಸು ಬರುತ್ತದೆ. ಇಲ್ಲದೇ ಹೋದರೆ ನಾನೊಬ್ಬನೇ ಎರಡು ಬೆಳೆ ತೆಗೆದುಕೊಂಡುಬಿಡೋಣ ಎನ್ನುವ ಭಾವನೆ ಇರುತ್ತದೆ. ಆದ್ದರಿಂದ ಎಲ್ಲರಿಗೂ ನೀರು ಬರುವ ರೀತಿಯಲ್ಲಿ ಮಾಡಬೇಕು. ಕಾಡಾದಲ್ಲಿ ಜನತಾ ಪಕ್ಷದವರು ಎಲ್ಲರನ್ನೂ ತೃಪ್ತಿಪಡಿಸುವುದಕ್ಕೆ ಛೇರ್ಮನ್‌ಗಳನ್ನಾಗಿ ಮಾಡಿದ್ದಾರೆ ಎನ್ನುವ ಅಭಿಪ್ರಾಯ ಬರಬಾರದು.

ಇನ್ನು ರಸ್ತೆಯ ಬಗ್ಗೆ ಹೇಳಬೇಕಾಗಿದೆ. ರಸ್ತೆ ದುರಸ್ ವಿಚಾರದಲ್ಲಿ ನಾನು ಕೇಳಿಕೊಳ್ಳುವುದು ಏನೆಂದರೆ, ರಸ್ತೆ ದುರಸ್ತಿಗೆ ಎಷ್ಟು ಹಣ ಕೇಳುತ್ತಾರೆ, ಎಷ್ಟು ಹಣ ಇಡುತ್ತೀರಿ ಅಂದರೆ, Maintenance of Government assets-roads, medical health institutions plan allocation for maintenance is Rs 9.50 cr, desire allocation for adequate maintenance is Rs.20.71 cr.

೨೦.೭೧ ಕೋಟಿ ಅಗತ್ಯವಾಗಿ ಬೇಕು ಎನ್ನುವಾಗ ೯.೫೦ ಕೋಟಿ ಆಯವ್ಯಯದಲ್ಲಿ ತೋರಿಸಿದರೆ ಅದರಲ್ಲಿ ಯಾವರೀತಿ ಮೇಂಟೇನ್ ಆಗುತ್ತದೆ ಎಂಬುದನ್ನು ತಾವು ಹೇಳಬೇಕು. ಅದೇ ರೀತಿ ನೀರಾವರಿಗೆ ೨೫.೭೫ ಕೋಟಿ ರೂಪಾಯಿಗಳು ಬೇಕಾಗಿದ್ದಾರೆ ಒದಗಿಸುವಂತಹದು ೨೨.೨೦ ಕೋಟಿ ರೂಪಾಯಿಗಳು. ೨೮ ಕೋಟಿ ರೂಪಾಯಿಗಳು ಬೇಕಾಗಿದ್ದಂತಹ ಕಡೆ ೯ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಮೆಡಿಕಲ್ ಹೆಲ್ತ್ ಇನ್ಸಿಟಿಟ್ಯೂಟ್ ಅನ್ನು ತೆಗೆದುಕೊಂಡರೆ ಅಲ್ಲಿ ಮುರಿದು ಹೋಗಿರುವ ಕಟ್ಟಡಗಳು ಇವೆ. ಹರಿದಿರುವ ಹಾಸಿಗೆಗಳು ಇವೆ. ಅವುಗಳು ಇಲ್ಲದಿದ್ದರೆ ಏನು ಎಂಬುದು ನಿಮ್ಮ ಅಭಿಪ್ರಾಯವೇ ? ಅದೇ ರೀತಿ ರಸ್ತೆಗಳ ಬಗ್ಗೆಯೂ ಕೂಡ ನಾವು ನೋಡುತ್ತಿದ್ದೇವೆ ಇದನ್ನು ತಪ್ಪಿಸಬೇಕು. ಮೇಂಟೇನೆನ್ಸ್‌ಗೆ ಸರಿಯಾಗಿ ದುಡ್ಡು ಇಲ್ಲದಿದ್ದರೆ ಅದನ್ನು ಮೇಂಟೇನ್ ಮಾಡುವುದಕ್ಕಾಗುವುದಿಲ್ಲ. ಅದೇರೀತಿ ಹಳ್ಳಿಪ್ರದೇಶವನ್ನು ನೋಡುವುದಾದರೆ ನೀವು ಅಲ್ಲಿ ಏನು ಮಾಡುತ್ತಿದ್ದೀರಿ ಎಂಬುದನ್ನು ನೋಡೋಣ. ಊರುಗಳು ನಗರಪ್ರದೇಶದಲ್ಲಿರುವವರಿಗೆ ಬಡ್ಜೆಟ್ಟಿನಲ್ಲಿ ೬೦೨.೫೦ ಕೋಟಿ ರೂಪಾಯಿಗಳು ಇದ್ದರೆ ೭೭೧.೮೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ರೂರಲ್ ರೋಡ್ಸ್‌ಗೆ ೮೦೦ ಲಕ್ಷ ರೂಪಾಯಿಗಳು ಬಡ್ಜೆಟ್ಟಿನಲ್ಲಿ ಇಟ್ಟಿದ್ದರೆ ೫೯೬.೪೦ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ದುಡ್ಡು ಇದ್ದರೂ ಏತಕ್ಕಾಗಿ ಖರ್ಚು ಮಾಡುತ್ತಿಲ್ಲ ? ೧೯೮೦-೮೧ನೇ ಸಾಲಿನಲ್ಲಿ ೧೧೧೯ ಹಳ್ಳಿಗಳಿಗೆ ಯಾವ ವಿಧವಾದ ಫೀಡರ್ ರಸ್ತೆಗಳ ಸಂಪರ್ಕ ಇಲ್ಲವೆಂದು ಹೇಳಿದ್ದಾರೆ. ಆದಕ್ಕಾಗಿ ಹೆಚ್ಚಿನ ರೀತಿಯಲ್ಲಿ ಹಣವನ್ನು ಖರ್ಚು ಮಾಡಬೇಕಾಗಿತ್ತು. ಅದಕ್ಕಾಗಿ ಇಟ್ಟಂತಹ ಹಣವನ್ನು ಖರ್ಚು ಮಾಡುವುದಕ್ಕೆ ಅಧಿಕಾರಿಗಳಿಗೆ ಮನಸ್ಸು ಬರುವುದಿಲ್ಲ. ಆದೇ ನಗರ ಪ್ರದೇಶದಲ್ಲಿ ೬೦೨.೫೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ೭೭೧.೮೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಏಕೆಂದರೆ ಪಟ್ಟಣಗಳಲ್ಲಿ ನಮ್ಮಂತಹ ಪುಡಾರಿಗಳು ಇರುತ್ತೇವೆ. ಖರ್ಚು ಮಾಡಯ್ಯ ಅಂತ ಹೇಳುತ್ತೇವೆ ಆದರೆ ಹಳ್ಳಿ ಜನ ಇವರನ್ನು ಯಾರೂ ಕೇಳುವುದಿಲ್ಲ. ಖರ್ಚು ಮಾಡಿ ಎಂದು ಹೇಳುವವರೂ ಇಲ್ಲ. ಇದು ಆಗಬಾರದು ಅಂತ ನಾನು ಹೇಳುತ್ತೇನೆ. ಇನ್ನು ೨೫ ಲಕ್ಷ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶಕ್ಕೆ ಇಟ್ಟಿದ್ದಾರೆ. ಎಷ್ಟೋ ಹಳ್ಳಿಗಳಲ್ಲಿ ರಸ್ತೆಗಳೇ ಇಲ್ಲ. ಅಪ್ರೋಚ್ ರೋಡ್ಸ್‌ಗಳೇ ಇಲ್ಲ. ಅದನ್ನು ಇವರು ಕೊಟ್ಟಂತಹ ಪುಸ್ತಕದಲ್ಲೇ ಕೊಟ್ಟಿದ್ದಾರೆ. ಅದನ್ನು ಈಗತಾನೇ ನಾನು ನೋಡಿದ್ದೇನೆ. ಹೆಚ್ಚಾಗಿ ಓದಿದ್ದರೆ ಸಮಾಚಾರಗಳು ಸಿಕ್ಕುತ್ತಾ ಇದ್ದವು. ೧೧೧೯ ಹಳ್ಳಿಗಳಲ್ಲಿ ರಸ್ತೆಗಳೇ ಇಲ್ಲ ಎನ್ನುವಾಗ ೨೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಲ್ಲಾ ಇದರಲ್ಲಿ ಎಷ್ಟು ಹಳ್ಳಿಗಳಿಗೆ ರಸ್ತೆಗಳನ್ನು ಮಾಡುವುದಕ್ಕಾಗುತ್ತದೆ ? ಎರಡನೆಯದಾಗಿ ಹಳ್ಳಿಯ ಹೆದ್ದಾರಿಗಳು ಅಂತ ಮಾಡಿದ್ದೀರಿ. ಅವುಗಳನ್ನು ಮಾಡದಿದ್ದರೆ ಹಳ್ಳಿಯಲ್ಲಿರತಕ್ಕವರು ಅಕಸ್ಮಾತ್ತಾಗಿ ಹೆಣ್ಣು ಮಕ್ಕಳು ಗರ್ಭಿಣಿಯಾಗಿದ್ದರೆ, ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕಾದರೆ ಹೇಗೆ ? ಆದ್ದರಿಂದ ಇದಕ್ಕೆ ಮೊದಲು ಆದ್ಯತೆಯನ್ನು ಕೊಡಬೇಕು. ಅಪ್ರೋಚ್ ರೋಡ್‌ಗಳನ್ನು ಮಾಡುವುದಕ್ಕೆ ಮೊದಲ ಆದ್ಯತೆಯನ್ನು ಕೊಡಬೇಕು. ಇನ್ನು ಪ್ರೈಮರಿ ಶಾಲೆಗಳನ್ನು ಹಾಗೂ ಮಿಡ್ಲ್ ಸ್ಕೂಲುಗಳನ್ನು ಲೋಕೋಪಯೋಗಿ ಇಲಾಖೆಯವರು ಮೈನ್‌ಟೈನ್ ಮಾಡುತ್ತಾರೆ. ನನ್ನ ಕ್ಷೇತ್ರವನ್ನೇ ಉದಾಹರಣೆಯಾಗಿ ಹೇಳುವುದಾದರೆ, ಅಲ್ಲಿ ಏನೇನೂ ಮೈನ್‌ಟೈನ್ ಕೆಲಸ ಮಾಡುತ್ತಿಲ್ಲ, ಅಲ್ಲಿ ಹಳ್ಳಿಯ ಜನಗಳ ಮಕ್ಕಳೇ ಓದುತ್ತಿದ್ದಾರೆ. ಆ ಶಾಲೆಗಳಲ್ಲಿ ಇರತಕ್ಕಂತಹ ಹೆಂಚುಗಳು ಯಾವಾಗಲಾದರೂ ಬೀಳಬಹುದು. ತಾರಸಿ ಯಾವಾಗಲಾದರೂ ಬೀಳಬಹುದು. ಆ ಒಂದು ಪರಿಸ್ಥಿತಿ ಇದೆ. ಅದು ಆಗದ ಹಾಗೆ ಮಾಡಬೇಕು. ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆಗಳ ರಿಪೇರಿ ಕೆಲಸಗಳನ್ನು ಮಾಡಿದ್ದಾರೆ. ಅದನ್ನು ಕಾಂಟ್ರಾಕ್ಟ್ ದುಡ್ಡಿಗೋಸ್ಕರ ಮಾಡುತ್ತಾರೆ. ಜೆಲ್ಲಿ ಹಾಕಿದ ಹಾಗೆ ಮಾತ್ರ ಮಾಡಿ ದುಡ್ಡನ್ನು ಹೊಡೆದುಕೊಂಡು ಹೋಗುತ್ತಾರೆ. ಇದು ಆಗದ

ಹಾಗೆ ಸಹಕಾರಿ ಸೊಸೈಟಿಗಳನ್ನು ಮಾಡಿ, ನೋ ಲಾಸ್ ನೋ ಗೈನ್ ಈ ಆಧಾರದ ಮೇಲೆ ಮಾಡಬೇಕು. ಬೆಂಗಳೂರು ನಗರ ಪಾಲಿಕೆಯಲ್ಲಿ ಈರೀತಿ ರಸ್ತೆಗಳ ಕಾಮಗಾರಿ ಕೆಲಸವನ್ನೆಲ್ಲಾ ಅವರೇ ತೆಗೆದುಕೊಂಡಿರುವುದರಿಂದ ಕಾಂಟ್ರಾಕ್ಟುದಾರರಿಗೆ ಕೋಪ ಬಂದುಬಿಟ್ಟಿದೆ. ಅದೇ ರೀತಿ ನಮ್ಮ ಮಂತ್ರಿಗಳೂ ಕೂಡ ಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ. ಇಂಜನಿಯರ್‌ಗಳು ಬೇಕಾದಷ್ಟು ಜನ ಇದ್ದಾರೆ ಕೋ-ಆಪರೇಟಿವ್‌ನಲ್ಲಿ ರಸ್ತೆಗಳ ರಿಪೇರಿ ಕೆಲಸ ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಕಂಟ್ರಾಕ್ಟುದಾರರು ದುಡ್ಡು ಹೊಡೆಯುವುದನ್ನು ತಪ್ಪಿಸಬೇಕು. ಅದೇ ಕೊ-ಆಪರೇಟಿವ್‌ನಿಂದ ಕೆಲಸ ಮಾಡಿದರೂ ಕೂಡ ಅದರ ಗುಣಮಟ್ಟವನ್ನು ಕಾಪಾಡುವುದಕ್ಕೆ ನೋಡಿಕೊಳ್ಳಬೇಕು. ನಾನು ಮೊದಲೇ ಹೇಳಿದಹಾಗೆ ಕಾರ್ಮಿಕರ ಸಮಸ್ಯೆಗಳನ್ನು ಪರಿಹಾರ ಮಾಡಿ ಭ್ರಷ್ಟಾಚಾರವನ್ನು ತಮ್ಮ ಇಲಾಖೆಯಲ್ಲಿ ಕಡಿಮೆ ಮಾಡುವುದಕ್ಕೆ ಪ್ರಯತ್ನ ಪಡಬೇಕೆಂದು ಹೇಳುತ್ತಾ, ಅಧ್ಯಕ್ಷರು ಈಗಾಗಲೇ ಬೆಲ್ಲು ಹೊಡೆಯುತ್ತಿದ್ದಾರೆ ಆದ್ದರಿಂದ ಅವರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಶ್ರೀ ಟಿ. ರಾಮದೇವ್ ಅವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

† ಶ್ರೀ ಎಚ್. ಜಿ. ಗೋವಿಂದ ಗೌಡ (ಶೃಂಗೇರಿ).--ಮಾನ್ಯ ಅಧ್ಯಕ್ಷರೇ, ಕಾಲಾವಕಾಶ ಹೆಚ್ಚಿಗೆ ಇಲ್ಲದಿರುವುದನ್ನು ತಿಳಿದು ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೂ ಸಹ ಮಲೆನಾಡಿನ ಪ್ರದೇಶದ ಪರಿಸರ ಏನಿದೆ ಅದರ ಅರಿವನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಮಾತ್ರ ಇಷ್ಟಪಡುತ್ತೇನೆ. ೧೯೬೪-೬೫ನೇ ಸಾಲಿನ ಅನುದಾನಗಳಿಗೆ ಸಂಬಂಧಿಸಿದ ೩೨, ೩೩, ೪೨, ೪೩, ೪೪ ಹಾಗೂ ೪೫ ಈ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಮಲೆನಾಡಿನ ಪ್ರದೇಶದ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಲೆನಾಡು ಪ್ರದೇಶ ತಮಗೆ ತಿಳಿದ ಹಾಗೆ ಒಂದು ವರ್ಷದಲ್ಲಿ ಸಾಧಾರಣಾ ೧೦೦ ಇಂಚಿನಿಂದ ೧೫೦ ಇಂಚುವರೆಗೆ ಮಳೆಯಾಗುತ್ತದೆ. ಒಂದೊಂದು ಸಾರಿ ೩-೪ ದಿವಸಗಳಲ್ಲೇ ೧೦ ರಿಂದ ೧೫ ಇಂಚು ವರೆಗೆ ಮಳೆಯಾಗತಕ್ಕಂತಹ ಸಮಯಗಳೂ ಇರುತ್ತವೆ ಹೀಗಿರುವಾಗ ಮಲೆನಾಡಿನ ರಸ್ತೆಗಳಿಗೆ ಕೊಡತಕ್ಕ ಗ್ರಾಂಟ್ ಏನಿದೆ, ಸರ್ಕಾರದಿಂದ ಕೊಡತಕ್ಕ ಎಸ್. ಆರ್. ಗ್ರಾಂಟ್ ೧೫೦೦ ರೂಪಾಯಿಗಳನ್ನು ಗ್ರಾಮಾಂತರ ರಸ್ತೆಗಳಿಗಾಗಿ ಹಾಗೂ ಹಳ್ಳಿಗಳ ರಸ್ತೆಗಳಿಗಾಗಿ ಎಂದು ಬಡ್ಜೆಟ್ಟಿನಲ್ಲಿ ಇಟ್ಟಿದ್ದೀರಿ. ಬಹುಶಃ ೫-೫ ದಿವಸ ಸತತವಾಗಿ ಮಳೆಯಾಗಿ, ಕೆಲವೊಮ್ಮೆ ೭-೮ ದಿವಸ ಸತತವಾಗಿ ಮಳೆಯಾಗಿ ಮಳೆಯಿಂದ ಬಂದಂತಹ ನೀರು ಸತತವಾಗಿ ರಸ್ತೆಗಳ ಮೇಲೆ ಹರಿದು ರಸ್ತೆಗಳು ಸಂಪೂರ್ಣವಾಗಿ ನಾಶವಾಗತಕ್ಕ ಪರಿಸ್ಥಿತಿ ಬರುತ್ತದೆ. ಮಲೆನಾಡಿನಲ್ಲಿ ಅಂತಹ ಒಂದು ಪರಿಸ್ಥಿತಿ ಇರತಕ್ಕಂತಹದ್ದು ತಮಗೆ ಗೊತ್ತಿರಬಹುದು. ಆದರೆ ಬಯಲು ಸೀಮೆಗೆ ಇಂತಹ ತೊಂದರೆಯಾಗುವುದಕ್ಕೆ ಅವಕಾಶ ಇಲ್ಲದೇ ಇರಬಹುದು. ನನ್ನ ಪ್ರಶ್ನೆ ಇಷ್ಟೆ, ಮಲೆನಾಡಿನಲ್ಲಿರತಕ್ಕ ರಸ್ತೆಗಳಿಗೆ ಸರ್ಕಾರದಿಂದ ಕೊಡತಕ್ಕ ಎಸ್. ಆರ್. ಗ್ರಾಂಟ್ ಇದನ್ನು ಹೆಚ್ಚು ಮಾಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ಅದೇ ರೀತಿ ಮಳೆಯಾಗತಕ್ಕ ಕ್ಷೇತ್ರದಲ್ಲಿ ಚಿಕ್ಕ ಚಿಕ್ಕ ಕೆರೆಗಳು ಇರುವುದು ಸಾಮಾನ್ಯವಾಗಿ ತಮಗೆ ತಿಳಿದಿದೆ. ಸಾಮಾನ್ಯವಾಗಿ ಮಳೆಯು ಜಾಸ್ತಿಯಾದಾಗ ಗುಡ್ಡದಲ್ಲಿರತಕ್ಕ ಮಣ್ಣು ನೀರಿನ ಜೊತೆಯಲ್ಲಿ ಕೊಚ್ಚಿಕೊಂಡು ಬಂದು ಕೆರೆಗಳಿಗೆ ಬಂದು ಸೇರುತ್ತದೆ. ಕೆರೆಯನ್ನು ರಿಪೇರಿ ಮಾಡತಕ್ಕ ಸಂದರ್ಭದಲ್ಲಿ ಹೂಳನ್ನು ತೆಗೆಯತಕ್ಕ ವ್ಯವಸ್ಥೆ ಬಹಳ ವರ್ಷಗಳಿಂದ ಇಲ್ಲ. ಇದು ಕೇವಲ ಒಂದು ವರ್ಷದಿಂದ ಮಾತ್ರ ಏನೂ ಇಲ್ಲ. ಕಳೆದ ೩೦-೩೫ ವರ್ಷಗಳಿಂದಲೂ ಆಗಿರತಕ್ಕಂತಹ ಕೆಲಸ ಕಾರ್ಯಗಳ ಬಗ್ಗೆ ನನ್ನ ಸ್ನೇಹಿತರ ಜೊತೆಯಲ್ಲಿ ಪರಿಶೀಲನೆ ಮಾಡಿದಾಗ ಇದು ಆಗಿದೆ. ಹೂಗಳನ್ನು ತೆಗೆಯುತಕ್ಕ ಪರಿಸ್ಥಿತಿ ಇಲ್ಲದೇ ಇರುವಾಗ ಗುಡ್ಡದಿಂದ ಬರತಕ್ಕ ನೀರು ಮಣ್ಣಿನ ಜೊತೆಯಲ್ಲೇ ಬಂದು ಕೆರೆಯನ್ನು ತುಂಬಿ ಬಹುಶಃ ೧೦ ಅಡಿ ಇರತಕ್ಕ ಕೆರೆಯಲ್ಲಿ ೨-೩ ಅಡಿ ಮೇಲುಗಡೆ ಬಾಕಿರತಕ್ಕಂತಹದ್ದು ಇದೆ. ಆದ್ದರಿಂದ ಮಲೆನಾಡಿನಲ್ಲಿರತಕ್ಕ ಕೆರೆಗಳನ್ನು ರಿಪೇರಿ ಮಾಡುವಾಗ ಅದೇ ಸಮಯದಲ್ಲಿ ಹೂಳು ತೆಗೆಯತಕ್ಕ ವ್ಯವಸ್ಥೆ ಮಾಡುವುದು ಬಹಳ ಒಳ್ಳೆಯದು, ಹೂಳನ್ನು ತೆಗೆಯದಿದ್ದರೆ ಕೆರೆಯನ್ನು ರಿಪೇರಿ ಮಾಡಿಯೂ ಪ್ರಯೋಜನ ಇಲ್ಲದಂತೆ ಆಗುತ್ತದೆ. ಆದ್ದರಿಂದ ವ್ಯವಸಾಯಗಾರರಿಗೂ ಕೂಡ ಸಹಾಯವಾಗುವುದಿಲ್ಲ. ಇನ್ನೂ ಮುಂದಾದರೂ ಕೆರೆಯನ್ನು ರಿಪೇರಿ ಮಾಡುವಾಗ ಹೂಳನ್ನೂ ತೆಗೆಯತಕ್ಕ ವ್ಯವಸ್ಥೆ ಮಾಡುವುದು ಅದರಲ್ಲೂ ಮಲೆನಾಡಿನ

ಪ್ರದೇಶದಲ್ಲಿ ಇದು ಬಹಳ ಮುಖ್ಯವಾದುದು ಎಂದು ಹೇಳುತ್ತಿದ್ದೇನೆ. ಬಯಲು ಸೀಮೆಯಲ್ಲಾದರೆ ಹೊಳು ತೆಗೆದಂತಹ ಮಣ್ಣನ್ನು ಹಾಕುವುದಕ್ಕೆ ಜಾಗ ಇಲ್ಲ, ಇದರಿಂದ ಪ್ರಯೋಜನವಾಗುವುದಿಲ್ಲವೆಂದು ಹೇಳುವಂತಹ ಅಭಿಪ್ರಾಯ ಉಂಟು. ಆದರೆ ಮಲೆನಾಡಿನ ಪ್ರದೇಶದಲ್ಲಿ ಆ ತೊಂದರೆ ಇಲ್ಲ. ಹೊಳು ತೆಗೆದಂತಹ ಮಣ್ಣನ್ನು ಹಾಕುವುದಕ್ಕೆ ಜಾಗ ಬೇಕಾದಷ್ಟು ಇದೆ. ಸರ್ಕಾರದ ಜಾಗ ಕೂಡ ಬೇಕಾದಷ್ಟು ಅಲ್ಲಿದೆ. ಆದ್ದರಿಂದ ಕೆರೆಯನ್ನು ರಿಪೇರಿ ಮಾಡುವಾಗ ಹೊಳನ್ನು ತೆಗೆಯತಕ್ಕಂತಹ ವ್ಯವಸ್ಥೆ ಮಾಡುವುದು ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಲೋಕೋಪಯೋಗಿ ಮಂತ್ರಿಗಳು ಕೆಲವು ಒಳ್ಳೆಯ ಸಲಹೆಗಳನ್ನು ಮಾಡಿದ್ದಾರೆ. ಅವರು ತಂದಿರತಕ್ಕಂತಹ ಸಲಹೆಗಳಲ್ಲಿ ಹಳ್ಳಿಯ ಹೆದ್ದಾರಿ ಹಾಗೂ ಸೇತುಬಂಧನ ಯೋಜನೆಗಳನ್ನು ನೋಡಿ ನನಗಂತೂ ಮನಸ್ಸಿಗೆ ತುಂಬಾ ಸಂತೋಷವಾಗಿದೆ. ಈ ೨ ಯೋಜನೆಗಳು ಏನಿವೆ ಇವು ನಮಗೆ ಒಂದು ವರಪ್ರಸಾದ ಇದ್ದ ಹಾಗೆ. ಹಳ್ಳಿಗಳಲ್ಲಿ ಅನೇಕ ಸಣ್ಣ ಸಣ್ಣ ಹಳ್ಳಗಳು ಹರಿಯುತ್ತವೆ. ಹಳ್ಳಿಗಳಿಂದ ಶಾಲೆಗಳಿಗೆ ಬರತಕ್ಕ ಮಕ್ಕಳಂತೂ ಮಳೆಗಾಲದಲ್ಲಿ ಈ ಹಳ್ಳಗಳು ತುಂಬಿ ಹರಿಯುವುದರಿಂದ, ಆ ಕಡೆಯಿಂದ ಈ ಕಡೆಗೆ ಬರುವುದಕ್ಕೆ ಜನಗಳಿಗೆ ಹಾಗೂ ಮಕ್ಕಳಿಗೆ ಬಹಳ ಅನಾನುಕೂಲವಾಗಿದೆ. ಇದನ್ನು ತಪ್ಪಿಸುವ ಸಲುವಾಗಿ ಸೇತುಬಂಧನ ಯೋಜನೆ ಏನಿದೆ ಇದು ಬಹಳ ಉಪಯುಕ್ತಕಾರಿಯಾಗಿರತಕ್ಕಂತಹದ್ದು. ಮಳೆ ಜಾಸ್ತಿ ಬಂದು ಬಿಟ್ಟರೆ ೨ ದಿವಸ—೩ ದಿವಸಗಳ ಕಾಲ ಈ ಕಡೆಯಿಂದ ಆ ಕಡೆಗೆ ಓಡಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಸೇತುಬಂಧನದಿಂದ ೧೫ರಿಂದ ೨೫ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಸೇತುಬಂಧನ ಹಾಗೂ ಚಿಕ್ಕ ಚಿಕ್ಕ ಬ್ರಿಡ್ಜಸ್ ಮಾಡಿಸಿಕೊಟ್ಟರೆ ಇದರಿಂದ ಹೆಚ್ಚು ಪ್ರಯೋಜನವಾಗುತ್ತದೆ. ಹಳ್ಳಿಯಲ್ಲಿರತಕ್ಕ ಜನರಿಗೆ ಇದು ಒಂದು ವರದಾನವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಯೋಜನೆಯನ್ನು ಏನು ಹಾಕಿದ್ದೀರಿ, ಇದು ಕಾರ್ಯಗತವಾದರೆ ಹಳ್ಳಿಯವರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಅದೇ ರೀತಿ ಹಳ್ಳಿಯ ಹೆದ್ದಾರಿ ಸಹ ಇವೆ. ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡತಕ್ಕ ಜನ ದೊಡ್ಡ ದೊಡ್ಡ ರಸ್ತೆಗಳಿಗೆ ಬಂದು ಸೇರಬೇಕಾದರೆ ೧೦–೧೫ ಮೈಲಿ ದೂರ ನಡೆದುಕೊಂಡೇ ಬರತಕ್ಕಂತಹ ಪರಿಸ್ಥಿತಿ ಇದೆ. ಆದ್ದರಿಂದ ಹಳ್ಳಿಯ ಹೆದ್ದಾರಿಯ ಯೋಜನೆ ಏನಿದೆ, ಅದರ ಪ್ರಕಾರ ಚಿಕ್ಕ ಚಿಕ್ಕ ೧೨ ಅಡಿ ೧೪ ಅಡಿ ಅಗಲದಲ್ಲಿ ರಸ್ತೆಗಳನ್ನು ಮಾಡಿ, ಹಳ್ಳಿಯಲ್ಲಿರತಕ್ಕಂತಹ ಜನ ದೊಡ್ಡ ದೊಡ್ಡ ರಸ್ತೆಗೆ ಬಂದು ಸೇರುವಂತಹ ವ್ಯವಸ್ಥೆ ಮಾಡುವುದು ಬಹಳ ಒಳ್ಳೆಯದು. ಆದಷ್ಟು ಜಾಗ್ರತೆ ಇದನ್ನು ಮಾಡಿಸಬೇಕೆಂದು ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇವೆ. ಮಾನ್ಯ ಚೌಡಯ್ಯನವರು ಒಂದು ಅಭಿಪ್ರಾಯವನ್ನು ಇಟ್ಟರು. ಅದೇನೆಂದರೆ ೧೯೬೦ ರಿಂದಲೂ ತಾಲ್ಲೂಕು ಬೋರ್ಡಿನ ಅಧ್ಯಕ್ಷನಾಗಿ ಕೆಲವು ಸಮಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ೧೦ ಎಕರೆ ಅಚ್ಚುಕಟ್ಟಾಗತಕ್ಕ ಕೆರೆ ತಾಲ್ಲೂಕು ಅಭಿವೃದಿ ಮಂಡಲಿಯ ವ್ಯಾಪ್ತಿಗೆ ಸೇರಿರತಕ್ಕಂತಹದ್ದು. ಶ್ರೀಮಾನ್ ಚೌಡಯ್ಯನವರ ತಾಲ್ಲೂಕಿನಲ್ಲಿರತಕ್ಕ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಹೆಚ್ಚು ಹಣ ಈ ಬಗ್ಗೆ ಬಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ, ಇಷ್ಟು ವರ್ಷಗಳ ಅನುಭವದಿಂದ ನಾನು ನೋಡಿದ್ದೇನೆ. ತಾಲ್ಲೂಕು ಬೋರ್ಡುಗಳಿಗೆ ಕೆಲವು ವರ್ಷ ಈ ಬಗ್ಗೆ ಹಣವನ್ನೇ ಕೊಟ್ಟಿಲ್ಲ. ಕಳೆದ ವರ್ಷ ೫ರಿಂದ ೧೦ ಸಾವಿರ ಹಣವನ್ನು ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ. ಒಂದೊಂದು ತಾಲ್ಲೂಕಿನಲ್ಲಿಯೂ ೨೦೦ ರಿಂದ ೩೦೦ ಕೆರೆಗಳು ಇರತಕ್ಕಂತಹದ್ದು ತಮಗೆ ಗೊತ್ತಿದೆ. ೮–೧೦ ಸಾವಿರ ರೂಪಾಯಿಗಳನ್ನು ಕೊಟ್ಟು ಕೆರೆಗಳನ್ನು ನೋಡಿಕೊಳ್ಳತಕ್ಕ ಕೆಲಸವನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ವಹಿಸಿದ್ದಾರೆ. ತಾಲ್ಲೂಕು ಬೋರ್ಡುಗಳು ಅಸ್ತಿತ್ವಕ್ಕೆ ಬಂದ ಮೇಲೆ ಅವತ್ತಿನಿಂದ ಇವತ್ತಿನವರೆಗೂ ಅದರ ಜವಾಬ್ದಾರಿಯನ್ನು ಮಾತ್ರ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಕೊಟ್ಟಿಲ್ಲ.

ಆದರೆ ಆ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಹಣ ಬೇಕು, ಆದರೆ ಹಣ ಕೊಡದೆ ಕೆಲಸ ಆಗದೆ ಇರತಕ್ಕದ್ದು ಗೊತ್ತಿದೆ. ಮಲೆನಾಡಿನಲ್ಲಿ ದೊಡ್ಡ ದೊಡ್ಡ ಕೆರೆಗಳು ಕಡಿಮೆ. ಒಂದೊಂದು ತಾಲ್ಲೂಕಿನಲ್ಲಿ ೮–೧೦ ದೊಡ್ಡ ದೊಡ್ಡ ಕೆರೆಗಳು ಸಿಗಬಹುದು. ಬಹುಪಾಲು ೧೦ ಎಕರೆ ಒಳಗಡೆ ನೀರು ಒದಗಿಸತಕ್ಕ ಕೆರೆಗಳು ಇವೆ. ಇವುಗಳ ಮೇಲ್ವಿಚಾರಣೆಯನ್ನು ನೋಡತಕ್ಕ ಜವಾಬ್ದಾರಿಯನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಕೊಟ್ಟಾಗ ಅದಕ್ಕೆ ಹಣ ಇಲ್ಲದೆ ಇರುವುದರಿಂದ ಕೆಲಸ ಆಗಿಲ್ಲ. ಚಿಕ್ಕ ಚಿಕ್ಕ ಕೆರೆಗಳನ್ನಾದರೂ ರಿಪೇರಿ ಮಾಡಿಸಿದರೆ ಹತ್ತು ಹತ್ತು ಎಕರೆ ಜಮೀನಿಗಾದರೂ ನೀರು ದೊರೆಯು

ತ್ತದೆ. ತಾಲ್ಲೂಕು ಅಭಿವೃದ್ಧಿ ಮಂಡಲಿಯ ವ್ಯಾಪ್ತಿಗೆ ಬರತಕ್ಕ ಎಲ್ಲ ಕೆರೆಗಳ ಹೂಳನ್ನು ತೆಗೆಯತಕ್ಕ ವ್ಯವಸ್ಥೆ ಮಾಡಿದರೆ ಮಲೆನಾಡಿನ ಜನರು ಹೆಚ್ಚು ನೀರು ಉಪಯೋಗಿಸಿಕೊಂಡು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿ ಈ ಸಲಹೆಯನ್ನು ಸ್ವೀಕಾರ ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ತುಂಗಭದ್ರಾ ನದಿ ಹುಟ್ಟತಕ್ಕದ್ದು ಶೃಂಗೇರಿಯಲ್ಲಿ. ಅದರ ಪ್ರಯೋಜನ ಶೃಂಗೇರಿ ಜನರಿಗೆ ಆಗಬಹುದು. ಆದರೆ ಎನ್. ಆರ್. ಪುರದ ಜನರಿಗೆ ಆಗುತ್ತಿಲ್ಲ. ರಾಜ್ಯದ ಜನರಿಗೆ ಆಗುತ್ತದೆ. ಆದರಿಂದ ಅವರು ಸಂತೋಷಪಡುತ್ತಾರೆ. ಅವರಿಗೆ ಅನುಕೂಲವಾಗದಿದ್ದರೂ ಚಿಂತೆಯಿಲ್ಲವೆಂದು ಅಲ್ಲಿನ ಜನ ತ್ಯಾಗ ಮಾಡುವುದಕ್ಕೆ ಸಿದ್ಧರಾಗಬೇಕಾಗುತ್ತದೆ. ಇನ್ನು ಅಂಡರ್ ಬ್ರಿಡ್ಜ್ ಕೆಲಸಕ್ಕೆ ಸ್ವಲ್ಪ ಹೆಚ್ಚು ಹಣ ಕೊಡಬೇಕಾಗುತ್ತದೆಂದು ಹೇಳುತ್ತೇನೆ ಇದಕ್ಕೆ ಸ್ನೇಹಿತರು ಅಸಮಾಧಾನಪಡಬಾರದೆಂದು ಪ್ರಾರ್ಥಿಸುತ್ತೇನೆ. ಹೆಗಡೆಯವರ ಸರ್ಕಾರದಲ್ಲಿರತಕ್ಕ ಲೋಕೋಪ-ಯೋಗಿ ಸಚಿವರನ್ನು ಒಂದು ವಿಚಾರದಲ್ಲಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಅದೇನೆಂದರೆ, ತಮಗೆ ಗೊತ್ತಿರುವ ಹಾಗೆ ಅವರ ಇಲಾಖೆಯ ಮುಖ್ಯಸ್ಥರನ್ನು ಕಾರ್ಯದರ್ಶಿಯನ್ನಾಗಿ ಮಾಡಿದರು. ಯಾವ ಯಾವ ವಿಷಯದಲ್ಲಿ ಪರಿಣಿತರು ಇದ್ದಾರೆ ಅವರು ಆಯಾಯ ಇಲಾಖೆಯ ಮುಖ್ಯಸ್ಥರಾಗಿದ್ದರೆ ಅವರ ಉಪಯೋಗ ಸಾರ್ವಜನಿಕರಿಗೂ ಸಿಗುತ್ತದೆ, ಇದೇ ರೀತಿ ಉಳಿದ ಮಂತ್ರಿಗಳೂ ಮಾಡಿದರೆ ಅವರು ಏನು ಅಪೇಕ್ಷಿಸುತ್ತಾರೋ ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲ ವಾಗುತ್ತದೆ. ಆ ಮಾರ್ಗದರ್ಶನವನ್ನು ಉಳಿದ ಮಂತ್ರಿಗಳು ಅನುಸರಿಸಬೇಕೆಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಐ. ಎ. ಎಸ್. ಅಧಿಕಾರಿಗಳನ್ನು ವಾಪಸ್ಸು ಕಳುಹಿಸಿ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್. ಜಿ. ಗೋವಿಂದಗೌಡ.— ಹಾಗೆ ಹೇಳುತ್ತಿಲ್ಲ. ಇಲಾಖೆಯ ಮುಖ್ಯಸ್ಥರನ್ನು ಆಯಾಯ ಇಲಾಖೆಯಲ್ಲಿ ಹಾಕಿದರೆ ಅವರಿಗೆ ಹೆಚ್ಚು ಅನುಭವ ಇರುತ್ತದೆ. ಆ ಅನುಭವವನ್ನು ಉಪಯೋಗಿಸಿಕೊಂಡು ಸಾರ್ವಜನಿಕರಿಗೆ ಉತ್ತಮವಾದ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಈ ರೀತಿಯ ಕೆಲಸ ಆಗಬೇಕು, ಯಾರೋ ಹೇಳಿದರು, ಏನೋ ಮಾಡಿದರು ಎಂದು ಆಗಬಾರದು. ಇವತ್ತಿನ ದಿವಸ, ದೇವೇಗೌಡರು ಏನು ಒಂದು ಉತ್ತಮ ಕೆಲಸ ಮಾಡಿದ್ದಾರೆ ಅದಕ್ಕಾಗಿ ಅವರಿಗೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ, ಬೇರೆ ಮಂತ್ರಿಗಳು ಇದನ್ನು ಅನುಸರಿಸಿದರೆ ಒಳ್ಳೆಯದೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ರಸ್ತೆಗಳ ಬಗ್ಗೆ ಹೇಳುವುದಾದರೆ ಇನ್ನೂ ೨ ಸಾವಿರ ಹಳ್ಳಿಗಳು ರಸ್ತೆಗಳನ್ನು ಕಾಣಲಿಲ್ಲ, ಅಂಥ ಕಡೆ ತಿರುಗಾಡುವುದಕ್ಕೆ, ಎತ್ತಿನ ಗಾಡಿ ಹೋಗುವುದಕ್ಕೆ ಕೂಡ ಆಗುವುದಿಲ್ಲ. ಲೋಕೋಪಯೋಗಿ ಇಲಾಖೆಗೆ ಸೇರಿರತಕ್ಕ ರಸ್ತೆಗಳೂ ಇನ್ನೂ ಸಾಕಷ್ಟು ಪ್ರಮಾಣದಲ್ಲಿ ಸಲೀಸಾಗಿ ಓಡಾಡತಕ್ಕ ರೀತಿಯಲ್ಲಿ ಆಗಿಲ್ಲವೆಂದು ಹೇಳುತ್ತೇನೆ. ಮಂತ್ರಿಗಳು ಪ್ರತಿ ತಾಲ್ಲೂಕಿನಲ್ಲಿ ೨೫ ಕಿಲೋಮೀಟರ್ ರಸ್ತೆಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ಅದು ಬಹಳ ಕಡಿಮೆ. ಇನ್ನು ಎರಡು ವರ್ಷಗಳಲ್ಲಾದರೂ ಕೂಡ ಎಲ್ಲಾ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ದುರಸ್ತಿ ಪಡಿಸಿ ಓಡಾಡತಕ್ಕ ರೀತಿಯಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಹಲವಾರು ಹೆಸರುಗಳಲ್ಲಿ ರಸ್ತೆಗಳನ್ನು ಮಾಡತಕ್ಕ ಯೋಜನೆಯನ್ನು ಕೈಗೊಂಡಿದ್ದಾರೆ. ಹಳ್ಳಿಯ ಹೆದ್ದಾರಿ ಮತ್ತು ಸೇತುಬಂಧಗಳ ಬಗ್ಗೆ ಹೇಳುವುದಾದರೆ, ಕೇವಲ ೨ ಕೋಟಿ ರೂಪಾಯಿ ಹಣ ಕೊಟ್ಟು ೧೭೫ ತಾಲ್ಲೂಕುಗಳಲ್ಲಿ ಸೇತುವೆಗಳನ್ನು ಕಟ್ಟುತ್ತೇವೆಂದು ಹೇಳತಕ್ಕದ್ದು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆಂದು ನಾನಾದರೂ ಸಂಶಯಪಡಬೇಕಾಗುತ್ತದೆ. ಅನೇಕ ಕಡೆ ಇಲಾಖೆಗೆ ತೆಗೆದುಕೊಂಡಿರತಕ್ಕ ತಾಲ್ಲೂಕು ಬೋರ್ಡು ರಸ್ತೆಗಳಾಗಲಿ ಜಿಲ್ಲಾ ಬೋರ್ಡ್ ರಸ್ತೆಗಳಾಗಲಿ ಯಾವುವೂ ಸಮರ್ಪಕವಾಗಿಲ್ಲ. ಅನೇಕ ಹಳ್ಳಿಗಳಿಗೆ ಸೇತುವೆಗಳನ್ನು ಕಟ್ಟತಕ್ಕ ಕೆಲಸ ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲ. ರಸ್ತೆಗಳು ಸಮರ್ಪಕವಾಗಿ ಆಗಿಲ್ಲವೆಂದು ಹೇಳುತ್ತೇನೆ. ಮಂತ್ರಿಗಳು ಪ್ರತಿ ತಾಲ್ಲೂಕಿನಲ್ಲಿ ೨೫ ಕಿಲೋಮೀಟರ್ ರಸ್ತೆಯನ್ನೇನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ಅದಕ್ಕೆ ಬದಲಾಗಿ ೫೦ ಕಿಲೋಮೀಟರ್ ರಸ್ತೆಯನ್ನು ತೆಗೆದುಕೊಂಡು ಮಾಡಬೇಕೆಂದು ಹೇಳುತ್ತೇನೆ ಮತ್ತು ೨-೩ ವರ್ಷಗಳಲ್ಲಿ ಪ್ರತಿ ಹಳ್ಳಿಗೂ

ರಸ್ತೆಯ ಸೌಲಭ್ಯವನ್ನು ಕಲ್ಪಿಸಬೇಕೆಂದು ಹೇಳಬಯಸುತ್ತೇನೆ. ರಾಷ್ಟ್ರೀಯ ಹೆದ್ದಾರಿಗಳ ಕೆಲಸ ಹೆಚ್ಚಾಗಿ ಆಗಿಲ್ಲ. ಹೋದವರ್ಷ ಇದ್ದಷ್ಟೇ ಇದೆ. ತುಮಕೂರಿನಿಂದ ಬೆಂಗಳೂರಿಗೆ ಬರತಕ್ಕ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿನಿತ್ಯ ಒಂದೆರಡಾದರೂ ಅಪಘಾತಗಳು ಇದ್ದೇ ಇರುತ್ತವೆ. ಸರ್ಕಾರ ಕಣ್ಣೆದುರಿಗೆ ನೋಡುತ್ತಿದ್ದರೂ ಅಲ್ಲಿ ಜೋಡಿ ರಸ್ತೆಯನ್ನು ಮಾಡಿ ಆ ತೊಂದರೆಯನ್ನು ಬಗೆಹರಿಸತಕ್ಕ ಪ್ರಯತ್ನವನ್ನು ಮಾಡಿಲ್ಲ. ಆದ್ದರಿಂದ, ಮೊದಲು ಅದನ್ನು ಜೋಡಿ ರಸ್ತೆಯಾಗಿ ಪರಿವರ್ತಿಸಬೇಕೆಂದು ಹೇಳುತ್ತೇನೆ, ಲೋಕೋಪಯೋಗಿ ಇಲಾಖೆಯ ರಸ್ತೆಯ ಮೇಲೆ ಮೈಸೂರು ಸಿಮೆಂಟ್ ಕಾರ್ಖಾನೆಯ ಹತ್ತಿರ ಓವರ್ ಬ್ರಿಡ್ಜ್ ಆಗಬೇಕೆಂದು ಅನೇಕ ವರ್ಷಗಳಿಂದ ಕೇಳುತ್ತಿದ್ದೆವು. ಅದು ನಿಮ್ಮ ಇಲಾಖೆಗೆ ಸಂಬಂಧಪಟ್ಟದ್ದು. ಇದಕ್ಕೆ ಕೇಂದ್ರ ಸರ್ಕಾರ ೫೦ ಭಾಗ ಕೊಡಬೇಕು ಮತ್ತು ರಾಜ್ಯ ಸರ್ಕಾರ ೫೦ ಭಾಗ ಕೊಡಬೇಕು. ಈ ಒಂದು ಸಿಮೆಂಟ್ ಕಾರ್ಖಾನೆಯಿಂದ ಸರ್ಕಾರದ ಖಜಾನೆಗೆ ಪ್ರತಿನಿತ್ಯ ಕನಿಷ್ಟ ಪಕ್ಷ ಒಂದು ಲಕ್ಷ ರೂಪಾಯಿ ಆದಾಯ ಬರುತ್ತದೆ. ಅಂದರೆ ಕಮರ್ಷಿಯಲ್ ಟ್ಯಾಕ್ಸ್ ಮತ್ತಿತರ ಬಾಬಿನಿಂದ ಸರ್ಕಾರಕ್ಕೆ ಲಕ್ಷಗಟ್ಟಲೆ ಆದಾಯ ಬರುತ್ತದೆ. ಆದ್ದರಿಂದ ಅಲ್ಲಿ ಒಂದು ಓವರ್ ಬ್ರಿಡ್ಜನ್ನು ಕಟ್ಟುವುದಕ್ಕೆ ನಿಮ್ಮ ಭಾಗದ ಶೇಕಡ ೫೦ರಷ್ಟು ಹಣವನ್ನು ಕೊಟ್ಟು ಏರ್ಪಾಡು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ತಾವು ಆಯವ್ಯಯದಲ್ಲಿ ಟೋಕನ್ ಗ್ರ್ಯಾಂಟ್ ಒಂದು ಸಾವಿರ ರೂಪಾಯಿ ಎಂದು ಇರಿಗೇಷನ್ನಿಗೆ, ರಸ್ತೆಗಳಿಗೆ ಹೀಗೆ ಪ್ರತಿಯೊಂದಕ್ಕೂ ಕೊಟ್ಟಿದ್ದೀರಿ. ಇದು ಮಾಮೂಲು ವಿಶೇಷವೇನಲ್ಲ. ಹಿಂದೆ ನೂರು ರೂಪಾಯಿಗಳನ್ನು ಇಡುತ್ತಿದ್ದರು, ಈ ಸಾರಿ ಸ್ವಲ್ಪ ಜಾಸ್ತಿ ಇಟ್ಟಿದ್ದೀರಿ. ತಾವು ಕೆಲಸ ಮಾಡಿಸುವುದಿಲ್ಲವೆಂದು ಹೇಳುವುದಿಲ್ಲ. ಆದರೆ ಸ್ವಲ್ಪ ತಡವಾಗುತ್ತದೆಂದು ಒತ್ತಾಯ ಮಾಡುತ್ತಿದ್ದೇನೆ. ಸರ್ಕಾರಕ್ಕೆ ಬಂದ ನಕ್ಷೆಗಳು ಮತ್ತು ಅಂದಾಜುಗಳು ತಡವಾಗುವುದಕ್ಕೆ ಬದಲು ತಾವು ಯಾವ ರೀತಿ ಹಣ ಒದಗಿಸುತ್ತೀರೋ ಒದಗಿಸಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಅಥವಾ ಮುಖ್ಯ ಇಂಜಿನಿಯರ್ ಮಟ್ಟದಲ್ಲಿ ಎಸ್ಟಿಮೇಟ್‌ಗಳನ್ನು ಟೆಕ್ನಿಕಲ್ ಮತ್ತು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್‌ಗೆ ಕೊಡತಕ್ಕ ಕೆಲಸ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕಳೆದ ವರ್ಷದ ಆಯವ್ಯಯದಲ್ಲಿ ತಾವು ಏನು ರಸ್ತೆಗಳ ಮತ್ತು ಕೆರೆಗಳ ಕೆಲಸಗಳನ್ನು ಸೇರಿಸಿದ್ದೀರಿ ಅದಕ್ಕೆ ಇವತ್ತಿಗೂ ಟೆಂಡರ್ ಕರೆದಿಲ್ಲ. ಆ ದೃಷ್ಟಿಯಿಂದ ತಡವಾಗುತ್ತದೆಂದು ಹೇಳುತ್ತಿದ್ದೇನೆ. ಆದ್ದರಿಂದ ಇದನ್ನು ತಡವಾಗದಂತಹ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ವರ್ಷ ಏನು ರಸ್ತೆಗಳಾಗಲೀ ಅಥವಾ ಕೆರೆಗಳಾಗಲೀ ಆಯವ್ಯಯಕ್ಕೆ ಸೇರಿಸಿದ್ದೀರಿ ಅವನ್ನು ಈ ವರ್ಷವೇ ಪ್ರಾರಂಭಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಮಾರ್ಚ್ ೩೧ ರೊಳಗೆ ಏನು ಬಜೆಟ್ ಪಾಸ್ ಆಗುತ್ತದೆ, ಅದು ಆದ ೩ ತಿಂಗಳೊಳಗೆ ಎಲ್ಲಾ ಕೆಲಸಗಳಿಗೂ ಟೆಂಡರ್ ಕರೆಯಬೇಕೆಂಬ ಆಜ್ಞೆಯನ್ನು ಸರ್ಕಾರ ಅಧಿಕಾರಿಗಳಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

3–00 P.M.

ಶ್ರೀ ಬಿ. ಬೈರಪ್ಪಾಜಿ.—ವಿಪ್ ಸಾಹೇಬರು ಮಂತ್ರಿಗಳಿಗೆ ಸ್ವಲ್ಪ ಅವಕಾಶ ಮಾಡಿಕೊಡಬೇಕು. ನಾವು ಹೇಳುವುದನ್ನು ಅವರು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಆಮೇಲೆ ಮಾತನಾಡಿ. ಟೆಂಡರ್ ಕೆಲಸಗಳು ಹೋದಸಾರಿ ಏನು ಸೇರಿಸಿದ್ದೀರಿ ಆ ಕೆಲಸಗಳಾವುವೂ ಇನ್ನೂ ಪ್ರಾರಂಭವಾಗಿಲ್ಲ. ಆದ್ದರಿಂದ ತಾವು ಕಟ್ಟುನಿಟ್ಟಾಗಿ ಅಧಿಕಾರಿಗಳಿಗೆ ಬಜೆಟ್ ಪಾಸಾದ ಮೂರು ತಿಂಗಳೊಳಗೆ ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಬೇಕು ಎಂದು ಆದೇಶ ಕೊಡಬೇಕು. ಸಣ್ಣ ನೀರಾವರಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕಳೆದ ಸಾರಿ ಸರ್ಕಾರ ಒಂದು ಕೆಲಸ ಮಾಡಿದೆ. ಕಾಸ್ಟ್ ಬೆನಿಫಿಟ್ ರೇಷ್ಯೂ ಪ್ರಕಾರ ಸಣ್ಣ ಕೆರೆಗಳ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿತ್ತು. ಅದು ಸ್ವಾಗತಾರ್ಹವಾದ ಕೆಲಸ. ಅದರಂತೆ ಹೆಚ್ಚು ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ಮಾಡುವ ೧೦ ಎಕರೆಗಿಂತ ಮೇಲ್ಪಟ್ಟಿರತಕ್ಕ ನೀರಾವರಿಯಾಗುವ ಕೆರೆ ಕೆಲಸ ಇರುತ್ತವೆ. ಪ್ರತಿ ತಾಲ್ಲೂಕುಗಳಲ್ಲಿ ಇಂಥ ಕೆರೆಗಳು ಎಷ್ಟು ಬರುತ್ತವೆ ಎಂಬುದನ್ನು ಸರ್ವೆ ಮಾಡಿಸಿ ಅವೆಲ್ಲವನ್ನೂ ತಮ್ಮ ಇಲಾಖೆಯೇ ವಹಿಸಿಕೊಂಡು ಕೆಲಸ ಮಾಡಬೇಕು ಎಂದು ನಾನು ಸಲಹೆ ನೀಡುತ್ತೇನೆ. ಇದರಿಂದ ಕೆಲಸ ಬೇಗ ಆಗಿ ಬಹಳ ಜನರಿಗೆ

ಅನುಕೂಲವಾಗುತ್ತದೆ. ತಾಲ್ಲೂಕು ಬೋರ್ಡಿನವರು ಮಾಡುವ ಅಂಥ ಕೆರೆ ಕೆಲಸಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ವಿಶ್ವ ಬ್ಯಾಂಕಿನ ನೆರವಿನಿಂದ ತೆಗೆದುಕೊಳ್ಳತಕ್ಕ ಕೆರೆ ಕೆಲಸದ ಬಗ್ಗೆ ರೇಟ್ ನಿಗದಿ ಮಾಡುವುದಿಲ್ಲ. ಎಷ್ಟು ಸಾವಿರ ಆದರೂ ಕೆಲಸವಾಗುತ್ತದೆ. ಆದರೆ ಇಲ್ಲಿ ಮಾತ್ರ ನಿಗದಿ ಮಾಡಿದ್ದೀರಿ. ಇದರಿಂದ ತಾರತಮ್ಯ ಆಗುತ್ತದೆ. ಒಂದೇ ತಾಲ್ಲೂಕಿನಲ್ಲಿ ಅಕ್ಕಪಕ್ಕದಲ್ಲಿರತಕ್ಕ ಕೆರೆಗಳನ್ನು ಒಂದು ವಿಶ್ವಬ್ಯಾಂಕಿನ ನೆರವಿನಿಂದ ಮತ್ತೊಂದು ಲೋಕೋಪಯೋಗಿ ಇಲಾಖೆಯಿಂದ ತೆಗೆದುಕೊಂಡಾಗ ರೇಟಿನ ವ್ಯತ್ಯಾಸದಿಂದ ಗೊಂದಲವಾಗುತ್ತಿದೆ. ಆದ್ದರಿಂದ ವಿಶ್ವಬ್ಯಾಂಕಿನ ನೆರವಿನಿಂದ ನೀರಾವರಿ ಕಾಮಗಾರಿಗಳನ್ನು ಏನು ತೆಗೆದುಕೊಂಡಿದ್ದೀರೋ ಅದೇರೀತಿ ತಾವು ಇಲಾಖೆಯಿಂದ ತೆಗೆದುಕೊಳ್ಳತಕ್ಕ ಕೆಲಸಗಳನ್ನೂ ಮಾಡಿಸಬೇಕು. ಆಗ ಬೇಗ ಕೆಲಸವಾಗುತ್ತದೆ ಎಂಬ ಸಲಹೆಯನ್ನು ಈ ಸಂದರ್ಭದಲ್ಲಿ ನೀಡುತ್ತೇನೆ. ಸಣ್ಣ ಸಣ್ಣ ಕೆರೆಗಳಿಗೆ ಸ್ಟ್ಯಾಂಡರ್ಡ್ ಇರಬೇಕು ಎಂದು ಹೇಳಿದ್ದೀರಿ. ಇದರಿಂದ ಕಾಸ್ಟ್ ಜಾಸ್ತಿಯಾಗುತ್ತದೆ. ಅನೇಕ ಕೆಲಸಗಳು ಕಾರ್ಯ ರೂಪಕ್ಕೆ ಬರುವುದಿಲ್ಲ. ೧೨ ಎಕರೆ ಮೇಲ್ಪಟ್ಟು ೫೦ ಎಕರೆ ಒಳಪಟ್ಟಿರತಕ್ಕ ಸಣ್ಣ ಸಣ್ಣ ಕೆರೆಗಳಿಗೆ ಹೆಚ್ಚಿನ ಸ್ಟ್ಯಾಂಡರ್ಡ್ ಉಪಯೋಗಿಸಿ ಕೆಲಸ ಆಗದಂಥ ರೀತಿಯಲ್ಲಿ, ಫೀಸಿಬಿಲಿಟಿ ಬರದಂಥ ರೀತಿಯಲ್ಲಿ ಆಗುತ್ತಿದೆ. ಇದನ್ನು ೧೦೦ ಎಕರೆಗಿಂತ ಮೇಲ್ಪಟ್ಟಿರತಕ್ಕ ಕಡೆ ಸ್ಟ್ಯಾಂಡರ್ಡ್ ಮೈಂಟೇನ್ ಮಾಡಿ ಸಣ್ಣ ಪುಟ್ಟ ಕೆರೆಗಳಿಗೆ ಇದರಿಂದ ರಿಲ್ಯಾಕ್ಸ್ ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜನರಿಗೆ ಅನುಕೂಲ ಆಗತಕ್ಕ ಸಣ್ಣ ಕೆರೆಗಳ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆಗೆದುಕೊಂಡು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಇದಕ್ಕೆ ೬ ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಇದು ಸಾಲದು ಎಂಬ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕಾವೇರಿ ಬೇಸಿನ್ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇದಕ್ಕೆ ಹೆಚ್ಚು ಹಣವನ್ನು ಒದಗಿಸಿ ಒಳ್ಳೆಯ ಕೆಲಸವನ್ನು ತಾವು ಮಾಡಿದ್ದೀರಿ. ಅದಕ್ಕಾಗಿ ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಉತ್ತರ ಕೊಡುವಾಗ ೧೦ ವರ್ಷಗಳ ಅಂಕಿಅಂಶಗಳನ್ನು ಕೊಟ್ಟರು. ಕಾವೇರಿ ಬೇಸಿನ್‌ಗೆ ಎಷ್ಟು ಹಣ ಕೊಟ್ಟಿದ್ದಾರೆ, ಕೃಷ್ಣಾ ಬೇಸಿನ್‌ಗೆ ಎಷ್ಟು ಹಣ ಕೊಟ್ಟಿದ್ದಾರೆ ಎಂಬುದನ್ನು ನೋಡಿದರೆ ಪ್ರತಿ ವರ್ಷ ಕಾವೇರಿ ಬೇಸಿನ್‌ಗೆ ಕಡಿಮೆ ಹಣ ಕೊಟ್ಟುಕೊಂಡು ಬಂದಿದ್ದಾರೆ. ಇದು ದುರ್ದೈವ. ಕೃಷ್ಣ ಬೇಸಿನ್‌ಗೆ ಜಾಸ್ತಿ ಹಣ ಕೊಡಬೇಡಿ, ಕೆಲಸ ನಿಲ್ಲಿಸಿ ಎಂದು ನಾವು ಹೇಳುವುದಿಲ್ಲ. ಆದರೆ ಅದೇರೀತಿ ಕಾವೇರಿ ಬೇಸಿನ್‌ಗೂ ಕೊಡಿ. ಕಾವೇರಿ ಬೇಸಿನ್‌ಗೆ ಕೊಡಬೇಕಾದ ಪ್ರಮಾಣದಲ್ಲಿ ಹಣ ಕೊಡದೆ ಅನೇಕ ಕಾಮಗಾರಿಗಳು ನಿಂತುಹೋಗಿವೆ. ಉದಾಹರಣೆಗೆ ಹೇಮಾವತಿ ಯೋಜನೆ, ಅಲ್ಲಿ ೨೪ ಟಿ.ಎಂ.ಸಿ.ಎಫ್.ಟಿ.ಯಿಂದ ೩೬ ಟಿ.ಎಂ.ಸಿ.ಎಫ್.ಟಿ. ವರೆಗೆ ನೀರನ್ನು ಶೇಖರಣೆ ಮಾಡತಕ್ಕ ವ್ಯವಸ್ಥೆ ಮಾಡಿ ಬಹಳ ಕಾಲವಾಯಿತು. ನೀರು ಶೇಖರಣೆಯಾಗಿದೆ. ಮುಂದಕ್ಕೆ ತುಮಕೂರು ಜಿಲ್ಲೆಗೆ ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿಗೆ ನೀರನ್ನು ಒದಗಿಸತಕ್ಕ ವ್ಯವಸ್ಥೆ ಮಾಡಬೇಕಾಗಿದೆ. ಈ ಕೆಲಸ ನಿಧಾನವಾಗಿ ಅನ್ಯಾಯವಾಗುತ್ತಿದೆ. ಇದರಿಂದ ತುಮಕೂರು ಜಿಲ್ಲೆಯ ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಜನ ಬಹಳ ನೊಂದಿದ್ದಾರೆ. ಏತಕ್ಕೆ ತಡವಾಗುತ್ತಿದೆಯೋ ಗೊತ್ತಾಗುತ್ತಿಲ್ಲ. ಬೇರೆ ಜಿಲ್ಲೆಗೆ ನೀರು ಕೊಡಬೇಡಿ, ಅಲ್ಲಿಗೆ ಕೊಡುವುದನ್ನು ಮೊಟಕು ಮಾಡಿ ಎಂದು ನಾವು ಹೇಳುವುದಿಲ್ಲ. ೧೯೭೮ ರಲ್ಲಿ ನವಿಲೆ ಬಾಗೂರು ಟನಲ್ ಕೆಲಸ ಪ್ರಾರಂಭ ಮಾಡಿದ್ದು ಕೆಲಸ ಬಹಳ ನಿಧಾನವಾಗುತ್ತಿದೆ. ನವಿಲೆ ಬಾಗೂರು ಟನಲ್ ಪೂರ್ತಿ ಆಗದಿದ್ದರೆ ತುಮಕೂರು ಜಿಲ್ಲೆಗೆ ನೀರು ಸಿಗುವುದಿಲ್ಲ. ಈ ಕೆಲಸವನ್ನು ಬೇಗ ಮಾಡಬೇಕೆಂದು ಪದೇಪದೇ ಸರ್ಕಾರಕ್ಕೆ ಒತ್ತಾಯ ಮಾಡುತ್ತಾ ಬಂದಿದ್ದೇವೆ. ಆ ಟನಲ್ ೧೦ ಕಿಲೋಮೀಟರ್ ಇದೆ. ಮುಂದಿನ ೫ ಕಿಲೋಮೀಟರ್‌ನಲ್ಲಿ ಡ್ರಾಫ್ಟ್ ಕಟ್ ಬರುತ್ತದೆ. ಅದೂ ಕೂಡ ಹೆಚ್ಚು ಕಾಲ ಹಿಡಿಯತಕ್ಕ ಕೆಲಸ. ಅದನ್ನೂ ಕೂಡ ಸೈಮಲ್‌ಟೇನಿಯಸ್ ಆಗಿ ಪ್ರಾರಂಭ ಮಾಡಬೇಕೆಂದು ಅನೇಕ ಸಾರಿ ಮಂತ್ರಿಗಳಲ್ಲಿ ಕೇಳಿಕೊಂಡಿದ್ದೇವೆ. ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದಾಗ ಕೂಡ ವಿನಂತಿ ಮಾಡಿಕೊಂಡಿದ್ದೇವೆ. ಆದರೂ ಆ ಕೆಲಸ ಆಗಿಲ್ಲ. ಡ್ರಾಫ್ಟ್ ಕಟ್ ಎಲ್ಲಿ ಹೋಗಬೇಕು ಎಂಬ ಬಗ್ಗೆ ಒತ್ತಡ ಬರುತ್ತಿದೆ. ಮೂರು ಕಡೆ ತಾವು ಪ್ರೊಪೋಸಲ್ ತರಿಸಿದ್ದೀರಿ. ಆದರೂ ಏತಕ್ಕೆ ಆ ಬಗ್ಗೆ ಇನ್ನೂ ತೀರ್ಮಾನ ಮಾಡಿಲ್ಲ? ನೀವು ಅದನ್ನು ಎಲ್ಲಾದರೂ ತೆಗೆದುಕೊಂಡು ಹೋಗಿ. ಆದರೆ ಜನರಿಗೆ ತೊಂದರೆಯಾಗದಂತೆ, ತುಮಕೂರು ಮತ್ತು ಮಂಡ್ಯ ಜಿಲ್ಲೆಯ

ಜನರಿಗೆ ನೀರು ಬರುವಂತೆ ಏತಕ್ಕೆ ತೀರ್ಮಾನ ತೆಗೆದುಕೊಂಡಿಲ್ಲ ? ತೀರ್ಮಾನ ತೆಗೆದುಕೊಳ್ಳುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕು ? ಈ ರೀತಿ ಮಾಡಿರುವುದು ಅನ್ಯಾಯವಲ್ಲವೆ ? ಈ ಯೋಜನೆ ಕಾರ್ಯರೂಪಕ್ಕೆ ಬರುವುದು ಯಾವಾಗ ? ೧೯೮೫ನೇ ಇಸವಿಯೊಳಗೆ ತುಮಕೂರು ಜಿಲ್ಲೆಗೆ ನೀರು ಕೊಡುತ್ತೇವೆಂದು ಸರ್ಕಾರ ಆಶ್ವಾಸನೆ ಕೊಟ್ಟಿತ್ತು. ೧೯೮೫ನೇ ಇಸವಿ ಹತ್ತಿರ ಬರುತ್ತಿದೆ. ಆದರೆ ಇನ್ನೂ ಕಾಲು ಭಾಗ ಕೂಡ ಕೆಲಸ ಮುಗಿದಿಲ್ಲ. ಟನಲ್ ಇನ್ನೂ ೫ ಕಿಲೋಮೀಟರ್ ಇದೆ. ಡ್ರಾಫ್ಟ್ ಕಟ್ ಮಾಡಬೇಕಾಗಿದೆ. ಮುಂದಕ್ಕೆ ತುಮಕೂರ್‌ವರೆಗೆ ೧೭೦ ಕಿಲೋಮೀಟರ್ ಚಾನಲ್ ಆಗಬೇಕು. ಮಂಡ್ಯ ಚಾನಲ್ ೧೧೨ ಕಿಲೋಮೀಟರ್ ಆಗಬೇಕು ಇದೆಲ್ಲಾ ಯಾವಾಗ ಆಗುತ್ತದೆ? ಹೇಮಾವತಿ ಪ್ರಾಜೆಕ್ಟಿಗೆ ಸಂಬಂಧಪಟ್ಟಹಾಗೆ ಮೂರು ಸರ್ಕಲ್ ಆಫೀಸ್‌ಗಳಾಗಿವೆ. ನಮ್ಮ ಈ ಎಡ ದಂಡೆ ಕಾಲುವೆಗೆ ಮೂರೂವರೆ ಲಕ್ಷ ಎಕರೆ ನೀರಾವರಿ ಬರುತ್ತದೆ. ಬಲದಂಡೆ ಕಾಲುವೆ ಯೋಜನೆಗೆ ಮೂರೂವರೆ ಲಕ್ಷ ಎಕರೆ ಬರುತ್ತದೆ. ಅಲ್ಲೂ ಕೂಡ ಸಿಬ್ಬಂದಿ ಇಲ್ಲ. ಅಲ್ಲಿ ಮೂರು ಸರ್ಕಲ್ ಆಫೀಸ್‌ಗಳಿವೆ ಮೂರೂವರೆ ಲಕ್ಷ ಎಕರೆಗೆ ನೀರು ಕೊಡತಕ್ಕ ಈ ಭಾಗಕ್ಕೆ ಒಂದೇ ಒಂದು ಸರ್ಕಲ್ ಆಫೀಸ್ ಇದೆ. ಇನ್ನೂ ಎರಡು ಸರ್ಕಲ್ ಆಫೀಸುಗಳನ್ನು ಮಾಡಿ ಚಾನಲ್‌ಗೆ ಒಂದು ಸರ್ಕಲ್ ಆಫೀಸ್ ಮಾಡಿ ಬೇಗ ಕೆಲಸವಾಗುವಂತೆ ಮಾಡಿ ಎಂದು ಪದೇಪದೇ ನಾನು ಮಂತ್ರಿಗಳನ್ನು ಕೇಳಿದ್ದೇನೆ. ಹಿಂದಿನ ಸರ್ಕಾರ ಕಾಂಟ್ರಿಬ್ಯೂಷನ್ ವಜಾ ಮಾಡಿದೆ. ಆದರೂ ನಾವು ಒಂದು ಹೆಜ್ಜೆ ಮುಂದೆ ಹೋಗಿ ನಾವು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ತಯಾರಿದ್ದೇವೆ, ನಮಗೆ ನೀರು ಕೊಡಿ ಎಂದು ಅನೇಕ ಸಾರಿ ಹೇಳಿದ್ದೇವೆ. ಇಲ್ಲಿಯತನಕ ಆ ಬಗ್ಗೆ ಏನೂ ಹೇಳಲಿಲ್ಲ. ಈ ರೀತಿ ತೊಂದರೆಯಾಗಿರುವುದರಿಂದ ನಾಗಮಂಗಲ ತಾಲೂಕಿನಲ್ಲಿ, ಕುಣಿಗಲ್ ತಾಲೂಕಿನಲ್ಲಿ ಮತ್ತು ತುರುವೇಕೆರೆ ತಾಲ್ಲೂಕಿನಲ್ಲಿರುವ ಜನ ಬಡತನದ ಬೇಗೆಯನ್ನು ಸಹಿಸಲಾರದೆ ಊರು ಬಿಟ್ಟು ಹೋಗಿದ್ದಾರೆ.

ಇವತ್ತು ಅಲ್ಲಿಯ ಜನ ಬೆಂಗಳೂರು ಭದ್ರಾವತಿ ಮುಂತಾದ ಊರುಗಳಿಗೆ ಹೋಗಿ ಕೂಲಿ ಮಾಡುತ್ತಿದ್ದಾರೆ. ಈ ಒಂದು ಯೋಜನೆಯಿಂದ ತುಮಕೂರು ಜಿಲ್ಲೆಯ ತಿಪಟೂರು, ತುರುವೇಕೆರೆ, ಗುಬ್ಬಿ, ಕುಣಿಗಲ್, ತುಮಕೂರು ತಾಲ್ಲೂಕು ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬಡಜನರಿಗೆ ಬಹಳ ಅನುಕೂಲವಾಗುತ್ತದೆ. ಇವುಗಳು ಹೆಚ್ಚು ನೀರಾವರಿಗೆ ಅವಕಾಶ ಇಲ್ಲದಂತಹ ತಾಲ್ಲೂಕುಗಳಾಗಿವೆ. ಈ ಒಂದು ಯೋಜನೆ ಬಗ್ಗೆ ನಾವು ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸ್ ಅವರನ್ನು ನೆನೆಸಿಕೊಳ್ಳಬೇಕು. ಅವರು ಅಂದು ಮುಖ್ಯ ಮಂತ್ರಿಗಳಾಗಿರದಿದ್ದರೆ ಈ ಯೋಜನೆಯನ್ನು ಮಂಜೂರು ಮಾಡತಕ್ಕ ಶಕ್ತಿ ಯಾರಿಗೂ ಬರುತ್ತಿರಲಿಲ್ಲವೆಂದು ಕಾಣುತ್ತದೆ. ಬಹುಶಃ ಹಿಂದಿನ ಅನೇಕ ರಾಜಕಾರಣಿಗಳು ನಿಮಗೆ ನೀರು ಬರುವುದಿಲ್ಲ ಗಾಳಿ ಬರುತ್ತದೆ ಎಂದು ಹೇಳುತ್ತಿದ್ದರು. ಆವತ್ತು ನಮಗೆ ನೀರು ಬರುವ ಒಂದು ವ್ಯವಸ್ಥೆ ಇದೆ ಎಂದು ಹೇಳಿ ಸರ್ಕಾರಕ್ಕೆ ಪದೇಪದೇ ಒತ್ತಾಯ ಮಾಡಿದ ಹಿರಿಯ ಶಾಸಕರಲ್ಲಿ ಶ್ರೀಮಾನ್ ಹುಚ್ಚಮಾಸ್ತಿಗೌಡರೂ ಒಬ್ಬರು. ಅಂದು ಆ ರೀತಿ ಒತ್ತಾಯ ಮಾಡಿ ತಂದ ಯೋಜನೆಯ ಗತಿ ಏನಾಗಿದೆ ಎಂಬುದನ್ನು ನಮಗೆ ಊಹಿಸಲೂ ಸಹಾ ಕಷ್ಟವಾಗಿದೆ. ಈ ರೀತಿ ತಾವು ನಿಧಾನ ಮಾಡತಕ್ಕ ಕೆಲಸ ಇದಲ್ಲವೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ತಿಳಿಸಬೇಕಾಗಿದೆ. ನಮ್ಮ ಜಿಲ್ಲೆಯ ೫ ತಾಲ್ಲೂಕಿನ ಅಳಿವು ಉಳಿವಿನ ಪ್ರಶ್ನೆಯಾಗಿರುವುದರಿಂದ ಈ ಒಂದು ಯೋಜನೆ ಬಗ್ಗೆ ಹೆಚ್ಚು ಗಮನ ಹರಿಸಿ ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಈ ಸಭೆಗೆ ಹಾಗೂ ನಮಗೆ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಅಲ್ಲಿನ ತಾಂತ್ರಿಕ ತೊಂದರೆ ಹಾಗೂ ಭೂಮಿಯ ಒಂದು ಗುಣದಿಂದಾಗಿ ಕೆಲಸವೇನೂ ನಿಲ್ಲಿಸಬೇಕಾಗಿಲ್ಲವೆಂದು ಎಂಜಿನಿಯರ್‌ಗಳು ಹೇಳಿದ್ದಾರೆ. ಆದರೂ ಅಲ್ಲಿ ಕೆಲಸ ಮಾಡುವುದಕ್ಕೆ ಏನು ತೊಂದರೆ ಇದೆ ಎಂಬುದನ್ನು ಕೇಳುತ್ತೇನೆ. ಈ ಒಂದು ಜಿಲ್ಲೆ ಕೂಡಾ ಕರ್ನಾಟಕ ರಾಜ್ಯಕ್ಕೆ ಸೇರಿದ್ದು ಎಂದು ಮಾನ್ಯ ಲೋಕೋಪಯೋಗಿ ಮಂತ್ರಿಗಳು ತಿಳಿದು ಈ ಬಗ್ಗೆ ಆಸಕ್ತಿ ಇಟ್ಟು, ಇಲ್ಲಿನ ಬಡವರು ಕೂಡಾ ಅವರ ಅಣ್ಣ ತಮ್ಮಂದಿರು ಎಂದು ಭಾವಿಸಿ ಅಲ್ಲಿನ ಕೆಲಸವನ್ನು ಬೇಗ ಮಾಡಿ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದಿನ ಒಂದು ಯೋಜನೆಗೋಸ್ಕರವಾಗಿ ಕಟ್ಟಿಸಿದ ಮಾವಿನಕೆರೆ ಅಕ್ವಿಡೆಕ್ಟ್ ಇದ್ದು ಅದರ ಪಕ್ಕದಲ್ಲಿ ಇನ್ನೊಂದು ಅಕ್ವಿಡೆಕ್ಟನ್ನು ಕಟ್ಟಬೇಕೆಂದು ಮನವಿ ಮಾಡಿಕೊಂಡಿದ್ದೆವು. ಆದರೆ ಆ ಕೆಲಸ ಆಗಿರುವುದಿಲ್ಲ. ಆ ಬಗ್ಗೆ ಅಲಾಟ್‌ಮೆಂಟ್ ಕೂಡಾ ಆಗಿಲ್ಲ. ಅಲ್ಲಿ ಏಕೆ ಟ್ರಾಫ್ಟ್ ಕಟ್ ಕೆಲಸ ನಿಂತಿದೆ ಎನ್ನುವ ಬಗ್ಗೆ ಪ್ರೊಸೀಡಿಂಗ್ಸ್ ಕೂಡಾ ಆಗಿಲ್ಲ. ಅದು ಯಾವ ಕಡೆ ಹೋಗಬೇಕು ಎನ್ನುವ ಬಗ್ಗೆ ಕೂಡಾ ತೀರ್ಮಾನವಾಗಿಲ್ಲ. ಇದು ಅಳಿವು ಉಳಿವಿನ ಪ್ರಶ್ನೆಯಾಗಿರುವುದರಿಂದ ನಾನು ಈ ಬಗ್ಗೆ

ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ತಮಗೇ ಗೊತ್ತಿರುವ ಹಾಗೆ ಬಹಳ ತೊಂದರೆ ಪಡುತ್ತಿರುವ ಜನರಿಗೆ ಹೇಮಾವತಿ ನೀರು ಬಂದರೆ ಬಹಳ ಅನುಕೂಲವಾಗುತ್ತದೆ. ಹಾಸನದ ಜನರಿಗೆ ಹೇಮಾವತಿ ನೀರನ್ನು ಕುಡಿಯುವುದಕ್ಕೆ ಕೊಟ್ಟರು ಎಂಬುದನ್ನು ನಾನು ಮೊನ್ನೆ ಪತ್ರಿಕೆಗಳಲ್ಲಿ ನೋಡಿದೆ. ಇವತ್ತು ತುಮಕೂರಿನ ಜನರಿಗೆ ಕುಡಿಯುವುದಕ್ಕೆ ಕಣ್ಣೀರು ಸಿಗುತ್ತಿದೆ. ಅವರಿಗೆ ಕುಡಿಯುವುದಕ್ಕೆ ನೀರು ಸಿಗುತ್ತಾ ಇಲ್ಲ ಎಂದು ಹೇಳುತ್ತೇನೆ. ಇವತ್ತು ಅವರಿಗೆ ನೀರನ್ನು ಕೊಟ್ಟರೆ ಅದರಲ್ಲಿ ಅವರಿಗೆ ಕುಡಿಯಲು ನೀರು ಸಿಗುತ್ತದೆ. ಆದ್ದರಿಂದ ಹೇಮಾವತಿ ಬಗ್ಗೆ ಆಸಕ್ತಿ ವಹಿಸಿ ತುಮಕೂರು ಜಿಲ್ಲೆ ಹಾಗೂ ಮಂಡ್ಯಾ ಜಿಲ್ಲೆಗೆ ನೀರನ್ನು ಒದಗಿಸುವ ಬಗ್ಗೆ ಆದಷ್ಟು ಬೇಗ ಕಾರ್ಯಕ್ರಮ ಹಾಕಿಕೊಳ್ಳ ಬೇಕೆಂದು ಹೇಳುತ್ತೇನೆ. ಆದ್ದರಿಂದ ಈ ಒಂದು ಕೆಲಸವನ್ನು ಬೇಗ ತೆಗೆದುಕೊಂಡು ಟನಲ್ ಹಾಗೂ ಡ್ರಾಫ್ಟ್ ಕಟ್ ಕೆಲಸ ಹಾಗೂ ಚಾನಲ್ ಕೆಲಸ ಈ ಮೂರು ಕೆಲಸವನ್ನು ಸೈಮಲ್ಟೇನಿಯಸ್ ಆಗಿ ತೆಗೆದುಕೊಳ್ಳಬೇಕೆಂದು ಹಾಗೂ ಈ ಭಾಗದಲ್ಲಿ ೨ ಎಸ್.ಇ. ಕಛೇರಿಗಳನ್ನು ಪ್ರಾರಂಭ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋ ಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕಂತಹ ಬೇಡಿಕೆಗಳ ಬಗ್ಗೆ ಮಾನ್ಯ ಸದಸ್ಯರುಗಳು ಸವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ. ಆದರೆ ಈ ಒಂದು ವಿಷಯದ ಬಗ್ಗೆ ಗುಲ್ಬರ್ಗಾ ವಿಭಾಗಕ್ಕೆ ವಿಶೇಷವಾಗಿ ತಾರತಮ್ಯ ಆಗಿದೆ ಎಂದು ನಾನು ಹೇಳುವ ಹಾಗೇ ಇಲ್ಲ. ಈ ಒಂದು ಹಿಂದುಳಿದ ಭಾಗಕ್ಕೆ ಎಷ್ಟು ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟನ್ನು ಒದಗಿಸಿಲ್ಲ ಎಂದು ಈ ಸಂದರ್ಭದಲ್ಲಿ ಹೇಳ ಬೇಕಾಗುತ್ತದೆ. ಹೋದ ಸಲ ಬೀದರ್ ಜಿಲ್ಲೆಯಲ್ಲಿ ೪ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಂಡರು. ಆದರೆ ಅವುಗಳಲ್ಲಿ ಒಂದನ್ನೂ ಇನ್ನೂ ಪ್ರಾರಂಭ ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಹೇಳ ಬೇಕಾಗುತ್ತದೆ. ಆದರೆ ಈ ಸಲ ಮಾತ್ರ ಹೆಚ್ಚು ವ್ಯಾಪ್ತಿಯಲ್ಲಿ ತಂದು ಇಂತಹ ಯೋಜನೆಗಳನ್ನು ಮಾಡಬೇಕೆಂದು ಹೇಳಿ ವಿಚಾರ ಮಾಡಿದ್ದಾರೆ. ಇದು ಸ್ವಾಗತಾರ್ಹವಾದ ವಿಷಯ. ಸಣ್ಣ ಹಾಗೂ ದೊಡ್ಡ ನೀರಾವರಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಬೀದರ್ ಜಿಲ್ಲೆಯಲ್ಲಿ ಬರೀ ೪ ಪರ್ಸೆಂಟ್ ಅಷ್ಟು ಮಾತ್ರ ನೀರಾವರಿ ಆಗಿದೆ. ಹಾಗೂ ಅಲ್ಲಿ ಇನ್ನೂ ಹೆಚ್ಚು ನೀರಾವರಿ ಮಾಡುವುದಕ್ಕೆ ಆಸ್ಪದ ಇದೆ. ಆದರೆ ಬಂದು ಲಾಭವನ್ನು ನಾವು ಈಗ ಪಡೆದುಕೊಳ್ಳಬೇಕಾಗುತ್ತದೆ. ಈ ಲಾಭವನ್ನು ಪಡೆಯ ಬೇಕಾದರೆ ಸರ್ಕಾರ ಮನಸ್ಸು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ರಸ್ತೆಗಳ ಬಗ್ಗೆ ಹೇಳಬೇಕೆಂದರೆ, ನಮ್ಮ ಜಿಲ್ಲೆಯಲ್ಲಿನ ರಸ್ತೆಗಳು ಯಾವರೀತಿ ಇವೆ ಎಂಬುದು ಎಲ್ಲರಿಗೂ ಗೊತ್ತುಂಟು. ಈ ವಿಷಯದಲ್ಲಿ ಇನ್ನೂ ಸಾಕಷ್ಟು ಶ್ರಮವಹಿಸಿಕೊಂಡು ನಮ್ಮಲ್ಲಿನ ರಸ್ತೆಗಳ ಮಟ್ಟವನ್ನು ಸುಧಾರಿಸಬೇಕಾಗಿದೆ. ರಸ್ತೆಗಳ ರಿಪೇರಿ ಬಗ್ಗೆ ಆಯವ್ಯಯದಲ್ಲಿ ಕಡಿಮೆ ಹಣವನ್ನು ಒದಗಿಸಲಾಗಿದ್ದು ಈ ಬಗ್ಗೆ ಹೆಚ್ಚು ಜಾಗ್ರತೆವಹಿಸಿ ಹೆಚ್ಚು ಹಣ ಪಡೆದುಕೊಂಡು ಕೆಲಸ ಮಾಡಬೇಕಾಗಿದೆ. ಈ ದಿನ ಬಡ್ಜೆಟ್ಟಿನಲ್ಲಿ ಇಟ್ಟಿರುವ ಎಲ್ಲಾ ಕೆಲಸಗಳು ಆದರೆ ಮಾತ್ರ ಇದರ ಒಂದು ಲಾಭ ನಮಗೆ ದೊರೆಯುತ್ತದೆ. ಆದರೆ ಅದೂ ಕೂಡ ಸರಿಯಾಗಿ ಆಗುವಹಾಗಿಲ್ಲ. ನಾವು ಎಷ್ಟು ಹಣ ಇಟ್ಟಿದ್ದೇವೆ ಅದು ಕೂಡಾ ಖರ್ಚು ಆಗದೇ ಅದು ಲ್ಯಾಪ್ಸ್ ಆಗುತ್ತಿರುವುದನ್ನು ನಾವು ಬೇರೆ ಬೇರೆ ಸಮಯದಲ್ಲಿ ನೋಡುತ್ತಿದ್ದೇವೆ. ಇದರಿಂದ ಎಷ್ಟು ಕೆಲಸ ಆಗಬೇಕೋ ಅಷ್ಟು ಕೆಲಸ ಆಗಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ನಾವು ನಮ್ಮ ಜಿಲ್ಲೆಯ ಕಾರಂಜಿ ಯೋಜನೆ ಬಗ್ಗೆ ನಾವು ಸದನದಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೇವೆ. ಈ ಒಂದು ಯೋಜನೆ ಪ್ರಗತಿಯಲ್ಲಿದ್ದು ಮುಂದಿನ ಜೂನ್ ತಿಂಗಳಲ್ಲಿ ೨ ಸಾವಿರ ಎಕರೆ ಭೂಮಿಗೆ ನೀರಾವರಿ ಒದಗಿಸುತ್ತದೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಈ ಯೋಜನೆ ಕೆಳಗೆ ೭ ಹಳ್ಳಿಗಳು ಮುಳುಗಡೆಯಾಗಿದ್ದು ಆ ಜನರ ರೀಹ್ಯಾಬಿಲಿಟೇಷನ್ ಮಾಡಬೇಕಾಗಿದ್ದು ಇವರಿಗೆ ಕೆಲವೊಂದು ಸೌಕರ್ಯಗಳನ್ನು ಒದಗಿಸಬೇಕಾಗಿದೆ. ಆದರೆ ಅವರಿಗೆ ಯಾವ ಜಾಗದಲ್ಲಿ ವಸತಿ ನಿರ್ಮಾಣ ಮಾಡಬೇಕೋ ಅದನ್ನು ಸರಿಯಾದ ಪಕ್ಕಾ ಜಾಗದಲ್ಲಿ ನಿರ್ಮಾಣ ಮಾಡಿ ಅವರಿಗೆ ಮನೆಗಳನ್ನು ಒದಗಿಸುತ್ತೀರಿ ಎಂದು ಅಲ್ಲಿನ ಜನರ ಭಾವನೆಯಾಗಿದೆ.

ಅಧ್ಯಕ್ಷರೆ, ಈ ತರಹ ಮುಳುಗಡೆಯಾದಂಥ ಜಮೀನು ಮಾಲೀಕರಿಗೆ, ಕಲ್ಟಿವೇಟರ್ಸ್‌ಗೆ ರೊಕ್ಕ ಕೊಟ್ಟು ಬೇರೆ ಕಡೆಗೆ ವರ್ಗಾಯಿಸುವುದು ನಡೆಯುತ್ತಿದೆ. ಆ ಜನರಿಗೆ ಎಲ್ಲಿ ಭೂಮಿ ಇದೆ ಅದನ್ನು ನೋಡಿ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ಬಿಲ್ಡಿಂಗ್‌ಗಳ ಬಗ್ಗೆ ಹೇಳಬೇಕೆಂದರೆ ಈ ಸಾರಿ

ಬೀದರ್ ಜಿಲ್ಲೆಯಲ್ಲಿ ಸರ್ಕಾರಕ್ಕೆ ಸಂಬಂಧಪಟ್ಟಂತೆ ಅಡ್ಮಿನಿಸ್ಟ್ರೇಟೀವ್ ಸೈಡ್‌ನಲ್ಲಿ ಬರತಕ್ಕ ಬಿಲ್ಡಿಂಗ್‌ಗಳನ್ನು ಕಟ್ಟಲಿಕ್ಕೆ ಹಣ ಒದಗಿಸಿದ್ದಾರೆ. ನಮ್ಮಲ್ಲಿ ಪ್ರೈಮರಿಸ್ಕೂಲ ಮಿಡಲ್‌ಸ್ಕೂಲ್, ಹೈಸ್ಕೂಲು ಕಟ್ಟಡಗಳು ಬಹಳಷ್ಟು ರೆಂಟಲ್ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಸರ್ಕಾರದ ಕಟ್ಟಡದಲ್ಲಿ ನಡೆಸುವುದು ಯಾವುದು ಇಲ್ಲದೇ ಇರುವುದರಿಂದ ಇದರ ಬಗ್ಗೆ ವಿಶೇಷವಾದ ಗಮನಹರಿಸಿ ಸರ್ಕಾರ ಆ ಕಡೆ ಹೆಚ್ಚು ಆಸಕ್ತಿವಹಿಸಿ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕೆಂದು ಹೇಳುತ್ತೇನೆ. ಇನ್ನು ಕಾಮಗಾರಿಗಳ ಕೆಲಸದ ಬಗ್ಗೆ ಹೇಳಬೇಕೆಂದರೆ ತಾವು ಒದಗಿಸತಕ್ಕ ದುಡ್ಡಿನಲ್ಲಿ ಸಾಕಷ್ಟು ಪರ್‌ಸೆಂಟೇಜ್ ಕಂಟ್ರಾಕ್ಟ್‌ದಾರರಿಗೆ, ಆಫೀಸರ್ಸ್‌ಗೆ ಹೋಗುತ್ತದೆ, ಆ ಪರ್‌ಸೆಂಟೇಜ್ ಕಡಿಮೆಯಾಗಬೇಕು. ಬಡ್ಜೆಟ್ ಲ್ಯಾಪ್ಸ್ ಆಗತಕ್ಕ ಪದ್ಧತಿ ಆಗಬಾರದೆಂದು ನನ್ನ ಸಲಹೆ. ಈಗಾಗಲೇ ತಾವು ಟೋಕನ್ ಗ್ರಾಂಟ್ ಎಂದು ಕೊಟ್ಟಿದ್ದೀರಿ, ಆ ಟೋಕನ್ ಗ್ರಾಂಟ್ ಹಾಗೆಯೇ ಉಳಿಯಬಾರದು, ಆ ಹಣವನ್ನು ಸಂಪೂರ್ಣವಾಗಿ ವಿನಿಯೋಗಿಸಿ ಕೆಲಸವನ್ನು ಪೂರ್ಣಗೊಳಿಸುವಂತಾದು ಆಗಬೇಕೆಂದು ಹೇಳುತ್ತೇನೆ. ಮತ್ತೊಂದು ವಿಷಯದ ಬಗ್ಗೆ ಹೇಳಬೇಕೆಂದರೆ, ನಮ್ಮ ಜಿಲ್ಲೆಯ ಪರಿಸ್ಥಿತಿ ಬಹಳ ವಿಶೇಷ ಇದೆ. ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿದ್ದರೆ, ಅವರಿಗೆ ಟ್ರಾನ್ಸ್‌ಫರ್ ಮಾಡತಕ್ಕದ್ದು ನಡೆಯುತ್ತದೆ. ಈ ತರಹ ಆಗತಕ್ಕ ಟ್ರಾನ್ಸ್‌ಫರ್‌ಗಳನ್ನು ತಪ್ಪಿಸುವ ಸಲುವಾಗಿ ಸರ್ಕಾರದವರು ಜಾಗ್ರತೆ ವಹಿಸಬೇಕೆಂದು ಹೇಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ನಡೆಯತಕ್ಕ ಕಾಮಗಾರಿ ಕೆಲಸಗಳಲ್ಲಿ ರಸ್ತೆ ಕೆಲಸವಾಗಲಿ, ಕೆರೆಗಳ ಕೆಲಸವಾಗಲಿ ಬಿಲ್ಡಿಂಗ್‌ಗಳ ಕೆಲಸವಾಗಲಿ ಯಾವ ಕೆಲಸವೇ ನಡೆದರೂ ಅದು ಸಬ್‌ಸ್ಟ್ಯಾಂಡರ್ಡ್‌ನಲ್ಲಿ ನಡೆಯುತ್ತಿದೆ. ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಅನೇಕ ಸಾರಿ ತಂದಿದ್ದೇವೆ. ಈ ವರ್ಷ ಯಾವುದೇ ರಸ್ತೆ ಕೆಲಸವಾಗಲಿ, ಬಿಲ್ಡಿಂಗ್ ಕೆಲಸವಾಗಲಿ ಮಾಡಿದರೆ, ಮುಂದಿನ ವರ್ಷ ಆ ರಸ್ತೆಗಳು ಬಿಲ್ಡಿಂಗ್‌ಗಳು ಕೆಟ್ಟುಹೋಗಿರುತ್ತವೆ. ಮತ್ತೆ ರಿಪೇರಿ ಸಲುವಾಗಿ ವಿಶೇಷ ಬಡ್ಜೆಟ್ ನಾವು ಕೇಳಬೇಕಾಗುತ್ತದೆ. ಈ ತರಹ ಸಬ್‌ಸ್ಟ್ಯಾಂಡರ್ಡ್ ಕೆಲಸ ಏನು ನಡೆಯುತ್ತದೆ ಅವುಗಳ ಸಲುವಾಗಿ ವಿಶೇಷ ಗಮನವನ್ನು ಸರ್ಕಾರ ಕೊಡಬೇಕೆಂದು ಹೇಳುತ್ತೇನೆ. ರಾಜ್ಯದಲ್ಲಿ ಕಾಮಗಾರಿ ಕೆಲಸಗಳು ಏನು ನಡೆಯುತ್ತವೆ ಅವುಗಳ ಬಗ್ಗೆ ಪ್ರತಿ ಮೂರು ತಿಂಗಳಿಗೆ ಒಮ್ಮೆ ಆ ಕೆಲಸದ ಬಗ್ಗೆ ರಿಪೋರ್ಟ್ ತರಿಸತಕ್ಕ ವ್ಯವಸ್ಥೆ ಮಾಡಿ ಆ ಸ್ಥಳಗಳಿಗೆ ಆಗಿಂದಾಗ್ಗೆ ಭೇಟಿ ಕೊಟ್ಟು ಪರಿಶೀಲಿಸುವಂಥ ಕೆಲಸವನ್ನು ಮಾಡಿದರೆ ಸಬ್‌ಸ್ಟ್ಯಾಂಡರ್ಡ್ ಕೆಲಸ ಆಗುವುದನ್ನು ತಪ್ಪಿಸಲಿಕ್ಕೆ ಅವಕಾಶವಾಗುತ್ತದೆ. ಇನ್ನು ಹಳ್ಳಿಯ ಹೆದ್ದಾರಿಯ ಬಗ್ಗೆ ಕೆಲವೊಂದು ಕಾರ್ಯಕ್ರಮಗಳನ್ನು ಏನು ಹಾಕಿಕೊಂಡಿದ್ದೀರಿ ಅವುಗಳನ್ನು ಮೆಚ್ಚತಕ್ಕದಾಗಿದೆ. ಪ್ರತಿಯೊಂದು ಹಳ್ಳಿಗೂ ರಸ್ತೆಗಳನ್ನು ಒದಗಿಸಿಕೊಡುವ ಕಾರ್ಯವನ್ನು ಮಾಡಬೇಕೆಂದು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ರಸ್ತೆಗಳನ್ನೇ ಕಾಣದಂಥ ಹಳ್ಳಿಗಳಿಗೆ ರಸ್ತೆಗಳನ್ನು ಕೊಡಬೇಕು. ಹೆಚ್ಚು ರಸ್ತೆಗಳು ಇಲ್ಲದೇ ಇರುವಂಥ ಹಳ್ಳಿಗಳು ಇರುವುದನ್ನು ಗುಲ್ಬರ್ಗ ಬೀದರ್ ಭಾಗದಲ್ಲಿ ಕಾಣಬಹುದು. ಮಳೆಗಾಲದಲ್ಲಿ ಹಳ್ಳಿಗಳಿಗೆ ನಾವು ಹೋಗಲಿಕ್ಕೆ ಸಾಧ್ಯವಿಲ್ಲ. ಈ ಕಾಲದಲ್ಲಿ ಬಂಡಿ, ಚಕ್ಕಡಿ, ಸಾಧನೆ ಮಾಡಿಕೊಂಡು ಹೋಗಬೇಕಾಗುತ್ತದೆ. ಬಹಳ ಕಠಿಣ ಪರಿಸ್ಥಿತಿಯಾಗುತ್ತದೆ. ಡಿಪಾರ್ಟ್‌ಮೆಂಟುಗಳಲ್ಲಿ ಏತಕ್ಕೆ ಕೆಲಸ ಆಗುವುದಿಲ್ಲ ಎಂದು ಕೇಳಿದರೆ, ನಮಗೆ ಏನು ಮೆಷಿನರಿಗಳು ಬೇಕು, ಏನು ಸೌಕರ್ಯಗಳು ಬೇಕು ಅವೆಲ್ಲಾ ಇಲ್ಲ ಎಂದು ಹೇಳುತ್ತಾರೆ. ಯಾವ ಯಾವ ಇಲಾಖೆಗೆ ಏನೇನು ಮೆಷಿನರಿಗಳನ್ನು ಒದಗಿಸಬೇಕು ಅವುಗಳನ್ನು ಒದಗಿಸಿ ಕೆಲಸಗಳು ಸರಿಯಾಗಿ ನಡೆಯಲಿಕ್ಕೆ ವ್ಯವಸ್ಥೆಯನ್ನು ಮಾಡಬೇಕು. ನಮ್ಮಲ್ಲಿ ಕೆಎಸ್‌ಆರ್‌ಟಿಸಿ ಯವರು ಬೀದರ್ ಜಿಲ್ಲೆ ರಾಷ್ಟ್ರೀಕರಣ ಮಾಡಬೇಕೆಂದು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಮತ್ತೆ ರಿಪೋರ್ಟ್ ನೋಡಿದಾಗ ಅಲ್ಲಿನ ರಸ್ತೆಗಳು ಸರಿಯಿಲ್ಲ, ಅದರ ಸಲುವಾಗಿ ರಾಷ್ಟ್ರೀಕರಣ ಮಾಡಲಿಕ್ಕೆ ಅಷ್ಟೊಂದು ಆಸ್ಪದ ನಮಗೆ ಇಲ್ಲ ಎಂದು ಹೇಳಿದರು ಏಕೆಂದರೆ ಹೊಸ ಬಸ್ಸುಗಳನ್ನು ಅಲ್ಲಿ ಓಡಿಸಿದರೂ ಒಂದೆರಡು ತಿಂಗಳಲ್ಲಿ ಕೆಟ್ಟುಹೋಗುತ್ತವೆ. ಯಾವ ಕಡೆಯಿಂದ ನೋಡಿದರೂ ಲಾಸ್ ಆಗುವ ಸಂಭವ ಇದೆ. ಅದರ ಸಲುವಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮ ಭಾಗದಲ್ಲಿ ವಿಶೇಷವಾಗಿ ಉತ್ತಮ ರಸ್ತೆಗಳನ್ನು ಮಾಡುವುದರ ಜೊತೆಗೆ ಸಣ್ಣ ನೀರಾವರಿ ಕೆಲಸಗಳನ್ನು ಮಾಡಿಸಿಕೊಡಲು ಹೆಚ್ಚಿನ ಗಮನವನ್ನು ಕೊಡಬೇಕು, ಹೆಚ್ಚಿನ ಆಸಕ್ತಿ ವಹಿಸಿ ಆ ಕೆಲಸಗಳನ್ನು ಪೂರೈಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ದೊಡ್ಡಬೋರೇಗೌಡ (ಮಂಡ್ಯ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಇಲಾಖೆಯವರು ಮಂಡಿಸಿರತಕ್ಕ ಎಲ್ಲಾ ಬೇಡಿಕೆಗಳನ್ನು ಸ್ವಾಗತಿಸುತ್ತಾ ಸರ್ಕಾರದ ಗಮನಕ್ಕೆ ತಮ್ಮ ಮೂಲಕ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದಲ್ಲಿ ನೀರಾವರಿ ಬಹಳ ಕುಂಠಿತಗೊಂಡಿದೆ. ನಮ್ಮಲ್ಲಿ ಅನ್ನದ ಸಮಸ್ಯೆ ಬಹಳ ಜಟಿಲವಾದ ಸಮಸ್ಯೆಯಾಗಿದೆ. ಕಳೆದ ೫೦ ವರ್ಷಗಳಿಂದ ಈ ಬವಣೆ ಬಗೆಹರಿಸಿಲ್ಲ. ಕೇಂದ್ರವನ್ನೇ ಅವಲಂಬಿಸಿಕೊಂಡಿರುವುದನ್ನು ಹೇಳುತ್ತಿದ್ದಾರೆ. ಇಂಥ ಬೃಹತ್ ರಾಜ್ಯದಲ್ಲಿ ಇಷ್ಟೆಲ್ಲಾ ನೀರಾವರಿ ಸೌಲಭ್ಯವಿರುವಾಗ ನಾವು ಕೇಂದ್ರ ಸರ್ಕಾರದವರನ್ನೇ ಅವಲಂಬಿಸಿಕೊಂಡು ಪ್ರತಿ ತಿಂಗಳು ಗೋಧಿ, ಅಕ್ಕಿ, ತರಿಸತಕ್ಕದ್ದು ನಾಚಿಕೆಗೇಡಿನ ವಿಷಯ. ಇನ್ನು ಮುಂದಾದರೂ ಇಂತಾದ್ದು ನಿಲ್ಲಲಿ ಎಂದು ಹಾರೈಸುತ್ತೇನೆ. ಸುಮಾರು ನೂರಾರು ವರ್ಷಗಳಿಂದಲೂ ನಮ್ಮ ರಾಜ್ಯದ ಇಂಜಿನಿಯರ್‌ಗಳು ತಮ್ಮ ವೃತ್ತಿಯಲ್ಲಿ ಹೆಸರು ಗಳಿಸಿರುವುದಲ್ಲದೆ, ಪಾಶ್ಚಿಮಾತ್ಯ ದೇಶಗಳಲ್ಲೂ ಹೆಸರು ಗಳಿಸಿದ್ದಾರು. ಈಗ ನಿಸ್ಸಹಾಯಕರಾಗಿ, ನಿರುತ್ಸಾಹಿಗಳಾಗಿರುವುದು ಕಂಡುಬರುತ್ತಿದೆ. ಅದು ಸರಿಯಲ್ಲ. ನಮ್ಮ ಕಾಲದಲ್ಲಿ ಪರಿಪೂರ್ಣವಾಗಿ ನೀರಾವರಿ ಪ್ರಾಜೆಕ್ಟ್‌ಗಳನ್ನು ಜಾರಿಗೆ ತಂದು ನಮ್ಮ ಹೆಸರನ್ನು ಸೂರ್ಯ, ಚಂದ್ರಾಗಳು ಇರುವವರೆಗೂ ಇರುವಂಥ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು ೨೭ ವರ್ಷಗಳು ಕಳೆದರೂ ದುರದೃಷ್ಟವಶಾತ್ ನೀರಾವರಿ ಸೌಲಭ್ಯ ಅಳವಡಿಸಿಕೊಳ್ಳುವಂತಾದ್ದು ಏತಕ್ಕೆ ಆಗಲಿಲ್ಲವೋ ಗೊತ್ತಾಗಲಿಲ್ಲ. ಇನ್ನು ಮುಂದಾದರೂ ನಮ್ಮ ಮುಂದಿನ ಪೀಳಿಗೆಯವರು ಅನ್ನಕ್ಕಾಗಿ ಬೇರೆ ರಾಜ್ಯಗಳಿಗೆ ಕೈ ಚಾಚದಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕರೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಕಾವೇರಿ ಜಲಾನಯನ ಪ್ರದೇಶ ತಮಿಳುನಾಡಿನ ಒತ್ತಡದಿಂದಾಗಿ, ಮಳೆಯ ಅಭಾವದಿಂದಾಗಿ, ಸಾಗರದಲ್ಲಿ ತುಂಬುವ ನೀರಿನ ಮಟ್ಟ ದಿನೆ ದಿನೇ ಕುಸಿದಿದೆ. ಮಾನ್ಯ ಮಂತ್ರಿಗಳು ೧೯೭೪ನೇ ಇಸವಿಯ ಅಂದಾಜಿನಲ್ಲಿ ೧೦೦ ಕೋಟಿ ರೂಪಾಯಿ ಯೋಜನೆ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ, ಮಳೆ ಇಲ್ಲದೇ ಇದ್ದಾಗ ಸ್ವಲ್ಪ ತೊಂದರೆಯಾಗಬಹುದು. ಇವೊತ್ತು ವಿನಾ ಕಾರಣ ಕುಮಾರಧಾರೆ, ಬರಕೊಳ ನೀರು ಪಶ್ಚಿಮ ಘಟ್ಟಕ್ಕೆ ಹರಿದುಹೋಗಿ ಸೇರುತ್ತದೆ ಎರಡು ಹೊಳೆಗಳನ್ನು ಕಾವೇರಿ, ಹೇಮಾವತಿ, ಸೇರ್ಪಡೆ ಮಾಡಿದರೆ ತೊಂದರೆ ಪರಿಪೂರ್ಣವಾಗುವುದರ ಜೊತೆಗೆ ಅನ್ನದ ಸಮಸ್ಯೆಯೂ ನಿವಾರಣೆಯಾಗುತ್ತದೆ. ಸರ್ಕಾರ ಈ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ, ಈ ಕಾರ್ಯ ಅತಿಶೀಘ್ರವಾಗಿ ಫಲಪ್ರದವಾಗುವಂತೆ ಮಾಡಲಿ ಎಂದು ತಿಳಿಸುತ್ತೇನೆ. ಇನ್ನು ಕಾಲುವೆಗಳ ಬಗ್ಗೆ ಹೇಳಬೇಕೆಂದರೆ, ಯಾವುದೋ ಹಳ ವರ್ಷಗಳ ಹಿಂದೆ ಮಾಡಿದಂಥ ಸಣ್ಣ ಪ್ರಮಾಣದ ಕಾಲುವೆಗಳು ಇವೆ. ಅವುಗಳನ್ನು ವಿಸ್ತರಿಸುವುದು ಅವಶ್ಯಕತೆ ಇದೆ. ಅದನ್ನು ಮಾಡದೇ ಹೋದರೆ, ಕೊನೆಯ ಭಾಗದಲ್ಲಿರತಕ್ಕ ಜಮೀನುದಾರರಿಗೆ ಬಹಳ ನಷ್ಟ ಉಂಟಾಗುತ್ತದೆ. ನಮ್ಮ ಗೆಳೆಯ ಚೌಡಯ್ಯನವರಿಗೆ ನೀರಿನ ತೊಂದರೆ ಏನೂ ಅಷ್ಟು ಆಗುವುದಿಲ್ಲ. ನಾಲೆಯ ಕೊನೆಯ ಭಾಗದಲ್ಲಿ ಇರತಕ್ಕವನು ನಾನು ಒಬ್ಬ.

3-30 P.M.

ಅವರು ಒಂದು ವಾರದಲ್ಲಿ ಒಂದು ದಿವಸ ನೀರನ್ನು ಹಾಯಿಸಿಕೊಂಡರೆ ನಮಗೆ ಕೇವಲ ೨ ಗಂಟೆ ಹೊತ್ತು ಕೊಡುತ್ತಾರೆ. ವಿಶ್ವೇಶ್ವರಯ್ಯ ನಾಲೆಯ ಕೊನೆಯಲ್ಲಿರತಕ್ಕ ಜಮೀನ್ದಾರರಿಗೂ ವ್ಯವಸ್ಥಿತವಾದ ರೀತಿಯಲ್ಲಿ ನೀರನ್ನು ಕೊಟ್ಟು ಅವರು ಬೇಸಾಯ ಮಾಡಿ ಅವರ ಬೆಳೆ ಕೈಗೆ ಸಿಕ್ಕುವಂತೆ ಮಾಡಬೇಕೆಂದು ಹೇಳಬಯಸುತ್ತೇನೆ. ವಿಶ್ವೇಶ್ವರಯ್ಯ ನಾಲೆಯ ಹಿಂಭಾಗದಲ್ಲಿರತಕ್ಕ ಕೆರೆಗಳಲ್ಲಿ ಹೂಳು ತುಂಬಿದೆ. ಈ ಕೆರೆಗಳಲ್ಲಿ ಹೂಳನ್ನು ತೆಗೆಸಲು ಕ್ರಮ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಪತ್ರವನ್ನು ಬರೆದು ನೀರು ಹೆಚ್ಚು ಪ್ರಮಾಣದಲ್ಲಿ ಶೇಖರವಾಗುವಂತೆ ಮಾಡಬೇಕೆಂದು ಹೇಳಿದ್ದೇನೆ. ಆದರೆ ಅದರಿಂದ ಏನೂ ಪ್ರಯೋಜನವಾಗಿಲ್ಲ. ವಿಶ್ವೇಶ್ವರಯ್ಯ ನಾಲೆಯ ಎರಡು ಕಡೆಗಳಲ್ಲೂ ಗಾಡಿಗಳು ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬೇಸಾಯಕ್ಕೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿಕೊಡುವಂತೆ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು 'ಕಳೆದ ಅಕ್ಟೋಬರ್ ತಿಂಗಳಲ್ಲಿ ಮೈಸೂರು ರಾಜಧಾನಿಯಲ್ಲಿ ಒಂದು ಹೇಳಿಕೆಯನ್ನು ನೀಡಿದ್ದಾರೆ ಅದು ಏನೆಂದರೆ, ಮೈಸೂರು ಮತ್ತು ಬೆಂಗಳೂರು ಮಧ್ಯೆ ಇರತಕ್ಕ ಹೆದ್ದಾರಿಯ ರಸ್ತೆಗಳು ತುಂಬಾ ಇಕ್ಕಟ್ಟಾಗಿರುವುದರಿಂದ ಪ್ರತಿದಿನ ಅನೇಕ ಅಪಘಾತಗಳು

ಸಂಭವಿಸುತ್ತಿವೆ. ಆದ್ದರಿಂದ ಮೈಸೂರು-ಬೆಂಗಳೂರು ನಡುವೆ ಇರತಕ್ಕ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಮಾಡುವುದಾಗಿ ಹೇಳಿದ್ದಾರೆ. ಮೈಸೂರು-ಬೆಂಗಳೂರು ಹೆದ್ದಾರಿಯು ಅತ್ಯಂತ ಹೆಸರುವಾಸಿಯಾದುದು. ಒಂದಾನೊಂದು ಕಾಲದಲ್ಲಿ ಇದರ ಕೀರ್ತಿ ಪ್ರಪಂಚದಾದ್ಯಂತ ಹಬ್ಬಿತ್ತು. ಅದೇರೀತಿ ಶ್ರೀರಂಗಪಟ್ಟಣದ ಹೆಸರೂ ಕೂಡ ಪ್ರಪಂಚದಾದ್ಯಂತ ಹೆಸರುವಾಸಿಯಾದುದು. ನಮ್ಮ ರಾಜ್ಯದ ಭೂಪಟವನ್ನು ತೆಗೆದುನೋಡಿದರೆ ಮೈಸೂರಿನ ಹೆಸರು ಕಾಣದಿದ್ದರೂ ಶ್ರೀರಂಗಪಟ್ಟಣದ ಹೆಸರು ಎದ್ದು ಕಾಣುತ್ತಿದೆ. ೮೮ ಮೈಲಿ ಉದ್ದವುಳ್ಳ ಈ ರಸ್ತೆಯನ್ನು ಅತಿ ಶೀಘ್ರವಾಗಿ ಜೋಡಿ ರಸ್ತೆಯಾಗಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ನಾನು ಇಷ್ಟೊಂದು ಒತ್ತಾಯ ಮಾಡಿ ಹೇಳುವುದಕ್ಕೆ ಕಾರಣ ಎಂದರೆ, ಪ್ರತಿದಿನ ಸಾವಿರಾರು ವಾಹನಗಳು ಓಡಾಡುತ್ತಿದ್ದು ರಸ್ತೆಗಳು ಚಿಕ್ಕದಾಗಿರುವುದರಿಂದ ಪ್ರತಿದಿನ ಹಲವಾರು ಅಪಘಾತಗಳು ಸಂಭವಿಸುತ್ತಿವೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಈ ರಸ್ತೆಯನ್ನು ಜೋಡಿ ರಸ್ತೆಯಾಗಿ ಮಾಡಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಮಂಡ್ಯ ನಗರದಲ್ಲಿ ಒಂದು ಕೆರೆ ಇದ್ದು ಅದರಲ್ಲಿರತಕ್ಕ ನೀರು ಕೆಟ್ಟುಹೋಗಿ ಜನರ ಆರೋಗ್ಯದಮೇಲೆ ತುಂಬಾ ಪರಿಣಾಮ ಬೀರಿದೆ ಮಾನ್ಯ ಮಂತ್ರಿಗಳೂ ಇದನ್ನು ನೋಡಿದ್ದಾರೆ. ೩೨೮ ಎಕರೆಗೆ ನೀರಾವರಿ ಆಗುವಂತಿದ್ದರೆ ಇದರ ಒಳಾಯಂ ೬೮೦ ಎಕರೆ ಇದೆ. ಈ ಕೆರೆಯ ನೀರು ಬಹಳ ಕೆಟ್ಟಿರುವುದರಿಂದ ಈ ನಗರದ ನಾಗರೀಕರ ಆರೋಗ್ಯ ಕುಂಠಿತವಾಗಿದೆ. ಆದ್ದರಿಂದ ಈ ಕೆರೆಯನ್ನು ಒಡೆದು ವ್ಯವಸ್ಥಿತವಾಗಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ. ವಿಶ್ವೇಶ್ವರಯ್ಯ ನಾಲೆಯ ಪ್ರದೇಶದಲ್ಲಿ ದಾಸ್ತಾನು ಮಾಡತಕ್ಕ ನೀರು ಎರಡು ದಿವಸ ಕೂಡ ಇರುವುದಿಲ್ಲ. ಎಲ್ಲ ತೂಬುಗಳನ್ನೂ ಒಡೆಯುತ್ತಿರುತ್ತಾರೆ. ಇದರಿಂದಾಗಿ ಕೊನೆಯಲ್ಲಿರತಕ್ಕ ರೈತರ ಜಮೀನಿಗೆ ನೀರಿಲ್ಲದೆ ಬಹಳ ತೊಂದರೆಯಾಗುತ್ತಿದೆ. ಈಗ ಬೀಸುಕೋಡಿ ಮತ್ತು ತೂಬುಗಳನ್ನು ಒಡೆದುಹಾಕಿದ್ದಾರೆ. ವಿಚಾರ ಗೊತ್ತಿದ್ದರೂ ಸಹ ಸಾಕ್ಷಿಯನ್ನು ಹೇಳುವುದಕ್ಕೆ ಯಾರು ಬರುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಥವಾ ಇಂಜಿನಿಯರ್‌ಗಳಿಗೆ ಇವರ ಅಧಿಕಾರವನ್ನು ಕೊಡುವ ಸಲುವಾಗಿ ಒಂದು ಕಾನೂನು ಮಾಡಿ ಅವರಿಗೆ ಅಧಿಕಾರವನ್ನು ಕೊಟ್ಟು ಯಾರು ಈರೀತಿ ತಪ್ಪುಮಾಡುತ್ತಾರೆ ಅಂಥವರಿಗೆ ದಂಡ ಹಾಕುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಾವೇರಿ ಮತ್ತು ಹೇಮಾವತಿ ವಿಭಾಗದಲ್ಲಿ ಈಗಾಗಲೇ ಕಟ್ಟಿರತಕ್ಕ ನೀರಾವರಿ ಯೋಜನೆಗಳಿಂದ ಅತಿಶೀಘ್ರವಾಗಿ ಫಲ ಸಿಕ್ಕುವಂತೆ ಮಾಡಲಿ ಎಂದು ತಮ್ಮ ಮುಖಾಂತರ ಕೇಳಿಕೊಂಡು ಈಗಾಗಲೇ ೩-೪ ಬಾರಿ ತಾವು ಗಂಟೆಯನ್ನು ಬಾರಿಸಿರುವುದರಿಂದ ಇನ್ನು ಮುಂದೆ ನಾನು ನನ್ನ ಭಾಷಣವನ್ನು ಮುಂದುವರಿಸುವುದು ಸರಿಯಲ್ಲವೆಂದು ತಿಳಿದು ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಖಾತೆಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಮೇಲೆ ನಾನು ಮಾತನಾಡಬೇಕಾದರೆ ಕೇವಲ ೫-೧೦ ನಿಮಿಷಗಳ ಕಾಲವನ್ನು ಕೊಟ್ಟರೆ ಅದಕ್ಕೆ ನನಗೆ ಸಾಕಾಗುವುದಿಲ್ಲ. ಕನಿಷ್ಟ ೨ ಗಂಟೆ ಆದರೂ ಬೇಕಾಗುತ್ತದೆ.......

ಛೇರ್ಮನ್.—ಹಾಗಿದ್ದಾರೆ ನೀವೇ ವಿಷಯವನ್ನು ಇನಿಷಿಯೇಟ್ ಮಾಡಬಹುದಿತ್ತು. ಈಗಾಗಲೇ ಅನೇಕ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನೇ ತಾವೂ ಹೇಳದೆ ಹೊಸ ವಿಚಾರಗಳು ಏನಾದರೂ ಇದ್ದರೆ ಅದನ್ನು ಹೇಳಿ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನನ್ನ ಅನೇಕ ಮಿತ್ರ ಶಾಸಕರು ಈ ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆಯ ಬಗ್ಗೆ ಬಹಳ ಪ್ರಮುಖವಾದ ವಿಚಾರಗಳನ್ನು ಪ್ರಸ್ತಾಪಮಾಡಿ ತಮ್ಮದೇ ಆದಂಥ ಬೆಳಕನ್ನು ಈ ಇಲಾಖೆಗಳ ಮೇಲೆ ಚೆಲ್ಲಿದ್ದಾರೆ. ಮಾನ್ಯ ಸಚಿವರಾದ ದೇವೇಗೌಡರು ಬಹಳ ಜಾಣತನದಿಂದ ಈ ಒಂದು ಬೇಡಿಕೆಯನ್ನು ಸದನದ ಮುಂದೆ ಮಂಡಿಸಿದ್ದಾರೆಂದು ನಾನು ಭಾವಿಸುತ್ತೇನೆ. ಯಾವುದೇ ಇಲಾಖೆಯ ಬೇಡಿಕೆಯ ಮೇಲಾಗಲಿ ಕೂಲಂಕಂಶವಾಗಿ ಚರ್ಚೆ ಮಾಡುವುದು ಒಳ್ಳೆಯದು ಆದರೆ ಆ ಬೇಡಿಕೆಗಳನ್ನು ಮೊದಲು ಸಂಪೂರ್ಣವಾಗಿ ಓದಿಕೊಂಡು ಬಂದು ಇಲ್ಲಿ ಚರ್ಚೆಮಾಡುವುದುಹಿಂದಿನಿಂದ

ಬಂದಿರತಕ್ಕ ಸಂಪ್ರದಾಯ. ಆದರೆ ಇವತ್ತು ಬೆಳಿಗ್ಗೆ ಈ ಬೇಡಿಕೆಗಳನ್ನು ಸದನದ ಮುಂದಿಟ್ಟಿರುವುದು ಒಳ್ಳೆಯ ಸಂಪ್ರದಾಯವಲ್ಲ. ಇದೊಂದು ಕೆಟ್ಟ ಅಭ್ಯಾಸ. ನಾವು ಕೂಲಂಕುಷವಾಗಿ ಚರ್ಚೆಮಾಡ ಬೇಕಾದರೆ ಕನಿಷ್ಠ ಒಂದು ದಿವಸವಾದರೂ ಅವಕಾಶ ಇರಬೇಕು. ಆದರೆ ಇವರು ಇವತ್ತು ಕೊಟ್ಟಿರು ವುದನ್ನು ನೋಡಿದರೆ ನಾವು ಇದರ ಮೇಲೆ ಚರ್ಚೆ ಮಾಡಬಾರದೆಂಬ ಉದ್ದೇಶದಿಂದ ಕೊಟ್ಟಿದ್ದಾರೋ ಏನೋ ಎಂದು ಅನಿಸುತ್ತದೆ. ಈ ಚರ್ಚೆಯಲ್ಲಿ ಎಲ್ಲರೂ ಭಾಗವಹಿಸ ಬೇಕಾದರೆ ಈ ಬೇಡಿಕೆಗಳ ಅಭ್ಯಾಸ ಬಹಳ ಮುಖ್ಯವಾದುದು.

ಮಾನ್ಯ ಅಧ್ಯಕ್ಷರೆ, ಮೊಟ್ಟ ಮೊದಲನೆಯದಾಗಿ ನೀರಾವರಿ ಇಲಾಖೆಯ ಬಗ್ಗೆ ಅದರಲ್ಲೂ ಮೈನರ್ ಇರಿಗೇಷನ್ ಬಗ್ಗೆ ನಾನು ಮಾತನಾಡಲು ಬಯಸುತ್ತೇನೆ. ನೀರಾವರಿ ಯೋಜನೆ ಗಳಿಗೋಸ್ಕರ, ನಮ್ಮ ಕೃಷಿ ಕ್ಷೇತ್ರದ ಜನರ ಬಡತನವನ್ನು ಹೋಗಲಾಡಿಸುವ ದೃಷ್ಟಿಯಿಂದ ಬೇರೆ ದೇಶದಿಂದ ತಂದ ಹಣವನ್ನು ಸದುಪಯೋಗಪಡಿಸಿಕೊಳ್ಳದೇ ಇರುವ ಕಾರಣದಿಂದ ಇವರನ್ನು ನಾನು ಬಹಳವಾಗಿ ದ್ವೇಷಿಸುತ್ತೇನೆ.

ನಮ್ಮಲ್ಲಿ ಯೋಜನೆಗಳು ಬಂದಿರತಕ್ಕಂಥದ್ದನ್ನು ಸದುಪಯೋಗ ಪಡಿಸಿಕೊಳ್ಳತಕ್ಕಂಥ ಶಕ್ತಿ ನಮ್ಮ ರಾಜ್ಯದ ಜನತೆಗೆ ಇಲ್ಲ ಎಂದು ಹೇಳುತ್ತೇನೆ ದೇಶದ ಜನತೆಗೆ ಅನುಕೂಲ ವಾಗಬೇಕು ಎನ್ನುವ ಸದುದ್ದೇಶದಿಂದ ಹಣವನ್ನು ಕೊಟ್ಟರೂ ಉಪಯೋಗ ಮಾಡ ತಕ್ಕಂಥ ಸಾಮರ್ಥ್ಯ ನಮ್ಮಲ್ಲಿ ಇಲ್ಲ ಎಂದು ಹೇಳಿದಾಗ ಇದಕ್ಕೆ ಕಾರಣಕರ್ತರು ಯಾರು ಎನ್ನುವುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಮ್ಮ ಸ್ಪಷ್ಟವಾದ ನಿಲುವನ್ನು ತಿಳಿಸಬೇಕು. ೧೯೮೨–೮೩ನೇ ಇಸವಿಯಲ್ಲಿ ೬೨ ಕೋಟಿ ರೂಪಾಯಿಗಳನ್ನು ಪೂರ್ತಿಯಾಗಿ ಉಪಯೋ ಗಿಸಿ ಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಡುತ್ತೀರಿ ಎಂಬುದಕ್ಕೆ ಸ್ಪಷ್ಟವಾಗಿ ವಿವರಗಳನ್ನು ಒದಗಿಸಬೇಕು ಯಾವರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಯಾವ ಯಾವ ಜಿಲ್ಲೆಗಳಿಗೆ ಯಾವ ಯಾವ ಹಳ್ಳಿಗಳಿಗೆ ಹಾಕಿಕೊಂಡ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಬೇಕು ಎನ್ನುವ ಧೋರಣೆಯ ಬಗ್ಗೆ ಚರ್ಚೆ ಮಾಡದೆಹೋದರೆ ಉಳಿದಿರತಕ್ಕಂಥ ಕೆಲಸಗಳು ಕೂಡ ನೆನಗುದಿಗೆಯಾದೀತು ಎಂಬಕಾರಣದಿಂದ ಚರ್ಚೆ ಮಾಡಬೇಕಾಗಿದೆ. ಕೃಷ್ಣಾಮೇಲ್ದಂಡೆ ಯೋಜನೆ ನಮಗೆ ನಿದರ್ಶನವಾಗಿದೆ. ಬೇರೆ ಬೇರೆ ಇಲಾಖೆಗಳಿಗೆ ಬೇರೆ ಬೇರೆ ದೃಷ್ಟಿಯಿಂದ ಬಂದಿರತಕ್ಕಂಥ ಹಣ ಉದಾಹರಣೆ ನಮ್ಮ ಮುಂದಿಟ್ಟುಕೊಂಡು ನಿಂತಿದ್ದೇವೆ. ಆ ರೀತಿ ಮೈನರ್ ಇರಿಗೇಷನ್ ಯೋಜನೆಗಳಿಗೆ ಆಗ ಬಾರದು ಎನ್ನುವುದನ್ನು ಈ ಸಂದರ್ಭದಲ್ಲಿ ಬಹಳ ವಿಷಾದದಿಂದ ವ್ಯಕ್ತಪಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ ಈವತ್ತು ಮೈನರ್ ಇರಿಗೇಷನ್ ಕೆಲಸಗಳನ್ನು ನಾವು ನೋಡಿದ್ದೇವೆ. ಸುಮಾರು ೧೯೭೦ನೇ ಇಸವಿಯಿಂದ ೧೯೮೮ ನೇ ಇಸವಿಯವರೆಗೆ ಅನೇಕ ಯೋಜನೆಗಳನ್ನು ಹಾಕಿ ಕೊಂಡಿದ್ದೆವು ಎ ಲಿಸ್ಟ್ ಬಿ ಲಿಸ್ಟ್ ಸಿ ಲಿಸ್ಟ್ ಎಂದು ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಈವತ್ತು ಫಸ್ಟ್ ಪ್ರೈಯಾರಿಟಿ, ಸೆಕೆಂಡ್ ಪ್ರೈಯಾರಿಟಿ, ತರ್ಡ್ ಪ್ರೈಯಾರಿಟಿ ಎಂದು ಯೋಜನೆಗಳಿಗೆ ಪ್ರೈಯಾರಿಟಿ ಕೊಟ್ಟುಕೊಂಡು ಪ್ರಾಮುಖ್ಯತೆಯನ್ನು ಕೊಟ್ಟಿದ್ದೀರಾ ಎಂದು ಕೇಳುತ್ತೇನೆ. ಅದು ಮುಗಿಯಿತೇ ಇಲ್ಲವೇ ಎನ್ನುವುದನ್ನು ನೋಡಿದ್ದೀರಾ ? ಉದಾಹರಣೆಗೆ ಹೇಳುವುದಾದರೆ ಹೋದ ವರ್ಷ ಅನೇಕ ಯೋಜನೆಗಳನ್ನು ನಮಗೆ ಕೊಟ್ಟಿರಿ. ನಮ್ಮ ತಾಲ್ಲೂಕಿಗೆ ಕೊಟ್ಟಿರಿರಾಜ್ಯದ ಅನೇಕ ಕ್ಷೇತ್ರಗಳಿಗೆ ಕೊಟ್ಟಿರಿ ಆದರೆ ಯಾವ ಯಾವ ಕ್ಷೇತ್ರಗಳಿಗೆ ಕೊಟ್ಟಿದ್ದೀರಿ, ಆ ಕ್ಷೇತ್ರದ ಜನರು ಆಸೆಯಿಂದ ಕಣ್ಣಿಟ್ಟು ನೀರು ಬರುತ್ತದೆ ಎಂದು ಈವತ್ತಿನ ವರೆಗೂ ನೋಡು ತ್ತಿದ್ದರೂ ಅದನ್ನು ಕಾರ್ಯ ರೂಪಕ್ಕೆ ತರತಕ್ಕಂಥ ಸಾಧ್ಯತೆ ಕಂಡು ಬರಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆ ಪಡುತ್ತೇನೆ. ನನ್ನ ಕ್ಷೇತ್ರದಲ್ಲಿ ಕೊಟ್ಟಂಥ ಅನೇಕ ಯೋಜನೆಗಳ ಪೈಕಿ ಒಂದು ಮೈನರ್ ಇರಿಗೇಷನ್ ಯೋಜನೆಯನ್ನೂ ಕೂಡ ಕಾರ್ಯಗತ ಮಾಡಲಿಕ್ಕೆ ಸಾಧ್ಯವಾಗಲಿಲ್ಲ, ಸ್ಯಾಂಕ್ಷನ್ ಕೂಡ ಆಗಿಲ್ಲ. ಇದಕ್ಕೆ ಯಾರು ಕಾರಣಕರ್ತರು ಎನ್ನುವುದು ಗೊತ್ತಾಗುತ್ತಿಲ್ಲ. ಇದಕ್ಕೆ ಯಾರನ್ನು ದೂಷಿಸಬೇಕು, ಅಥವಾ ಯಾವ ಅಧಿಕಾರಿಗಳನ್ನು ದೂಷಿಸಬೇಕು ಎನ್ನುವುದು ಗೊತ್ತಾಗು ತ್ತಿಲ್ಲ. ಈವತ್ತು ನಮ್ಮ ಜನರು ನಮ್ಮನ್ನು ದೂಷಿಸುತ್ತಿದ್ದಾರೆ. ಇದಕ್ಕೆ ಯಾರುಹೊಣೆ' ನಮ್ಮಲ್ಲಿ ಇರತಕ್ಕಂಥ ಹಣದ ವ್ಯಾಪ್ತಿಯನ್ನು ನೋಡಿಕೊಂಡು ಕೊಟ್ಟಿರ ತಕ್ಕಂಥ ೧೦ ಯೋಜನೆಗಳಲ್ಲಿ ಒಂದಾದರೂ ಯೋಜನೆಯನ್ನು ಪೂರ್ತಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ

ಜನರೂ ಕೂಡ ಸರ್ಕಾರವನ್ನು ನಂಬುತ್ತಾರೆ. ನಮ್ಮ ಮೇಲೂ ನಂಬಿಕೆ ಇಡುತ್ತಾರೆ, ಮತ್ತೊಬ್ಬರ ಮೇಲೂ ನಂಬಿಕೆ ಇಡುತ್ತಾರೆ. ಸರ್ಕಾರ ಏನೋ ಮಂಜೂರು ಮಾಡುತ್ತಾರೆ. ಆಶ್ವಾಸನೆಯನ್ನು ಕೊಡುತ್ತಾರೆ ಶಾಸಕರೂ ಕೂಡ ಆಶ್ವಾಸನೆಯನ್ನು ಕೊಡುತ್ತಾರೆ. ಆದರೆ ಕಾರ್ಯರೂಪಕ್ಕೆ ತರದೆಹೋದರೆ ಇಡೀ ಶಾಸನ ಸಭೆಯೇ ದೋಷಕ್ಕೆ ಗುರಿಯಾಗಬೇಕಾಗುತ್ತದೆ. ಇದಕ್ಕೆ ನಾವು ನೀವು ಎಲ್ಲರೂ ಜವಾಬ್ದಾರರಾಗಬೇಕಾಗುತ್ತದೆ ಎನ್ನುವುದನ್ನು ಮರೆಯಕೂಡದು. ಈರೀತಿ ಮೈನರ್ ಇರಿಗೇಷನ್ ಮಂಜೂರು ಮಾಡತಕ್ಕಂಥ ಕಾರ್ಯಕ್ರಮ ಇದೆಯಲ್ಲ ಇದನ್ನು ಯಾವ ಆಧಾರದ ಮೇಲೆ ಮಂಜೂರು ಮಾಡುತ್ತೀರಿ ಎನ್ನುವುದನ್ನು ಕೂಡ ವಿಚಾರ ಮಾಡಬೇಕಾಗುತ್ತದೆ. ನೀರಾವರಿ ಯೋಜನೆಗಳು ಯಾವುದೇ ಇಲ್ಲದ ಹಿಂದುಳಿದಿರತಕ್ಕಂಥ ಜಿಲ್ಲೆ ಇದೆ. ಆ ಜಿಲ್ಲೆ ಪ್ರಾತಿನಿಧ್ಯ ಸಿಕ್ಕದೆ ಇರತಕ್ಕಂಥದ್ದು ತಮ್ಮ ಪಟ್ಟಿಯಲ್ಲಿ ಇದ್ದರೆ ಅದಕ್ಕೆ ಆದ್ಯತೆಯನ್ನು ಕೊಡಬೇಕು. ರಾಯಚೂರು ಗುಲ್ಬರ್ಗಾ, ಧಾರವಾಡ ಬೆಳಗಾಮ್ ಜಿಲ್ಲೆಗಳನ್ನು ತೆಗೆದುಕೊಂಡರೆ ಬೇರೆ ಬೇರೆ ಜಿಲ್ಲೆಗಳನ್ನು ತೆಗೆದುಕೊಂಡು ಪ್ರತಿಯೊಂದನ್ನು ಕೂಲಂಕುಶವಾಗಿ ನೋಡಿದಾಗ ಪ್ರತಿಯೊಂದರಲ್ಲೂ ವ್ಯತ್ಯಾಸವನ್ನು ನಾವು ಕಾಣುತ್ತಿದ್ದೇವೆ. ಈ ವ್ಯತ್ಯಾಸ ಆಗಬಾರದು, ಸರ್ಕಾರದ ದೃಷ್ಟಿಯಲ್ಲಿ ಎಲ್ಲ ಒಂದೇ ಆಗಿರಬೇಕು. ರಾಯಚೂರು ಜನತೆಯಾಗಲಿ, ಮೈಸೂರು ಜನತೆಯಾಗಲಿ ಮಂಡ್ಯ ಜನತೆಯಾಗಲಿ ಎಲ್ಲರನ್ನು ಒಂದೇ ಸಮತೋಲನದಿಂದ ನೋಡತಕ್ಕಂಥದ್ದು ಸರ್ಕಾರದ ಜವಾಬ್ದಾರಿ. ಯಾರು ಸರ್ಕಾರದ ಭಾರವನ್ನು ಹೊತ್ತಿರುತ್ತಾರೋ ಅವರ ಮೇಲೆ ಇರತಕ್ಕಂಥ ಜವಾಬ್ದಾರಿ ಮತ್ತು ಕರ್ತವ್ಯವಾಗಿರುತ್ತದೆ. ಅದನ್ನು ಬಿಟ್ಟು ಈವತ್ತು ತಾವು ಕೊಟ್ಟಿರುವ ಅಂಕಿ ಅಂಶಗಳಿಂದ ನೋಡಿದಾಗ ಯಾವ ಜಿಲ್ಲೆ ಅತಿ ಹಿಂದುಳಿದಿದೆ, ಯಾವ ಜಿಲ್ಲೆ ನೂರಾರು ವರ್ಷಗಳಿಂದ ನಿರ್ಲಕ್ಷತನದಿಂದ ತೊಂದರೆಯನ್ನು ಅನುಭವಿಸುತ್ತಿದೆ, ಕುಡಿಯುವ ನೀರಿಗೆ ತೊಂದರೆಯನ್ನು ಅನುಭವಿಸುತ್ತಿದೆ ಎರಡು ಹೊತ್ತಿನ ಅನ್ನಕ್ಕಾಗಿ ತೊಂದರೆಯನ್ನು ಅನುಭವಿಸುತ್ತಿದೆ ಅಂಥ ಜನರನ್ನು ಬಹಳ ಹೀನವಾಗಿ ಕಾಣುತ್ತಾ ಇರತಕ್ಕಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಈ ತೊಂದರೆಯನ್ನು ಹೋಗಲಾಡಿಸುವುದಕ್ಕೆ ಏನು ಮಾಡಬೇಕೋ ಅದನ್ನು ಈವತ್ತು ನೋಡಬೇಕು, ಮೈನರ್ ಇರಿಗೇಷನ್ ಆಗಲಿ ಮೇಜರ್ ಇರಿಗೇಷನ್ ಆಗಲಿ ಯಾವುದೇ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದರೂ ಅದನ್ನು ಮುಗಿಸಲು ಆದಷ್ಟು ಪ್ರಯತ್ನ ಮಾಡಬೇಕು. ಅಪ್ಪರ್ ಕೃಷ್ಣಾ, ಮಲಪ್ರಭಾ ಯೋಜನೆಯಾಗಲಿ, ಘಟಪ್ರಭಾ ಯೋಜನೆಯಾಗಲಿ ಕಾವೇರಿ ಜಲಾಶಯದ ಪ್ರದೇಶದ ಯೋಜನೆಗಳನ್ನು ಪೂರ್ಣವಾಗಿ ವ್ಯವಹಾರಿಕವಾಗಿ ಮುಗಿಸಬೇಕು ಎನ್ನುವ ಮಾತನ್ನು ಹೇಳುತ್ತಾ ಜವಾಬ್ದಾರಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕಡೆ ಯೋಜನೆಗಳ ಬಗ್ಗೆ ಬಹಳ ಅಭಿಮಾನ ಇಟ್ಟುಕೊಂಡಿದ್ದೀರೆಂದು ತಿಳಿದು ಕೊಂಡಿದ್ದೆವು. ಆದರೆ ನಮ್ಮಲ್ಲಿರತಕ್ಕಂಥ ಮಲಪ್ರಭಾ, ಘಟಪ್ರಭಾ, ಕೃಷ್ಣಾ ಮೇಲ್ದಂಡೆ ಈ ಯೋಜನೆಗಳು ಸುಮಾರು ೨೦–೩೦ ವರ್ಷಗಳಲ್ಲಿಯೇ ಆದುದಾಗಿರುತ್ತದೆ. ಯೋಜನೆಗಳ ಅಭಿವೃದ್ಧಿ ಕಾರ್ಯಕ್ಕೆ ೧೦–೧೧ ಕೋಟಿ ರೂಪಾಯಿಗಳನ್ನು ಇಟ್ಟಿರತಕ್ಕಂಥದ್ದನ್ನು ನೋಡಿದರೆ ಎಷ್ಟು ಕಡೆಗಣಿಸಿದ್ದೀರಿ ಎಂದು ಕಾಣುತ್ತದೆ. ಈ ಯೋಜನೆಗಳಿಗೆ ಎಷ್ಟು ಪ್ರಾಧಾನ್ಯತೆ ಕೊಡಬೇಕಾಗಿತ್ತೋ ಅಷ್ಟು ಪ್ರಾಧಾನ್ಯತೆಯನ್ನು ಕೊಟ್ಟಿಲ್ಲ. ಈವತ್ತಿನ ದಿವಸ ಸಮತೋಲನ ನೋಡಿದಾಗ ಅಥವಾ ಬ್ಯಾಕ್‌ಲಾಗ್ ಪರಿಸ್ಥಿತಿಯನ್ನು ನೋಡಿದಾಗ ಅಥವಾ ಈ ಭಾಗದ ಜನರ ಕಠಿಣವಾದ ಪರಿಸ್ಥಿತಿಯನ್ನು ನೋಡಿದಾಗ ಈ ಜಿಲ್ಲೆಗಳಿಗೆ ಸಮತೋಲನವಾಗಿ ಅವರಿಗೆ ಸಮಾಧಾನಕರವಾಗಿ ಹಣವನ್ನು ಕೊಟ್ಟಿದ್ದರೆ ನಿಜವಾಗಿಯೂ ಇಡೀ ಕರ್ನಾಟಕದ ಜನತೆ ನೀರಾವರಿ ಮಂತ್ರಿಗಳನ್ನು ಹೊಗಳುತ್ತಿದ್ದರು ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಆ ರೀತಿ ಇವತ್ತಿನ ದಿವಸ ಹೋಗತಕ್ಕಂಥ ಸಂದರ್ಭ ಬರಲಿಲ್ಲವೆಂದು ಬಹಳ ವಿಷಾದ ಪಡುತ್ತಿದ್ದೇನೆ. ಮಲಪ್ರಭಾ ಘಟಪ್ರಭಾ ಯೋಜನೆಯ ಕೆಳಗೆ ಬರತಕ್ಕಂಥ ಜನತೆ ಈವತ್ತಿನ ದಿವಸ ಜನತಾ ಪಕ್ಷದ ಪ್ರತಿನಿಧಿಗಳನ್ನು ಕೇಳುತ್ತಿದ್ದಾರೆ. ಶ್ರೀಮತಿ ಇಂದಿರಾಗಾಂಧಿಯವರ ಪಕ್ಷದ ವತಿಯಿಂದ ಆರಿಸಿಬಂದಿರತಕ್ಕಂಥ ಪ್ರತಿನಿಧಿಗಳನ್ನು ಕೇಳುತ್ತಿಲ್ಲ ನೀವು ಬೆಂಗಳೂರು ವಿಧಾನ ಸೌಧದ ಕಚೇರಿಗೆ ಹೋಗಲು ಅನರ್ಹರು ಎಂದು ಹೇಳುತ್ತಿದ್ದಾರೆ. ಆ ಭಾಗದ ಜನತೆ ಹೇಳುವುದನ್ನು ಕೇಳಿದರೆ ನೋವಾಗುತ್ತದೆ. ಆ ನೋವನ್ನು ಮಾನ್ಯ ಅಧ್ಯಕ್ಷರೇ ನಿಮ್ಮ ಮುಖಾಂತರ ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ರೀತಿ ಆಗಬಾರದು, ಪ್ರತಿಯೊಂದು ಯೋಜನೆಗೂ ಪ್ರಾತಿನಿಧ್ಯ ಕೊಡುವಲ್ಲಿ ದೃಷ್ಟಿಕೋನ ಒಂದೇರೀತಿ ಇರಬೇಕೆಂದು ಹೇಳುತ್ತೇನೆ.

ಇನ್ನು ಮೊಟ್ಟಮೊದಲನೆಯದಾಗಿ ಇರಿಗೇಷನ್ ಕೆಲಸಕಾರ್ಯಗಳನ್ನು ಇನಿಷಿಯೇಟ್ ಮಾಡ ತಕ್ಕಂಥ ಸಂದರ್ಭದಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಮಾನ್ಯ ಮಂತ್ರಿಯವರ ಗಮನಕ್ಕೆ ತಂದಾಗ ನಾವು ತಿಳಿದುಕೊಂಡಿದ್ದೆವು ಬಹುಶಃ ಇಂತಹ ಅನುಭವ ಇರತಕ್ಕಂಥ ಮಂತ್ರಿಗಳು ನಮ್ಮ ರಾಜ್ಯಕ್ಕೆ ಸಿಕ್ಕಿರತಕ್ಕಂಥದ್ದು ನಮ್ಮ ಸುದೈವ ಮತ್ತು ಜನತೆಯೂ ಕೂಡ ಅದಷ್ಟು ಶೀಘ್ರವಾಗಿ ನೀರನ್ನು ಕೊಡುತ್ತಾರೆಂದು ಭಾವಿಸಿದ್ದರು. ಕೃಷ್ಣಾ ಮೇಲದಂಡೆ ಯೋಜನೆಯಲ್ಲಿ ೫೦ ಸಾವಿರ ಹೆಕ್ಟೇರ್‌ಗೆ ನೀರನ್ನು ಕೊಡುತ್ತೇವೆಂದು ಹೇಳಿದರು ಈಗ ಮಂತ್ರಿಗಳು ಏನು ಹೇಳುತ್ತಾರೆಂದರೆ ೫೦ ಸಾವಿರ ಎಕರೆಗೆ ನೀರನ್ನು ಕೊಡುತ್ತೇವೆಂದು ಹೇಳಿದರೆ ಅದು ಒಂದು ಭ್ರಮೆ ಎಂದು ಹೇಳುತ್ತಿರುತ್ತಾರೆ. ಇದು ನಿಜವಾಗಿಯೂ ಕೂಡ ಶಾಸನ ಸಭೆಯಲ್ಲಿ ಕುಳಿತುಕೊಂಡಿರತಕ್ಕಂಥ ಎಲ್ಲ ಶಾಸಕರಿಗೂ ಒಂದು ರೀತಿಯಾದ ಮೋಸ ಮಾಡತಕ್ಕಂಥದಾಗಿರುತ್ತದೆ.

ನನ್ನ ಕ್ಷೇತ್ರದಲ್ಲಿರುವ ಮಲಪ್ರಭಾ ಯೋಜನೆಯಿಂದ ೧೭ ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡುವ ಗುರಿಯನ್ನು ಇಟ್ಟುಕೊಂಡಿದ್ದರೂ ಸಹ ಅದರಲ್ಲಿ ೫ ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಲು ಸಾಧ್ಯವಾಗಲಿಲ್ಲ. ಪ್ರತಿ ಯೋಜನೆಯ ಟಾರ್ಗೆಟ್ ಏನು ? ಅದರಲ್ಲಿ ಸಾಧನೆ ಮಾಡಿರುವುದು ಎಷ್ಟು ಎಂಬುದನ್ನು ನೋಡಿದಾಗ ಹಾಗೂ ಇವರು ಕೊಟ್ಟಿರುವ ಅಂಕಿಅಂಗಳನ್ನು ಪರಿಶೀಲನೆ ಮಾಡಿ ನೋಡಿದಾಗ ಯಾವುದೂ ಕೂಡ ಸರಿಯಾಗಿ ಕಾರ್ಯಗತವಾಗಿಲ್ಲ. ಇವರು ಯಾವುದೇ ಒಂದು ಯೋಜನೆಗೂ ಕೂಡ ಟೈಮ್ ಬಾಂಡ್ ಪ್ರೋಗ್ರಾಂನ್ನು ನಿಗದಿ ಮಾಡಿಲ್ಲ. ಇವೊತ್ತು ಈ ಯೋಜನೆಗಳನ್ನು ಮುಗಿಸಲು ವರ್ಷಕ್ಕೆ ೫೦೦ ಕೋಟಿ ರೂಪಾಯಿಗಳಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಿದರೂ ಕೂಡ ಅಧಿಕಾರಿಗಳು ಅದು ಕಡಿಮೆ ಎಂದು ಹೇಳುತ್ತಾರೆ. ಆದರೆ ಹಣ ಮುಖ್ಯವಲ್ಲ. ಸಾಧನೆ ಮುಖ್ಯವೆಂದು ನಾನು ಹೇಳುತ್ತೇನೆ. ೫೦ ಕೋಟಿ ರೂಪಾಯಿಗಳನ್ನು ಒದಗಿಸಿದರೂ ಕೂಡ ಅದು ಸದುಪಯೋಗವಾಗಬೇಕು, ಆಗ ಮಾತ್ರ ಹಣಕ್ಕೆ ಪ್ರಾಮುಖ್ಯತೆ ಬರುತ್ತದೆ. ಆದರೆ ನಾವು ಕೊಟ್ಟ ಹಣಕ್ಕೆ ಇವರು ಮಾಡಿರುವ ಕೆಲಸವಾದರೂ ಏನು ? ಈ ಅಧಿಕಾರಿಗಳು ಸರಿಯಾದ ರೀತಿಯಿಂದ ಕೆಲಸಗಳನ್ನು ಮಾಡಿ ಮುಗಿಸದ ಕಾರಣ ನಮ್ಮ ರಾಜ್ಯದ ಎಲ್ಲ ಯೋಜನೆಗಳು ಹಣದ ಕೊರತೆಯಿಂದ ನಿಂತಿವೆ ಎಂಬ ಅಪಪ್ರಚಾರವನ್ನು ನಾವು ನೀವು ತೆಗೆದುಕೊಳ್ಳುತ್ತಿದ್ದೇವೆ. ಈ ಸಾಲಿನಲ್ಲಿ ಇವರಿಗೆ ೧೫೦ ಕೋಟಿ ರೂಪಾಯಿಗಳನ್ನು ತಾವು ಖರ್ಚು ಮಾಡಲು ಕೊಡಬಹುದು. ಆದರೆ ಅವರು ೧೯೮೪–೮೫ರಲ್ಲಿ ಹಾಕಿಕೊಂಡಿರುವಂತಹ ಕಾರ್ಯಕ್ರಮಗಳೇನು ? ಯೋಜನೆಗಳ ರೂಪರೇಷೆಗಳೇನು? ಸರ್ವೆ ಕೆಲಸ ಮಾಡಿದ್ದಾರೆಯೇ ? ಎಸ್ಟಿಮೇಟ್ ತಯಾರಿಸಿದ್ದಾರೆಯೇ ಎಂಬುದನ್ನು ನೋಡಿದಾಗ ಮಾತ್ರ, ಯಾವ ಇಂಜಿನಿಯರ್‌ಗಳೂ ಸಹ ಈ ಕೆಲಸಗಳನ್ನು ಸರಿಯಾಗಿ ಮಾಡಿಲ್ಲವೆಂದು ಅರ್ಥವಾಗುತ್ತದೆ. ಆ ಬಗ್ಗೆ ನಾನು ಛಾಲೆಂಜ್ ಮಾಡುತ್ತೇನೆ.

ಚೇರ್‌ಮನ್.—ತಾವೂ ಸಹ ಮಂತ್ರಿಗಳಾಗಿದ್ದಿರಿ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಾನೂ ಸಹ ಎರಡು ವರ್ಷಗಳ ಕಾಲ ಮಂತ್ರಿಯಾಗಿದ್ದೆ. ಆ ಸಮಯದಲ್ಲಿ ನಾನು ಎಲ್ಲ ಇಂಜಿನಿಯರ್‌ಗಳನ್ನು ಕರೆಸಿ ಒಂದು ಟೈಂ ಬಾಂಡ್ ಪ್ರೋಗ್ರಾಂನ್ನು ಫಿಕ್ಸ್ ಮಾಡಿಸಿದ್ದೆ. ಅಷ್ಟೇ ಅಲ್ಲ, ಆ ಸಮಯದಲ್ಲಿ ೫೦–೬೦ ಜನ ಇಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡಿದಂಥ ಕೀರ್ತಿ ನಮ್ಮ ಸರ್ಕಾರಕ್ಕೆ ಅಂದರೆ ಶ್ರೀ ಗುಂಡೂರಾವ್ ಅವರ ಸರ್ಕಾರಕ್ಕೆ ಸೇರುತ್ತದೆ. ಆಗಿನ ಸ್ಪೆಷಲ್ ಸೆಕ್ರೆಟರಿ ಅವರನ್ನು ಸಹ ನಮ್ಮ ಸರ್ಕಾರ ಸಸ್ಪೆಂಡ್ ಮಾಡಿತ್ತು.

ಶ್ರೀ ಕೆ. ಮಲ್ಲಪ್ಪ.—ಅವರನ್ನು ಯಾವ ಹಿನ್ನೆಲೆಯಲ್ಲಿ ಸಸ್ಪೆಂಡ್ ಮಾಡಲಾಯಿತೆಂಬುದನ್ನು ತಾವು ಹೇಳಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ವಿವರವಾಗಿ ಹೇಳಲು ಈಗ ಸಮಯ ಇಲ್ಲ.

ಶ್ರೀ ಬಿ. ದೊಡ್ಡ ಬೋರೇಗೌಡ.—ಸಾರ್ವಜನಿಕ ಕೆಲಸಕ್ಕೆ ಧಕ್ಕೆ ಬಂತು ಎಂಬ ಕಾರಣದಿಂದ ಇವರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಿಲ್ಲ. ಬೇರೆ ಉದ್ದೇಶ ಇಟ್ಟುಕೊಂಡು ಸಸ್ಪೆಂಡ್ ಮಾಡಿದರು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಹಾಗಿದ್ದರೆ ಪ್ರತಿ ಕೇಸನ್ನೂ ಈ ಸಭೆಯ ಮುಂದಿಡಲಿ. ಯಾವುದೇ ಕೇಸ್‌ನಲ್ಲಿ ವೈಯಕ್ತಿಕ ದ್ವೇಷದಿಂದಲಾಗಲೀ ಅಥವಾ ಯಾವುದೇ ಇನ್‌ಫ್ಲುಯೆನ್ಸ್‌ನಿಂದಾಗಲೀ ನಾನು ಸಸ್ಪೆಂಡ್ ಮಾಡಿದ್ದರೆ ನಾನು ಇವತ್ತೇ ರಾಜೀನಾಮೆ ಕೊಡುತ್ತೇನೆ. ಇದಕ್ಕೆ ಯಾರೂ ಬೇಕಾದರೂ

ತಯಾರಾಗಿ. ನಾನು ಈ ಬಗ್ಗೆ ಹೇಳುವುದಿಷ್ಟೆ, ನಾನು ಮಂತ್ರಿಯಾಗಿದ್ದಾಗ ನನಗೆ ಚಿಕ್ಕ ವಯಸ್ಸು. ಆಗ ನನಗೆ ೩೨ ವರ್ಷ. ನಾನು ಶ್ರೀ ದೇವೇಗೌಡರಷ್ಟು ದೊಡ್ಡ ಪಂಡಿತನಲ್ಲ, ನನಗಿದ್ದ ಅಲ್ಪಸ್ವಲ್ಪ ಬುದ್ಧಿಯಲ್ಲಿ ಕಲಸ ಮಾಡಿದ್ದೇನೆ. ಇಡೀ ರಾಜ್ಯಾದ್ಯಂತ ಆಗಬೇಕಾದ ಎಲ್ಲ ಕೆಲಸಗಳನ್ನು ನಾನು ಮಾಡಲಿಲ್ಲ. ಆದರೆ ಮಾಡತಕ್ಕಂಥ ಕೆಲಸವನ್ನು...

ಶ್ರೀ ಕೆ. ಮಲ್ಲಪ್ಪ.—ಇವರು ಅಧಿಕಾರಿಗಳನ್ನು ತಪ್ಪು ದಾರಿಗೆ ಎಳೆದರೆಂದು ಕಾಣುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಾನು ಈ ಬಗ್ಗೆ ಹೇಳುವುದಿಷ್ಟೆ,

ಶ್ರೀ ಬಿ. ದೊಡ್ಡ ಬೋರೇಗೌಡ.—ಇವರು ಜನತೆಯ ಪ್ರೀತಿ ವಿಶ್ವಾಸ ಗಳಿಸಿದಂಥ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದರೆ ಇವರ ಕಾರಿನ ಹಿಂದೆ ಮತ್ತು ಮುಂದೆ ಪೋಲೀಸರು ಏತಕ್ಕೆ ಬೇಕಾಗಿತ್ತು ? ಇವರ ಕಾರಿಗೆ ರೆಡ್ ಲೈಟ್ ಏತಕ್ಕೆ ಬೇಕಾಗಿತ್ತು ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನಾನು ಮಂತ್ರಿಯಾಗಿದ್ದಾಗ ನನಗೆ ಯಾರ ಹೆದರಿಕೆಯೂ ಇರಲಿಲ್ಲ. ಪೋಲೀಸ್ ಕಾರನ್ನು ಒಂದು ದಿನವೂ ನಾನು ಉಪಯೋಗಿಸಿಕೊಳ್ಳಲಿಲ್ಲ. ನಾನು ಮಂತ್ರಿಯಾಗಿದ್ದಾಗ ನನ್ನ ವಿರುದ್ಧ ಏನೇನೋ ಅಪಪ್ರಚಾರ ನಡೆಯಿತು ಈಗ ಅದನ್ನೆಲ್ಲಾ ಹೇಳುವುದಿಲ್ಲ. ಸಮಯ ಬಂದಾಗ ಹೇಳುತ್ತೇನೆ. ನಾನು ಮಂತ್ರಿ ಎಂಬುದನ್ನು ಎಷ್ಟೋ ಜನರಿಗೆ ಗುರುತು ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ಆ ಸಮಯದಲ್ಲಿ ನಾನೊಬ್ಬನೇ ತಿರುಗಾಡಿಕೊಂಡು ಬರುತ್ತಿದ್ದೆ. ಇವೊತ್ತು ಮಾನ್ಯ ದೇವೇಗೌಡರು ಮಲಪ್ರಭಾ, ಹೇಮಾವತಿ ಹಾಗೂ ಇನ್ನಿತರ ಯೋಜನೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ. ಇವರು ಒದಗಿಸುವ ಹಣ ಸಹ ಸರಿಯಾದ ಹಾದಿಯಲ್ಲಿ ಖರ್ಚು ಆಗುವಂತಹ ವ್ಯವಸ್ಥೆಯನ್ನು ಸಹ ಮಾಡಲಿಲ್ಲ. ಇನ್ನು ಮುಂದೆಯಾದರೂ ಈ ಕೆಲಸ ಅಗತ್ಯವಾಗಿ ಆಗಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ನೀರಾವರಿ ಇಲಾಖೆ ಮುಖಾಂತರ ಏನು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದೇವೆ ಇದರಿಂದ ಮುಂದೆ ನಾವು ಇಡೀ ಕರ್ನಾಟಕ ರಾಜ್ಯದಲ್ಲಿರುವಂತಹ ಎಲ್ಲ ಭೂಮಿಯನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಬರಬಹುದೆಂಬ ಭಯ ನನಗಿದೆ. ಏಕೆಂದರೆ, ನಾವು ಮನಸ್ಸಿಗೆ ಬಂದಂಥ ಬೆಳೆಯನ್ನು ಬೆಳೆಯುತ್ತಿದ್ದೇವೆ. ಒಂದು ಸರಿಯಾದ ಕ್ರಾಪಿಂಗ್ ಪ್ಯಾಟ್ರನ್ ಇಲ್ಲವಾಗಿದೆ. ನಮಗೆ ಎಷ್ಟು ಬೇಕೋ ಅಷ್ಟು ನೀರನ್ನು ಉಪಯೋಗಿಸಿಕೊಂಡಿದ್ದೇವೆ. ಇದರಿಂದ ನಾವು ಮುಂದೆ ಕೆಲವು ಅನಾಹುತಗಳನ್ನು ಅನುಭವಿಸಬೇಕಾಗಬಹುದು. ಇದೇ ದಾರಿಯಲ್ಲಿ ನಾವು ನಡೆದರೆ ನೂರಾರು ವರ್ಷಗಳಲ್ಲಿ ನಮ್ಮ ರಾಜ್ಯದ ವ್ಯವಸಾಯದ ಭೂಮಿಯೆಲ್ಲಾ ಮರುಳು ಭೂಮಿಯಾಗಿ ಪರಿಣಮಿಸುತ್ತದೆಂದು ಹೇಳದೇ ವಿಧಿಯಿಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದನ್ನು ತಪ್ಪಿಸಲು ನಮ್ಮ ಇರಿಗೇಷನ್ ಆಕ್ಟನ್ನು ಪೂರ್ತಿಯಾಗಿ ಬದಲಾವಣೆ ಮಾಡಬೇಕಾಗಿದೆ. ಈಗ ಸರಿಯಾದ ಕ್ರಾಪಿಂಗ್ ಪ್ಯಾಟ್ರನ್ ಇಲ್ಲ. ಇದರಿಂದ ತಮಗೆ ಇಷ್ಟ ಬಂದ ಬೆಳೆಯನ್ನು ಬೆಳೆಯುತ್ತಾರೆ. ಇಂತಹವರ ಮೇಲೆ ಕ್ರಮ ತೆಗೆದುಕೊಳ್ಳಲು ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಯಾವುದೇ ರೀತಿಯ ಅಧಿಕಾರವಿಲ್ಲ, ಜ್ಯುಡಿಷಿಯಲ್ ಪವರ್ಸ್ ಇಲ್ಲ. ಕಾಲುವೆಗಳು ಏನಾದರೂ ಒಡೆದುಹೋದರೆ ಸಂಬಂಧಪಟ್ಟವರಿಗೆ ಶಿಕ್ಷೆ ವಿಧಿಸಲು ಈಗಿನ ಕಾನೂನಿನಲ್ಲಿ ಅವಕಾಶ ಇಲ್ಲ, ಈ ಕಾರಣದಿಂದ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಎಲ್ಲ ಸಂದರ್ಭಗಳಲ್ಲೂ ಸೂಕ್ತ ಕ್ರಮ ತೆಗೆದುಕೊಳ್ಳಲು ಅವಕಾಶವಾಗುವಂತೆ ಈಗಿನ ಇರಿಗೇಷನ್ ಆಕ್ಟನ್ನು ಬದಲಾವಣೆ ಮಾಡಬೇಕಾಗಿದೆ. ಈ ಕೆಲಸ ಮಾಡುವವರಿಗೆ ಈ ನೀರಾವರಿ ಇಲಾಖೆಯ ವ್ಯವಸ್ಥೆ ಸರಿಹೋಗುವುದಿಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ಹಿಂದೆ ಕೂಡ ನಾನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಈಗ ನಾನು ಹೇಳುವುದೇನೆಂದರೂ ಇಷ್ಟೆ, ತಾವು ೧೯೮೪-೮೫ನೇ ಸಾಲಿಗೆ ಏನು ಹಣವನ್ನು ಖರ್ಚು ಮಾಡಲು ಬಿಡುಗಡೆ ಮಾಡುತ್ತೀರಿ, ಅದನ್ನು ಸರಿಯಾಗಿ ಮತ್ತು ಕಾಲಕ್ಕೆ ಸರಿಯಾಗಿ ಖರ್ಚು ಮಾಡುವ ಸಲುವಾಗಿ ಒಂದು ಟಾರ್ಗೆಟ್‌ನ್ನು ನಿಗದಿ ಮಾಡಬೇಕು. ಜೂನಿಯರ್ ಇಂಜಿನಿಯರ್‌ನಿಂದ ಹಿಡಿದು ಚೀಫ್ ಇಂಜಿನಿಯರ್‌ವರೆಗೆ ಯಾರು ಯಾರು ಎಷ್ಟೆಷ್ಟು ಸಮಯದಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕೆಂಬ ಬಗ್ಗೆ ಒಂದು ಕಾಲಾವಕಾಶವನ್ನು ಗೊತ್ತು ಮಾಡಬೇಕು.

ಇಲ್ಲದಿದ್ದರೆ ಅಸಿಸ್ಟೆಂಟ್ ಇಂಜಿನಿಯರ್ ಒಬ್ಬರು ಎಸ್ಟಿಮೇಟ್ ತಯಾರಿಸಿ ಮಂಜೂರು ಮಾಡಲು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ಕಳುಹಿಸಿಕೊಟ್ಟಾಗ ಅವರು ಆ ಫೈಲ್‌ನ್ನು ೬ ತಿಂಗಳ ಕಾಲ ಇಟ್ಟುಕೊಳ್ಳಬಹುದು. ಮಂಜೂರಾಗಿರುವ ಕೆಲಸಗಳಿಗೆ ಕೂಡಲೇ ಟೆಂಡರ್ ಕರೆದು ಕೆಲಸ ಮಾಡಿಸದಿದ್ದರೆ ಮತ್ತೆ ೧೯೮೫-೮೬ನೇ ಇಸವಿಯಲ್ಲಿ ಕೆಲಸವನ್ನು ಪ್ರಾರಂಭ ಮಾಡಬೇಕಾಗುತ್ತದೆ. ಆದ್ದರಿಂದ ನಾನು ಹೇಳುವುದಿಷ್ಟೆ, ೫೦ ಸಾವಿರ ಇಲ್ಲವೇ ಒಂದು ಲಕ್ಷ ಹೆಕ್ಟೇರ್ ಪ್ರದೇಶಗಳಿಗೆ ನೀರನ್ನು ಒದಗಿಸುವ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ಗುರಿಯನ್ನು ಇಟ್ಟುಕೊಂಡಾಗ ಮಾತ್ರ ನಿಮ್ಮ ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ಅಧಿಕಾರಿಗಳು ವ್ಯವಸ್ಥಿತ ರೀತಿಯಿಂದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ದಿಕ್ಸೂಚಿ ಇಲ್ಲದ ವಿಮಾನ ಯಾವ ಮಾರ್ಗದಲ್ಲಿ ಹೋಗಿ ಬಿಡುತ್ತದೋ ಆ ರೀತಿಯಲ್ಲಿ ಈ ಕೆಲಸಗಳೂ ಸಹ ಆಗಬಹುದು. ಆದ್ದರಿಂದ ಒಂದು ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳದಿದ್ದರೆ ಯಾವ ಕೆಲಸವನ್ನೂ ನಿಗದಿಯಾದ ಅವಧಿಯಲ್ಲಿ ಪೂರೈಸಲು ಸಾಧ್ಯವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

೪ ಪಿ ಎಂ

ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನೀರಾವರಿ ವಿಚಾರದಲ್ಲಿಯೋ ಅಗಲಿ ಅಥವಾ ರಸ್ತೆಗಳ ವಿಚಾರದಲ್ಲಿಯೋ ಆಗಲಿ ಇನ್ನಿತರ ಯಾವುದೇ ವಿಚಾರಗಳಲ್ಲಿ ಆಗಲಿ ನಾವು ನೋಡುತ್ತಿದ್ದೇವೆ, ೧೯೮೩-೮೪ ನೇ ಇಸವಿಯಲ್ಲಿ ರಸ್ತೆಗಳ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಮಂಜೂರು ಆಗಿದ್ದರೂ ಸಹ ೧೯೮೪-೮೫ನೇ ಸಾಲಿನವರೆಗೂ ಕೂಡ ಆ ಕೆಲಸವನ್ನು ಪ್ರಾರಂಭ ಮಾಡುವುದಿಲ್ಲ. ಅವರು ಕಾಲಕ್ಕೆ ಸರಿಯಾಗಿ ಟೆಂಡರ್ ಕರೆಯುವುದಿಲ್ಲ, ಎಸ್ಟಿಮೇಟ್ ಮಾಡುವುದಿಲ್ಲ ಯಾವುದೇರೀತಿಯ ಪ್ಲಾನ್ ಸಹ ತಯಾರು ಮಾಡುವುದಿಲ್ಲ. ಆದರೆ ಇದಕ್ಕೆ ತಾವು ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ ? ಇದಕ್ಕೆ ಜವಾಬ್ದಾರರು ಅಧಿಕಾರಿಗಳೇ, ಅಥವಾ ಶಾಸಕರೇ, ಅಥವಾ ಮಂತ್ರಿಗಳೇ ಯಾರು ಇದಕ್ಕೆ ಜವಾಬ್ದಾರರು ? ನನ್ನ ದೃಷ್ಟಿಯಲ್ಲಿ ಇದಕ್ಕೆ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಬೇಕು. ಒಂದು ಸಾರಿ ಒಂದು ಕೆಲಸ ಬಡ್ಜೆಟ್ಟ್‌ನಲ್ಲಿ ಬಂದ ತಕ್ಷಣ ಆ ಕೆಲವನ್ನು ಅಧಿಕಾರಿಗಳು ಮಂಜೂರು ಮಾಡಿಸಿಕೊಳ್ಳಬೇಕು. ಆ ಮೇಲೆ ಆ ಕೆಲಸಕ್ಕೆ ಟೆಂಡರ್ ಕರೆಯಬೇಕು. ಆ ಕೆಲಸದ ಬಗ್ಗೆ ಅಧಿಕಾರಿಗಳು ಹೆಚ್ಚು ಆಸಕ್ತಿಯನ್ನು ತೋರಿಸಿ ಫಾಲೋಅಪ್ ಮಾಡಿ ೧೯೮೪-೮೫ನೇ ಮಾರ್ಚ್ ವೇಳೆಗೆ ಆ ಕೆಲಸವನ್ನು ಪೂರ್ತಿ ಮಾಡುವಂಥ ಒಂದು ಮನೋಭಾವ ಅಧಿಕಾರಿಗಳಲ್ಲಿ ಬೆಳೆಸಬೇಕು. ಆದರೆ ಆ ಒಂದು ಮನೋಭಾವ ನಮ್ಮ ಅಧಿಕಾರಿಗಳಲ್ಲಿ ಇಲ್ಲ. ಇವತ್ತು ತಾವು ಯಾವುದೇ ಒಂದು ಹೊಸ ಕೆರೆಗಳ ಕೆಲಸ ತೆಗೆದುಕೊಳ್ಳಿ, ರಸ್ತೆಗಳ ಕೆಲಸ ತೆಗೆದುಕೊಳ್ಳಿ, ಬಿಲ್ಡಿಂಗ್‌ಗಳನ್ನು ಕಟ್ಟುವ ಕೆಲಸ ತೆಗೆದುಕೊಳ್ಳಿ, ಸೇತುವೆ ಕೆಲಸ ತೆಗೆದುಕೊಳ್ಳಿ ಸುಮಾರು ೧೦-೨೦ವರ್ಷಗಳಾದರೂ ತಗೆದುಕೊಳ್ಳುತ್ತಾರೆ. ಆ ಕೆಲಸಕ್ಕೆ ರೀ ಎಸ್ಟಿಮೇಟ್ ಮಾಡಬೇಕು. ಕಂಟ್ರ್ಯಾಕ್ಟ್‌ದಾರರು ಸರಿಯಾಗಿಲ್ಲ, ಯಾವುದೇ ಒಂದು ನೆಪಹಾಕಿ ಸುಮಾರು ೧೦-೨೦ ವರ್ಷಗಳ ಕಾಲ ಒಂದು ಕೆಲಸವನ್ನು ಮಾಡುತ್ತಾರೆ, ಆದರೆ ಕೆಳಗಿನ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ ಎಂದು ಮೇಲಾಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳು ಸೂಪರ್‌ವೈಜ್ ಮಾಡುವುದಿಲ್ಲ. ಒಬ್ಬ ಮುಖ್ಯ ಇಂಜಿನೀಯರ್ ಇವತ್ತು ಸೂಪರ್‌ವೈಜ್ ಮಾಡುವುದಿಲ್ಲ. ಸ್ಪಾಟ್ ಇನ್ಸ್‌ಪೆಕ್ಷನ್ ಮಾಡುವುದಿಲ್ಲ. ಒಂದು ವೇಳೆ ಅಲ್ಲಿಗೆ ಯಾರಾದರೂ ಚೀಫ್ ಇಂಜಿನೀಯರ್ ಇನ್ಸ್‌ಪೆಕ್ಷನ್‌ಗೆ ಎಂದು ಹೋದರೆ ಅಲ್ಲಿ ಕೆಲಸ ಏನು ನಡೆದಿದೆ ಎಂಬುದನ್ನು ನೋಡುವುದು ಬಿಟ್ಟು ಅಲ್ಲಿ ಗೋಡಂಬಿ ಬೀಜ ಮತ್ತು ಉಪ್ಪಿಟ್ಟು ಕಾಫಿ ಕುಡಿದು ನೆಟ್ಟಗೆ ವಾಪಸ್ಸು ಬರುತ್ತಾರೆ. ಆದರೆ ಫೈಲ್‌ನಲ್ಲಿ ಮಾತ್ರ ವಿಜಿಟ್ ಮಾಡಿ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿದ್ದೇನೆ ಎಂದು ಬರೆದಿರುತ್ತಾರೆ. ಆದರೆ ನಿಜವಾಗಿ ಯಾರೂ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡುವುದಿಲ್ಲ. ಆದರೆ ಎಲ್ಲಾ ಅಧಿಕಾರಿಗಳು ಭ್ರಷ್ಟರು ಎಂದು ನಾನು ಹೇಳುವುದಿಲ್ಲ. ಅದರಲ್ಲಿ ಕೂಡ ಒಳ್ಳೆಯ ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ. ದಕ್ಷತೆಯಿಂದ ಕೆಲಸ ಮಾಡುವಂಥ ಅಧಿಕಾರಿಗಳು ಇದ್ದಾರೆ. ಆದರೆ ಇವತ್ತು ಅಧಿಕಾರಿಗಳು ಮಾಡತಕ್ಕಂಥ ತಪ್ಪು ಕೆಲಸಗಳಿಗೆ ನಾವು ಮತ್ತು ನೀವು ಜವಾಬ್ದಾರರಾಗುತ್ತೇವೆ. ಆದರೆ ಆ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಕ್ಕೆ ನಾವು ತಯಾರಾಗಿಲ್ಲ. ಆದರೆ ಈ ಒಂದು ಜವಾಬ್ದಾರಿಯನ್ನು ಅಧಿಕಾರಿಗಳೇ ಹೊತ್ತುಕೊಳ್ಳಬೇಕಾಗುತ್ತದೆ. ಅಧಿಕಾರಿಗಳಿಗೆ ಸರಿಯಾದ ಶಿಕ್ಷೆಯನ್ನು ಕೊಡಬೇಕು. ಸ್ವಾಮಿ ಈಗ ತಾವು ಒಂದು ಪ್ರಾಜೆಕ್ಟ್ ಅಥವಾ ಒಂದು ಜನತಾ ಮನೆಯನ್ನು ಕಟ್ಟಿಸಿಕೊಡುತ್ತೀರಿ ಎಂದು ತಿಳಿದುಕೊಳ್ಳಿ ಆ ಜನತಾ ಮನೆ ಕಟ್ಟಿದ ಎರಡು ಅಥವಾ ಮೂರು ತಿಂಗಳಲ್ಲಿಬಿದ್ದು ಹೋದರೆ ಆಗ ಜನತೆ ಯಾರನ್ನು ಕೈ ಮಾಡಿ ತೋರಿಸುತ್ತಾರೆ ?

ಅಲ್ಲಿರತಕ್ಕಂಥ ಶಾಸಕರನ್ನು ಕೈ ಮಾಡಿ ತೋರಿಸುತ್ತಾರೆ. ಆದರೆ ಆ ಜವಾಬ್ದಾರಿಯನ್ನು ನಾವು ಹೊತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಆ ಒಂದು ಜವಾಬ್ದಾರಿಯನ್ನು ಅಧಿಕಾರಿಗಳೇ ಹೊತ್ತುಕೊಳ್ಳಬೇಕು. ಆ ಜವಾಬ್ದಾರಿ ಅಧಿಕಾರಿಗಳೇ ತಲೆಯ ಮೇಲೆ ಹಾಕಿಕೊಳ್ಳಬೇಕು. ಈ ಸರ್ಕಾರದವರು ಒಳ್ಳೆಯ ಕೆಲಸ ಮಾಡಿದರೆ ಜನತಾ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಆದರೆ ಒಳ್ಳೆಯ ಹೆಸರು ನಮಗೆ ಬರುವುದಿಲ್ಲ. ಇವತ್ತಿನ ದಿವಸ ಇಡೀ ರಾಜ್ಯದ ಬಗ್ಗೆ ನಾವು ನೀವು ಮಾತ ನಾಡುವುದು ಜನತೆಯ ಯೋಗಕ್ಷೇಮಕ್ಕಾಗಿ ಹೊರತು ನಮ್ಮ ಮತ್ತು ನಿಮ್ಮ ಯೋಗಕ್ಷೇಮಕ್ಕಾಗಿ ಅಲ್ಲ. ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿ. ನಿಮ್ಮ ಸರ್ಕಾರ ಇನ್ನು ಹತ್ತು ವರ್ಷ ಅಲ್ಲ ನೂರು ವರ್ಷ ಗಳ ಕಾಲ ಒಳ್ಳೆಯ ರೀತಿಯಲ್ಲಿ ಅಧಿಕಾರದಲ್ಲಿ ಇರಲಿ ಎಂದು ನಾನು ಹಾರೈಸುತ್ತೇನೆ

ಶ್ರೀ ಬಿ. ದೊಡ್ಡಬೋರೇಗೌಡ.—ಸ್ವಾಮಿ ಜನವರಿ ತಿಂಗಳಲ್ಲಿ ತಾವು ಏನೆಂದು ಹಾರೈಸಿದಿರಿ.

ಶ್ರೀ ಬಿ ಬಿ ಚಿಮ್ಮನಕಟ್ಟಿ.—ಸ್ವಾಮಿ ನಾವು ವಿರೋಧಪಕ್ಷದಲ್ಲಿ ಕುಳಿತು ಹೆಚ್ಚು ಅನುಭವ ಪಡೆಯ ಬೇಕಾಗಿದೆ. ಆದ್ದರಿಂದ ನಾವು ಇವತ್ತಿನ ದಿವಸ ವಿರೋಧಪಕ್ಷದಲ್ಲಿ ಕುಳಿತಿದ್ದೇವೆ. ನಾವು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದರೆ ನಮಗೆ ಜನತೆ ಬೆಂಬಲ ಕೊಟ್ಟಾಗ ನಾವು ಅಲ್ಲಿಗೆ ಹೋಗಿ ನೀವು ಇಲ್ಲಿಗೆ ಬರುವ ಸಂದರ್ಭ ಕೂಡ ಬಂದರೂ ಬರಬಹುದು. ಇವೆಲ್ಲವನ್ನು ನಾವು ಕೂಡ ಪ್ರಜಾಪ್ರಭುತ್ವದಲ್ಲಿ ನೋಡಿದ್ದೇವೆ. ಇನ್ನು ನಮ್ಮ ರಾಜ್ಯದಲ್ಲಿ ಅನೇಕ ನೀರಾವರಿ ಯೋಜನೆಗಳು ಪೂರ್ತಿಯಾಗದೆ ಉಳಿದಿವೆ. ಮತ್ತೆ ಕೆಲವು ಕಡೆಗಳಲ್ಲಿ ಡ್ಯಾಮ್‌ಗಳನ್ನು ಕಟ್ಟಿ ನೀರು ಶೇಖರಣೆ ಮಾಡಿ ಇಟ್ಟಿದ್ದಾರೆ ಆದರೆ ಚಾನಲ್ ಕೆಲಸ ಮಾಡಿಲ್ಲ. ಮತ್ತೆ ಕೆಲವು ಕಡೆಗಳಲ್ಲಿ ಕೊಟ್ಟಿರತಕ್ಕಂಥ ದುಡ್ಡು ಸಹ ಖರ್ಚು ಮಾಡಿಲ್ಲ; ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಕೂಡಲೆ ಗಮನ ಹರಿಸಿ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳ ಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮ್‌ದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸಮರ್ಥಿಸುತ್ತಾ ಕೆಲವಾರು ವಿಷಯಗಳನ್ನು ಹೇಳಬಯಸುತ್ತೇನೆ. ಇವತ್ತಿನ ದಿವಸ ಎಸ್ಟಿಮೇಟ್ ಕಮಿಟಿಯ ವತಿಯಿಂದ ನಾವು ಕೂಡ ಕೆಲವಾರು ನೀರಾವರಿ ಯೋಜನೆಗಳನ್ನು ನೋಡಿಕೊಂಡು ಬಂದಿದ್ದೇವು ಆದರೆ ಆ ಬಗ್ಗೆ ಕೂಲಂಕಷವಾಗಿ ಒಂದು ವರದಿಯನ್ನು ಈ ಸದನಕ್ಕೆ ಕೊಡಬೇಕೆಂದು ಸರ್ವ ಪ್ರಯತ್ನವನ್ನು ಮಾಡಿ ದೆವು. ಆದರೆ ಆ ವರದಿಯನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ನಾನು ಅಧ್ಯಕ್ಷರಲ್ಲಿ ಕ್ಷಮಾಪಣೆ ಕೇಳುತ್ತೇನೆ. ನಾವು ವರದಿಯನ್ನು ಸದನಕ್ಕೆ ಕೊಟ್ಟಿದ್ದರೆ ಸದಸ್ಯರು ಇನ್ನು ಚರ್ಚೆ ಹೆಚ್ಚು ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಸ್ವಾಮಿ, ಇವತ್ತು ನಮ್ಮ ಕರ್ನಾಟಕದವರು ಇರಿಗೇಷನ್ ಪ್ರಾಜೆಕ್ಟ್ಸ್ ಆಫ್ ಕರ್ನಾಟಕ ಎಂದು ಪಬ್ಲಿಷ್ ಮಾಡಿ ಅದರಲ್ಲಿ ಎಲ್ಲಾ ವಿಷಯಗಳನ್ನು ಸಹ ಕೊಟ್ಟಿ ದ್ದಾರೆ ಆದರೆ ಅದರಲ್ಲಿ ನಾನು ಎರಡು ವಿಷಯಗಳ ಬಗ್ಗೆ ಮಾತ್ರ ಪ್ರಸ್ತಾಪ ಮಾಡುತ್ತೇನೆ. ಅಲ್ಟಿ ಮೇಟ್ ಇರಿಗೇಷನ್ ಪೊಟೆನ್‌ಷಿಯಲ್ ಇದರಲ್ಲಿ ಸುಮಾರು ೧೩೬ ಲಕ್ಷ ಎಕರೆಗಳು ಎಂದು ಕೊಟ್ಟು ೩೭ ವರ್ಷಗಳಿಂದ ಮಾಡಿರತಕ್ಕಂಥ ಸಂಧಾರಣೆಯನ್ನು ಕೊಟ್ಟಿದ್ದಾರೆ. ಸುಮಾರು ೩೭ ವರ್ಷಗಳಲ್ಲಿ ಮಾಡಿರತಕ್ಕಂಥ ಸುಧಾರಣೆ ಕೇವಲ ೨೫ ಲಕ್ಷ ಎಕರಗಳು ಮಾತ್ರ. ಇದರಿಂದ ಹಿಂದಿನ ಸರ್ಕಾರ ಯಾವ ಸುಧಾರಣೆ ಮಾಡಿದೆ ಎಂಬುದು ನಮಗೆ ಗೊತ್ತಾಗುತ್ತದೆ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಒಂದೇ ಒಂದು ಸರ್ಕಾರ ಒಂದು ಸರ್ಕಾರ ಒಂದೇ ಪಕ್ಷ ಅಧಿಕಾರದಲ್ಲಿದ್ದರೂ ಕೂಡ ಏತಕ್ಕೆ ಈ ಕಡೆ ಲಕ್ಷ ಕೊಡಲಿಲ್ಲ.

ಮಾನ್ಯ ಸದಸ್ಯರಾದ ಚಿಮ್ಮನಕಟ್ಟಿಯವರು ವಿಫಲತೆ ಮತ್ತು ವೈಫಲ್ಯತೆಯ ಬಗ್ಗೆ ಹೇಳಿದರು. ಅವರೇ ಹೆಚ್ಚಿನ ಹೊರೆಯನ್ನು ಹೊರಬೇಕಾಗುತ್ತದೆ, ಜನತಾ ಸರ್ಕಾರ ಈಗ ಅಧಿಕಾರಕ್ಕೆ ಬಂದಿದೆ. ಈಗ ನೀರಾವರಿ ಮತ್ತು ಲೋಕೋಪಯೋಗಿ ಸಚಿವರಾಗಿರತಕ್ಕ ಮಾನ್ಯ ದೇವೇಗೌಡರು ಸ್ವತಃ ಬೇಸಾಯಗಾರರು. ಈ ರಾಜ್ಯದ ಬೇಸಾಯಗಾರರ ಎಲ್ಲಾ ಸಮಸ್ಯೆಗಳು ಅವರಿಗೆ ಗೊತ್ತಿದೆ. ಒಂದು ವರ್ಷದ ಅವಧಿಯಲ್ಲಿ ಅವರು ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗೆ ಹೆಚ್ಚು ಹಣವನ್ನು ಕೊಡತಕ್ಕದ್ದನ್ನು ನಾವು ನೋಡಿದ್ದೇವೆ, ಅವರು ಯಾವುದೇ ನೀರಾವರಿ ಯೋಜನೆಗೆ ಹಣವಿಲ್ಲವೆಂದು ಹೇಳಿ ಆ ಕೆಲಸ ನಿಧಾನವಾಗಿ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವ ಮಾತನ್ನು ಹೇಳಿ ದ್ದಾರೆ. ಇದು ಸಂತೋಷಪಡಬೇಕಾದ ವಿಚಾರ. ಇರತಕ್ಕ ಸಮಸ್ಯೆಗಳು ಪರಿಹಾರವಾಗಬೇಕು. ಕರ್ನಾಟಕ ರಾಜ್ಯದಲ್ಲಿ ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆನ್ನುವ ದೃಷ್ಟಿಯಿಂದ, ಆ ಮಾತನ್ನು

ಹೇಳಿದ್ದಾರೆ. ತಾಂತ್ರಿಕತೆಯನ್ನು ಹೊಂದಿರತಕ್ಕವರೇ ಈ ಇಲಾಖೆಯ ಮುಖ್ಯಸ್ಥರಾಗಿದ್ದಾರೆ. ಈಗ ಅವರು ಮಾಡಿರತಕ್ಕ ಮೊಟ್ಟಮೊದಲನೆಯ ಕೆಲಸಕ್ಕೆ ನಾವೆಲ್ಲರೂ ಕೂಡ ಸಂತೋಷಪಡಬೇಕಾಗಿದೆ. ೩೭ ವರ್ಷಗಳಿಂದ ಆಗದೇ ಇರತಕ್ಕ ಕೆಲಸಗಳಿಗೆ ತೀವ್ರ ಗಮನಹರಿಸಿ ಮಾಡುತ್ತಾರೆಂದೂ, ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯುತ್ತಾರೆಂದು ನಾವು ನಿರೀಕ್ಷೆ ಮಾಡುತ್ತೇವೆ.

ಇನ್ನು ಕೃಷ್ಣ ಮೇಲ್ದಂಡೆ ಬಗ್ಗೆ ಹೇಳುವುದಾದರೆ, ಕೃಷ್ಣ ವಾಟರ್ ಡಿಸ್‌ಪ್ಯೂಟ್ಸ್ ಟ್ರಿಬ್ಯೂನಲ್‌ನವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ರಿಪೋರ್ಟ್ ಕೊಟ್ಟಿರತಕ್ಕದ್ದು ೧೯೭೩ರಲ್ಲಿ. ರಿಪೋರ್ಟ್ ಅನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ನಮಗೆ ಬರಬೇಕಾದ ನೀರು ಎಷ್ಟು, ನಾವು ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕೆಂಬುದನ್ನು ಅವರ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಫೈನಲ್ ಆರ್ಡರ್ ಆಫ್ ದಿ ಟ್ರಿಬ್ಯೂನಲ್ ಅದರ ಆ ವರದಿ ಇದೆ. ಅದರ ಪ್ರಕಾರವಾಗಿ ಮಹಾರಾಷ್ಟ್ರಕ್ಕೆ ಎಷ್ಟು ನೀರು ಹೋಗಬೇಕು. ಆಂಧ್ರರಾಜ್ಯಕ್ಕೆ ಎಷ್ಟು ನೀರು ಹೋಗಬೇಕು, ಕರ್ನಾಟಕ ರಾಜ್ಯಕ್ಕೆ ಎಷ್ಟು ನೀರು ಬರಬೇಕು ಎಂಬುದನ್ನು ಆ ವರದಿಯಲ್ಲಿ ತಿಳಿಸಿದ್ದಾರೆ. ಟ್ರಿಬ್ಯೂನಲ್‌ನವರು ಕೊಟ್ಟಿರತಕ್ಕ ವರದಿಯಲ್ಲಿ ನಮ್ಮ ನೀರಿನ ಪಾಲು ಎಷ್ಟು ಎಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ.

(i) as from the water year commencing on the 1st June next after the date of the publication of the decision of the Tribunal in the Official Gazette up to the water year 1982-83

೧೯೮೨-೮೩ರಲ್ಲಿ ೭೦೦ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬೇಕೆಂದು ವರದಿ ಕೊಟ್ಟಿದ್ದಾರೆ. ಮತ್ತೆ,

(ii) as from the water year 1983-84 up to the water year 1989-90 -700 T.M C. plus a quantity of water equivalent to 10 per cent of the excess of the average of the annual utilisations for irrigation in the Krishna river basin during the water years 1975-76, 1976-77 and 1977-78.

೧೯೯೮ರವರೆಗೆ ಯಾವರೀತಿಯಾಗಿ ನೀರಿನ ಉಪಯೋಗ ಮಾಡಿಕೊಳ್ಳಬಹುದೆಂದು ತಿಳಿಸಿದ್ದಾರೆ. ನಾವು ಇವತ್ತು ೧೯೮೪-೮೫ರಲ್ಲಿದ್ದೇವೆ. ನಾವು ಉಪಯೋಗಿಸಿಕೊಳ್ಳಬೇಕಾದ ೭೦೦ ಟಿ.ಎಂ.ಸಿ. ನೀರು ಅದು ಉಪಯೋಗವಾಗಿದೆಯೆ ! ನಾನು ತಮ್ಮ ಮೂಲಕ ಚಿಮ್ಮನಕಟ್ಟಿಯವರನ್ನು ಕೇಳಬೇಕಾಗಿದೆ. ಏಕೆಂದರೆ ೧೯೮೨-೮೩ರಲ್ಲಿ ಅವರು ಮಂತ್ರಿಗಳಾಗಿದ್ದರು. ೭೦೦ ಟಿ.ಎಂ ಸಿ. ನೀರನ್ನು ನೀವು ಏತಕ್ಕೆ ಉಪಯೋಗಿಸಿಕೊಳ್ಳಲಿಲ್ಲ ? ೧೯೭೩ರಲ್ಲಿ ವರದಿಯನ್ನು ಕೊಟ್ಟಿದ್ದಾರೆ. ನೀವು ಕರ್ನಾಟಕದ ಜನತೆಗೆ ಏತಕ್ಕೆ ಮೋಸ ಮಾಡುತ್ತಿದ್ದೀರಿ ? ನಿಮಗೆ ಐನೂರು ಚಿಲ್ಲರೆ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ಶಕ್ತಿಸಾಮರ್ಥ್ಯ ಬಂದಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಉಪಯೋಗಿಸಿಕೊಳ್ಳತಕ್ಕ ನೀರನ್ನು ಉಪಯೋಗಿಸಿಕೊಳ್ಳದಿದ್ದರೆ ಏನಾಗುತ್ತದೆಂದು ಅವರೇ ಅಗ್ರಿಮೆಂಟ್‌ನಲ್ಲಿ ಇನ್ನೊಂದು ಕ್ಲಾಸ್ ಹಾಕಿದ್ದಾರೆ.

Clause VIII-If in any water year any State is not able to use any portion of the water allocated to it during that year on account of the non-development of its projects or damage to any of its projects or does not use it for any reason whatsoever, that State will not be entitled to claim the unutilised water in any subsequent water year;

ಆ ರೀತಿಯಾಗಿ ನೀರು ಉಪಯೋಗವಾಗಿದೆಯೇ ? ೭೦೦ ಟಿಎಂಸಿ ನೀರನ್ನು ೧೯೮೨-೮೩ರಲ್ಲಿ ಉಪಯೋಗಿಸಿಕೊಳ್ಳಲಿಕ್ಕೆ ನಿಮ್ಮ ಕೈಯಲ್ಲಿ ಆಗಿಲ್ಲ. ನಾವು ಇದುವರೆಗೆ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕಾಗಿತ್ತೋ ಅಷ್ಟು ನೀರನ್ನು ಉಪಯೋಗಿಸಿಕೊಳ್ಳದಿದ್ದರೆ ಅಗ್ರಿಮೆಂಟ್ ಪ್ರಕಾರ ನಮಗೆ ಹೆಚ್ಚು ನೀರು ಬರುವುದಿಲ್ಲ. ನನಗನಿಸುತ್ತದೆ ಹಿಂದಿನ ಸರ್ಕಾರ ಕರ್ನಾಟಕ ರಾಜ್ಯದ ೪ ಕೋಟಿ ಜನತೆಗೆ ದ್ರೋಹ ಬಗೆದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಗ್ರಿಮೆಂಟ್ ಮಾಡಿಕೊಳ್ಳುವಾಗ ೭೦೦ ಟಿಎಂಸಿ

ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ಶಕ್ತಿಸಾಮರ್ಥ್ಯ ಆ ಒಂದು ಕ್ಯಾಪಾಸಿಟಿ ಇದೆಯೆಂದು ನಿಮಗೆ ಅವಕಾಶ ಕೊಟ್ಟಿರುವಾಗ ನೀವು ಲಕ್ಷ್ಯವಲ್ಲಿಟ್ಟುಕೊಳ್ಳದೆ ಲ್ಯಾಪ್ಸ್ ಮಾಡಿರತಕ್ಕದ್ದು ರಾಜ್ಯದ ಜನತೆಯ ದುರಾದೃಷ್ಟಕರ. ಇದರ ಬಗ್ಗೆ ನಾನೊಂದು ಮಾತು ಹೇಳಬೇಕಾಗಿದೆ, ಕರ್ನಾಟಕದ ಜನತೆಗೆ ನೀವು ಮಾಡಿರುವ ಮೋಸದಿಂದ ಅವರು ನಿಮ್ಮನ್ನು ಕ್ಷಮಿಸುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಅದೇರೀತಿ ಚಾಪ್ಟರ್ ೧೪ರಲ್ಲಿ ಇನ್ನೊಂದು ಮಾತು ಹೇಳಿದ್ದಾರೆ. ತಮ್ಮ ಮುಖಾಂತರ ಅದನ್ನು ಸಭೆಯ ಗಮನಕ್ಕೆ ತರುತ್ತೇನೆ. ನಾವು ಎಚ್ಚೆತ್ತುಕೊಳ್ಳದಿದ್ದರೆ ಯಾವರೀತಿಯಾಗುತ್ತಿದೆ ಎನ್ನುವುದರ ಬಗ್ಗೆ ಹೇಳಿದ್ದಾರೆ ಅದನ್ನು ಓದುತ್ತೇನೆ.

"Clause XIV–At any time after the 31st May, 2000, this order may be reviewed or revised by a competent authority or Tribunal, but such review or revision shall not as far as possible disturb any utilisation that may have been under taken by any State within the limits of the allocation made to it under the foregoing Clauses.

ಇದರ ಅರ್ಥವೇನು ? ಯಾರ್ಯಾರು ಎಷ್ಟೆಷ್ಟು ಉಪಯೋಗಿಸಿಕೊಳ್ಳಬೇಕು ಅಷ್ಟನ್ನು ಉಪಯೋಗಿಸಿಕೊಂಡರೆ ಅವರಿಗೆ ಬೇಕಾದರೆ ೧೦ ಪರ್ಸೆಂಟ್ ಜಾಸ್ತಿ ಮಾಡಬಹುದು. ಜಾಸ್ತಿ ಉಪಯೋಗ ಮಾಡಿಕೊಂಡವರಿಗೆ ಜಾಸ್ತಿ ಹೋಗುತ್ತದೆ. ಉಪಯೋಗಿಸಿಕೊಳ್ಳದಿದ್ದವರು ಕ್ಲೈಮ್ ಮಾಡುವುದಕ್ಕೆ ಬರುವುದಿಲ್ಲ. ಹೆಚ್ಚಿಗೆ ಉಪಯೋಗ ಮಾಡಿಕೊಂಡಿರತಕ್ಕ ರಾಜ್ಯಕ್ಕೆ ಹೆಚ್ಚು ಸೌಲಭ್ಯ ಸಿಗುತ್ತದೆ. ಈಗ ನಮ್ಮ ಸರ್ಕಾರ ಬಂದಿದೆ, ಅದರ ಕಡೆಗೆ ನಾವು ಹೆಚ್ಚಿನ ಗಮನವನ್ನು ಕೊಡುತ್ತಿದ್ದೇವೆ. ೨೦೦೦ದ ಇಸವಿಯೊಳಗೆ ನಮಗೆ ಅಗ್ರಿಮೆಂಟ್ ಪ್ರಕಾರ, ಕೃಷ್ಣಾ ನೀರು ನಮಗೆ ಎಷ್ಟು ಸಿಗಬೇಕೋ ಅಷ್ಟು ನೀರನ್ನು ಪೂರ್ತಿ ಉಪಯೋಗ ಮಾಡಿಕೊಳ್ಳಲಿಕ್ಕೆ ಮನಸ್ಸು ಮಾಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇನೆ, ಹಣಕಾಸಿನ ತೊಂದರೆಯಿದೆ ಎಂದು ಹೇಳಬಹುದು, ಹಣಕಾಸಿನ ತೊಂದರೆ ಯಾವಾಗಲೂ ಇರುತ್ತದೆ. ಹೆಚ್ಚಿನ ಸಂಪನ್ಮೂಲಗಳನ್ನು ಪಡೆಯತಕ್ಕದ್ದು ಹೇಗೆ ಎನ್ನುವುದನ್ನು ಹಿಂದೆ ಮಾನ್ಯ ದೇವೇಗೌಡರು ಹೇಳಿದ್ದಾರೆ. ನಾನು ಅದರ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಆ ಒಂದು ಯೋಜನೆಗೆ ಬೇಕಾದ ಹಣಕಾಸನ್ನು ವಿಶ್ವ ಬ್ಯಾಂಕಿನಿಂದ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ತೆಗೆದುಕೊಳ್ಳಬೇಕಾಗಿದೆ. ಈಗ ಆಂಧ್ರ ರಾಜ್ಯದಲ್ಲಿ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ನೀರು ಉಪಯೋಗಿಸಿಕೊಳ್ಳುತ್ತೇವೆಂದು ಹೇಳುವವರ ಕಡೆಯಿಂದ ಅಡ್ವಾನ್ಸ್ ಲೋನ್ ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಆಂಧ್ರದಲ್ಲಿ ಈ ಒಂದು ಪ್ರಯೋಗ ಮಾಡಿ ಅವರು ಅದರಲ್ಲಿ ಜಯಗಳಿಸಿದ್ದಾರೆ. ರೈತರಿಂದ ಅಡ್ವಾನ್ಸ್ ಲೋನ್ ತೆಗೆದುಕೊಳ್ಳತಕ್ಕ ಒಂದು ಪ್ರಯತ್ನವನ್ನು ನೀವು ಮಾಡಬೇಕು. ಆ ತರಹ ಮಾಡಿದರೆ ನೀವು ಕೆಲವು ಕಡೆಗಳಲ್ಲಿ ಕೆಲಸ ಮಾಡಬಹುದು. ಕೆಲವು ಪ್ರಾಜೆಕ್ಟ್‌ಗಳಿಗೆ ಹಣವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ ತೆಗೆದುಕೊಂಡಹಾಗೆ ಕಾಣುವುದಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳು ಇಂಡಸ್ಟ್ರಿನಲ್ಲಿ ಹಣವನ್ನು ತೊಡಗಿಸಿದ್ದಾರೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕೋಟ್ಯಾಂತರ ರೂಪಾಯಿ ಹಣವನ್ನು ಪ್ರಾಜೆಕ್ಟ್‌ಗಳಿಗೆ ತೆಗೆದುಕೊಳ್ಳಬಹುದೆಂದು ನಾನು ಸಲಹೆ ಮಾಡುತ್ತೇನೆ. ಆ ರೀತಿ ಮಾಡಬೇಕು ಇಲ್ಲದಿದ್ದರೆ ಮತ್ತಷ್ಟು ಡಿಲೇ ಆಗುತ್ತದೆ. ನೀರಾವರಿ ಇಲಾಖೆಯನ್ನು ಲೋಕೋಪಯೋಗಿ ಇಲಾಖೆಯಿಂದ ಸಪರೇಟ್ ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ. ಇಲಾಖೆಯನ್ನು ಸಪರೇಟ್ ಮಾಡಿ ನೀರಾವರಿ ಇಲಾಖೆಗೆ ಒಂದು ಪ್ರಾಶಸ್ತ್ಯ ಕೊಡುವಂತೆ ಮಾಡಬೇಕು. ಮಾನ್ಯ ದೇವೇಗೌಡರು ಇನ್ನು ಹೆಚ್ಚಿನ ರೀತಿಯಲ್ಲಿ ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ.

ಕೃಷ್ಣಾದಲ್ಲಿ ತಡವಾಗಿರುವುದಕ್ಕೆ ಕಾರಣ ಇನ್‌ವೆಸ್ಟಿಗೇಷನ್‌ಗೆ ತಡವಾಗಿರುವುದು, ಪ್ರಾಪರ್ ಡಿಸೈನ್ ಹಲವಾರು ತಿಂಗಳ ನಂತರ ಕೊಡತಕ್ಕದ್ದು ಆಗಿದೆ, ಇದರಿಂದ ಆರ್ಬಿಟ್ರೇಶನ್‌ಗೆ ಅವಕಾಶ ಆಗಿದೆ. ಆದ್ದರಿಂದ ನಾನು ಸಲಹೆ ಕೊಡುವುದೇನೆಂದರೆ, ಇನ್‌ವೆಸ್ಟಿಗೇಶನ್ ಮತ್ತು ಡಿಸೈನ್ ಮತ್ತು ಕ್ವಾಲಿಟಿ ಕಂಟ್ರೋಲ್ ಏನಿದೆ, ಇದಕ್ಕೆ ಪ್ರತ್ಯೇಕವಾಗಿ ಒಬ್ಬ ಚೀಫ್ ಇಂಜಿನೀಯರ್ ಮಾಡಿ ಇವುಗಳನ್ನು ಅವರಿಗೆ ವಹಿಸತಕ್ಕದ್ದು ಒಳ್ಳೆಯದು. ಕೋಟ್ಯಾಂತರ ರೂಪಾಯಿಗಳನ್ನು ಇನ್‌ವೆಸ್ಟಿಗೇಶನ್ ಮೇಲೆ ಹಾಕುತ್ತಿರುವಾಗ ಅವರ ಮುಖಾಂತರ ಇದನ್ನು ಮಾಡಿಸುವುದು ಒಳ್ಳೆಯದೆಂದು ನಾನು ಸೂಚಿಸುತ್ತೇನೆ. ಅಭಿವೃದ್ಧಿ ತೆರಿಗೆಯನ್ನು ತೆಗೆದುಬಿಟ್ಟಿದ್ದಾರೆ. ಇದರ ರಿಟರ್ನ್ಸ್ ಬರೆದಿರುವುದು ವಾಟರ್ :

ನಲ್ಲಿ ಮಾತ್ರ. ಅನೇಕ ಪ್ರಾಜೆಕ್ಟ್‌ಗಳಲ್ಲಿ ವಾಟರ್‌ರೇಟ್ ಕಲೆಕ್ಟ್ ಆಗುತ್ತಿಲ್ಲ. ಗುಲ್ಬರ್ಗಾ ಮತ್ತು ರಾಯಚೂರಿನಿಂದ ಹತ್ತು ಕೋಟಿ ರೂಪಾಯಿಗಳು ವಾಟರ್‌ರೇಟ್ ಬರಬೇಕಾಗಿದೆ. ಅದನ್ನು ಕಲೆಕ್ಟ್ ಮಾಡುವುದಕ್ಕೇ ಆಗುತ್ತಿಲ್ಲ. ಕಲೆಕ್ಟ್ ಮಾಡಿ ಇಲ್ಲವೇ ಬಿಟ್ಟುಬಿಡಿ. ಬಹಳ ಸಿಂತುಹೋಗಿರುವುದು ಇದೆ. ಇವತ್ತು ಈಗಾಗಲೇ ಹಲವಾರು ಪ್ರಾಜೆಕ್ಟ್‌ಗಳನ್ನು ಏಕಕಾಲದಲ್ಲಿ ತೆಗೆದುಕೊಂಡಿರುವುದರಿಂದ ತೊಂದರೆಯಾಗಿದೆ. ಕೆಲವು ಪ್ರಾಜೆಕ್ಟ್‌ಗಳ ಬಗ್ಗೆ ಮಾತ್ರ ಗಮನಕೊಟ್ಟು ಈ ಅಗ್ರಿಮೆಂಟ್ ಪ್ರಕಾರ ಪೂರ್ತಿ ನೀರನ್ನು ಉಪಯೋಗಿಸುವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಬೇರೆ ಯಾವ ಪ್ರಾಜೆಕ್ಟ್‌ಗೂ ವರ್ಲ್ಡ್ ಬ್ಯಾಂಕ್ ಅಗ್ರಿಮೆಂಟ್ ಆಗಿಲ್ಲ. ಕೃಷ್ಣಾ ಪ್ರಾಜೆಕ್ಟ್‌ಗೆ ಮಾತ್ರ ವರ್ಲ್ಡ್ ಬ್ಯಾಂಕ್ ಅಗ್ರಿಮೆಂಟ್ ಆಗಿದೆ. ಅವರು ೧೦೦ ಕೋಟಿ ಕೊಟ್ಟಿದ್ದಾರೆ. ಒಟ್ಟು ಡಿಸ್‌ಪ್ಯೂಟ್‌ಗಳು ಕೃಷ್ಣಾ ಬೇಸಿನ್‌ನಲ್ಲಿ ಬಿದ್ದಿವೆ ಆರ್ಬಿಟ್ರೇಶನ್‌ಗೆ ಹೋಗಿರತಕ್ಕಂಥಾದ್ದು ಮತ್ತು ಅವಾರ್ಡ್ ಪಾಸ್ ಆಗಿರತಕ್ಕಂಥಾದ್ದು ೧೩-೧೪ ಮಾತ್ರ. ಇನ್ನೂ ಮೂರನೇ ಪ್ಯಾರಾದಲ್ಲಿ ಏನು ಹೇಳಿದೆ ಎಂದರೆ "contract shall have reasonably be continued during the arbitration proceedings.. ನನಗೆ ತಿಳಿದ ಹಾಗೆ ಯಾವ ಕಂಟ್ರಾಕ್ಟರ್ ಆಗಲಿ ಡಿಸ್‌ಪ್ಯೂಟ್ ಹೋದತಕ್ಷಣ ಕೆಲಸ ನಿಲ್ಲಿಸಬೇಕೆಂದೇನೂ ಇಲ್ಲ. ಈ ಹಣ್ಣನ್ನು ಅವರ ಮೇಲೆ ಬಿಡಬಾರದು ಹಾಗೆ ಮಾಡಿ. ಪ್ರಾಜೆಕ್ಟ್‌ಗೆ ತೊಂದರೆಯಾಗದ ಹಾಗೆ ಮಾಡಬೇಕು. ನಿಂತಿರುವ ಕೆಲಸವನ್ನು ತಕ್ಷಣ ಶುರು ಮಾಡಬೇಕೆಂದು ಇಷ್ಟು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ನಾಗನಗೌಡ (ಕುರುಗೋಡು).—ಸನ್ಮಾನ್ಯ ಅಧ್ಯಕ್ಷರೇ, ಇಂದು ಮಂಡಿಸಿರತಕ್ಕಂಥ ಈ ಬೇಡಿಕೆಗಳ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಾ ನನ್ನ ಎರಡು ಮಾತುಗಳನ್ನಾಡುವುದಕ್ಕೆ ಇಚ್ಛಿಸುತ್ತೇನೆ. ಬಳ್ಳಾರಿ ಜಿಲ್ಲೆಯ ಜನತೆಯ ಸತತವಾದ ಬೇಡಿಕೆಯೆಂದರೆ ಕಳೆದ ೧೦-೨೦ ವರ್ಷಗಳಿಂದಲೂ ತುಂಗಭದ್ರಾ ಬೋರ್ಡ್‌ನ್ನು ಅಬಾಲಿಶ್ ಮಾಡಬೇಕೆಂದು ಆಗಿದೆ. ಈ ವಿಷಯದಲ್ಲಿ ಆಂಧ್ರದ ಮುಖ್ಯಮಂತ್ರಿಯೊಡನೆ ಚರ್ಚಿಸುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹಲವುಸಲ ಹೇಳಿದ್ದಾರೆ. ಆದರೆ ಈಗ ಇರತಕ್ಕಂಥ ರಾಜಕೀಯ ಪರಿಸ್ಥಿತಿ ನಿಮಗೆ ಅನುಕೂಲವಾಗಿದೆ. ಆದಕಾರಣ, ದಯಮಾಡಿ ಈ ಪ್ರಯತ್ನವನ್ನು ತಾವು ಕಾರ್ಯರೂಪಕ್ಕೆ ತಂದರೆ ನಮ್ಮ ಬಳ್ಳಾರಿ ಜನತೆ ಸದಾಕಾಲ ನಿಮಗೆ ಚಿರಋಣಿಯಾಗಿರುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ತುಂಗಭದ್ರಾ ಬೋರ್ಡ್ ಲಕ್ಸುರಿ ಬಂಗಲೆಯೊಳಗೆ ನೀರಾವರಿ ಅಧಿಕಾರಿಗಳು ಲಂಚಕೊಟ್ಟು ನೀರು ತೆಗೆದುಕೊಂಡು ಬರುವಂತಹ ಸಂದರ್ಭ ಬಂದಿದೆ. ಇದು ಬಹಳ ವಿಷಾದಕರವಾದದ್ದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ದಯಮಾಡಿ ಮಾನ್ಯ ಮಂತ್ರಿಗಳು ಈಗ ಇರತಕ್ಕಂಥ ರಾಜಕೀಯ ಪರಿಸ್ಥಿತಿಯನ್ನು ಉಪಯೋಗ ಮಾಡಿಕೊಂಡು ಆದಷ್ಟು ಬೇಗ ಈ ಬೋರ್ಡನ್ನು ರದ್ದು ಮಾಡದೇ ಇದ್ದರೆ ಬಳ್ಳಾರಿ ಜನತೆಯ ಸ್ಥಿತಿ ಹೀನ ಪರಿಸ್ಥಿತಿಗೆ ಹೋಗುವ ಸಂದರ್ಭ ಬರುತ್ತದೆ. ಇದೇ ರೀತಿ ಎರಡನೇ ಮುಖ್ಯವಾದ ಅಂಶ ಏನೆಂದರೆ ತೆಲುಗುಗಂಗಾ ಬಗ್ಗೆ. ಎಲ್ಲರಿಗೂ ಗೊತ್ತಿದೆ ಇದು ಮದ್ರಾಸಿಗೆ ನೀರು ಒದಗಿಸಲಿಕ್ಕೆ ಮಾಡಿರುವಂಥ ಒಂದು ಯೋಜನೆ. ಈ ಯೋಜನೆಗೆ ಕರ್ನಾಟಕದ ಪತಿಯಿಂದ ಐದು ಟಿ.ಎಂ.ಸಿ. ತಮಿಳುನಾಡಿನಿಂದ ಐದು ಟಿ.ಎಂ.ಸಿ. ಮತ್ತು ಆಂಧ್ರ ಪ್ರದೇಶದಿಂದ ಐದು ಟಿ.ಎಂ.ಸಿ. ನೀರು ಕೊಡುತ್ತಿದ್ದಾರೆ. ಆಂಧ್ರದವರು ಕೊಡುವುದು ಮೂರನೇ ಒಂದು ಭಾಗದಷ್ಟು ಆದರೂ ಇದಕ್ಕೆ ತೆಲುಗು ಗಂಗಾ ಎಂದು ಕರೆದಿದ್ದಾರೆ. ನಮ್ಮ ಸರ್ಕಾರ ಏತಕ್ಕೋಸ್ಕರ ಆ ಸಂದರ್ಭದಲ್ಲಿ ಇದರ ಬಗ್ಗೆ ಆಕ್ಷೇಪಣೆ ಮಾಡಲಿಲ್ಲ ? ಈಗಲಾದರೂ ಈ ತೆಲುಗುಗಂಗಾ ಬದಲು ಕರ್ನಾಟಕ ಗಂಗಾ ಎಂದು ಕರೆಯಲು ಚಿಂತನೆ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಈ ಸಂದರ್ಭದಲ್ಲಿ ಉತ್ತರ ಕೊಡುತ್ತಾರೆಂದು ನಾನು ಆಶಿಸುತ್ತೇನೆ. ಇದು ಎಲ್ಲಾ ಕನ್ನಡಿಗರ ಹಿತರಕ್ಷಣೆಯ ವಿಷಯವಾಗಿದೆ. ಕನ್ನಡಿಗರ ಅಭಿಮಾನದ ವಿಷಯವಾಗಿದೆ. ಅದೇರೀತಿ ಬಳ್ಳಾರಿಗೆ ನೀರು ಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ಬಳ್ಳಾರಿಗೆ ಬಂದಿದ್ದರು. ಸ್ವತಃ ವೀಕ್ಷಣೆ ಮಾಡಿ ಜನತೆಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ೧೯೮೫ರಲ್ಲಿ ನೀರು ಒದಗಿಸಿಕೊಡುತ್ತೇವೆ ಎಂದು. ದುರಾದೃಷ್ಟವಶಾತ್ ಯಾವ ಕೆಲಸವೂ ಆಗಿಲ್ಲ. ತಕ್ಷಣವಾಗಿ ಇದನ್ನು ಕಾರ್ಯರೂಪಕ್ಕೆ ತಾರದೇ ಇದ್ದರೆ ೧೯೮೫ರೊಳಗೆ ನೀರು ಬರಲಿಕ್ಕೆ ಸಾಧ್ಯವಿಲ್ಲವೆಂದು ಹೇಳಬೇಕಾಗುತ್ತದೆ. ಜನಗಳ ಮನಸ್ಸಿಗೆ ಈ ಭಾವನೆ ಬಂದುಬಿಟ್ಟಿದೆ. ಆದ್ದರಿಂದ ಇದರ ಬಗ್ಗೆ ಏನಾದರೂ ಹೇಳಿಕೆ ಕೊಡಬೇಕು. ಆಮೇಲೆ ಆಂಧ್ರಪ್ರದೇಶ

ಬಾರ್ಡರಿನ ಹದಿನಾಲ್ಕು ಕಿಲೋಮೀಟರ್ ವಿಸ್ತೀರ್ಣದ ಒಳಗಡೆ ಭಾಗದಲ್ಲಿ ಇರತಕ್ಕಂಥ ಜನರಿಗೆ ಯಾವ ರೀತಿಯ ಬೆಳೆಯನ್ನು ಬೆಳೆಯಬೇಕೆಂಬ ಸಮಸ್ಯೆಯಾಗಿದೆ. ಅವರು ಅಲ್ಲಿ ಕರ್ನಾಟಕ ಕ್ರಾಪಿಂಗ್ ಪ್ಯಾಟರ್ನ್‌ನನ್ನು ಅನುಸರಿಸಿದರೆ ಅದು ಕ್ರಮಬದ್ಧವಲ್ಲವಾಗುತ್ತದೆ. ಇದರ ಬಗ್ಗೆ ಸ್ಪಷ್ಟವಾದ ನಿರ್ದೇಶನ ಕೊಡಬೇಕು. ೧೫–೨೦ ವರ್ಷಗಳಿಂದ ಈ ಹದಿನಾಲ್ಕು ಕಿಲೋಮೀಟರ್ ಒಳಗಡೆ ಇರತಕ್ಕಂಥ ಜನರಿಗೆ ತುಂಬಾ ಅನಾನುಕೂಲವಾಗಿದೆ. ಅದಕ್ಕಾಗಿ ಮಚಲಿಪಟ್ಟಣ ನ್ಯಾಷನಲ್ ಹೈವೇ ಮಾಡಬೇಕೆಂದು ಇದೆ. ಇದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಡುವ ಅಭಿಪ್ರಾಯ ಇದೆ. ಇದರ ಬಗ್ಗೆ ಸರ್ಕಾರದವರು ಹೆಚ್ಚು ಒತ್ತಾಯ ಮಾಡಿದರೆ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ. ಇದನ್ನು ಸರ್ಕಾರ ಒತ್ತಾಯ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) —ಮಾನ್ಯ ಅಧ್ಯಕ್ಷರೇ ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿದಂಥ ಬೇಡಿಕೆಗಳನ್ನು ವಿರೋಧಿಸುತ್ತಾ, ಈ ಬೇಡಿಕೆಗಳನ್ನು ಮಂಡಿಸಿದಂಥ ಮಾನ್ಯ ಮಂತ್ರಿಗಳು ಕೆಲವೊಂದು ಕ್ಷೇತ್ರಗಳಿಗೆ ಪಕ್ಷಪಾತ ಮಾಡಿದ್ದಾರೆ ಎನ್ನುವ ಆರೋಪವನ್ನು ಮಾಡದೆ ಇದ್ದರೂ ಕೂಡ, ಇಂದಿರಾ ಕಾಂಗ್ರೆಸ್ಸಿನ ಹಾಗೂ ಜನತಾ ಪಕ್ಷದ ಕ್ಷೇತ್ರಗಳಿಗೆ ಹೆಚ್ಚಿನ ವ್ಯತ್ಯಾಸಗಳು ಆಗಿವೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಸಾಮಾನ್ಯವಾಗಿ ಮಲೆನಾಡನ್ನು ಕಡೆಗಣಿಸಿದಂಥ ಈ ಸಂದರ್ಭದಲ್ಲಿ ಸರ್ಕಾರದ ಯಾವ ಒಂದು ಕಾರ್ಯಕ್ರಮವೂ ಸಹ ಈ ಹಳ್ಳಿಗಳಿಗೆ ತಟ್ಟದಂಥ ಸಂದರ್ಭದಲ್ಲಿ ಹಳ್ಳಿಗಳಿಗೆ ಸಾರಿಗೆ ಸಂಪರ್ಕದ ವ್ಯವಸ್ಥೆಯನ್ನು ಮಾಡದೇ ಇರುವುದು ಮುಖ್ಯವಾಗಿದೆ. ಅದಲ್ಲದೆ ಹಳ್ಳಿಗಳಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡದೇ ಇರುವ ಕಾರಣ ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನು ಕಟ್ಟಿಸಿ, ಪ್ರತಿಯೊಂದು ಹಳ್ಳಿಗೂ ಶಾಲೆಗಳು ಇಲ್ಲದ ಕಾರಣ ಇಂತಹ ಹಳ್ಳಿಗಳನ್ನು ಗುರುತಿಸಿ ಶಾಲೆಗಳನ್ನು ಹಾಗೂ ಸಾರಿಗೆ ಸಂಪರ್ಕವನ್ನು ಒದಗಿಸುವುದು ಅತಿ ಅವಶ್ಯಕದಾಗಿ ಮಾಡಬೇಕಾಗುತ್ತದೆ. ಅದಲ್ಲದೆ ಈಗಾಗಲೇ ತಿಳಿಸಿದಂತೆ ಹಳ್ಳಿಗಳಿಗೆ ಹೊಸ ರಸ್ತೆಗಳನ್ನು ಮಾಡುವಾಗ ಅದಕ್ಕೆ ಟಾರನ್ನು ಹಾಕಿಸದೆ ಹೊಸ ರಸ್ತೆಗಳನ್ನು ಮಾಡುವುದರ ಔಚಿತ್ಯವನ್ನು ನಾನು ಪ್ರಶ್ನಿಸುತ್ತಿದ್ದೇನೆ. ಏಕೆಂದರೆ ಹಿಂದೆ ಎಷ್ಟೋ ಹಳ್ಳಿಗಳಿಗೆ ಹೊಸ ರಸ್ತೆಗಳನ್ನು ಮಾಡಿದರೂ, ಈ ರಸ್ತೆಗಳು ಸಂಪರ್ಕಕ್ಕೆ ಮತ್ತು ಸಂಚಾರಕ್ಕೆ ಯೋಗ್ಯವಾಗಿಲ್ಲದ ಕಾರಣ ಅದರ ಮೇಲೆ ಹೊಸ ರಸ್ತೆಗಳನ್ನು ಮಾಡುವುದಕ್ಕಿಂತ ಹಳೆಯ ರಸ್ತೆಗಳನ್ನು ಸಂಚಾರಕ್ಕೆ ಯೋಗ್ಯವಾಗುವಂತಹ ರೀತಿಯಲ್ಲಿ ಮಾಡುವುದು ಉತ್ತಮವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಪಟ್ಟಣ ಪ್ರದೇಶಗಳಲ್ಲಿ ರಸ್ತೆಗಳಿಗೆ ಟಾರು ವಗೈರೆಗಳಿಂದ ಅವುಗಳನ್ನು ಸುಸ್ಥಿತಿಯಲ್ಲಿಡುತ್ತಾರೆ. ಆದರೆ ಹಳ್ಳಿಗಳಿಗೆ ಹೋಗತಕ್ಕಂಥ ರಸ್ತೆಗಳಿಗೆ ಅಂದರೆ, ರಾಜ್ಯ ರಸ್ತೆಯಿಂದ ಹಳ್ಳಿಗಳಿಗೆ ಹೋಗತಕ್ಕಂಥ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವಂತೆ ಒಂದು ಕಿಲೋಮೀಟರ್‌ವರೆಗೆ ಟಾರನ್ನು ಹಾಕಿಸದೆ ಜನರಿಗೆ ಆಶಾಭಾವನೆ ಹೋಗುವಂತೆ ಮಾಡಿದರು. ಕಳೆದ ಸಾಲಿನ ಬಜೆಟ್ಟಿನಲ್ಲಿ ಅಂದರೆ ೧೯೮೩–೮೪ರಲ್ಲಿ ಈ ಅವಕಾಶವನ್ನು ಕಲ್ಪಿಸಿಕೊಡುವಂಥ ಕೆಲವೊಂದು ಸೇತುವೆಗಳಿಗೆ ಈ ತನಕ ಟೆಂಡರ್ ಕರೆಯಲು ಯಾವ ಹಂತದಲ್ಲೂ ಸರ್ಕಾರದ ಅಧಿಕಾರಿಗಳು ಈ ಬಗ್ಗೆ ಆಸಕ್ತಿ ವಹಿಸಿಲ್ಲ. ಇವುಗಳು ಹಾಗೆಯೇ ಉಳಿದಿವೆ. ಇಂತಹ ಅನೇಕ ಪ್ರಕರಣಗಳು ಕಂಡುಬರುತ್ತಿವೆ. ಈ ಬಗ್ಗೆ ಹಲವಾರು ಸಾರಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿದರೂ ಕೂಡ ಸರಿಯಾದ ಮಾಹಿತಿ ಸಿಗದೆ ಜನರನ್ನು ತಪ್ಪುದಾರಿಗೆ ಒಯ್ಯುವಂಥ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ.

೪–೩೦ ಪಿ.ಎಂ.

ಅದೂ ಅಲ್ಲದೆ ಇನ್ನು ಕೆಲವೊಂದು ಯೋಜನೆಗಳೂ ಹಾಕಿಕೊಂಡಿದ್ದೀರಿ. ಅದರಲ್ಲಿ ಮುಖ್ಯವಾಗಿ ಹರಿಜನ ಕೇರಿಗಳಿಗೆ ಕೊಡುವಂಥ ರಸ್ತೆಗಳನ್ನು ಮಾಡುವುದು ಇದೆ. ಅದರಲ್ಲಿ ಯಾವ ಉದ್ದೇಶದಿಂದ ಈ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರೋ ಆ ಕಾರ್ಯಕ್ರಮ ಸಫಲವಾಗುತ್ತಿಲ್ಲ, ತುಂಬಾ ಪ್ರಭಾವಿತ ವ್ಯಕ್ತಿಗಳಿಂದ ಅಥವಾ ರಾಜಕೀಯ ಶಕ್ತಿಗಳಿಂದ ಒಂದೆರಡು ಹರಿಜನರಿರುವ ಮನೆಗಳಿಗೆ ಅಪ್ರೋಚ್ ರೋಡುಗಳನ್ನು ಮಾಡಬಹುದು. ಆದರೆ ನೂರಾರು ಹರಿಜನರು ಇರುವ ಕಾಲೋನಿಗೆ ರಸ್ತೆ ಇಲ್ಲದೇ ಇರುವ ಪರಿಸ್ಥಿತಿ ಸರ್ವೇ ಸಾಮಾನ್ಯವಾಗಿ ಕಾಣುತ್ತೇವೆ. ಅದಕ್ಕೆ ಹಳ್ಳಿಯ ಹೆದ್ದಾರಿ ಮತ್ತು ಸೇತು ಬಂಧನ ಎನ್ನುವ ಹೆಸರನ್ನು ಹೇಳಿದ್ದೀರಿ. ಹಳ್ಳಿ ಹೆದ್ದಾರಿ ಎಂದು ಹೇಳಿದರೆ ನಮ್ಮ

ಕಡೆಯಲ್ಲಿ ಟಾರ್ ರಸ್ತೆ. ಆದರೆ ಈ ಹೆದ್ದಾರಿಯನ್ನು ನೋಡಿದರೆ, ಟಾರ್ ರಸ್ತೆ ಆಗುವುದು ಬೇಡ ಎಂದು ಅನ್ನಿಸುತ್ತದೆ. ಸಾಧಾರಣವಾಗಿ, ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳಾಗುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಸಾಮಾನ್ಯವಾಗಿ ಹಳ್ಳಿಯ ಜನರಿಗೆ ಕನಿಷ್ಟ ಒಂದು ಕಿಲೋ ಮೀಟರ್ ಟಾರ್ ರಸ್ತೆ ಆಗುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೆ 'ಸೇತು ಬಂಧನ' ಎಂದರೆ ಈ ಒಂದು ಪ್ರಯೋಜನವು ಪ್ರತೀ ಗ್ರಾಮದ ಅಂದರೆ ಕೇವಲ ಒಂದು ವಿಭಾಗಕ್ಕೆ ಸೀಮಿತವಾಗಿರದೆ, ಆ ಕಾರ್ಯಕ್ರಮವು ಪ್ರತಿ ಗ್ರಾಮ ಪ್ರಯೋಜನ ಪಡೆಯುವಂತಾಗಲೆಂದು ಹಾರೈಸುತ್ತೇನೆ. ಅದೂ ಅಲ್ಲದೆ ಮುಖ್ಯವಾಗಿ ನಮ್ಮ ಕ್ಷೇತ್ರದ ಮಟ್ಟಿಗೆ ಹೇಳುವುದಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಷ್ಠಿತವಾದಂಥ ವಾರಾಹಿ ಯೋಜನೆಯ ಬಗ್ಗೆ ನಾನು ಯಾವ ಪುಸ್ತಕದಲ್ಲಿ ಹುಡುಕಿದರೂ ಸಹ ಸಿಗಲಿಲ್ಲ. ಅದು ಇದ್ದರೂ ಇರಬಹುದು. ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಂತೆ ಕಾಣಿಸುವುದಿಲ್ಲ. ಸಣ್ಣ ನೀರಾವರಿ ಯೋಜನೆಗೂ ಸಹ ಅವಕಾಶ ಕೊಡದೇ ಇರುವುದು ಕಂಡು ಬರುತ್ತಿದೆ. ಏಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಆಗುತ್ತಿದೆ. ಅದು ಕೆಲವೇ ದಿವಸಗಳಲ್ಲಿ ಉತ್ಪಾದನಾ ಹಂತದಲ್ಲಿ ಬರಬಹುದು. ಅದಕ್ಕೆ ಬೇಕಾದಂಥ ಕಬ್ಬನ್ನು ಬೆಳೆಯಲು ಸಣ್ಣ ನೀರಾವರಿಗೆ ಪ್ರೋತ್ಸಾಹ ಕೊಟ್ಟಿಲ್ಲ. ಆದರೆ ಅದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಇವರ ನೆರೆಯ ಕ್ಷೇತ್ರಕ್ಕೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಟ್ಟು, ನಮ್ಮ ಕ್ಷೇತ್ರಕ್ಕೆ ಮಾತ್ರ ಅವಕಾಶ ಕಲ್ಪಿಸಿ ಕೊಡದೇ ಇರುವುದರಿಂದ ಈ ಒಂದು ಪ್ರಯೋಜನ ಪಡೆದಂತೆ ಆಗಲಿಲ್ಲ. ಆದುದರಿಂದ ಸಾಮಾನ್ಯವಾದ ಜನತೆಗೆ ಮುಖ್ಯವಾಗಿ ಮಲೆನಾಡಿನಲ್ಲಿರುವ ಹೆಚ್ಚಿನ ಜನತೆಗೆ ಇದರಿಂದ ಹೆಚ್ಚಿನ ಪ್ರಯೋಜನ ದೊರೆಯುವಂತಾಗಲೆಂದು ಹಾರೈಸುವುದರೊಂದಿಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಜಿ. ಚಿನ್ನಪ್ಪ (ಮಾಗಡಿ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ, ಕೆಲವು ಸಲಹೆಗಳನ್ನು ಕೊಡುವುದಕ್ಕೆ ಈ ಸಂದರ್ಭದಲ್ಲಿ ಇಚ್ಛೆಪಡುತ್ತೇನೆ. ನಮ್ಮ ಕ್ಷೇತ್ರದ ಬಗ್ಗೆ ಈಗ ಸಾಮಾನ್ಯವಾಗಿ ಎಲ್ಲರೂ ಕೂಡಾ ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನೂ ಕೂಡಾ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದು, ನನ್ನ ಒಂದೆರಡು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಕ್ಷೇತ್ರ ಬೆಂಗಳೂರು ನಗರಕ್ಕೆ ಸುಮಾರು ೩೦-೩೫ ಮೈಲಿ ದೂರದಲ್ಲಿದ್ದಾಗ್ಯೂ ಸಹ ಬಹಳ ಹಿಂದುಳಿದಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಪ್ರತ್ಯಕ್ಷವಾಗಿ ಹೋಗಿ ನೋಡಿದರೆ ಮಾತ್ರ ಗೊತ್ತಾಗುತ್ತದೆ, ಅದು ಯಾವ ಸ್ಥಿತಿಯಲ್ಲಿ ಇದೆ ಎನ್ನತಕ್ಕಂಥಾದ್ದನ್ನು ನಾವು ಇಲ್ಲಿ ಹೇಳಿದರೆ ಅರ್ಥವಾಗುವುದಿಲ್ಲ. ಅಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿಗೆ ಹೋಗುವುದಕ್ಕೆ ವಾಹನ ಸೌಕರ್ಯ ಸರಿಯಾಗಿಲ್ಲ. ಟಾರ್ ರೋಡ್‌ಗಳು ಕೂಡಾ ಗುಳಿ ಬಿದ್ದು ಹೋಗಿವೆ. ಮನುಷ್ಯನಿಗೆ ಸಿಡುಬು ರೋಗ ಬಂದರೆ ಯಾವ ರೀತಿ ಮೈ ಮೇಲೆ ಗುಳಿಗಳು ಬೀಳುತ್ತವೆಯೋ, ಆ ರೀತಿ ಟಾರ್ ರೋಡಿನಲ್ಲೂ ಕೂಡಾ ಗುಳಿಗಳು ಬಿದ್ದು ಹೋಗಿವೆ ಹಳ್ಳಿಗಳು ರೋಡುಗಳಂತು ಹೇಳುವುದಕ್ಕೆ ಅಸಾಧ್ಯವಾಗಿದೆ. ಒಂದು ಹಳ್ಳಿಗೂ ಕೂಡ ಸುವ್ಯವಸ್ಥಿತವಾದ ಒಂದು ರಸ್ತೆಯಿಲ್ಲ ಒಂದು ಅಪ್ರೋಚ್ ರಸ್ತೆ ಇಲ್ಲ. ಈಗ ಹೊಸದಾಗಿ ಹಾಕಿಕೊಂಡಿರತಕ್ಕಂಥ ಹಳ್ಳಿ ರಸ್ತೆ ಮತ್ತು ಸೇತು ಬಂಧನ ಕಾರ್ಯಕ್ರಮದಲ್ಲಿ ಈಗಲಾದರೂ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನವನ್ನು ಈ ಕಡೆಗೆ ಹರಿಸಿ ಅನುಕೂಲವನ್ನು ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಅವರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಮತ್ತೊಂದು ವಿಷಯವೇನೆಂದರೆ ಈಗಾಗಲೇ ಅನೇಕ ಜನ ನಮ್ಮ ಸ್ನೇಹಿತರು ಹೇಳಿದ್ದಾರೆ. ಬಜೆಟ್ಟಿನಲ್ಲಿ ಮಂಜೂರಾಗಿರತಕ್ಕಂಥ ಕೆಲಸ ಕಾರ್ಯಗಳು ಕಳೆದ ವರ್ಷ ಬಜೆಟ್ಟಿನಲ್ಲಿ ಇದೇ ಕಾಲದಲ್ಲಿ ಮಂಜೂರಾದ ಕೆಲಸಗಳು ಪಾಸ್ ಆದರೂ ಕೂಡಾ ಕೆಲಸಗಳು ಇನ್ನೂ ತೆಗೆದುಕೊಂಡಿಲ್ಲ. ಈ ಕೆಲಸಗಳನ್ನು ಏತಕ್ಕೆ ತೆಗೆದುಕೊಂಡಿಲ್ಲ ಎನ್ನತಕ್ಕಂಥಾದ್ದು ನನಗೆ ಅರ್ಥವಾಗುತ್ತಿಲ್ಲ. ಇದನ್ನು ನಾವು ಕೇಳಿದರೆ ಎಷ್ಟಿಮೇಟ್ ಮಾಡುತ್ತಿದ್ದೇವೆ, ಕಳುಹಿಸಿಕೊಡುತ್ತೇವೆ, ಅಪ್ರೂವಲ್‌ಗೆ ಹೋಗಬೇಕು. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ಗಾಗಿ ಹೋಗಬೇಕು ಎಂಬ ಸಬೂಬುಗಳನ್ನು ಸಂಬಂಧಪಟ್ಟ ಇಂಜಿನಿಯರ್‌ಗಳು ಹೇಳಿಕೊಂಡು ಬರುತ್ತಿದ್ದಾರೆ. ಅವರು ಯಾವ ಉದ್ದೇಶದಿಂದ ಈ ರೀತಿ ಹೇಳುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತಿಲ್ಲ. ಆಯಾ ವರ್ಷದಲ್ಲಿ ಮಂಜೂರಾದ ಕೆಲಸಗಳನ್ನು ಆಯಾ ವರ್ಷವೇ ಮಾಡದಿದ್ದರೆ ಇವರು ಏನು ಸಾಧನೆಯನ್ನು

ಮಾಡಿದಂತಾಗುತ್ತದೆ ? ಆದುದರಿಂದ ಬಜೆಟ್ಟಿನಲ್ಲಿ ಮುಂದಿರತಕ್ಕಂಥ ಕೆಲಸಗಳನ್ನು ಜರೂರಾಗಿ ಮಾಡಿ, ಜನರಿಗೆ ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗಿ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಣ್ಣ ನೀರಾವರಿ ಯೋಜನೆ, ಬಗ್ಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಕೆರೆ ಕಟ್ಟೆಗಳನ್ನು ಕಟ್ಟುವ ವಿಷಯ ಇಲ್ಲ. ದೊಡ್ಡ ದೊಡ್ಡ ಕೆರೆಗಳು ಎರಡು ಮೂರು ಇವೆ. ಆ ಕೆರೆಗಳು ಬೇರೆಯವರಿಗೆ ಹೋಗುತ್ತವೆ. ಅದರ ಪ್ರತಿಫಲ ನಮಗೆ ಸಿಗುತ್ತಿಲ್ಲ. ನಮ್ಮ ಕ್ಷೇತ್ರದಲ್ಲಿ ಇರುವ ಕಣ್ವ ಮತ್ತು ಅರ್ಕಾವತಿ ನದಿಗಳಲ್ಲಿನ ನೀರನ್ನು ಬೆಂಗಳೂರಿಗೆ ಒದಗಿಸುತ್ತಿದ್ದಾರೆ. ಮಂಚನ ಬೆಲೆ ಪ್ರಾಜೆಕ್ಟ್ ಮಾಡುತ್ತಿದ್ದಾರೆ, ಅದು ರಾಮನಗರ, ಕನಕಪುರ ತಾಲ್ಲೂಕು ಇವುಗಳಿಗೆ ಹೋಗುತ್ತವೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಣ್ವ ಅಣೆಕಟ್ಟು ಕಟ್ಟಿದ್ದಾರೆ. ಅದರ ಕ್ಯಾಚ್‌ಮೆಂಟ್ ಏರಿಯಾ ನಮ್ಮ ತಾಲ್ಲೂಕಿನಲ್ಲಿರುವುದರಿಂದ ಯಾವ ವಿಧವಾದ ಸಣ್ಣ ನೀರಾವರಿ ಕೆರೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಇಲ್ಲದಂತಾಗಿದೆ. ಈ ಸಂದರ್ಭದಲ್ಲಿ ನಾನಾದರೂ ಕೇಳಿಕೊಳ್ಳುವುದೇನೆಂದರೆ, ಕ್ಯಾಚ್‌ಮೆಂಟ್ ಏರಿಯಾ ಅಂಥ ಏನಿದೆ ಅದನ್ನು ಸಡಿಲಗೊಳಿಸಿ, ಅಲ್ಲಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಸಿಕೊಡಬೇಕು. ನಮ್ಮ ತಾಲ್ಲೂಕಿನ ಜನರನ್ನು ಬೇರೆ ತಾಲ್ಲೂಕಿಗೆ ಹೋಲಿಸುವುದಾದರೆ ನಮ್ಮ ಪಕ್ಕದ ಕುಣಿಗಲ್ ತಾಲ್ಲೂಕಿನಲ್ಲಿ ೪೦ ಸಾವಿರ ಎಕರೆ ನೀರಾವರಿ ಪ್ರದೇಶ ಇದೆ. ಅದೇರೀತಿ ಚನ್ನಪಟ್ಟಣ ತಾಲ್ಲೂಕಿನಲ್ಲಿಯೂ ಕೂಡಾ ಅಷ್ಟೇ ಇದೆ. ನಮ್ಮ ತಾಲ್ಲೂಕನ್ನು ಅವರ ಜೊತೆಗೆ ಹೋಲಿಸುವುದಾದರೆ ಆರು ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶವಿದೆ. ಅಲ್ಲಿ ಪೂರ್ತಿ ಬೆಳೆ ಆಗದೇ ಇರತಕ್ಕಂಥಾದ್ದು, ಸಣ್ಣ ಸಣ್ಣ ಕೆರೆಗಳಲ್ಲಿ ಬರತಕ್ಕಂಥಾದ್ದು, ಮೂರು ಸಾರಿ ತುಂಬಿದರು, ಅಂಥ ಕೆರೆಯ ಅಚ್ಚುಕಟ್ಟುಗಳನ್ನು ಸೇರಿಸಿಕೊಂಡರೆ ಬೆಳೆ ಆಗುವುದಿಲ್ಲ. ಆರು ಸಾವಿರ ನೀರಾವರಿ ಪ್ರದೇಶ ಬರತಕ್ಕ ಸನ್ನಿವೇಶ ಇದೆ. ಹೆಚ್ಚು ಅನುಕೂಲ ಇರತಕ್ಕಂಥ ಕಡೆ ಸ್ವಲ್ಪ ಕಡಿಮೆ ಮಾಡಿ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ಕೆರೆಕಟ್ಟೆಗಳನ್ನು ಸಣ್ಣ ಸಣ್ಣ ನೀರಾವರಿ ಪ್ರದೇಶಗಳನ್ನು ಮಾಡಿಕೊಟ್ಟು, ಕ್ಯಾಚ್‌ಮೆಂಟ್ ಏರಿಯಾವನ್ನು ಸಡಿಲಗೊಳಿಸಿ, ನಮಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಸೌಲಭ್ಯ ರಸ್ತೆಗಳ ಸೌಲಭ್ಯ, ಹೆಚ್ಚಿನ ಮಟ್ಟದಲ್ಲಿ ಆಗಬೇಕು. ಈಗ ಅಲ್ಲಿ ಯಾವ ಸೌಲಭ್ಯವೂ ಇಲ್ಲ. ದೊಡ್ಡ ಜಲಾಶಯಗಳು ಇವೆ. ತಾವು ಕ್ಯಾಚ್‌ಮೆಂಟ್ ಏರಿಯಾವನ್ನು ಸಡಿಲಗೊಳಿಸಿ, ಅಲ್ಲಲ್ಲಿ ಪಿಕಪ್‌ಗಳುಳ್ಳ ಸಣ್ಣ ಸಣ್ಣ ಕೆರೆಗಳನ್ನು ಮಾಡಬೇಕು. ದೊಡ್ಡ ದೊಡ್ಡ ಪ್ರಾಜೆಕ್ಟ್‌ನಿಂದ ಎಲ್ಲೋ ಕೆಲವು ಪ್ರದೇಶಗಳಿಗೆ ಮಾತ್ರ ಅನುಕೂಲವಾಗುತ್ತದೆ. ನೀವು ಸಣ್ಣ ಸಣ್ಣ ನೀರಾವರಿ ಕೆರೆಕಟ್ಟೆಗಳನ್ನು ಕಟ್ಟಿಸಿದರೆ ಇದರಿಂದ ನೀರಿನ ಒಂದು ಸಾಂದ್ರತೆ ಹೆಚ್ಚಾಗಿ ಭೂಮಿಯ ಒಳಗಡೆ ಇರತಕ್ಕಂಥ ನೀರು ಮೇಲೆ ಬರುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಸಮುದ್ರಕ್ಕೆ ಹೋಗತಕ್ಕಂಥ ನೀರನ್ನು ತಡೆಯುವುದಕ್ಕೂ ಕೂಡಾ ಅವಕಾಶವಾಗುತ್ತದೆ. ಮೇಜರ್ ಇರಿಗೇಷನ್‌ಗಿಂತ ಮೈನರ್ ಇರಿಗೇಷನ್ ಮಾಡುವುದರಿಂದ ದೇಶದ ಎಲ್ಲಾ ಭಾಗದ ಜನರಿಗೆ ಸೌಕರ್ಯಗಳನ್ನು ಒದಗಿಸುವುದಕ್ಕೆ ಅವಕಾಶವಾಗುತ್ತದೆ. ಮೇಜರ್ ಇರಿಗೇಷನ್ ಮಾಡುವುದರಿಂದ ಹೆಚ್ಚು ಹಣ ಬೇಕಾಗುತ್ತದೆ ಮೈನರ್ ಇರಿಗೇಷನ್‌ಗೆ ಬೇರೆ ನೀರಾವರಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿಲ್ಲ, ಆಮೇಲೆ ಹೆಚ್ಚು ಪ್ರಯೋಜನ ಕೂಡಾ ಇದರಿಂದ ಆಗುತ್ತದೆ.

ಅಧ್ಯಕ್ಷರು.—ತಮ್ಮ ಭಾಷಣವನ್ನು ಬೇಗ ಮುಗಿಸಿ.

ಶ್ರೀ ಹೆಚ್. ಜಿ. ಚೆನ್ನಪ್ಪ.— ಕೆಲವರಿಗೆ ಗಂಟೆಗಟ್ಟಲೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಿ. ನಮಗೆ ಐದು ನಿಮಿಷ ಮಾತನಾಡವುದಕ್ಕೆ ಅವಕಾಶ ಕೊಡುವುದಿಲ್ಲ. ನಿಮಗೆ ಮಾತನಾಡುವುದಕ್ಕೆ ಯೋಗ್ಯತೆ ಇಲ್ಲ, ನೀವು ಮಾತನಾಡಬೇಡಿ ಎಂದು ಹೇಳಿದರೆ ನಾವು ಮಾತನಾಡುವುದಿಲ್ಲ. ನೀವು ಎಲ್ಲರಿಗೂ ಒಂದೇ ಸಮನಾಗಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ನಮಗೆ ಅನುಮತಿ ಕೊಟ್ಟರೆ ನಾನು ಮಾತನಾಡುತ್ತೇನೆ, ಇಲ್ಲದಿದ್ದರೆ ನಾನು ಇಷ್ಟಕ್ಕೆ ಬಿಟ್ಟು ಹೊರಟು ಹೋಗುತ್ತೇನೆ. ತಾರತಮ್ಯ ತೋರಿಸುತ್ತಿದ್ದೀರಿ ನನ್ನ ಕ್ಷೇತ್ರದ ಕಷ್ಟ ಸುಖವನ್ನು ಈ ಸದನದ ಮುಂದೆ ಹೇಳಿಕೊಳ್ಳುವುದು ಬೇಡವೇ? ಇನ್ನು ಐದು ನಿಮಿಷ ಕೂಡ ಆಗಲಿಲ್ಲ. ಆಗಲೇ ಬೆಲ್ಲು ಹೊಡೆಯುತ್ತೀರಿ.

ಅಧ್ಯಕ್ಷರು.—ಪಾರ್ಟಿವೈಸ್ ನಾವು ಟೈಮ್ ಅಲಾಟ್ ಮಾಡುತ್ತೇವೆ. ಮಂತ್ರಿಗಳ ಉತ್ತರವೂ ಸೇರಿ ನಿಮ್ಮ ಪಕ್ಷಕ್ಕೆ ಎಷ್ಟು ವೇಳೆ ಬರುತ್ತದೆ ಅಷ್ಟನ್ನು ಕೊಟ್ಟಿರುತ್ತೇವೆ.

ಶ್ರೀ ಹೆಚ್. ಜಿ. ಚಿನ್ನಪ್ಪ.—ಸ್ವಾಮಿ ನಾನು ಅದರಲ್ಲಿ ಒಪ್ಪಿಕೊಳ್ಳುತ್ತೇನೆ, ಬೇರೆಯವರು ಗಂಟೆಗಟ್ಟಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ. ನಮಗೆ ೧೦ ನಿಮಿಷ ಮಾತನಾಡುವುದಕ್ಕೆ ಕೊಟ್ಟು, ಇನ್ನು ಐದು ನಿಮಿಷ ಕೂಡ ಆಗಿರುವುದಿಲ್ಲ ಆಗಲೇ ಬೆಲ್ಲು ಹೊಡೆದರೆ ನಾನು ಏನು ಮಾತನಾಡಬೇಕು? ತಾವು ಬೆಲ್ ಹೊಡೆದರೆ ಏನು ಮಾತನಾಡಬೇಕು ಎನ್ನುವುದು ಸಹ ಮರೆತು ಹೊರಟು ಹೋಗುತ್ತದೆ. ನಮಗೆ ಮಾತನಾಡುವುದಕ್ಕೆ ಅರ್ಹತೆ ಇಲ್ಲ ಎಂದು ನೀವು ಹೇಳಿದರೆ ನಾನು ಹೊರಗಡೆ ಹೊರಟು ಹೋಗುತ್ತೇನೆ. ನಮಗೆ ಮಾತನಾಡುವುದಕ್ಕೆ ಯೋಗ್ಯತೆ ಇಲ್ಲವೆಂದು ಆರ್ಡರ್ ಮಾಡಿದರೆ ಬೇರೆಯವರು ಮಾತನಾಡುವುದನ್ನು ಕೇಳಿಕೊಂಡು ಸುಮ್ಮನೆ ಈ ಸದನದಲ್ಲಿ ನಾವು ಕುಳಿತಿರುತ್ತೇವೆ.

ಶ್ರೀ ಎಂ. ಮಹದೇವ್.—ನಮ್ಮ ಪಕ್ಷಕ್ಕೆ ಬಂದುಬಿಡಿ, ನೀವೊಬ್ಬರೆ ಮಾತನಾಡಬಹುದು.

ಶ್ರೀ ಹೆಚ್. ಜಿ. ಚೆನ್ನಪ್ಪ.—ಸಭಾಪತಿಯವರೇ, ರಸ್ತೆ, ನೀರಾವರಿ ಬಗ್ಗೆ ಹೇಳಿದ್ದಾಯಿತು. ಇನ್ನೂ ಕೆಲವು ವಿಷಯವನ್ನು ಹೇಳಬೇಕಾಗಿದೆ. ಇವತ್ತು ಶಾಲಾ ಕಟ್ಟಡಗಳು ನಾದುರಸ್ತು ಆಗಿವೆ. ಈ ಕಟ್ಟಡಗಳ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಹೆಚ್ಚಿನ ಗಮನ ಹರಿಸುತ್ತಿಲ್ಲ. ಲೋಕೋಪಯೋಗಿ ಇಲಾಖೆಯವರಿಗೆ ಜವಾಬ್ದಾರಿ ಜಾಸ್ತಿ ಆಯಿತು. ಆದರೆ ಈ ಬಗ್ಗೆ ಬಜೆಟ್‌ನಲ್ಲಿ ಹಣ ನೋಡಿದರೆ ನಿಜವಾಗಿಯೂ ಅದಕ್ಕೆ ಸಾಲುವುದಿಲ್ಲ. ಅಲ್ಲಿ ಅವರೇನಾದರೂ ಹಣಕ್ಕೆ ಲಕ್ಷಗಟ್ಟಲೆ ಎಸ್ಟಿಮೇಟ್ ಮಂಜೂರು ಮಾಡಿದ್ದರೆ ಅಲ್ಲಿ ರಿಪೇರ್ ಮಾಡುವುದಕ್ಕೆ ಸಾಕಷ್ಟು ಹಣವಿಲ್ಲ ಎಂಬುದನ್ನು ನಾವು ಮನಗಾಣಬೇಕು. ಇನ್ನೊಂದು ವಿಷಯದ ಬಗ್ಗೆ ನಮ್ಮ ಸ್ನೇಹಿತರು ಈಗಾಗಲೇ ಹೇಳಿದರು ಇಲಾಖೆಗಳಲ್ಲಿ ಆಯಾಯ ಇಲಾಖೆಯ ಅಧಿಕಾರಿಗಳನ್ನೇ ಸೆಕ್ರೆಟರಿಯಾಗಿ ನೇಮಕ ಮಾಡುವುದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆ. ಐ.ಎ.ಎಸ್ ಅಧಿಕಾರಿಗಳನ್ನು ನೇಮಿಸಿದರೆ ಅವರಿಗೆ ಏನೇನು ಗೊತ್ತಿರುವುದಿಲ್ಲ. ಯಾವುದನ್ನು ಕೇಳಿದರೂ ಪುಸ್ತಕವನ್ನು ತೆಗೆದು ನೋಡುತ್ತಾರೆ. ಪ್ರತಿಯೊಂದು ವಿಷಯಕ್ಕೂ ಪುಸ್ತಕದಲ್ಲಿ ಯಾವ ರೂಲ್ಸ್ ಇದೆಯೆಂದು ನೋಡುತ್ತಾರೆ ಹೊರತು, ರೂಲ್ಸ್ ಇರುವ ಕಡೆ ರೂಲ್ಸ್ ಪ್ರಕಾರ ಮಾಡಬೇಕು ಮತ್ತು ಅನುಭವ ಬೇಕಾಗುವ ಕಡೆ ಅದನ್ನು ಅನುಭವದಿಂದ ಮಾಡಬೇಕಾಗುತ್ತದೆ. ಆದುದರಿಂದ ಆ ವಿಷಯದಲ್ಲಿ ಅಂಥ ಅಧಿಕಾರಿಗಳಿಗೆ ಸೆಕ್ರೆಟರಿಯಾಗಿ ನೇಮಿಸತಕ್ಕದ್ದು ಸರಿ. ಲೋಕೋಪಯೋಗಿ ಮಂತ್ರಿಗಳಾದ ಮಾನ್ಯ ಶ್ರೀ ದೇವೇಗೌಡರವರು ಅಂಥ ಅಧಿಕಾರಿಯವರಿಗೆ ಸೆಕ್ರೆಟರಿ ಪದವಿ ಕೊಟ್ಟಿದ್ದಾರೆ. ಎಲ್ಲಾ ಇಲಾಖೆಯ ಮಂತ್ರಿಗಳೂ ಇದೇ ರೀತಿ ಮಾಡಿದರೆ ಹೆಚ್ಚಿನ ಪ್ರಯೋಜನ ಆಗಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅಧಿಕಾರಿಗಳಲ್ಲಿ ಯಾರು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುತ್ತಾರೆ, ಅಂಥವರಿಗೆ ಬಡ್ತಿಗಳನ್ನು ನೀಡತಕ್ಕ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಆಗ ಎಲ್ಲಾ ಅಧಿಕಾರಿಗಳು ಹೆಚ್ಚು ದಕ್ಷತೆ ವಹಿಸಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ರೀತಿಯ ಒಂದು ಕಾರ್ಯಕ್ರಮ ಹಾಕಿಕೊಂಡರೆ ದಕ್ಷತೆಯಿಂದ ಇರುವ ಅಧಿಕಾರಿಯು ಬಡ್ತಿಯ ಆಸೆಗಾಗಿ ದಕ್ಷತೆಯಿಂದ ಕೆಲಸ ಮಾಡುತ್ತಾನೆಂದು ನಾನು ಹೇಳುತ್ತೇನೆ. ಈ ಒಂದು ಮಾರ್ಗವನ್ನು ಹಾಕಿಕೊಂಡರೆ ಅಧಿಕಾರಿಗಳು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುತ್ತಾರೆಂದು ಹೇಳಿ, ಇನ್ನು ಮುಂದೆ ಮಾತನಾಡುವುದಕ್ಕೆ ಹೆಚ್ಚು ಸಮಯ ಇದ್ದರೂ ಅವಕಾಶವಿಲ್ಲವಾಗಿದೆ. ಇನ್ನು ಮುಂದಾದರೂ ಮಾತನಾಡುವುದಕ್ಕೆ ಹೆಚ್ಚಿನ ಅವಕಾಶ ಕೊಡಬೇಕೆಂದು ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಅಧ್ಯಕ್ಷರೇ, ಲೋಕೋಪಯೋಗಿ ಖಾತೆಯ ಮೇಲೆ ಚರ್ಚೆ ಮಾಡುವಾಗ ಬಹಳ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ, ಅದಕ್ಕೆ ಕೊಟ್ಟತಕ್ಕ ಕಾಲವೂ ಕೂಡ ಬಹಳ ಕಡಿಮೆ ಇದೆ. ಹಿಂದೆ ಕೂಡ ಮುಖ್ಯ ಇಲಾಖೆಗಳ ಮೇಲೆ ಹೆಚ್ಚು ಚರ್ಚೆ ಮಾಡಿ ಹೆಚ್ಚು ಜನರ ಅಭಿಪ್ರಾಯಗಳನ್ನು ಪಡೆದುಕೊಂಡಿದ್ದು ಇದೆ. ಆದರೆ ಏನು ಕಾರಣವೋ ಈ ರೀತಿ ಬೇಗ ಮುಗಿಸಬೇಕೆಂದು ತೀರ್ಮಾನವಾಗಿರುವುದರಿಂದ ಈ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನೀರಾವರಿ ಖಾತೆಯಲ್ಲಿ ಸಣ್ಣ ಸಣ್ಣ ಕೆರೆ ಕಟ್ಟಡಗಳ ವಿಷಯದಲ್ಲಿ ಹೆಚ್ಚು ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ ಈ ಕಡೆ ಹೆಚ್ಚು ಗಮನ

ಕೊಡುವುದು ಅವಶ್ಯಕ. ಸಾಮಾನ್ಯವಾಗಿ ನಮ್ಮ ಮುಖ್ಯ ಮಂತ್ರಿಗಳು ಅನೇಕ ವೇಳೆ ಹೇಳಿದ್ದಾರೆ, ಖುಷ್ಕಿ ಭೂಮಿ ಇರತಕ್ಕ ಕಡೆ ನಾವು ಹೆಚ್ಚು ಗಮನ ಕೊಡಬೇಕಾಗುತ್ತದೆ ಎಂದು. ಅಲ್ಲಿ ಅಲ್ಪಸ್ವಲ್ಪ ನೀರಾವರಿ ಸೌಕರ್ಯಗಳನ್ನು ಮಾಡುವುದು ಅವಶ್ಯಕವೆಂದು ಅವರು ತಿಳಿಸಿದ್ದಾರೆ. ಅದೂ ಅಲ್ಲದೇ ರಾಜ್ಯದ ಬಹು ಭಾಗದಲ್ಲಿ ಕ್ಷಾಮದ ಪರಿಸ್ಥಿತಿಯನ್ನೂ ಆಗಿಂದಾಗ್ಗೆ ನಾವು ಅನುಭವಿಸಬೇಕಾಗಿದೆ. ಆದುದರಿಂದ ಸಣ್ಣಸಣ್ಣ ಕೆರೆಗಳು ಬಹು ಮುಖ್ಯವಾದ ಪಾತ್ರವನ್ನು ಈ ಬಗ್ಗೆ ವಹಿಸಿ ಜನರಿಗೆ ಅನ್ನ ಕೊಡುತ್ತದೆಂದು ಹೇಳುತ್ತೇನೆ. ಜನಸಂಖ್ಯೆಗೆ ಅನ್ನ ಒದಗಿಸಿಕೊಡತಕ್ಕ ವಿಷಯದಲ್ಲಿ ಮಾನ್ಯ ಮಂತ್ರಿಗಳು ಒಂದು ದೊಡ್ಡ ಲಿಸ್ಟನ್ನು ಮಾಡಿದ್ದಾರೆ. ಸಣ್ಣ ನೀರಾವರಿ ಕಾಮಗಾರಿಗಳ ವಿಷಯದಲ್ಲಿ ಆಯುವ್ಯಯದಲ್ಲಿ ಸುಮಾರು ೬೨೬ ಕೆಲಸಗಳನ್ನು ಕೊಟ್ಟಿದ್ದಾರೆ. ೩೦ ಕೋಟಿ ರೂಪಾಯಿನಲ್ಲಿ ಆಗಿರತಕ್ಕ ಕೆಲಸಗಳು ಇವು. ಇವತ್ತು ಕ್ಷಾಮಕ್ಕೆ ತುತ್ತಾಗಿರತಕ್ಕ ಜಿಲ್ಲೆಗಳಿಗೆ ಹೆಚ್ಚಿಗೆ ಹಣ ಕೊಟ್ಟಿದ್ದಾರೆ. ಬೆಂಗಳೂರಿಗೆ ೨೮೯ ಲಕ್ಷ ತುಮಕೂರಿಗೆ ೨೦೦ ಲಕ್ಷ, ಕೋಲಾರಕ್ಕೆ ೨೦೩ ಲಕ್ಷ, ಬಿಜಾಪುರಕ್ಕೆ ೨೧೮ಲಕ್ಷ, ಉತ್ತರಕನ್ನಡ ಜಿಲ್ಲೆಗೆ ೨೨೦ಲಕ್ಷ, ಶಿವಮೊಗ್ಗಕ್ಕೆ ೧೯೫ ಲಕ್ಷ, ಚಿತ್ರದುರ್ಗಕ್ಕೆ ೧೮೯ ಲಕ್ಷ ಚಿಕ್ಕಮಗಳೂರಿಗೆ ೧೧೭ ಲಕ್ಷ ಹಾಸನಕ್ಕೆ ೧೧೨ ಲಕ್ಷ, ಗುಲ್ಬರ್ಗಾಕ್ಕೆ ೨೮೪ ಲಕ್ಷ, ಬೀದರ್‌ಗೆ ೧೨೪ ಲಕ್ಷ, ಬಳ್ಳಾರಿಗೆ ೧೩೪ ಲಕ್ಷ ರೂಪಾಯಿ. ಹೀಗೆ ಹಣವನ್ನು ಒದಗಿಸಿದ್ದಾರೆ. ಈ ರೀತಿಯಾಗಿ ಹಣವನ್ನು ಒದಗಿಸಿದ್ದನ್ನು ನೋಡಿದಾಗ ರಾಜ್ಯದ ಬಹು ಭಾಗದ ಜನಸಂಖ್ಯೆಗೆ ಸಹಾಯ ಆಗುವ ರೀತಿಯಲ್ಲಿ ಬಜೆಟ್ ತಯಾರಾಗಿದೆ ಎಂದು ನನ್ನ ಭಾವನೆ ಏಕೆಂದರೆ ಇನ್ನು ಸಾವಿರಾರು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ನಾನು ಒಂದು ಸಲಹೆಯನ್ನು ಮಾನ್ಯ ಮಂತ್ರಿಗಳಿಗೆ ಕೊಡುವುದಕ್ಕೆ ಇಷ್ಟಪಡುವುದೇನೆಂದರೆ, ಇಡೀ ರಾಜ್ಯದಲ್ಲಿ ಎಷ್ಟು ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳನ್ನೂ ಮಾಡುವುದಕ್ಕೆ ಸಾಧ್ಯವಿದೆಯೋ, ಅದನ್ನು ನೋಡಿ ಆ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ ಅದನ್ನು ಕಾರ್ಯಗತ ಮಾಡುವುದಕ್ಕೆ ತಕ್ಕ ಕ್ರಮವನ್ನು ಕೈಗೊಳ್ಳುವುದು ಒಳ್ಳೆಯದೆಂದು ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಮಾತ್ರವಲ್ಲ, ನಮ್ಮ ಶ್ರೀ ಚೌಡಯ್ಯನವರು ಸಹ ಹೇಳಿದರು, ತಾಲ್ಲೂಕ್‌ಬೋರ್ಡ್‌ನಲ್ಲಿ ೧೦ ಎಕರೆಗೆ ಮೇಲ್ಪಟ್ಟು ಇರತಕ್ಕ ನೀರಾವರಿ ಕಾಮಗಾರಿಗಳು ಏನಿದೆ ಅವು ಸಣ್ಣ ಕಟ್ಟೆಗಳಾದರೂ ಕೂಡ ೧೦-೧೫ ಎಕರೆಗಾದರೂ ನೀರಿನ ಉಪಯೋಗ ಮಾಡಿಕೊಳ್ಳುವುದಕ್ಕೆ ಬರುವಂಥಹವುಗಳಾಗಿವೆ. ಇವುಗಳ ಕಡೆಗೂ ಗಮನಕೊಟ್ಟು ಅಂಥವನ್ನು ಲೋಕೋಪಯೋಗಿ ಖಾತೆಯು ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಇದರ ಬಗ್ಗೆ ವಿಷಯವನ್ನು ಸಂಗ್ರಹಿಸಲು ಪ್ರೊಫಾರ್ಮ ಕಳುಹಿಸಿ ಇಂತಿಂಥಹ ವಿಷಯಗಳನ್ನು ಸಂಗ್ರಹಿಸಬೇಕೆಂದು ಹೇಳಿದ್ದಾರೆ. ಅದಕ್ಕೆ ಪ್ರತಿ ತಾಲ್ಲೂಕಿಗೂ ಇನ್‌ವೆಸ್ಟಿಗೇಷನ್ ಮಾಡುವುದಕ್ಕೋಸ್ಕರವಾಗಿ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಏನೇನು ವಿಷಯಗಳನ್ನು ಸಂಗ್ರಹಿಸಬೇಕೋ ಅದನ್ನು ಸಂಗ್ರಹಿಸಿ ಅದನ್ನು ಲೋಕೋಪಯೋಗಿ ಇಲಾಖೆಯ ಖಾತೆಗೆ ತೆಗೆದುಕೊಳ್ಳುವುದು ಅವಶ್ಯಕವಿದೆ. ಇದರ ಜೊತೆಗೆ ಇನ್ನೊಂದು ವಿಷಯವೇನೆಂದರೆ ನನ್ನ ಜಿಲ್ಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವಾಗ ಬೋರ್‌ವೆಲ್‌ಗಳಲ್ಲಿ ೨೦೦೦, ೩೦೦೦, ೧೦,೦೦೦, ೧೫,೦೦೦ ಗ್ಯಾಲನ್ ನೀರು ಸಿಕ್ಕಿದೆ ಈ ನೀರನ್ನು ಕೂಡ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ ಈ ಬಗ್ಗೆ ಒಂದು ಯೋಜನೆ ಹಾಕಿ ೧೦-೨೦ ಎಕರೆ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಂಡು ಕೇವಲ ಕೆಲವು ಬೆಳೆಗಳಿಗೆ ನೀರಿನ ಅವಕಾಶವಾಗುವ ಹಾಗೆ ಮಾಡಿಕೊಡಬೇಕು ಇರತಕ್ಕ ನೀರಾವರಿ ಕಾಮಗಾರಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ನೀರಾವರಿ ಇಲ್ಲದೆ ಇರತಕ್ಕಂಥಾ ಪ್ರದೇಶಗಳಲ್ಲಿ ಎಷ್ಟು ಸಾಲ ಕೊಟ್ಟು ಮಾಡಿದರೂ ಕೂಡ ಬಹಳ ಜನ ಬಡವರಿಗೆ ಅದರಿಂದ ಅನುಕೂಲವಾಗುತ್ತದೆ. ಅದನ್ನು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಇತ್ತೀಚೆಗೆ ಕೇಂದ್ರ ಸರ್ಕಾರದವರು ೨೦೦೦ ಹೆಕ್ಟೇರ್‌ಗಿಂತ ಕಡಿಮೆ ಇರತಕ್ಕಂಥ ನೀರಾವರಿ ಕಾಮಗಾರಿಗಳನ್ನೆಲ್ಲಾ ಸಣ್ಣ ನೀರಾವರಿ ಎಂದು ತೆಗೆದುಕೊಳ್ಳಬೇಕೆಂದು ಹೇಳಿ ಈ ರೀತಿಯಾದ ಒಂದು ಸೂಚನೆಯನ್ನು ಕೊಟ್ಟಿದ್ದಾರೆ.

ಈ ರೀತಿ ಮಾಡಿದರೆ ಹೆಚ್ಚು ಪ್ರಯೋಜನವಾಗುತ್ತದೆ. ಕೇಂದ್ರದಿಂದ ನಮಗೆ ಸಹಾಯ ಸಿಗುತ್ತದೆ. ವಿಶ್ವಬ್ಯಾಂಕ್‌ನಿಂದಲೂ ನಮಗೆ ಸಹಾಯ ಸಿಗುತ್ತದೆ. ಇದನ್ನು ಆಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳುವುದು ಅಗತ್ಯವಿದೆ. ನಾವು ಯಾವ ಮಾರ್ಗವನ್ನು ಅನುಸರಿಸಿದರೆ, ನಮಗೆ ಯಾವರೀತಿ ಪ್ರಯೋಜನವಾಗುತ್ತದೆ. ಎಂಬುದನ್ನು ಸ್ವಲ್ಪ ಆಲೋಚನೆ ಮಾಡಿ ತೀರ್ಮಾನ ಕೈಗೊಳ್ಳಬೇಕೆಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ, ಈ ಯೋಜನೆಗಳು ನಮಗೆ ಬಹಳ ಅವಶ್ಯಕವಾಗಿ ಬೇಕಾಗಿವೆ. ನಮ್ಮ ಮಾನ್ಯ ಮಂತ್ರಿಗಳು ಈ ಯೋಜನೆಗಳ ಬಗ್ಗೆ ಹೆಚ್ಚು ಗಮನ ತೆಗೆದುಕೊಳ್ಳಬೇಕು. ಕಳೆದ ವರ್ಷ ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳನ್ನು ಪಟ್ಟಿಯಲ್ಲಿ ಸೇರಿಸಿದರೂ ಬಹುಭಾಗ ಕಾರ್ಯಗತವಾಗಿಲ್ಲ. ಮಾನ್ಯ ಸದಸ್ಯರಾದ ಚನ್ನಪ್ಪನವರು ಹೇಳಿದಹಾಗೆ, ಅವುಗಳ ಅಂದಾಜು ಕೂಡ ಮಂಜೂರಾಗಿಲ್ಲ. ಇಷ್ಟು ತಡ ಆದದ್ದು ಅಕ್ಷಮ್ಯವೆಂದು ನನ್ನ ಭಾವನೆ. ಆ ವರ್ಷ ಒದಗಿಸಿದ ಹಣ ಜನಗಳಿಗೆ ಉಪಯೋಗವಾಗಿಲ್ಲ. ಅಂದರೆ ತೆಗೆದುಕೊಂಡ ತೀರ್ಮಾನವನ್ನು ಅಲಕ್ಷ್ಯದಿಂದ ಕಂಡಹಾಗೆ ಆಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾವು ಕೈಗೊಂಡ ಕಾರ್ಯಕ್ರಮಗಳು ಕಾರ್ಯಗತ ಮಾಡುವುದಕ್ಕೆ ಸರ್ಕಾರವು ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ರಸ್ತೆಗಳ ವಿಷಯ. ಈ ರಸ್ತೆಗಳನ್ನು ಮೂರು ನಾಲ್ಕು ಭಾಗವಾಗಿ ಮಾಡಿದ್ದಾರೆ. (೧) ರಾಷ್ಟ್ರೀಯ ಹೆದ್ದಾರಿಗಳು (೨) ರಾಜ್ಯ ಹೆದ್ದಾರಿಗಳು (೩) ಹಳ್ಳಿಗಾಡಿನ ರಸ್ತೆಗಳು. ಇವುಗಳಲ್ಲಿ ಯಾವ ರಸ್ತೆಗಳಿಗೆ ಟಾರು ಹಾಕಬೇಕು, ಎಲ್ಲಿ ಜಲ್ಲಿ ಹಾಕತಕ್ಕಂತಾದ್ದು ಇದೆ, ಯಾವರೀತಿ ಉತ್ತಮ ಪಡಿಸಬೇಕು ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ. ವರ್ಷೇ ವರ್ಷೇ ಇದನ್ನೂ ಕೂಡ ಪಟ್ಟಿ ಮಾಡುವಾಗ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಉದ್ದದ ರಸ್ತೆಗಳಿವೆ. ಎಷ್ಟು ಕಿಲೋಮೀಟರ್ ರಸ್ತೆಗಳಿವೆ, ಎಷ್ಟು ದೂರದವರೆಗೆ ಟಾರು ಹಾಕಲಾಗಿದೆ, ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟು ದೂರದ ರಸ್ತೆಗಳಿವೆ, ಶೇಕಡಾವಾರು ರಸ್ತೆಗಳ ಉದ್ದ ಎಷ್ಟಿರಬೇಕು. ಎಷ್ಟು ಮೈಲಿ ಅಥವಾ ಕಿಲೋಮೀಟರ್ ಟಾರು ಹಾಕಲಾಗಿದೆ ಎಂಬುದನ್ನು ಕಂಡುಕೊಂಡು ಈ ಬಗ್ಗೆ ಇರತಕ್ಕ ತಾರತಮ್ಯವನ್ನು ಹೋಗಲಾಡಿಸುವುದು ಅಗತ್ಯಕ. ನನಗೆ ತಿಳಿದಮಟ್ಟಿಗೆ ಮಲೆನಾಡು ಪ್ರದೇಶದಲ್ಲಿ ವರ್ಷೇ ವರ್ಷೇ ಟಾರು ಹಾಕಿದರೂ ಕೂಡ, ಅಲ್ಲಿರತಕ್ಕ ರಸ್ತೆಗಳು ಒಂದು ವರ್ಷ ಕೂಡ ಉಳಿಯುವುದಿಲ್ಲ. ಅಂತಹ ಕಡೆ ರಸ್ತೆಗಳಿಗೆ ಟಾರು ಹಾಕುವುದು ಅವಶ್ಯಕ. ಮಳೆ ಇಲ್ಲದೆ ಇರತಕ್ಕ ಪ್ರದೇಶಗಳಲ್ಲಿ ಕೂಡ ಒಂದು ಗ್ರಾಮಕ್ಕೆ ಹೋಗಬೇಕಾದರೆ ರಸ್ತೆ ಇರುವುದೇ ಇಲ್ಲ. ಇಂತಹ ಕಡೆಗೂ ಸರ್ಕಾರ ಗಮನಕೊಡಬೇಕೆಂದು ಮತ್ತೊಮ್ಮೆ ಸಲಹೆ ಮಾಡುತ್ತೇನೆ.

ಇನ್ನು ನಮ್ಮ ವಿಭಾಗಕ್ಕೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಬಳ್ಳಾರಿ, ಪಾವಗಡ, ಮಧುಗಿರಿ, ತುಮಕೂರು, ಕೊರಟಗೆರೆ ಮಾರ್ಗದಲ್ಲಿ ಮಂದ್ರೂರು, ಮಾಗಳ್ಳಿವರೆಗೆ ಅಂತರ ರಾಜ್ಯ ರಸ್ತೆಗಳಿಗೆ ಹೇಗೆ ಗಮನಕೊಡಬೇಕೋ ಅದನ್ನೂ ಕೂಡ ಕೊಟ್ಟಿಲ್ಲ. ಈ ರಸ್ತೆಯನ್ನು ಸ್ಟೇಟ್ ಹೈವೇ ಆಗಿ ಪರಿಗಣಿಸಬೇಕಾಗಿ ನಾನು ಈಗಾಗಲೇ ಮಾನ್ಯ ಲೋಕೋಪಯೋಗಿ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇನೆ. ಮಾನ್ಯ ಸಚಿವರೂ ಕೂಡ ನನ್ನ ಜೊತೆಯಲ್ಲಿ ಈ ಬಗ್ಗೆ ಮಾತನಾಡಿ ಒಪ್ಪಿಕೊಂಡಿದ್ದಾರೆ. ಆ ರಸ್ತೆಯನ್ನು ರಾಜ್ಯ ಹೆದ್ದಾರಿ ರಸ್ತೆಗೆ ಸೇರಿಸಬೇಕೆಂದು ಮತ್ತೊಮ್ಮೆ ಮಂತ್ರಿಗಳಿಗೆ ಜ್ಞಾಪಕ ಮಾಡುತ್ತೇನೆ.

ಇನ್ನು ದೊಡ್ಡ ನೀರಾವರಿ ಕಾಮಗಾರಿಗಳ ಬಗ್ಗೆ ಹೇಳುವುದಾದರೆ. ಹೇಮಾವತಿ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಹೇಮಾವತಿ ಯೋಜನೆ ಪ್ರಾರಂಭವಾದದ್ದು ಒಂದು ಲಕ್ಷ ಎಕರೆ ನೀರಾವರಿಗೆ ಮಾತ್ರ. ಇದನ್ನು ೧೯೬೮ರಲ್ಲಿ ಮಾನ್ಯ ದಿವಂಗತ ದೇವರಾಜ ಅರಸು ಅವರು ಅಭಾವ ಪೀಡಿತ ಪ್ರದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸುಮಾರು ೬ ಲಕ್ಷ ಎಕರೆಗೆ ಅರೆ ನೀರಾವರಿ ಸೌಕರ್ಯವನ್ನು ಕಲ್ಪಿಸತಕ್ಕಂತಹ ಒಂದು ದೊಡ್ಡ ಜಲಾಶಯವನ್ನು ಕಟ್ಟಿಸಿದರು. ಇದಕ್ಕಾಗಿ ನಾನು ಅವರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ. ಈ ಒಂದು ಕೆಲಸ ಎಷ್ಟು ಅತುರಾತುರವಾಗಿ ಆಗಬೇಕೋ ಅಷ್ಟು ಅತುರವಾಗಿ ಆಗಿಲ್ಲ. ಇದಕ್ಕೆ ನಾನಾ ಕಾರಣಗಳು ಇವೆ. ಈ ರಾಜ್ಯದಲ್ಲಿ ಮಾಡತಕ್ಕ ನೀರಾವರಿ ಕಾಮಗಾರಿಗಳನ್ನು ಕೇವಲ ೧೦–೧೫ ವರ್ಷದಲ್ಲಿ ಮಾಡುತ್ತೇವೆಂದು ಹೇಳುವುದು ಸ್ವಲ್ಪ ಕಷ್ಟಕರವಾಗುತ್ತದೆ. ಇದನ್ನು ಅಲ್ಲಗಳೆಯುವ ಹಾಗಿಲ್ಲ. ಈಗಿರುವ ದೊಡ್ಡ ದೊಡ್ಡ ಕಾಮಗಾರಿಗಳನ್ನು ಪೂರೈಸಬೇಕಾದರೆ ಸುಮಾರು ೨ ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚು ಹಣ ಬೇಕು. ಅಷ್ಟೇ ಕಾಲವೂ ಕೂಡ ಬೇಕಾಗುತ್ತದೆ. ನೀರಾವರಿ ಯೋಜನೆಗಳನ್ನು ಒಂದೆರಡು ವರ್ಷಗಳಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿದಾಗ ಈ ವಿಷಯ ಸ್ಪಷ್ಟವಾಗಿ ಕಾಣುತ್ತದೆ. ಇದಕ್ಕೆ ಬೇರೆ ಏನಾದರೂ ಉಪಾಯ ಮಾಡುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಲೋಕೋಪಯೋಗಿ ಇಲಾಖಾ ಬೇಡಿಕೆಯ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿದಂತಹ

ನಮ್ಮ ಸ್ನೇಹಿತರು ಹೇಳಿದರು. ಈಗ ಬೇರೆ ಕೆಲಸಗಳನ್ನೆಲ್ಲಾ ನಿಲ್ಲಿಸಿ, ನೀರಾವರಿ ಕೆಲಸಗಳಿಗೆ ಹೆಚ್ಚು ಹಣವನ್ನು ಒದಗಿಸಿದರೆ, ನಾವು ಒಪ್ಪಿಕೊಳ್ಳುತ್ತೇವೆಂದು ಹೇಳಿದರು. ನಾನು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಆಂಧ್ರ ರಾಜ್ಯದಲ್ಲಿ ಈ ಕೆಲಸವನ್ನು ಮಾಡಿದ್ದಾರೆ. ನಾವೂ ಕೂಡ ಅದೇ ರೀತಿ ಇನ್ನು [illegible] ವರ್ಷ ಎಲ್ಲಾ ಕೆಲಸಗಳನ್ನು ನಿಲ್ಲಿಸಿ, ನೀರಾವರಿ ಸೌಕರ್ಯವನ್ನು ಒದಗಿಸುವುದಕ್ಕೆ ಸರ್ವ ಪ್ರಯತ್ನ ಮಾಡುವುದು ಅವಶ್ಯಕವೆಂದು ಸೂಚನೆ ಮಾಡುತ್ತೇನೆ. ಹೇಮಾವತಿ ಎಡದಂಡೆ ನಾಲೆಯಲ್ಲಿ ಟನಲ್ ಬರುವ ಮೂರು ನಾಲ್ಕು ಜಾಗಗಳನ್ನು ತೋರಿಸಿದ್ದಾರೆ. ನನ್ನ ಸಲಹೆ ಏನೆಂದರೆ, ಈಗ ಟನಲ್ ಕೆಲಸ ಮಾಡುವಾಗ, ದೊಡ್ಡ ಕಟಿಂಗ್ ಬಂದರೂ ಪರವಾಗಿಲ್ಲ, ಟನಲ್ ಕೆಲಸ ಪೂರೈಸಿ ನೀರು ಕೊಡುವುದಕ್ಕೆ ಪ್ರಯತ್ನ ಮಾಡಿ. ಬೇಗ ನೀರು ಕೊಡಬೇಕಾದರೆ, ಟನಲ್ ಉದ್ದವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಯಾವುದೇ ಕಾರಣದಿಂದ ನೀರಾವರಿ ಪ್ರದೇಶವನ್ನು ಕಡಿಮೆ ಮಾಡುವಂತಹ ಯಾವುದೇ ಕಾರ್ಯಕ್ರಮ ಕೈಗೊಳ್ಳಬಾರದು. ಕ್ಯಾಂಟೋರ್ ಚಾನಲ್ ಬದಲು ಕಟಿಂಗ್‌ನಲ್ಲಿ ತೆಗೆದುಕೊಂಡು ಹೋದರೆ ನೀರಾವರಿ ಕೊಡುವುದು ಸಾಧ್ಯವಿದೆ. ಈ ರೀತಿ ಎಡದಂಡೆ ನಾಲೆ, ಬಲದಂಡೆ ನಾಲೆಗೆ ಈ ಮಾರ್ಗವನ್ನು ಅನುಸರಿಸಿಕೊಂಡು ಹೋಗಬೇಕೆಂದು ಮಾನ್ಯ ಮಂತ್ರಿಗಳಿಗೆ ನಾನು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಂತ್ರಿಗಳು ಈ ಕಡೆ ಕುಳಿತಿದ್ದಾಗಲೂ ಕೂಡ ಅನೇಕ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದರು. ಈಗ ನಾನು ಕೊಟ್ಟಿರುವ ಸಲಹೆಗಳನ್ನು ಅವರು ಹಿಂದೆ ಕೊಟ್ಟಿದ್ದಾರೆ. ಅವರು ಕೊಟ್ಟಂತಹ ಸಲಹೆಗಳನ್ನು ಮತ್ತೊಮ್ಮೆ ಜ್ಞಾಪಕ ಮಾಡಿಕೊಡಬೇಕೆಂಬ ಉದ್ದೇಶದಿಂದ ನಾನು ಈ ಸಂದರ್ಭದಲ್ಲಿ ಜ್ಞಾಪಕ ಮಾಡುತ್ತಿದ್ದೇನೆ. ಈ ಕೆಲಸವನ್ನು ಮಾಡಿದರೆ ಹೆಚ್ಚು ಪ್ರದೇಶ ನೀರಾವರಿ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುತ್ತದೆ. ಹೇಮಾವತಿ ನೀರು ತುಮಕೂರು ಭಾಗಕ್ಕೆ ಬರುವ ಮಾರ್ಗದಲ್ಲಿ ಅದು ಮಿಡ್ಡ್ಯಾರು ವರೆಗೂ ಹೋಗುವುದಕ್ಕೆ ಸಾಧ್ಯವೆಂದು ನಮ್ಮ ತಜ್ಞರು ಹೇಳಿದ್ದಾರೆ. ಆದುದರಿಂದ, ಇದನ್ನೂ ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು. ಈ ಮಧ್ಯೆ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಅವಕಾಶ ಕೊಡದಹಾಗೆ, ಯಾವ ಉದ್ದೇಶದಿಂದ ಮಾಡಲಾಗಿದೆಯೋ, ಅದು ಎಷ್ಟು ದೂರದವರೆಗೆ ಹೋಗಬೇಕೋ, ಅಷ್ಟು ದೂರದವರೆಗೂ ನೀರು ಕೊಡತಕ್ಕ ರೀತಿಯಲ್ಲಿ ಕೆಲಸಗಳು ಆಗಬೇಕು.

ಇನ್ನು ಈ ವರ್ಷ ಹೆಚ್ಚು ಹಣವನ್ನು ಕಾವೇರಿ ಜಲಾಶಯದ ಪ್ರದೇಶಕ್ಕೆ ಒದಗಿಸಿದ್ದೀರಿ. ಅದಕ್ಕಾಗಿ ಮಾನ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಬೇಕು. ಕೆಲವು ಮಾನ್ಯ ಸದಸ್ಯರು ಇದನ್ನು ತಪ್ಪು ತಿಳಿದುಕೊಳ್ಳುತ್ತಾರೆ. ನಾವು ಕಾವೇರಿ ಜಲಾನಯನ ಪ್ರದೇಶದಲ್ಲಿ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕೋ, ಅಷ್ಟು ನೀರು ಉಪಯೋಗಿಸಿಕೊಳ್ಳಲಿಕ್ಕೆ ಆ ಕೆಲಸವನ್ನು ನಾವು ಮಾಡದೇ ಇದ್ದರೆ, ನಮಗೆ ಇದರ ನಷ್ಟ ಪೂರಾ ಆಗುತ್ತದೆ. ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಈ ಬಗ್ಗೆ ಹೊಟ್ಟೆಕಿಚ್ಚು ಪಡಬೇಕಾಗಿಲ್ಲವೆಂದು ಬಹಳ ನೊಂದ ಮನಸ್ಸಿನಿಂದ ಹೇಳುತ್ತೇನೆ. ನಮ್ಮ ಕಡೆ ಕೆಲಸಗಳು ಆಗಬೇಕಾಗಿದೆಯೆಂದು ನೀವು ಹೇಳುತ್ತೀರಿ. ಆದರೆ ನಮಗೆ ಬರತಕ್ಕ ನೀರನ್ನು ನಾವು ಉಪಯೋಗ ಮಾಡಿಕೊಳ್ಳದೆ ಇದ್ದರೆ, ನಮ್ಮ ದೇಶಕ್ಕೆ ನಷ್ಟವಾಗುತ್ತದೆ. ನಿಮ್ಮ ಕಡೆ ಯೋಜನೆಗಳ ಕೆಲಸ ತಡವಾದರೂ ದೇಶದ ಹಿತದೃಷ್ಟಿಯಿಂದ ಸಹಿಸಿಕೊಳ್ಳಬೇಕು. ಇಷ್ಟು ಕೆಲಸವನ್ನು ಮಾನ್ಯಮಂತ್ರಿಗಳು ಕಡ್ಡಾಯವಾಗಿ ಮಾಡಿ, ನಮಗೆ ಆದಷ್ಟು ಜಾಗ್ರತೆ ಹೆಚ್ಚು ಹಣವನ್ನು ಒದಗಿಸಿ ಬೇಗ ನೀರಾವರಿ ಸೌಲಭ್ಯ ಸಿಗುವ ಹಾಗೆ ಮಾಡಿಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಏಕೆಂದರೆ, ನಮ್ಮ ಕಷ್ಟ ಅಷ್ಟಿಷ್ಟಲ್ಲ. ವರ್ಷೇ ವರ್ಷೇ ಕ್ಷಾಮಕ್ಕೆ ತುತ್ತಾಗುತ್ತಿದ್ದೇವೆ. ನಾಗಮಂಗಲ, ಗುಬ್ಬಿ, ತುಮಕೂರು, ಕುಣಿಗಲ್, ತುರುವೇಕೆರೆ, ಮಂಡ್ಯ ಭಾಗಗಳಲ್ಲಿ ಕೆಲವು ನೀರಾವರಿ ಪ್ರದೇಶಗಳನ್ನು ಬಿಟ್ಟರೆ, ಉಳಿದ ಭಾಗದ ಜನರು ವರ್ಷೇ ವರ್ಷೇ ಕ್ಷಾಮವನ್ನು ಅನುಭವಿಸಬೇಕಾಗಿದೆ. ಬರಗಾಲ ಪೀಡಿತ ಪ್ರದೇಶದಲ್ಲಿ ವಾಸಮಾಡತಕ್ಕ ಜನಗಳ ಸ್ಥಿತಿಯನ್ನು ನೀವು ಕಾಣ್ಣಾರೆ ನೋಡಿದರೆ, ಗೊತ್ತಾಗುತ್ತದೆ. ಈ ಪ್ರದೇಶದ ಜನ ಭದ್ರಾವತಿ ಮೊದಲಾದ ಇತರ ಕಡೆಗಳಲ್ಲಿ ಹೋಗಿ ಜೀವನ ಮಾಡತಕ್ಕಂತಹ ಪರಿಸ್ಥಿತಿ ಬಂದಿದೆ. ಅವರಿಗೆ ಅನ್ನ ಕೊಡತಕ್ಕ ಕಾರ್ಯಕ್ರಮವನ್ನು ಹೆಚ್ಚು ಮುತುವರ್ಜಿ ವಹಿಸಿ, ಮಾನ್ಯ ಮಂತ್ರಿಗಳು ಮಾಡಬೇಕೆಂದು ಅರಿಕೆ ಮಾಡಿಕೊಂಡು, ನಾನು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

5. ಪಿ. ಎಂ.

† ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರ್) ಮಾನ್ಯ ಅಧ್ಯಕ್ಷರೇ. ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳು ರೈತರ ಕುಟುಂಬದಲ್ಲಿ ಹುಟ್ಟಿದವರು, ಅವರಿಗೆ ಆದರಿಂದ ರೈತರ ಕಷ್ಟಸುಖಗಳು ಚೆನ್ನಾಗಿ ಗೊತ್ತಿದೆ. ಈ ಬಗ್ಗೆ ನಾನು ಹೋದಸಲವೇ ಮಾನ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಂಡಿದ್ದೇನೆ ಆದಕ್ಕೆ ಉತ್ತರವಾಗಿ ಅವರು ಈ ಅಪ್ಪರ್‌ಭದ್ರಾ ಚಾನಲ್ ಬಗ್ಗೆ ಏನು ಆಶ್ವಾಸನೆ ಕೊಟ್ಟರು ಎಂದರೆ ಇದನ್ನು ಬಂದು ಸಗದಿಯಾದ ವೇಳೆಯಲ್ಲಿ ಮುಗಿಸಿಕೊಡುತ್ತೇವೆಂದು ಹೇಳಿದರು ಇದರ ಬಗ್ಗೆ ಇದುವರೆಗೂ ಸಹ ಅವರು ಏನೂ ಮಾಡಲಿಲ್ಲ. ನನ್ನ ಕ್ಷೇತ್ರ ಬಹಳ ಕಡುಬಡವರು ಇರತಕ್ಕಂಥ ಕ್ಷೇತ್ರ. ಈಗಲಾದರೂ ಕೂಡ ಮಾನ್ಯ ಮಂತ್ರಿಗಳು ಬಹಳ ಶ್ರದ್ಧೆವಹಿಸಿ ಈ ಅಪ್ಪರ್ ಭದ್ರಾ ಛಾನಲ್ ಕೆಲಸವನ್ನು ಈಗಲಾದರೂ ಕೂಡ ಮಾಡಿಕೊಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ. ಇದನ್ನು ಮಾಡಿಕೊಟ್ಟರೆ ಚಳ್ಳಕೆರೆ ತಾಲ್ಲೂಕು ಮತ್ತು ಮೊಳಕಾಲ್ಮೂರು ತಾಲ್ಲೂಕಿನಲ್ಲಿರ ತಕ್ಕಂಥಾ ಬಡ ರೈತರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ನಾನು ಈ ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳನ್ನು ಅಪರಂಜಿ ಎಂದು ತಿಳಿದುಕೊಂಡಿದ್ದೇನೆ, ಬಾಕಿ ಮಂತ್ರಿಗಳು ಏನು ಇದ್ದಾರೆ ಅವರು ಸವರನ್ ಇದ್ದ ಹಾಗೆ. ಆದುದರಿಂದ ಈ ಅಪರಂಜಿ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಸಂಬಂಧ ಪಟ್ಟ ಹಾಗೆ ಕೂಡಲೇ ಈ ಕೆಲಸವನ್ನು ಮಾಡಿಕೊಡಬೇಕಾಗಿ ನಾನು ಮತ್ತೊಮ್ಮೆ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ನಮ್ಮ ಊರಿನಲ್ಲಿರುವ ಜೂನಿಯರ್ ಕಾಲೇಜನ್ನು ಹೈಸ್ಕೂಲ್ ಕಟ್ಟಡದಲ್ಲಿ ನಡೆಸುತ್ತಿದ್ದೇವೆ. ಈ ಜೂನಿಯರ್ ಕಾಲೇಜು ಕಟ್ಟಡಕ್ಕೆ ನಾವು ೧೫ ಲಕ್ಷ ರೂಪಾಯಿನ ಒಂದು ಎಸ್ಟಿಮೇಟ್ ಅನ್ನು ಕಳುಹಿಸಿಕೊಟ್ಟಿದ್ದೇವೆ ಕಳುಹಿಸಿ ಬಹಳ ವರ್ಷಗಳಾಗಿದ್ದರೂ ಕೂಡ ಇನ್ನೂ ಮಾಡಿಕೊಟ್ಟಿಲ್ಲ. ಅದನ್ನು ಈ ಸಾರಿಯ ಬಡ್ಜೆಟನಲ್ಲಾದರೂ ಸೇರಿಸಿ ಆ ಕೆಲಸ ಮಾಡಿ ಕೊಡ ಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇ ನೆಂದರೆ ನಮ್ಮ ಜಿಲ್ಲೆಯವರು ಬಹಳ ಕಡುಬಡವರಾಗಿದ್ದಾರೆ. ಅಲ್ಲದೆ ಇಲ್ಲಿ ೬೦ ಸಾವಿರ ಜನ ಎಸ್ ಸಿ ಮತ್ತು ಎಸ್‌ಟಿ ಇದ್ದಾರೆ. ಆದ್ದರಿಂದ ನಾನು ಈ ವಿಷಯವನ್ನು ಬಹಳ ನೊಂದ ಮನಸ್ಸಿನಿಂದ ಹೇಳು ತ್ತಿದ್ದೇನೆ. ತಾವು ಮಂತ್ರಿಯಾಗಿ ಬಂದು ವರ್ಷವಾದರೂ ಕೂಡ ನನ್ನ ಕ್ಷೇತ್ರಕ್ಕೆ ಬಂದಿಲ್ಲ. ಈಗಲಾದರೂ ಕೂಡ ಬಂದು ನನ್ನ ಕ್ಷೇತ್ರದ ಆ ಕಡುಬಡವರ ಕಷ್ಟಸುಖಗಳನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ನಮ್ಮ ಜಿಲ್ಲೆಯಿಂದ ಎಂ ಎಲ್ ಎ ಗಳು ಏನು ಬಂದಿದ್ದಾರೆ, ಅವರು ಬಾಯಿನೂ ಬಿಡದೆ ಇಲ್ಲಿ ಸುಮ್ಮನೆ ಬಂದು ಕುಳಿತಿದ್ದಾರೆ ಅವರಿಗೆ ಸ್ವಲ್ಪ ಬುದ್ಧಿ ಹೇಳಿರಿ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಈ ಮಾತನ್ನು ನಾನು ಏತಕ್ಕಾಗಿ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ ಎಂದರೆ ೧೨ ವರ್ಷದಿಂದಲೂ ಕೂಡ ಹೈಸ್ಕೂಲ್ ನಡೆಸುವ ಜಾಗದಲ್ಲೇ ಈ ಜೂನಿಯರ್ ಕಾಲೇಜನ್ನು ನಡೆಸುತ್ತಾ ಇರುವುದರಿಂದ ಅದನ್ನು ಬೇರೆ ಕಡೆ ನಡೆಸುವ ಹಾಗೆ ವ್ಯವಸ್ಥೆ ಮಾಡಿಕೊಡಬೇಕೆಂದು ಅತ್ಯಂತ ಕಳಕಳಿಯಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ನಮ್ಮ ತಾಲ್ಲೂಕಿನಲ್ಲಿ ೩ ಹಾಸ್ಟೆಲ್ಸ್‌ನಲ್ಲಿ ಒಂದು ಹಾಸ್ಟೆಲ್‌ಗೆ ಕಟ್ಟಡ ಮಾತ್ರ ಇದೆ. ಇನ್ನು ಎರಡು ಹಾಸ್ಟೆಲ್ ಅನ್ನು ಖಾಸಗೀ ಮನೆಯಲ್ಲಿ ನಡೆಸುತ್ತಿದ್ದಾರೆ ಅದಕ್ಕೆ ಕಟ್ಟಡವೇ ಇಲ್ಲ. ಬಹಳ ವರ್ಷವಾದರೂ ಕೂಡ ಈ ಹೆಣ್ಣು ಮಕ್ಕಳ ಹಾಸ್ಟೆಲಿಗೆ ಕಟ್ಟಡ ಕಟ್ಟಿಕೊಟ್ಟಿಲ್ಲ. ಈಗಲಾದರೂ ಆ ಕೆಲಸ ಮಾಡಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಸಣ್ಣ ನೀರಾವರಿ ವಿಷಯದ ಬಗ್ಗೆ ಹೇಳುವುದಾದರೆ ರಂಗಯ್ಯನದುರ್ಗ ಪ್ರಾಜೆಕ್ಟ್ ಶುರು ವಾಗಿ ೯ ವರ್ಷವಾಗಿದೆ, ಇದುವರೆಗೂ ಅಲ್ಲಿಯ ಕೆಲಸವನ್ನು ಪೂರೈಸಿಲ್ಲ. ಮೊದಲು ೪ ಕೋಟಿ ಆಗುತ್ತಿದ್ದ ಕೆಲಸ ಈಗ ೧೦ ಕೋಟಿಯಾಗುತ್ತದೆ. ನಮ್ಮದು ಬಡ ತಾಲ್ಲೂಕು ಎಂದು ಮಾನ್ಯ ಮಂತ್ರಿ ಗಳು ಬರುವುದಿಲ್ಲ. ಹಿಂದೆ ಚುನಾವಣಾ ಸಮಯದಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಗುಂಡೂ ರಾಯರು ನಮ್ಮ ಊರಿಗೆ ಕೊನೆಗೆ ಬಂದರು, ಈಗಲೂ ಹಾಗೆಯೇ ಆಗುತ್ತದೋ ಏನೋ ? ಆದುದರಿಂದ ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಈಗಲಾದರೂ ನಮ್ಮ ಊರಿಗೆ ಬಂದು ಇದನ್ನು ನೋಡಿಕೊಂಡು ಬರಬೇಕು, ಆವಾಗ ಗೊತ್ತಾಗುತ್ತದೆ, ಈ ರಂಗಯ್ಯನದುರ್ಗ ಪ್ರಾಜೆಕ್ಟ್ ನಲ್ಲಿ ಏನು ಕೆಲಸ ನಡೆಯುತ್ತಾ ಇತ್ತು, ಈಗ ಅದೂ ನಿಂತು ಹೋಗಿದೆ. ಯಾವ ಕಾರಣದಿಂದ ನಿಂತು

ಹೋಗಿದೆಯೋ ನನಗೆ ಗೊತ್ತಿಲ್ಲ ಮಾನ್ಯ ಮಂತ್ರಿಗಳು ಮಲಗಿದ್ದಾರೋ ಏನೋ ಗೊತ್ತಿಲ್ಲ. ಈಗ ಲಾದರೂ ಅದರ ಕಡೆ ಗಮನ ಹರಿಸಿ ಆ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಪೂರೈಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಅಪ್ಪರ್ ಭದ್ರಾ ಕೆಲಸ ತಡ ವಾಗಿ ಕೆಲಸವಾಗುತ್ತಾ ಇದೆ. ಅದನ್ನು ಬೇಗ ಪೂರೈಸಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಜಗಳೂರು ತಾಲ್ಲೂಕಿನ ಹೈನಳ್ಳಿಯಲೇ ಪಿಕ್‌ಅಪ್ ಕೆಲಸ ಮಾಡಿಕೊಟ್ಟರೆ ಅಲ್ಲಿ ಕಸಬಾಕ್ಕೆ ಅನುಕೂಲವಾಗುತ್ತದೆ. ಆ ಜನ ಬಹಳ ಕಡುಬಡವರಾಗಿದ್ದಾರೆ. ಆ ಕೆಲಸವನ್ನು ಆದಷ್ಟು ಜಾಗ್ರತೆ ಯಾಗಿ ಮಾಡಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಈಗ ನಾನು ಏನೇನು ಹೇಳುತ್ತೇನೋ ಅದನ್ನೆಲ್ಲಾ ಮಾನ್ಯ ಮಂತ್ರಿಗಳು ನೋಟ್ ಮಾಡಿ ಕೊಂಡು ಮಾಡಿಕೊಡಬೇಕು ಇಲ್ಲದೆ ಹೋದರೆ ನಾವು ಬಿಡುವುದಿಲ್ಲ.

ಅಧ್ಯಕ್ಷರು —ಬೇಗನೆ ಮುಗಿಸಬೇಕು.

ಶ್ರೀ ಎನ್. ಜಿ. ನಾಯಕ್.—ತಾವು ಬೆಲ್ ಬಾರಿಸಿ ಬೇಗನೆ ಮುಗಿಸಬೇಕು ಎಂದರೆ ನಾನು ಏನು ಹೇಳಬೇಕೋ ಅದು ಮರೆತುಹೋಗುತ್ತದೆ. ಬೇಗನೆ ಮುಗಿಸುತ್ತೇನೆ. ದಯಮಾಡಿಟ್ಟು ಸ್ವಲ್ಪ ಅವಕಾಶ ಕೊಡಿ. ನಾನು ಪಟ್ಟಣದವನಲ್ಲ. ಹಳ್ಳಿಯವನು. ಪಟ್ಟಣದವರಿಗೆ ಲೆಕ್ಚರ್ ಹೊಡೆಯುವುದಕ್ಕೆ ಬಂದ ಹಾಗೆ ನನಗೆ ಲೆಕ್ಚರ್ ಹೊಡೆಯುವುದಕ್ಕೆ ಬರುವುದಿಲ್ಲ, ನಿಷ್ಠೆಯಿಂದ ಕೆಲಸ ಮಾಡುತ್ತೇವೆ. ಸ್ವಲ್ಪ ಹೇಳುವುದಕ್ಕೆ ಅವಕಾಶ ಕೊಡಿ. ನನ್ನ ಹತ್ತಿರ ಒಂದು ಪಟ್ಟಿ ಇದೆ, ಅದನ್ನು ತಮಗೆ ಕಳುಹಿಸಿಕೊಡು ತ್ತೇನೆ. ದಯವಿಟ್ಟು ಆ ಕೆಲಸಗಳನ್ನು ಆದಷ್ಟು ಜಾಗ್ರತೆಯಾಗಿ ಮಾಡಿಕೊಡಬೇಕೆಂದು ಮನವಿ ಮಾಡಿ ಕೊಳ್ಳುತ್ತೇನೆ. ಈ ಪಟ್ಟಿಯಲ್ಲಿರುವುದು ಯಾವುದನ್ನು ಬಡ್ಜೆಟ್ಟಿನಲ್ಲಿ ಸೇರಿಸಿಲವೋ ಅದನ್ನು ಕಡೆಗಾಣಿಸದೆ ಆ ಕೆಲಸಗಳನ್ನು ಈಗಿನ ಬಡ್ಜೆಟ್‌ನಲ್ಲಾದರೂ ಸೇರಿಸಿ ಆ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ನಾನು ಮೊದಲೇ ಹೇಳಿದ ಹಾಗೆ ಅಪ್ಪರ್ ಭದ್ರಾ ಕೆಲಸಗಳನ್ನು ಆದಷ್ಟು ಜಾಗ್ರತೆ ಪೂರೈಸಿಕೊಡ ಬೇಕೆಂದು ಹತ್ತಾರು ವರ್ಷಗಳಿಂದಲೂ ಕೇಳುತ್ತಲೇ ಬಂದಿದೆ. ಆದರೂ ಮಾಡಿಕೊಟ್ಟಿಲ್ಲ. ಹಾಗೆಯೇ ಚನ್ನಗಿರಿ ತಾಲ್ಲೂಕಿನ ಸೂಳೆಕೆರೆಯಲ್ಲಿ ಈಗ ಅದನ್ನು ಶಾಂತಿಸಾಗರ ಎಂದು ಕರೆಯುತ್ತೇನೆ, ಅಲ್ಲಿ ಒಂದು ಕಾಲುವೆ ಮಾಡಿದ್ದಾರೆ. ೨ ೧/೨ ಲಕ್ಷ ರೂಪಾಯಿ ವೆಚ್ಚದಲ್ಲಿ ಅಲ್ಲಿ ಒಂದು ಟ್ಯೂಬ್ ಹಾಕಿ ಪರ್ಮನೆಂಟ್ ರಿಸರ್ವಾಯರ್ ಮಾಡಿ ಆ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇದೇನು ಅನ್ಯಾಯ ಸ್ವಾಮಿ ಅಲ್ಲಿ ಪ್ರಭಾವಶಾಲಿಗಳು ಇದ್ದಾರೆ ಎಂದು ಮಾಡಿಕೊಟ್ಟಿದ್ದೀರಾ ? ನನ್ನ ಕ್ಷೇತ್ರದವರು ಕಡುಬಡವರು, ಇವರು ಏನು ತಿಳಿದುಕೊಂಡಿದ್ದರು ಎಂದರೆ ಜನತಾ ಸರ್ಕಾರದವರು ನಮ್ಮನ್ನು ಉದ್ಧಾರ ಮಾಡುತ್ತಾ ರೆಂದು ತಿಳಿದುಕೊಂಡಿದ್ದರು. ತಾವೆಲ್ಲಾ ಚಿತ್ರದುರ್ಗದ ಶ್ರೀ ನಿಜಲಿಂಗಪ್ಪನವರ ಒಂದು ನಾಯಕತ್ವದಲ್ಲಿ ಮಂತ್ರಿಗಳಾಗಿದ್ದೀರಿ. ನೀವು ಮಾಡುತ್ತಾ ಇರತಕ್ಕಂಥಾ ಕೆಲಸ ನೋಡಿದರೆ ಅವರಿಗೇನೆ ಚಕ್ಕರ್ ಕೊಟ್ಟ ಹಾಗೆ ಕಾಣುತ್ತದೆ,

ಅಧ್ಯಕ್ಷರು : ನಿಮ್ಮ ಟೈಂ ಆಯಿತು, ಬೇಗನೆ ಮುಗಿಸಿ.

ಶ್ರೀ ಎನ್. ಜಿ. ನಾಯಕ್.— ಅಧ್ಯಕ್ಷರು, ಅಪ್ಪಣೆ ಕೊಡಿಸಿದ್ದಾರೆ. ನಾನು ಇನ್ನು ಹೆಚ್ಚು ಹೇಳುವು ದಿಲ್ಲ, ನನ್ನ ಕ್ಷೇತ್ರ ಕಡುಬಡವರು ಇರತಕ್ಕಂಥಾ ಕ್ಷೇತ್ರ. ಆ ಜನರಿಗೆ ಎಲ್ಲಾ ಅನುಕೂಲತೆಗಳನ್ನೂ ಕೂಡ ಮಾಡಿಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು, ನನಗೆ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಸನ್ಮಾನ್ಯ ಸಭಾಧ್ಯಕ್ಷರೇ, ಲೋಕೋಪಯೋಗಿ ಇಲಾಖೆ ಮೇಲಿನ ಚರ್ಚೆಗೆ ಕೇವಲ ಒಂದು ದಿವಸ ಯಾವ ಕಾರಣದಿಂದ ಇಟ್ಟುಕೊಂಡಿದ್ದಾರೋ ಗೊತ್ತಿಲ್ಲ. ಆದರೂ ಸಹ ನನಗೆ ಸಿಗತಕ್ಕ ಸಮಯದಲ್ಲಿ ಒಂದೆರಡು ವಿಷಯಗಳನ್ನು ಮಂತ್ರಿಗಳ ಮುಂದೆ ಇಡಬೇಕೆಂದು ಇಷ್ಟಪಡುತ್ತೇನೆ.

ಮೊಟ್ಟ ಮೊದಲನೆಯದಾಗಿ, ೧೯೭೪ರಿಂದಲೂ ಶಿವಮೊಗ್ಗ ತಾಲೂಕಿಗೆ ಸಂಬಂಧಪಟ್ಟ ಹಾಗೆ ಒಂದು ಬೇಡಿಕೆ ಇದೆ. ಅದು ತುಂಗಾ ಲಿಫ್ಟ್ ಇರಿಗೇಷನ್ ಬಗ್ಗೆ. ಆ ಬಗ್ಗೆ ವಿವರವಾದ ಮನವಿಯನ್ನು ಮಾನ್ಯ ಸಚಿವರಿಗೆ ನಾನು ಕೊಟ್ಟಿದ್ದೇನೆ. ೧೯೭೪ರಲ್ಲಿ ಶ್ರೀ ಎ. ಆರ್. ಬದರೀನಾರಾಯಣ್ ಅವರ

ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಕವಾಯಿತು. ಅದರ ಪ್ರಕಾರ ಸುಮಾರು ೧೬೮ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಒಂದು ಯೋಜನೆ ಆಯಿತು. ಈ ಯೋಜನೆಯಿಂದ ೯ ಸಾವಿರದ ೩೦೦ ಎಕರೆ ಜಮೀನಿಗೆ ನೀರು ದೊರೆಯುತಕ್ಕಂಥ ಅವಕಾಶ ಇತ್ತು. ಆದರೆ ಯಾವುದೋ ಒಂದು ಕಾರಣದಿಂದ ಇದುವರೆಗೂ ಕೂಡಾ ಅದರ ಕಡೆ ಸರಕಾರ ಗಮನ ಕೊಡಲಿಲ್ಲ. ಸುಮಾರು ೩೨ ರಿಂದ ೪೦ ಹಳ್ಳಿಗಳ ವಿಭಾಗಕ್ಕೆ ಇದರಿಂದ ನೀರು ದೊರಕುತ್ತದೆ. ಈ ವಿಭಾಗದ ಸುತ್ತ ಮುತ್ತ ನೀರು ಇದ್ದೂ ಬೆಳೆಗೆ ಸರಿಯಾಗಿ ನೀರು ದೊರಯದೇ ಇದ್ದಂಥ ಬೆಂಗಾಡು ಪ್ರದೇಶವಾಗಿದೆ. ಮಾನ್ಯ ಸಚಿವರು ಇದರ ಕಡೆಗೆ ಗಮನ ಕೊಟ್ಟು ಕಳೆದ ಹತ್ತು ವರ್ಷದಿಂದ ಇರುವ ಬೇಡಿಕೆಯನ್ನು ನೆರವೇರಿಸಿಕೊಟ್ಟರೆ, ಅಲ್ಲಿಯ ಜನ ನಿಜವಾಗಿಯೂ ತಮ್ಮ ಫೋಟೋ ಇಟ್ಟುಕೊಂಡು ಪೂಜೆ ಮಾಡುತ್ತಾರೆ, ಅಷ್ಟೊಂದು ಕಳಕಳಿ ಇದೆ. ಮಾನ್ಯ ಸಚಿವರು ಇದರ ಕಡೆಗೆ ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಸಣ್ಣ ಕೆರೆಗಳ ಬಗ್ಗೆ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. ಇನ್ನೊಂದು ವಿಚಾರ ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕು ಅದು ಏನೆಂದರೆ ಅನೇಕ ಸಣ್ಣ ಕೆರೆಗಳನ್ನು, ಕೆರೆಗಳ ಭೂಮಿಯನ್ನು ಅತಿಕ್ರಮಿಸಿ ವ್ಯವಸಾಯ ಮಾಡಿದ್ದಾರೆ. ಆ ಜನಗಳನ್ನು ಅಲ್ಲಿಂದ ಎಬ್ಬಿಸಬೇಕು ಈ ಕೆರೆಗಳನ್ನು ಸರಿಪಡಿಸಿ ನೀರು ದೊರಕುವ ರೀತಿಯಲ್ಲಿ ಮಾಡಿದರೆ, ಈ ಸಣ್ಣ ನೀರಾವರಿ ಯೋಜನೆಗೆ ಸೇರಿದ ಸಣ್ಣ ಸಣ್ಣ ಕೆರೆಗಳಿಂದ ಬಹಳಷ್ಟು ಭೂಮಿಗೆ ನೀರು ಒದಗುತ್ತದೆ. ಈ ಕೆಲಸವನ್ನು ಸರಕಾರ ವಹಿಸಿಕೊಂಡು, ಯಾರು ಅತಿಕ್ರಮ ಮಾಡಿದ್ದಾರೋ ಅವರನ್ನು ಒತ್ತಾಯ ಪೂರ್ವಕವಾಗಿ ಹೊರಗೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಚಾನಲ್ ಭಾಗದಲ್ಲಿ, ವೇಸ್ಟ್ ವೇ ಕೋಡಿ ಹೋಗತಕ್ಕಂಥ ಭೂಮಿಗಳನ್ನು ಅತಿಕ್ರಮಣ ಮಾಡಿ ಸಾಗುವಳಿ ಮಾಡಿರತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಒಂದು ಸಣ್ಣ ಹೋಬಳಿ ಒಂದರಲ್ಲೇ ೩೧ ಹೆಕ್ಟೇರ್ ವೇಸ್ಟ್ ವೇ ಭೂಮಿಯನ್ನು ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿದ್ದಾರೆ. ಇದರ ಜೊತೆಗೆ ಸರಕಾರದ ಮುಖ್ಯ ಕರ್ತವ್ಯ ಎಂದು ಹೇಳಿದರೆ, ಅಧಿಕಾರಿಗಳು ಅತಿಕ್ರಮಣ ಮಾಡಿರತಕ್ಕ ವ್ಯಕ್ತಿಗಳ ಜೊತೆ ಶಾಮೀಲಾಗಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಒಂದು ಸಣ್ಣ ಹೋಬಳಿಯಲ್ಲೇ ೩೧ ಹೆಕ್ಟೇರ್ ಅತಿಕ್ರಮಣ ಮಾಡಿದ್ದಾರೆ ಎಂದು ಹೇಳಿದರೆ ಇನ್ನು ಇಡೀ ತಾಲ್ಲೂಕಿನಲ್ಲಿ ಎಷ್ಟಿದೆ ಎಂದು ನಾವು ಅಂದಾಜು ಮಾಡಬಹುದು. ಸರಕಾರ ಈ ವೇಸ್ಟ್ ವೇ ಭೂಮಿಯನ್ನು ಅತಿಕ್ರಮಣ ಮಾಡಿದವರನ್ನು ಹೊರ ಹಾಕಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವರ್ಷದಿಂದ ಭದ್ರಾ ಪ್ರಾಜೆಕ್ಟ್ ಏರಿಯಾದಲ್ಲಿ ರೊಟೇಷನ್ ಆಫ್ ಕ್ರಾಪ್ ಪದ್ಧತಿ ಪ್ರಕಾರವಾಗಿ ನೀರು ಕೊಡತಕ್ಕಂಥ ಒಂದು ವಿಚಾರದಲ್ಲಿ ಬಹಳಷ್ಟು ಚರ್ಚೆ ನಡೆದಿದೆ. ಈ ಬಗ್ಗೆ ರೈತರಿಗೆ ಸರಿಯಾದಂಥ ಕಲ್ಪನೆ ಇಲ್ಲದ ಕಾರಣದಿಂದ ತೀವ್ರ ಪ್ರತಿಭಟನೆ ಬಂತು. ಈ ವರ್ಷವೇ ಅದನ್ನು ಜಾರಿಗೊಳಿಸುವುದಕ್ಕೋಸ್ಕರ ಒಂದು ಕ್ರಮ ಕೈಗೊಂಡಾಗ ಅದನ್ನು ಮುಂದೆ ಹಾಕತಕ್ಕಂಥ ಒಂದು ಸಂದರ್ಭ ಬಂತು. ಒಬ್ಬ ತಜ್ಞರನ್ನು ಕಂಡು ಅವರ ಜೊತೆಗೆ ನಾನು ಮಾತನಾಡಿದಾಗ, ಈ ರೀತಿಯಾಗಿ ಬೇರೆಲ್ಲಾದರೂ ಪ್ರಯೋಗ ನಡೆದಿದೆಯೋ ಎಂದು ಕೇಳಿದಾಗ ಎರಡು ಕಡೆ ನಡೆದಿದೆ ಭವಾನಿ ಪ್ರಾಜೆಕ್ಟ್ ಒಂದು, ಮತ್ತೊಂದು ಮಹಾರಾಷ್ಟ್ರದ ಜಾಯಕವಾಡಿ ಪ್ರಾಜೆಕ್ಟಿನ ಏರಿಯಾದಲ್ಲಿ ಈ ಪದ್ಧತಿಯ ಪ್ರಯೋಗ ನಡೆದಿದೆ ಎಂದು ಹೇಳಿದರು. ಅದು ಬಹಳ ಸಫಲವಾಗಿದೆ ಎಂದೂ ಅವರು ಹೇಳಿದರು. ಆದುದರಿಂದ ಈ ಭಾಗದ ಭದ್ರಾ ಪ್ರಾಜೆಕ್ಟ್ ಪ್ರದೇಶದ ರೈತರನ್ನು ಆಯ್ಕೆ ಮಾಡಿ ಈ ಪ್ರದೇಶಕ್ಕೆ ಕಳುಹಿಸಿ ಅವರ ಅನುಭವ ಮತ್ತು ಅವರ ಒಂದು ಕೆಲಸವನ್ನು ಪ್ರಾತ್ಯಕ್ಷಿಕೆ ನೋಡಿದರೆ ಈ ರೈತರ ವಿರೋಧ ಏನಿದೆ ಅದನ್ನು ಹೋಗಲಾಡಿಸಿ ಈ ಹೊಸ ಪದ್ಧತಿ ಜಾರಿಗೆ ತಂದು, ಆ ಪ್ರದೇಶದಲ್ಲಿ ಒಳ್ಳೆಯ ನೀರಾವರಿ ಯೋಜನೆ ತರಬಹುದೆಂದು ಹೇಳಿ ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ನಾನು ಹೇಳಲು ಬಯಸುತ್ತೇನೆ

ಇನ್ನೊಂದು ವಿಚಾರ ಭದ್ರಾ "ಕಾಡಾ" ಬಗ್ಗೆ ಎಷ್ಟೋ ವರ್ಷಗಳಿಂದ ಇದು ಅಭಿವೃದ್ಧಿ ಹೊಂದಿರತಕ್ಕ ಪ್ರದೇಶ ಎಂಬ ಒಂದು ಕಲ್ಪನೆಯಿಂದ ಸರಿಯಾದ ರೀತಿಯ ಯಾವುದೇ ಪ್ರೋತ್ಸಾಹ ಕೂಡಾ ಇರಲಿಲ್ಲ. ಇದೀಗ ಹೊಸದಾಗಿ ಒಂದು ಕಮಿಟಿ ಆಗಿದೆ ಅದಕ್ಕೆ ಭದ್ರಾವತಿ ಕ್ಷೇತ್ರದ ಶಾಸಕರನ್ನು ಅಧ್ಯಕ್ಷರಾಗಿ ಹಾಕಿದ್ದೀರಿ. ಇದಕ್ಕೆ ಸುಮಾರು ೪೦–೫೦ ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇದಕ್ಕೆ ವರಲ್ಡ್ ಬ್ಯಾಂಕ್ ಮೂಲಕ ಸಹಾಯ ದೊರಕಿಸಿಕೊಂಡು ಆ ಪ್ರದೇಶದ ಸಂಪೂರ್ಣ ಅಭಿವೃದ್ಧಿ ಆಗುವುದಕ್ಕೆ ಏನು ಸೌಲಭ್ಯಗಳು ಬೇಕೋ, ಅದನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ನಗರಕ್ಕೆ ಸಂಬಂಧಪಟ್ಟಂತೆ ಒಂದೆರಡು ಬೇಡಿಕೆಗಳನ್ನು ನಾನು ಮಾನ್ಯ ಸಚಿವರ ಮುಂದಿಡುತ್ತೇನೆ. ಶಿವಮೊಗ್ಗ ನಗರದ ಸುತ್ತಲೂ ಮೂರು ಅಡಿಯ ಒಂದು ರಿಂಗ್ ರೋಡ್ ಮಾಡಬೇಕೆಂದು ಯೋಜನೆ ಇತ್ತು. ಅದರ ಬಗ್ಗೆ ಅಂದಾಜು ಆಗಿದೆ. ಕೆಲಸ ನಿಂತು ಹೋಗಿದೆ. ಅದು ಆಗದೇ ಹೋದರೆ ತೀವ್ರಗತಿಯಿಂದ ಬೆಳೆಯುತ್ತಿರುವ ಶಿವಮೊಗ್ಗ ನಗರದ ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತ ಆಗತಕ್ಕಂಥ ಸಂದರ್ಭ ಇದೆ. ಇದರ ಕಡೆಗೆ ಮಾನ್ಯ ಸಚಿವರು ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ಶಿವಮೊಗ್ಗ ನಗರದ ಪಕ್ಕದಲ್ಲಿರತಕ್ಕಂಥ ತುಂಗಾ ನದಿ ನೀರು ಕೊಳಚೆಯಾಗಿದೆ. "ತುಂಗಾ ಪಾನ" ಎಂದು ಹೇಳತಕ್ಕಂಥ ಸಂದರ್ಭದಲ್ಲಿ ನದಿ ನೀರನ್ನು ನೋಡುವುದಕ್ಕೆ ಬಹಳ ಕನಿಕರ ಬರುತ್ತದೆ, ಸಿಟ್ಟು ಬರುತ್ತದೆ. ನೀರು ಹರಿಯುವುದಕ್ಕೆ ಅವಕಾಶವೇ ಇಲ್ಲ. ಅದರ ಜೊತೆಗೆ ತುಂಗಾ ನದಿಯ ಯಾವ ಪಕ್ಕದಲ್ಲಿ ಜನ ವಾಸಿಸುತ್ತಾರೆ ಅಲ್ಲಿ ನದಿಯ ನೀರಿನ ಕೊರತೆ ಆಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಅವಕಾಶ ಇತ್ತು. ಆದರೆ ಮುಂದೆ ಬಂದಂಥ ಎಲ್ಲಾ ಯೋಜನೆಗಳಲ್ಲಿ ಅದನ್ನು ಕೈ ಬಿಡಲಾಗಿದೆ. ಮುಂದಾದರೂ ಮಾನ್ಯ ಸಚಿವರು ಈ ಶಿವಮೊಗ್ಗ ನಗರದ ಪಕ್ಕದಲ್ಲಿರತಕ್ಕ ತುಂಗಾ ನದಿಗೆ ರಿವೆಟ ಮೆಂಟ್ ಹಾಕತಕ್ಕ ಯೋಜನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ, ಇನ್ನೂ ಅನೇಕ ವಿಷಯಗಳು ಇವೆ. ತಾವು ಗಂಟೆ ಬಾರಿಸಿದರೆ ನಮಗೆ ಗಂಗಾರಾಮ್ ಕಟ್ಟಡ ಬಿದ್ದ ಹಾಗೆ ಆಗುತ್ತದೆ. ಹೆಚ್ಚಾಗಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನಾವು ಸಾವಧಾನವಾಗಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ಇಷ್ಟು ತಮ್ಮ ಮುಂದೆ ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆ ಅರ್ಪಿಸುತ್ತೇನೆ.

† ಶ್ರೀ ಎಫ್. ಎ ಕೊಪ್ಪದ್ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆ ಎಂದು ಹೇಳಿದರೆ ಅತೀ ಮುಖ್ಯವಾದ ಇಲಾಖೆಗಳು. ನೀರಾವರಿಯಿಂದ ನಮ್ಮ ದೇಶದ ಅಭಿವೃದ್ಧಿ ಆಗುತ್ತದೆ. ಅನೇಕ ನೀರಾವರಿ ಯೋಜನೆಗಳು ಈಗಾಗಲೇ ಆಗಿವೆ. ಸರಕಾರ ಇದರ ಬಗ್ಗೆ ಕಳೆದ ೩೦ ವರ್ಷಗಳಿಂದಲೂ ಕೆಲಸ ಮಾಡುತ್ತಿದೆ. ಆದರೆ ಈ ಕೆಲಸ ನಮ್ಮ ಭಾಗದಲ್ಲಿ ಸರಿಯಾಗಿ ನಡೆಯುತ್ತಿಲ್ಲ. ಮಲಪ್ರಭಾದಲ್ಲಿ ನಾವು ನೋಡುತ್ತಿದ್ದೇವೆ. ಎಷ್ಟೋ ನೀರು ಸೋರಿ ಹೋಗುತ್ತಿದೆ. ಅದನ್ನು ಸರಿಯಾಗಿ ಮಾಡುವಂಥ ವ್ಯವಸ್ಥೆ ಹೊಸ ಸರಕಾರ ತೆಗೆದುಕೊಳ್ಳುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ೨೫ ಹಳ್ಳಿಗಳು ಮಲಪ್ರಭಾ ನೀರಾವರಿ ಯೋಜನೆ ಅಡಿಯಲ್ಲಿ ನೀರಾವರಿಯಾಗುತ್ತಿವೆ. ಇನ್ನೂ ೮೫ ಉಳಿದಿವೆ. ಮಾನ್ಯ ಮಂತ್ರಿಗಳು ಅಲ್ಲಿ ಅಡ್ಡಾಡಿ ಬಂದಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಅಂದರೆ ಲಿಫ್ಟ್ ಇರಿಗೇಷನ್ ಮಾಡಿಕೊಡುತ್ತೇವೆಂದು ಮಾನ್ಯ ದೇವೇಗೌಡರು ವೆಣ್ಣಿ, ಕಡಕೊಳದಲ್ಲಿ ಹೇಳಿ ಬಂದಿದ್ದಾರೆ. ಎಷ್ಟು ನೀರಾವರಿ ಆಗುತ್ತದೋ ಅಷ್ಟು ನಿರುದ್ಯೋಗ ತಪ್ಪುತ್ತದೆ. ನೀರಾವರಿ ಪ್ರದೇಶದಲ್ಲಿ ಒಬ್ಬ ಮನುಷ್ಯನಿಗೆ ೧೦ ರೂಪಾಯಿಗಳ ಕೂಲಿ ಕೊಡುತ್ತಾರೆ. ಅದೇ ಒಣ ಬೇಸಾಯ ಪ್ರದೇಶದಲ್ಲಿ ೨-೩-೪ ರೂಪಾಯಿಗಳ ಮೇಲೆ ಕೂಲಿಯನ್ನು ಕೊಡುವುದಿಲ್ಲ. ನೀರಾವರಿ ಮಾಡಿದರೆ ನಿರುದ್ಯೋಗ ತಪ್ಪಿಹೋಗುತ್ತದೆ. ಅಲ್ಲಿ ೧೦-೧೫ ರೂಪಾಯಿಗಳ ಪಗಾರ ಕೊಡುತ್ತಾರೆ. ಟ್ರ್ಯಾಕ್ಟರ್ ಕೊಟ್ಟು ಕೆಲಸಗಾರರನ್ನು ಕರೆದುಕೊಂಡು ಹೋಗುತ್ತಾರೆ. ಹೊಸ ಸರಕಾರ ನೀರಾವರಿಯನ್ನು ಹೆಚ್ಚು ಮಾಡಿ ನಿರುದ್ಯೋಗ ತಪ್ಪಿಸಬೇಕೆಂದು ಹೇಳುತ್ತೇನೆ. ನಮ್ಮ ಸರಕಾರವೂ ಮಾಡಿದೆ, ಅವರು ಅಲ್ಲಿ ಇಲ್ಲಿ ತಪ್ಪಿದ್ದಾರೆ ಅದನ್ನು ಸರಿಯಾಗಿ ಮಾಡಬೇಕಾಗಿದೆ. ನಮ್ಮ ತಾಲೂಕಿನ ಒಣ ಬೇಸಾಯ ಪ್ರದೇಶದಲ್ಲಿ ಒಂದು ಕೆರೆ ಕಾಮಗಾರಿ ಮಂಜೂರಾಗಿದೆ. ಆ ಕೆರೆಯ ಎಸ್ಟಿಮೇಟ್ ೮ ಲಕ್ಷ ರೂಪಾಯಿಗಳು ಇದೆ. ಸರಕಾರ ಅದಕ್ಕೆ ಒಂದು ಲಕ್ಷ ಹಣ ಇಟ್ಟಿದ್ದಾರೆ. ಎಂಟು ಲಕ್ಷ ರೂಪಾಯಿಗಳಿಗೆ ಒಂದು ಸಾವಿರ ರೂಪಾಯಿ ಇಟ್ಟರೆ ಹೇಗೆ ಆಗುತ್ತದೆ. ಯಾವಾಗ ಆಗುತ್ತದೆ. ನೀರಾವರಿ ಎಲ್ಲಿ ಆಗುತ್ತದೆ. ಅಲ್ಲಿ ಬೇಕಾದಷ್ಟು ಟ್ಯಾಕ್ಸ್ ಹಾಕಿ. ನಾವು ಕೊಡುವುದಕ್ಕೆ ತಯಾರಾಗಿದ್ದೇವೆ. ನೀರಾವರಿ ಆಗುವ ಜಾಗ ಎಲ್ಲಿದೆ ಎಂಬುದನ್ನು ಹುಡುಕಿ ಅಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕು. ಮಾನ್ಯ ದೇವೇಗೌಡರು ಇದರ ಬಗ್ಗೆ ಕಾಳಜಿ ತೆಗೆದುಕೊಂಡು ಮಾಡಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ).—ಮಾನ್ಯ ಅಧ್ಯಕ್ಷರೇ, ಕಾವೇರಿ ಜಲಾನಯನ ಪ್ರದೇಶಕ್ಕೆ ಹೆಚ್ಚಿಗೆ ಹಣ ಮಂಜೂರು ಮಾಡಿರುವುದಕ್ಕಾಗಿ ಮಾನ್ಯ ದೇವೇಗೌಡರನ್ನು ಅಭಿನಂದಿಸುತ್ತೇನೆ. ಇನ್ನಿತರ ನೀರಾವರಿ ಪ್ರದೇಶಗಳಲ್ಲಿ ಒಂದಾದ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ೫೨ ಕೋಟಿ

ರೂಗಳನ್ನು ಕೊಟ್ಟಿದ್ದೀರಿ; ಇದು ಯಾವ ಶತಮಾನದಲ್ಲಿ ಮುಗಿಯಬಹುದೆಂಬುದನ್ನು ತಾವು ವಿಚಾರ ಮಾಡಬೇಕು. ಕಾವೇರಿ ಜಲಾನಯನ ಪ್ರದೇಶವನ್ನು ಬಹಳ ತೀವ್ರಗತಿಯಲ್ಲಿ ಮಾಡಿದರೆ ನಮ್ಮೆಲ್ಲರಿಗೂ ಸಂತೋಷ. ಮಾನ್ಯ ಹಿರಿಯ ಸದಸ್ಯರಾದ ಹುಚ್ಚಮಾಸ್ತಿ ಗೌಡರು ಹೊಟ್ಟೆಕಿಚ್ಚು ಎನ್ನುವ ಶಬ್ದವನ್ನು ಉಪಯೋಗಿಸಿದರು. ಅದಕ್ಕಾಗಿ ಅವರಿಗೆ ಧನ್ಯವಾದಗಳು.

ಶ್ರೀ ಎನ್. ಹುಚ್ಚಮಾಸ್ತಿಗೌಡ:— ಹೊಟ್ಟೆಕಿಚ್ಚು ಎನ್ನುವಂಥ ಪದವನ್ನು ಅನಿವಾರ್ಯವಾಗಿ ಉಪಯೋಗಿಸಬೇಕಾಗಿ ಬಂತು; ಅದಕ್ಕೆ ಹೇಳಿದೆ.

ಶ್ರೀ ಎಸ್. ಎಸ್. ಕಡಪಟ್ಟಿ.— ಕೃಷ್ಣಾ ನದಿ ನೀರಿನ ಹಂಚಿಕೆ ಬಹಳ ಗಂಭೀರವಾದಂಥ ವಿಷಯ. ೨೦೦೦ ಇಸವಿಯ ಹೊತ್ತಿಗೆ ಕೃಷ್ಣಾ ನದಿಯ ನೀರನ್ನು ಉಪಯೋಗಿಸದೇ ಇದ್ದರೆ ನಮ್ಮ ಜನ ಎಂದೂ ನಮ್ಮನ್ನು ಕ್ಷಮಿಸದೇ ಇರರು. ಸ್ವಾಮಿ, ತೆಲುಗಂ ಗಂಗಾ ಯೋಜನೆಯ ಮೇರೆಗೆ ೫ ಟಿಎಂಸಿ ನೀರನ್ನು ಕರ್ನಾಟಕದವರು ಕೊಡಬೇಕು. ಮಹಾರಾಷ್ಟ್ರದವರು ೫ ಟಿಎಂಸಿ ನೀರು ಕೊಡಬೇಕು. ಇವತ್ತು ನಾರಾಯಣಪುರ ಎಡದಂಡೆ ಕಾಲುವೆಯಿಂದ ನೀರು ಕೊಡುತ್ತಿದ್ದೇವೆ. ನಾಗಾರ್ಜುನ ಸಾಗರದಲ್ಲಿ ಕ್ರೆಸ್ಟ್‌ಗೇಟ್ ಕಟ್ಟುವಂಥ ಸಮಯದಲ್ಲಿ ಈ ಸದನ ಒಂದು ಠರಾವು ಮಾಡಿದೆ. ತೆಲುಗು ಗಂಗಾ ಯೋಜನೆಯ ಮೇಲೆ ಇವತ್ತು ೧೦ ಲಕ್ಷ ಎಕರೆ ನೀರಾವರಿ ಮಾಡಬೇಕೆಂಬ ಉದ್ದೇಶವನ್ನು ಆಂಧ್ರದವರು ಇಟ್ಟುಕೊಂಡಿರುವಾಗ ಮಾನ್ಯ ಹಿರಿಯರಾದ ದೇವೇಗೌಡರು ಏತಕ್ಕೆ ಲಕ್ಷ್ಯ ಕೊಡಲಿಲ್ಲವೋ ಗೊತ್ತಾಗಲಿಲ್ಲ. ಈ ಸದನ ಒಂದು ಠರಾವು ಮಾಡಿ; ನಮ್ಮ ರಾಜ್ಯಕ್ಕೆ ಎಷ್ಟು ಸಾಧ್ಯವೋ ಅಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಆಂಧ್ರದವರಿಗೆ ನಮ್ಮ ಭಾಗದ ನೀರು ಉಪಯೋಗ ಮಾಡದಂತೆ ತಡೆಹಾಕಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಇನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಇದೇ ರೀತಿ ರೊಕ್ಕ ಕೊಟ್ಟರೆ ಈ ಶತಮಾನದಲ್ಲಿ ಅದನ್ನು ಮುಗಿಸುವುದಕ್ಕೆ ಆಗುವುದಿಲ್ಲ. ದಾಮೋದರ್ ವ್ಯಾಲಿ ಪ್ರಾಜೆಕ್ಟ್ ಕಟ್ಟಬೇಕಾದರೆ, ಬ್ಯಾಂಕುಗಳಿಂದ; ಎಲ್.ಐ.ಸಿ ಸಂಸ್ಥೆಗಳಿಂದ ಹಣವನ್ನು ಯಾವ ರೀತಿ ತಂದರೋ ಅದೇ ರೀತಿ ತಂದು ಕಾಲಬದ್ಧ ಯೋಜನೆಯನ್ನು ಹಾಕಿಕೊಂಡು; ಕಾಲಮಿತಿಯೊಳಗೆ ಮುಗಿಸದೇ ಇದ್ದರೆ; ಬಹಳ ತೊಂದರೆಯನ್ನು ಆ ಭಾಗದ ಜನತೆ ಎದುರಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಕೇಂದ್ರಸರ್ಕಾರದಿಂದ ನೀರಾವರಿ ಮತ್ತು ವಿದ್ಯುಚ್ಛಕ್ತಿಗಾಗಿ ಇನ್ನು ಹೆಚ್ಚು ಹಣಕಾಸು ಪಡೆಯುವ ಹಾಗೆ ಮಾನ್ಯ ಸಚಿವರು ಸಂಬಂಧಪಟ್ಟವರೊಡನೆ ವಿನಂತಿ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಆಂಧ್ರದವರು ನಾಗಾರ್ಜುನ ಸಾಗರವನ್ನು ಕಟ್ಟಬೇಕಾದರೆ ರಾಜ್ಯದ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ೪–೫ ವರ್ಷಗಳ ಕಾಲ ಬಂದ್ ಮಾಡಿದ್ದರು. ಅದೇ ರೀತಿಯಾಗಿ ಇಲ್ಲೂ ಸಹ ಮಾಡುವುದಾದರೆ ವಿರೋಧಪಕ್ಷದವರು ಕೂಡ ಸಹಕಾರ ಕೊಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಒಂದು ಕಾಲಬದ್ಧ ಮಿತಿಯನ್ನು ಹಾಕಿಕೊಂಡು ಯೋಜನೆಗಳನ್ನು ಮುಗಿಸಬೇಕೆಂದು ಹೇಳುತ್ತೇನೆ. ಕಟ್ಟಡಗಳಾಗಲೀ, ರೈತ ಭವನವಾಗಲೀ, ಕಾರ್ಮಿಕ ಭವನವಾಗಲೀ ಕಟ್ಟಿಸುವುದನ್ನು ನಿಲ್ಲಿಸಿ; ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚು ಹಣ ಉಪಯೋಗ ಮಾಡಿದರೆ ನಮ್ಮ ರಾಜ್ಯ ಸಮೃದ್ಧಿಯಾಗುತ್ತದೆ. ಸನ್ಮಾನ್ಯ ಸಚಿವರು ಮಾನ್ಯ ವಿರೋಧ ಪಕ್ಷದವರ, ಮಿತ್ರಪಕ್ಷಗಳವರ ಸಲಹೆ ತೆಗೆದುಕೊಂಡು ನಮ್ಮ ರಾಜ್ಯದ ಒಂದು ಹನಿ ನೀರೂ ಕೂಡ ಆಂಧ್ರದವರು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಕೂಡದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಲಪ್ರಭಾ ಯೋಜನೆಯಲ್ಲಿ ಹಿಂಬದಿ ನೀರಾವರಿ ಯೋಜನೆ ಕೈಗೊಂಡಿರುವಂತೆ; ಅಪ್ಪರ್ ಕೃಷ್ಣಾ ಯೋಜನೆಯಲ್ಲಿಯೂ ಹಿಂಬದಿ ನೀರಾವರಿ ಯೋಜನೆಯನ್ನು ಕೈಗೊಂಡು ಭೂಮಿ ಕಳೆದುಕೊಂಡವರಿಗೆ ಅನುಕೂಲ ಮಾಡಿಕೊಟ್ಟು, ಹೆಚ್ಚು ಬೆಳೆ ಬೆಳೆಯಲು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಲೋಕೋಪಯೋಗಿ ಇಲಾಖೆ ಕೆರೆಗಳ ವಿಷಯದಲ್ಲಿ ಯಾವರೀತಿ ಕೆಲಸಮಾಡುತ್ತಿದೆ ಎಂಬುದನ್ನು ತಾವು ಸೂಕ್ಷ್ಮವಾಗಿ ನೋಡಬೇಕೆಂದು ಹೇಳುತ್ತೇನೆ. ನಮ್ಮ ಭಾಗದಲ್ಲಿ ದನ್ನೂರ ಕೆರೆ ಇದೆ. ಅದನ್ನು ಯಾವ ಕಾಲದಲ್ಲಿ ಕಟ್ಟುವುದಕ್ಕೆ ಪ್ರಾರಂಭ ಮಾಡಿದರೋ ಗೊತ್ತಿಲ್ಲ. ಅದರಲ್ಲಿ ನಿಲ್ಲತಕ್ಕ ನೀರು ಸೌಳಿನಿಂದ ಕೂಡಿರುವುದು ಎನ್ನುವುದು ಸ್ಥಳೀಯ ಶಾಸಕನಾದ ನನಗೆ ಗೊತ್ತಿದೆ. ನಿಮ್ಮ ಇಲಾಖೆಯವರು ಬಹಳ ಯೋಗ್ಯವಾದ ನೀರು ಎಂದು ಹೇಳುತ್ತಾರೆ. ಅದನ್ನು ಯಾವ ಲ್ಯಾಬೋರೇಟರಿಯಲ್ಲಿ ಟೆಸ್ಟ್ ಮಾಡಿಸಿದ್ದಾರೋ ಗೊತ್ತಿಲ್ಲ. ಉಪ್ಪಿನಿಂದ ಕೂಡಿರತಕ್ಕ ನೀರಿನಿಂದ ಯಾವ ಬೆಳೆಯೂ ಆಗುವುದಿಲ್ಲ. ಈ ವಿಚಾರವನ್ನು ಮಾನ್ಯ ಸಣ್ಣ ನೀರಾವರಿ ಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಇನ್ನು ಸ್ವಲ್ಪ ದಿವಸ ಬಿಟ್ಟರೆ ಕಾಸ್ಟ್ ಆಫ್ ಎಸ್ಕಲೇಷನ್ ಜಾಸ್ತಿಯಾಗುತ್ತದೆ. ಇವತ್ತು ೬೫ ಲಕ್ಷ ರೂಪಾಯಿ ಇರುವುದು ಒಂದು ಕೋಟಿಯಾಗಬಹುದು. ಆಗ ಅದು

ನಿಮ್ಮ ವ್ಯಾಪ್ತಿಗೆ ಬರುತ್ತದೆ. ಇದರ ಕಡೆ ನಿಗಾ ಕೊಡಬೇಕೆಂದು ಹೇಳುತ್ತೇನೆ. ನಾನು ಆಗಲೇ ಹೇಳಿದಾಗೆ ಆಂಧ್ರಪ್ರದೇಶ ದವರು ಒಂದು ತೊಟ್ಟು ನೀರು ಹೆಚ್ಚಿಗೆ ಉಪಯೋಗಿಸದ ಹಾಗೆ ತಾವು ಹೆಚ್ಚಿನ ಮುತುವರ್ಜಿ ವಹಿಸುತ್ತೀರೆಂಬ ಆಸೆಯನ್ನು ವ್ಯಕ್ತ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಲ್ಲಪ್ಪ (ಹರಿಹರ).—ಮಾನ್ಯ ಅಧ್ಯಕ್ಷರೇ, ಈ ದಿವಸ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುತ್ತಾ ತಮ್ಮ ಮೂಲಕ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರು ಹಲವಾರು ಯೋಜನೆಗಳನ್ನು ಏತ ನೀರಾವರಿಯಲ್ಲಿ ೧೯೮೪—೮೫ನೇ ಸಾಲಿಗೆ ಹಾಕಿಕೊಂಡಿದೆ. ಒಂದು ವಿಷಯವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಯೋಜನೆಗಳೆಲ್ಲವೂ ಪತ್ರವ್ಯವಹಾರಗಳಲ್ಲಿರುತ್ತವೆಯೇ ಹೊರತು, ಕಾರ್ಯಗತ ಮಾತ್ರ ಆಗುತ್ತಿಲ್ಲ. ನಮ್ಮಲ್ಲಿ ಪುರಾತನ ಕಾಲದಿಂದ ಬಂದಂಥ ಪದ್ಧತಿಯಿಂದ ಕೆಲಸಕಾರ್ಯಗಳು ಸರಿಯಾದಕಾಲಕ್ಕೆ ನಡೆಯದೆ ಜನತೆಗೆ ತೊಂದರೆಯಾಗುತ್ತಿರುವುದನ್ನು ಮಾನ್ಯ ಮಂತ್ರಿಯವರು ಗಮನಿಸಿ, ತ್ವರಿತ ಗತಿಯಲ್ಲಿ ಕಾರ್ಯಗತ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಯೋಜನೆಗಳನ್ನು ಕೈಗೆತ್ತಿಕೊಳ್ಳತಕ್ಕಂಥ ಸಂದರ್ಭ ಬಂದಾಗ ಸಂಬಂಧಪಟ್ಟ ಕಾಗದ ಪತ್ರಗಳೇ ಇಲ್ಲವೆಂದು ಹೇಳಿರತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಹಳೇ ಪದ್ಧತಿಯನ್ನು ತೆಗೆದುಹಾಕಿ, ಹೊಸ ಪದ್ಧತಿಯನ್ನು ಅನುಸರಿಸುವಂಥ ವ್ಯವಸ್ಥೆಯನ್ನು ಕೂಡಲೇ ಕಾರ್ಯಗತಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಸ್ವಾಮಿ, ಇವತ್ತು ಹರಿಹರದಲ್ಲಿ ನಂಬರ್ ನಾಲ್ಕು ರಾಷ್ಟ್ರೀಯ ಹೆದ್ದಾರಿ ಇದೆ. ಹರಿಹರದ ದಕ್ಷಿಣ ಭಾಗದಲ್ಲಿ ಸುಮಾರು ನಾಲ್ಕು ಕಿಲೋಮೀಟರ್ ಅಂತರದಲ್ಲಿ ಒಂದು ಬೈಪಾಸ್ ಮಾಡಬೇಕೆಂದು ತೀರ್ಮಾನಮಾಡಿ, ೧೫ ವರ್ಷಗಳಾದರೂ ಕೆಲಸ ಆಗಿಲ್ಲ, ಇನ್ನು ೧೦ ವರ್ಷವಾದರೂ ಕೂಡ ಮುಗಿಯತಕ್ಕಂತ ಸಂದರ್ಭ ಇಲ್ಲ ಮಾನ್ಯ ಸಚಿವರು ಅಧಿಕಾರ ವರ್ಗದವರು ಬಂದರೆ ಎರಡು ರೈಲ್ವೆ ಲೆವೆಲ್ ಕ್ರಾಸ್ ಬಳಿ ಸುಮಾರು ೨೦ ನಿಮಿಷಗಳ ಕಾಲ ರೈಲ್ವೆಗೇಟ್ ಹಾಕಿದಾಗ ನಿಲ್ಲಬೇಕಾಗುತ್ತದೆ. ಅಲ್ಲಿ ದಿನಂಪ್ರತಿ ಲಕ್ಷಾಂತರ ಪ್ರಯಾಣಿಕರು ಓಡಾಡುತ್ತಿರುತ್ತಾರೆ ಸರಕು ಸಾಗಿಸತಕ್ಕ ವಾಹನಗಳು ಕೂಡ ಬಹಳ ತೊಂದರೆಯನ್ನು ಅನುಭವಿಸಬೇಕಾಗಿದೆ. ಇದನ್ನು ತಪ್ಪಿಸಬೇಕಾದರೆ ಡೀವಿಯೇಷನ್ ರೋಡ್ ಮಾಡಬೇಕೆಂದೂ ಪ್ರಾರ್ಥಿಸಿಕೊಂಡಿದ್ದೆ.

ಅಧ್ಯಕ್ಷರು.—ಬೆಳಿಗ್ಗೆ ಮಾನ್ಯ ಸದಸ್ಯರಾದ ಪಂಪಾಪತಿಯವರು ಈ ವಿಷಯವನ್ನು ಹೇಳಿದ್ದಾರೆ.

ಶ್ರೀ ಕೆ. ಮಲ್ಲಪ್ಪ.—ಸ್ವಾಮಿ, ಇದು ನನ್ನ ಕ್ಷೇತ್ರಕ್ಕೆ ಅನ್ವಯಿಸತಕ್ಕದ್ದು. ಇದು ರಾಷ್ಟ್ರೀಯ ಹೆದ್ದಾರಿಯಲ್ಲಿರುವುದರಿಂದ ಬಹಳ ತೊಂದರೆಯಾಗಿದೆ. ಇದರ ಕಡೆಗೆ ಮಾನ್ಯ ಮಂತ್ರಿಯವರು ತೀವ್ರ ಗಮನಕೊಟ್ಟು ಅದನ್ನು ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೫-೩೦ ಪಿ. ಎಂ.

ಭದ್ರಾ ಯೋಜನೆಯಲ್ಲಿ ಕಾಡಾ ಕಮಿಟಿ ಇದೆ. ಅದರಲ್ಲಿ ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ತಜ್ಞರು ಸಂಬಂಧಪಟ್ಟವರು ಇದ್ದಾರೆ. ಆದರೆ ಅದರಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಒಬ್ಬರು ಐ.ಎ.ಎಸ್. ಮತ್ತು ಇನ್ನೊಬ್ಬ ಅಧಿಕಾರಿ ಐ.ಎ.ಎಸ್. ಅಧಿಕಾರಿಯನ್ನು ಹೀಗೆ ವಿನಾಕಾರಣ ಹಾಕಿದ್ದೀರಿ. ಆದುದರಿಂದ ಇದರಲ್ಲಿ ಯಾರಿಗಾದರೂ ಒಬ್ಬ ಅಧಿಕಾರಿಗೇ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿದರೆ ಚೆನ್ನಾಗಿರುತ್ತದೆ. ಇನ್ನು ಕಾಡಾಗೆ ಕೊಟ್ಟಿರತಕ್ಕ ಹಣ ಬಹಳ ಕಡಿಮೆ ಇದೆ. ಆದುದರಿಂದ ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಪ್ಪ (ಸಿಂಧನೂರು).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸುತ್ತಾ, ನಾನು ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ ನಾನು ಈ ಇಲಾಖೆಯ ಮಂತ್ರಿಗಳಾಗಿರತಕ್ಕ ಶ್ರೀಮಾನ್ ದೇವೇಗೌಡರವರನ್ನು ಅಭಿನಂದಿಸಬೇಕಾಗಿದೆ ಇದಕ್ಕೆ ಮೂರು ಮುಖ್ಯವಾದ ಕಾರಣಗಳು ಇವೆ. ಏತಕ್ಕೆಂದರೆ ಮೊದಲನೆಯದಾಗಿ ಇವರು ಈ ಇಲಾಖೆಯನ್ನು ವಹಿಸಿಕೊಂಡು ಬಹಳ

ಮಹತ್ವವಾಗಿರತಕ್ಕ ಬದಲಾವಣೆಗಳನ್ನು ಮಾಡಿದ್ದಾರೆ. ಆಡಳಿತದಲ್ಲಿ ಸಂಧಾರಣೆಯನ್ನು ತರುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದಾರೆ. ಇಷ್ಟೇ ಅಲ್ಲ ನಮ್ಮ ತುಂಗಭದ್ರ ಕಾಲುವೆ ಅದರಲ್ಲೂ ಎಡದಂಡೆ ಕಾಲುವೆ ಪ್ರತಿ ವರ್ಷ ೨-೩ ಸಾರಿಯಲ್ಲ ಒಂದು ವರ್ಷದಲ್ಲಿ ೧೭ ಸಾರಿ ಒಡೆದಿರತಕ್ಕ ಪ್ರಸಂಗಗಳೂ ಇವೆ. ಆದರೆ ಈ ವರ್ಷ ನಮ್ಮ ಸುದೈವದಿಂದ ಒಂದೇ ಸಾರಿ ಒಡೆದಾಗ ಅವತ್ತಿನ ದಿವಸ ನಮ್ಮ ಮುಖ್ಯಮಂತ್ರಿಗಳವರು ಭೇಟಿ ಕೊಟ್ಟು ಕೂಡಲೇ ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳವರಿಗೆ ತಿಳಿಸಿ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ಹಿಂದಕ್ಕೆ ಯಾವ ಮಂತ್ರಿಗಳೂ ಸಹ ಈ ರೀತಿಯಾದ ಕಾರ್ಯವನ್ನು ಮಾಡಿರಲಿಲ್ಲ. ಹಿಂದೆ ಯಾವ ಮುಖ್ಯ ಮಂತ್ರಿಗಳೂ ಸಹ ಎಡದಂಡೆ ಕಾಲುವೆ ಒಡೆದಾಗ ಬಂದು ನೋಡುತ್ತಾ ಇರಲಿಲ್ಲ ಆದರೆ ಈ ಸಾರಿ ನಮ್ಮ ಮುಖ್ಯಮಂತ್ರಿಗಳವರು ಮತ್ತು ಶ್ರೀ ಎಚ್. ಡಿ. ದೇವೇಗೌಡರವರು ಆ ವಿಭಾಗಕ್ಕೆ ಬಂದು ನೋಡಿ, ಆ ಎಡದಂಡೆ ಕಾಲುವೆ ಇನ್ನು ಮುಂದೆ ಒಡೆಯದೇ ಇರುವ ಹಾಗೆ ಮಾಡಲು ೧೩ ಕೋಟಿ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಅದರಲ್ಲಿ ಈ ವರ್ಷ ೩ ಕೋಟಿ ರೂ.ಗಳ ಯೋಜನೆಯನ್ನು ಹಾಕಿಕೊಂಡು ಅದಕ್ಕಾಗಿ ಹಣವನ್ನು ತೆಗೆದಿಟ್ಟಿದ್ದಾರೆ. ಇದಕ್ಕಾಗಿ ನಮ್ಮ ಭಾಗದ ರೈತರು ಚಿರಋಣಿಗಳಾಗಿದ್ದಾರೆ. ಮತ್ತೊಮ್ಮೆ ನಾನು ಅವರನ್ನು ಅಭಿನಂದಿಸುವುದಕ್ಕೆ ಕಾರಣವೇನೆಂದರೆ, ಈ ವರ್ಷ ನಮ್ಮ ಕಾಡಾಕ್ಕೆ ಹೊಸದಾಗಿ ಅಧ್ಯಕ್ಷರನ್ನು ನೇಮಕ ಮಾಡಿದ್ದಾರೆ. ವಿಶೇಷವೇನೆಂದರೆ ಈ ಬಜೆಟ್‌ನ್ನು ಮಂಡಿಸುವುದಕ್ಕೆ ಮುಂಚೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಆದರೂ ಕೂಡ ಜನರಲ್ ಬಜೆಟ್‌ನಲ್ಲಿ ಅಲ್ಲಿಗೆ ಎಷ್ಟು ಹಣ ಬೇಕಾಗುತ್ತದೆಯೋ ಅಷ್ಟು ಕೊಡುತ್ತೇನೆಂದು ಹೇಳುತ್ತಿದ್ದಾರೆ. ನಮ್ಮಲ್ಲಿ ಸುಮಾರು ೩ ಲಕ್ಷ ಚಿಲ್ಲರೆ ಹೆಕ್ಟೇರ್ ಭೂಮಿಯಲ್ಲಿ ಸುಮಾರು ೩೫ ಸಾವಿರದಷ್ಟು ಚವಳು ಭೂಮಿ ಇದೆ. ಆದುದರಿಂದ ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಕನಕನ ಹಳ್ಳ ಪ್ರಾಜೆಕ್ಟ್‌ಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಎಚ್. ಎಲ್. ತಿಮ್ಮೇಗೌಡ (ಬಸವನಗುಡಿ).—ಮಾನ್ಯ ಅಧ್ಯಕ್ಷರೇ, ಈ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ವಿಚಾರಗಳನ್ನು ಹೇಳುವುಕ್ಕೆ ಇಷ್ಟಪಡುತ್ತಿದ್ದೇನೆ. ಶ್ರೀ ದೇವೇಗೌಡರು ಈ ಇಲಾಖೆಯ ಮಂತ್ರಿಗಳಾದ ಮೇಲೆ ಮೂರು ಮುಖ್ಯವಾದ ಸಾಧನೆಗಳನ್ನು ಮಾಡಿದ್ದಾರೆ. ಮೊಟ್ಟಮೊದಲನೆಯದಾಗಿ ತಾಂತ್ರಿಕವಾಗಿ ಜ್ಞಾನಪಡೆದಿರತಕ್ಕವರನ್ನು ಕಾರ್ಯದರ್ಶಿಯನ್ನಾಗಿ ಮಾಡಿರತಕ್ಕದ್ದು ಮತ್ತೆ ಕಾವೇರಿ ಜಲಾಶಯದಿಂದ ಹೆಚ್ಚಿಗೆ ನೀರನ್ನು ಕೊಟ್ಟದ್ದೇ ಆದರೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಅದರ ಬಗ್ಗೆ ಕ್ರಮ ತೆಗೆದುಕೊಂಡಿರತಕ್ಕದ್ದು. ಮತ್ತೆ ಮೂರನೆಯದಾಗಿ ಭ್ರಷ್ಟಾಚಾರವನ್ನು ಮೇಲ್ಮಟ್ಟದಿಂದ ಕಡಿಮೆ ಮಾಡಲು ಉನ್ನತ ಮಟ್ಟದಲ್ಲಿ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಒಂದು ಮಹತ್ತರವಾದಂಥ ಸಾಧನೆ ಮಾಡಿದ್ದಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಇನ್ನು ನಮ್ಮ ರಾಜ್ಯದಲ್ಲಿ ನ್ಯಾಶನಲ್ ಹೈವೇ ಬಹಳ ಕಡಿಮೆ ಇದೆ ಅದಕ್ಕೆ ಕೇಂದ್ರ ಸರ್ಕಾರದವರಿಂದ ಹೆಚ್ಚಿಗೆ ಪಡೆದುಕೊಂಡು ಅದನ್ನು ಸಹ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಮೊಟ್ಟಮೊದಲನೆಯದಾಗಿ ಬೆಂಗಳೂರು ಮೈಸೂರು ನಡುವೆ ಡಬ್ಬಲ್ ರೋಡ್ ಮಾಡಿ ನಾಶನಲ್ ಹೈವೇ ಮಾಡತಕ್ಕದ್ದು ಬಹಳ ಅವಶ್ಯವಿದೆ. ಅದೇ ರೀತಿಯಾಗಿ ಬೆಂಗಳೂರು ತುಮಕೂರು ರಸ್ತೆಯನ್ನು ಕೂಡ ಡಬ್ಬಲ್ ರೋಡ್ ಮಾಡತಕ್ಕದ್ದು ಬಹಳ ಅವಶ್ಯಕತೆ ಇದೆ. ಅದೇ ರೀತಿಯಾಗಿ ಬೆಂಗಳೂರು ಮರಕೆರ ರಸ್ತೆಯನ್ನು ನಾಶ್ಯನಲ್ ಹೈವೇ ಕೆಲಸವನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೂ ದೊಡ್ಡ ದೊಡ್ಡ ನೀರಾವರಿ ಡ್ಯಾಂಗಳ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಕೃಷ್ಣರಾಜಸಾಗರ, ವಾಣಿವಿಲಾಸ ಸಾಗರ ಮತ್ತು ತುಂಗಭದ್ರಾ ಡ್ಯಾಂಗಳಲ್ಲಿ ಸಿಲ್ಟ್ ಅಪ್ ಆಗುತ್ತಿದೆ. ಇದೇ ರೀತಿಯಾಗಿ ೮-೧೦ ವರ್ಷಗಳಾದರೆ ಆ ಡ್ಯಾಂಗಳಿಂದ ಏನೂ ಪ್ರಯೋಜನ ಬರುವುದಿಲ್ಲ. ಆದುದರಿಂದ ತಾವು ಈ ಹೂಳನ್ನು ತೆಗೆಯುವುದಕ್ಕೆ ಆಧುನಿಕ ತಂತ್ರಜ್ಞಾನವನ್ನು ಪಡೆದುಕೊಂಡು ಹಳ್ಳಿಗಳಲ್ಲಿ ಬಡ ರೈತರು ಕೂಲಿ ಇಲ್ಲದೇ ಇದ್ದಾರೆ. ಅಂಥವರಿಗೆ ಕೂಲಿ ಕೊಟ್ಟು ಈ ಹೂಳನ್ನು ತೆಗೆಸತಕ್ಕ ಕಾರ್ಯವನ್ನು ಮಾಡಿಸಬೇಕೆಂದು ಸಲಹೆ ಮಾಡಬಯಸುತ್ತೇನೆ.

ಇನ್ನು ನಿಮ್ಮ ಕರ್ನಾಟಕ ಕನ್ಸ್ಟ್ರಕ್ಷನ್ ಕಾರ್ಪೊರೇಷನ್ ಏನಿದೆ ಅದು ಎರಡೂವರೆ ಕೋಟಿ ರೂಪಾಯಿಗಳ ನಷ್ಟದಲ್ಲಿದೆ. ಈ ಕಾರ್ಪೊರೇಷನನ್ನು ಪ್ರಾರಂಭ ಮಾಡಿದ ಉದ್ದೇಶವೇನಿತ್ತು ಎಂದರೆ ಬೇರೆಯವರಿಗೆ ಶೆಡ್ಯೂಲ್ ರೇಟ್‌ಗಿಂತ ೨೦ ಪರ್ಸೆಂಟ್ ಹೆಚ್ಚಿಗೆ ಪ್ರೊವೈಡ್ ಮಾಡಿ ಕೊಡುವುದಕ್ಕಿಂತ ಈ ಕಾರ್ಪೊರೇಷನ್‌ನ ಮುಖಾಂತರವಾಗಿ ಕೆಲಸಗಳನ್ನು ಮಾಡಿಸಬೇಕೆಂದು ಉದ್ದೇಶವಿತ್ತು. ಆದರೆ ದುರಾದೃಷ್ಟವಶಾತ್ ಇದರಲ್ಲಿ ಎರಡೂವರೆ ಕೋಟಿ ರೂಪಾಯಿಗಳು ನಷ್ಟವಾಗಿದೆ. ಇದರಲ್ಲಿ ಕೆಲವು ಕಾರ್ಖಾನೆಗಳಲ್ಲಿ ಆಗಿರತಕ್ಕ ಅವ್ಯವಹಾರದ ಬಗ್ಗೆ ಹಿಂದೆಲ್ಲಾ ನಾನು ಹೇಳಿದ್ದೇನೆ ತಾವು ಅದನ್ನು ವಿಚಾರಣೆ ಮಾಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈ ಕನ್ಸ್ಟ್ರಕ್ಷನ್ ಕಾರ್ಪೊರೇಷನ್ನಿನವರು ಮೈಸೂರಿನಲ್ಲಿರತಕ್ಕ ಕಲಾಮಂದಿರ ಒಂದು ಸ್ಟೀಲ್ ಗರ್ಡರ್ ಮಾಡುವುದಕ್ಕೆ ಕಡಿಮೆ ರೇಟ್‌ನಲ್ಲಿ ಕೊಟ್ಟಿರುವುದರಿಂದ ನಾಲ್ಕುವರೆ ಲಕ್ಷ ರೂ.ಗಳ ನಷ್ಟ ಈ ಕಾರ್ಪೊರೇಷನ್ನಿಗೆ ಆಗಿದೆ. ಟೆಂಡರ್ ಕರೆಯಂದೇ, ಅಗ್ರಿಮೆಂಟ್ ಇಲ್ಲದೇನೇ ಬ್ಯಾಂಕ್‌ಗ್ಯಾರಂಟಿ ಇಲ್ಲದೇನೇ ಕೊಟ್ಟಿದ್ದಾರೆ. ಆದುದರಿಂದ ಇದರ ಬಗ್ಗೆ ತಾವು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಕಾರ್ಯವನ್ನು ಕನ್ಸ್ಟ್ರಕ್ಷನ್ ಕಾರ್ಪೊರೇಷನ್‌ರವರು ಮಾಡದೇ ಖಾಸಗಿಯವರೊಬ್ಬರಿಗೆ ಕೊಟ್ಟಿರುವುದರಿಂದ ಅವರು ಇದರಿಂದ ಹೆಚ್ಚಿನ ಲಾಭವನ್ನು ಪಡೆಯುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದುದರಿಂದ ಇದರ ಬಗ್ಗೆ ತಾವು ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ತಿಳಿಸಿ. ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಕೆ. ಹುಚ್ಚಪ್ಪ (ಕಡೂರು).—ಸನ್ಮಾನ್ಯ ಅಧ್ಯಕ್ಷರೆ, ಬಹುಶಃ ಚಿಕ್ಕಮಗಳೂರು ಜಿಲ್ಲೆಯ ಪರವಾಗಿ ನಾನು ಮಾತನಾಡಲಿಕ್ಕೆ ಇಚ್ಛಿಪಡುತ್ತೇನೆ. ತಾವು ನಮ್ಮ ಜಿಲ್ಲೆಯವರು. ಅದರಲ್ಲೂ ಕಡೂರು ತಾಲ್ಲೂಕು ಬರಗಾಲ ತಾಲ್ಲೂಕು. ನಾನು ಕಳೆದ ಸದನದಲ್ಲಿ ಇದರ ಬಗ್ಗೆ ಮಾತನಾಡಿದೆ. ಬಹುಶಃ ಅಲ್ಲಿ ಬಡ್ಜೆಟ್‌ನಲ್ಲಿ ಇನ್‌ಕ್ಲೂಡ್ ಆಗಿರತಕ್ಕ ಅನೇಕ ಲಿಫ್ಟ್ ಇರಿಗೇಷನ್ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದರು. ಆದರೆ ಶ್ರೀಮಾನ್ ದೇವರಾಜ ಅರಸ್‌ರವರ ಕಾಲದಲ್ಲಿ ಸ್ಟೇ ಆರ್ಡರ್ ಕೊಟ್ಟಿದ್ದನ್ನು ಶ್ರೀಮಾನ್ ಗುಂಡೂರಾಯರು ವೇಕೆಟ್ ಮಾಡಿದ್ದಾರೆ. ಆ ಕೆಲಸವನ್ನು ಪ್ರಾರಂಭಿಸಿರುವುದಕ್ಕೆ ಅವಕಾಶ ಕೊಡಬೇಕು ಎಂದು ಸದನದಲ್ಲಿ ಪ್ರಸ್ತಾಪ ಮಾಡಿದೆ. ಶ್ರೀಮಾನ್ ಚಂದ್ರೇಗೌಡರು ಮಂತ್ರಿಗಳಾಗಿದ್ದ ಕಾಲದಲ್ಲಿ ರಾಮನಹಳ್ಳಿಯ ಎರಡು ಕೆರೆ, ಬಾಣೂರು, ಬ್ಯಾಡರಳ್ಳಿ ಲಿಫ್ಟ್ ಇರಿಗೇಷನ್‌ನನ್ನು ತೆಗೆದು ಕೊಂಡಿದ್ದಾರೆ. ಆದರೆ ಈ ಕಾರ್ಯಕ್ರಮ ಆಗಿಲ್ಲ. ಕಳೆದ ಸಲ ಮಾನ್ಯ ಮಂತ್ರಿಗಳಲ್ಲಿ ಅನೇಕಸಾರಿ ಪ್ರಾರ್ಥನೆ ಮಾಡಿದೆ. ಬ್ಯಾಡರಹಳ್ಳಿ ಅಂದಕೆರೆ ಲಿಫ್ಟ್ ಇರಿಗೇಷನ್ ಮಾಡಬೇಕು ಎಂದು ಕಳಕಳಿಯಿಂದ ಸದನದ ಮೂಲಕ ಪ್ರಾರ್ಥಿಸುತ್ತಾ ಇದ್ದೇನೆ. ಎರಡನೆಯದಾಗಿ, ಮಾನ್ಯ ಸಚಿವರು ನಮ್ಮ ತಾಲ್ಲೂಕಿನ ನೀರಾವರಿಗೆ ಹಣವನ್ನು ಕೊಡತಕ್ಕದ್ದರಲ್ಲಿ ಬಡ್ಜೆಟ್‌ನಲ್ಲಿ ಬಹಳ ಕಡಿಮೆ ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಮೇಜರ್ ಇರಿಗೇಷನ್‌ಗೆ ಸಾಕಷ್ಟು ಗ್ರಾಂಟ್ ಕೊಟ್ಟಿಲ್ಲ. ಲಕ್ಕವಳ್ಳಿ ಇರಿಗೇಷನ್‌ನಿಂದ ನಮ್ಮ ಜಿಲ್ಲೆಗೆ ಪ್ರಯೋಜನವಿಲ್ಲ. ಅದು ಶಿವಮೊಗ್ಗ ಜಿಲ್ಲೆಗೆ ಮತ್ತು ದಾವಣಗೆರೆಗೆ ಅನುಕೂಲವಾಗುತ್ತದೆ. ಮದಗ ಹೈನುಕೆರೆಯ ಅಭಿವೃದ್ಧಿಗೆ ಗ್ರಾಂಟನ್ನು ಕೇಳಿದರೆ ಕೊಟ್ಟಿಲ್ಲ, ಇದಕ್ಕೆ ಮುಂದೆಯಾದರೂ ಕೊಡಬೇಕು. ಅಪ್ಪರ್‌ಭದ್ರ ಇದೆ, ಹೊನ್ನಮನಹಳ್ಳಿ ಕೆರೆ ಇದೆ. ಮಾನ್ಯ ಅಧ್ಯಕ್ಷರೆ, ರಾಮನಹಳ್ಳಿ ಕೆರೆಗೆ ಶಂಕುಸ್ಥಾಪನೆಯಾಗಿದೆ, ಎಸ್ಟಿಮೇಟ್‌ರಿವೈಸ್ ಆಗುತ್ತಿದೆ. ಆದುದರಿಂದ ರಾಮನಹಳ್ಳಿ, ಹೊನ್ನಮ್ಮನಹಳ್ಳಿ, ಅಪ್ಪರ್‌ಭದ್ರ ಪ್ರಾಜೆಕ್ಟ್‌ಗಳನ್ನು ತ್ವರಿತವಾಗಿ ತೆಗೆದುಕೊಳ್ಳಬೇಕು ಎಂದು ಪ್ರಾರ್ಥಿಸುತ್ತಾ ಇದ್ದೇನೆ. ಮತ್ತೆ ಮೂಡಿಗೆರೆ ಚಾರ್ಮಾಡಿ ರೋಡಿನಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು. ಮತ್ತು ಕಡೂರು ತಾಲ್ಲೂಕಿಗೆ ಹೆಚ್ಚಿನ ಗ್ರಾಂಟನ್ನು ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ. ಮಾನ್ಯ ಅಧ್ಯಕ್ಷರು ದೊಡ್ಡಮನಸ್ಸುಮಾಡಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಅಧ್ಯಕ್ಷರೆ, ನುಗು ಡ್ಯಾಮಿಗೆ ಸೇರಿದ ಹಾಗೆ ಹೆಚ್. ಡಿ. ಕೋಟೆ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ೨೩ ಸಾವಿರ ಎಕರೆ ಇದೆ.

---

†ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆದರಲ್ಲಿ ೧೮ ಸಾವಿರ ಎಕರೆಗೆ ನೀರಿಲ್ಲದೆ ತೊಂದರೆಯಾಗುತ್ತಿದೆ. ಆದ್ದರಿಂದ ಕಬನಿ ಡ್ಯಾಂನಿಂದ ಅಲ್ಲಿಗೆ ನೀರನ್ನು ಒದಗಿಸಿಕೊಟ್ಟು ಖಾಯಂ ಆಗಿ ನೀರಿನ ವ್ಯವಸ್ಥೆ ಮಾಡಬೇಕು ಎಂದು ಮಾನ್ಯ ಸಚಿವರನ್ನು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ. ಮಾನ್ಯ ಸಚಿವರು ಕಬನಿ ಡ್ಯಾಂ ಸೆಕೆಂಡ್ ಸ್ಟೇಜ್ ಬಗ್ಗೆ ಪ್ರಸ್ತಾಪಮಾಡಿಲ್ಲ. ಫಸ್ಟ್ ಸ್ಟೇಜ್‌ಗೆ ಹಣ ಒದಗಿಸಿಕೊಟ್ಟೇದ್ದೇವೆಂದು ಹೇಳಿದ್ದಾರೆ. ಸೆಕೆಂಡ್ ಸ್ಟೇಜ್ ಅಂದರೆ ಅದು ಗುಂಡ್ಲುಪೇಟೆ, ಚಾಮರಾಜನಗರ ಮತ್ತು ಕೊಳ್ಳೆಗಾಲ ಯಳಂದೂರರಿಗೆ ಸಂಬಂದಪಟ್ಟಹಾಗೆ ಬರುತ್ತದೆ. ಗುಂಡ್ಲುಪೇಟೆ ಶ್ರೀಮತಿ ನಾಗರತ್ನಮ್ಮನವರ ಕ್ಷೇತ್ರ ಮತ್ತು ಚಾಮರಾಜನಗರ ಪುಟ್ಟಸ್ವಾಮಿಯವರ ಕ್ಷೇತ್ರ, ಅಲ್ಲಿ ಬರಗಾಲ ಪೀಡಿತ ಪ್ರದೇಶಗಳಿವೆ ಆದುದರಿಂದ ಸೆಕೆಂಡ್ ಸ್ಟೇಜ್‌ನಲ್ಲಿ ಕಬಿನಿ ಡ್ಯಾಂನಿಂದ ಅಲ್ಲಿ ನೀರನ್ನು ಕೊಟ್ಟಿದೇ ಆದರೆ ಸಾವಿರಾರು ಜನರಿಗೆ ಅನುಕೂಲವಾಗುತ್ತದೆ. ಇದರಬಗ್ಗೆ ಮಾನ್ಯ ಸಚಿವರು ಪ್ರಸ್ತಾಪ ಮಾಡಬೇಕು ಅಲ್ಲಿ ಪ್ರತಿವರ್ಷ ಲಕ್ಷಾಂತರ ಜನರು ಬರಗಾಲಕ್ಕೆ ತುತ್ತಾಗಿ ತೊಂದರೆ ಪಡುತ್ತಿದ್ದಾರೆ. ಆದ್ದರಿಂದ ಸೆಕೆಂಡ್ ಸ್ಟೇಜ್‌ಗೆ ಹಣವನ್ನು ಮಂಜೂರು ಮಾಡಬೇಕು. ರಾಜ್ಯಸರ್ಕಾರದಲ್ಲಿ ಹಣ ಇಲ್ಲ ಅಂದರೆ ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ ತರಬೇಕು. ಅದಕ್ಕೆ ೧೦೦ ಕೋಟಿ ಆಗಬೇಕು ಎಂದು ಕಾಣುತ್ತದೆ. ಯಾವುದಾದರೂ ಪ್ರಾವಿಜನ್ ಮಾಡಿ ಡ್ಯಾಮನ್ನು ಮಾಡಬೇಕು ಎಂದು ಹೇಳುತ್ತೇನೆ ಮತ್ತೆ ವರುಣಾ ಕೆನಾಲ್‌ಗೆ ಎರಡು ಕೋಟಿ ಪ್ರಾವಿಜನ್ ಆಗಬೇಕು. ಆದರೆ ಒಂದು ಕೋಟಿ ಕೂಡ ಖರ್ಚುಮಾಡಿಲ್ಲ ೮೦ ಲಕ್ಷ ಕೂಡ ಖರ್ಚುಮಾಡಿಲ್ಲ. ಬಹುಶಃ ಕಡಿಮೆ ಹಣ ಕೊಟ್ಟದ್ದಾರೋ ಏನೋ ಗೊತ್ತಿಲ್ಲ. ತಕ್ಷಣ ವರುಣಾ ನಾಲೆಗೆ ೨ ಕೋಟಿ ಕೊಟ್ಟು ಖರ್ಚುಮಾಡಬೇಕು, ಕೆಲಸ ಆಗಬೇಕು ಎಂದು ಹೇಳುತ್ತೇನೆ. ಅಧಿಕಾರಿಗಳು ವರ್ಷವೆಲ್ಲಾ ಸುಮ್ಮನಿದ್ದು ಸುಮ್ಮನೆ ಹಣ ಇಟ್ಟುಕೊಂಡು ಮಾರ್ಚಿ ತಿಂಗಳಲ್ಲಿ ಖರ್ಚುಮಾಡುತ್ತಾರೆ ವರ್ಷವೆಲ್ಲಾ ಅಧಿಕಾರಿಗಳು ಏನು ಮಾಡುತ್ತಾರೆ. ಈ ರೀತಿ ಕೆಲಸಮಾಡಿದರೆ ರೋಡ್ ಆಗಲಿ, ಡ್ಯಾಂ ಆಗಲಿ ಅದರ ಕೆಲಸ ಆಗುವುದಿಲ್ಲ. ಆತುರಾತುರವಾಗಿ ಒಂದು ತಿಂಗಳಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೆ ಕೆಲಸದ ಕ್ವಾಲಿಟಿ ಹೇಗೆ ಇರುತ್ತದೆ ಎನ್ನುವ ಸಂಶಯ ಬರುತ್ತದೆ. ಇನ್ನು ಮುಂದಾದರೂ ವರ್ಷದ ಕೊನೆಯಲ್ಲಿ ಕೆಲಸ ತೆಗೆದು ಕೊಳ್ಳುವುದು ಬೇಡ. ವರ್ಷದ ಪ್ರಾರಂಭದಿಂದ ಕೆಲಸಮಾಡಬೇಕು. ಮತ್ತೆ ಕಾಡಾಗಳನ್ನು ನಿರ್ಮಾಣ ಮಾಡಿದ್ದೀರಿ. ಮೂರು, ನಾಲ್ಕು ಕಾಡಾಗಳಿಗೆ ಛೇರ್ಮನ್‌ಗಳನ್ನು ಮಾಡಿದ್ದೀರಿ. ಅವರು ಬರೀ ಕಾರಿನಲ್ಲಿ ಓಡಾಡಿಕೊಂಡು ಆಫೀಸರ್ಸ್ ಮೀಟಿಂಗ್ ಕರೆಯುವ ಹಾಗೆ ಮಾಡಬೇಡಿ. ಅವರಿಗೆ ಸಾಕಷ್ಟು ಹಣ ಕೊಡಿ. ಕಾಡಾದವರು ಮೀಟಿಂಗ್ ಕರೆದು ಸಂಚಾರ ಮಾಡಿದರೆ ಏನು ಪ್ರಯೋಜನ. ಅವರಿಗೆ ಹಣ ಕೊಡಬೇಕು, ಕೆಲಸ ಆಗಬೇಕು. ಮೈಸೂರು ಕಾಡಾಕ್ಕೆ ಹಣ ಕೊಟ್ಟಿಲ್ಲ, ಬೇಕಾದಷ್ಟು ಕೆಲಸಗಳಿವೆ. ಅವರಿಗೆ ಏನು ಕೇಳಿದರೂ ಹಣದ ಕೊರತೆ ಎಂದು ಹೇಳುತ್ತಾರೆ. ಆದುದರಿಂದ ಕಾಡಾಗಳಿಗೆ ಸಾಕದಷ್ಟು ಹಣ ಕೊಡಬೇಕು ಎಂದು ಮಾನ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರಕ್ಕೆ ಮಾನ್ಯ ದೇವೇಗೌಡರು ಅನ್ಯಾಯ ಮಾಡಿದ್ದಾರೆ ಎಂದು ಹೇಳಿದಾಗ ಅದನ್ನು ಸರಿಪಡಿಸುತ್ತೇನೆ ಕಾಗದ ಕೊಡಿ ಎಂದು ಹೇಳಿದರು. ಅದರಂತೆಯೇ ಪತ್ರವನ್ನು ಸಹ ತೆಗೆದುಕೊಂಡಿದ್ದಾರೆ. ಅನ್ಯಾಯವನ್ನು ಸರಿಪಡಿಸುತ್ತಾರೆಂದು ನಾನು ನಂಬಿದ್ದೇನೆ. ಏಕೆಂದರೆ ನಾನು ವಿರೋಧಪಕ್ಷದಲ್ಲಿದ್ದೇನೆ ಎನ್ನುವುದು ಒಂದು ಎರಡನೆಯದು ನಮಗೂ ಅವರಿಗೂ ಸ್ವಲ್ಪ ಕಾನ್‌ಫ್ರಂಟೇಷನ್ ಇದೆ. ಅದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಮಾಡಬಾರದು. ಎಲ್ಲರನ್ನು ಸಮಾನವಾಗಿ ಭಾವಿಸಿಕೊಳ್ಳಬೇಕು. ನಾನು ಕೊಟ್ಟಿರುವ ಕೆಲಸಗಳನ್ನು ಸ್ಯಾಂಕ್ಷನ್ ಮಾಡಬೇಕು. ನನ್ನ ಕ್ಷೇತ್ರಕ್ಕೆ ಕೊಟ್ಟಿರುವ ಹಣ ಕಡಿಮೆಯಿದೆ, ಆದುದರಿಂದ ಜಾಸ್ತಿ ಹಣವನ್ನು ಕೊಡಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು). —ಮಾನ ಸಭಾಧ್ಯಕ್ಷರೆ, ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯ ಮೇಲಿನ ಚರ್ಚೆಯಲ್ಲಿ ಸದನದ ೨೬ ಸನ್ಮಾನ್ಯ ಸದಸ್ಯರು ಭಾಗವಹಿಸಿ ಅತ್ಯಂತ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಎಲ್ಲಿ ಇಲಾಖೆ ಅವರ ನಿರೀಕ್ಷಣ ಮಟ್ಟಕ್ಕೆ ಬಂದಿಲ್ಲವೋ ಅಲ್ಲಿ ಟೀಕೆ ಕೂಡ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸ್ವಾಮಿ, ಕಾಲ ತುಂಬ ಕಡಿಮೆ ಇದೆ. ನಾನು ಅತ್ಯಂತ ಕಡಿಮೆ ಕಾಲದಲ್ಲಿ ಚರ್ಚೆಗೆ ಉತ್ತರ ಕೊಡಬೇಕು ಎನ್ನುವ ಆಶಯವನ್ನು ಇಟ್ಟುಕೊಂಡಿದ್ದೇನೆ. ಹೋದಸಾರಿ ಮೂರು ದಿವಸ ಚರ್ಚೆಯಾಯಿತು. ಮೊದಲನೆಯದು, ಅತ್ಯಂತ ಪ್ರಾಮುಖ್ಯವಾದಂಥ ವಿಷಯ ಅಂದರೆ ರಾಜ್ಯದ ಹಳ್ಳಿಗರ ಆರ್ಥಿಕ ಅಭಿವೃದ್ಧಿಗೆ ಭದ್ರ ಬುನಾದಿ ಹಾಕುವುದಕ್ಕೆ ಸಂಬಂಧ ಪಟ್ಟಂಥ ವಿಷಯ ಅಂದರೆ ನೀರಾವರಿ.

ಎಷ್ಟೇ ಮಾತನಾಡಿದರೂ ಇವತ್ತು ರೈತರ ಜೀವನ ಹಸನಾಗಬೇಕಾದರೆ, ನೀರಿನ ಸೌಲಭ್ಯವನ್ನು ಒಣ ಭೂಮಿಗೆ ಒದಗಿಸಿಕೊಟ್ಟರೆ ಮಾತ್ರ ಅದು ಸಾಧ್ಯವಾಗುತ್ತದೆ. ಎನ್ನುತಕ್ಕಂತಹದ್ದನ್ನು ನಾವು ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಈ ದಿಸೆಯಲ್ಲಿ ಇವತ್ತು ನಮ್ಮ ಸರ್ಕಾರದ ಕಾಳಜಿ, ಆಸಕ್ತಿ ಇದರಲ್ಲಿ ಭಿನ್ನಬೇಧ ವಿಲ್ಲದ, ಪಕ್ಷ ಬೇಧವಿಲ್ಲದೆ ಎಲ್ಲರೂ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ನಾನು ಮೊದಲೇ ತಿಳಿಸಿದ್ದೇನೆ. ನಮಗೆ ಇರತಕ್ಕ ಆರ್ಥಿಕ ಪರಿಸ್ಥಿತಿಯ ಇತಿಮಿತಿಯೊಳಗೆ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದೇವೆ. ತುಂಬಾ ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸೂಕ್ಷ್ಮವಾಗಿ ಮಾತ್ರ ಹೇಳುತ್ತೇನೆ. ನಾವು ಈಗಾಗಲೇ ಉಪಯೋಗಿಸಿಕೊಂಡಿರತಕ್ಕ ನೀರಿನ ಪ್ರಮಾಣ ೬೦೦ ಟಿ.ಎಂ ಸಿ. ನೀರನ್ನು ಉಪಯೋಗ ಮಾಡಿಕೊಳ್ಳು ವುದಕ್ಕೆ ಈಗ ಹಾಲಿ ಇರತಕ್ಕ ಪ್ರಾಜೆಕ್ಟುಗಳಿಂದ ೪೮೯ ಟಿ ಎಂ ಸಿ. ನೀರನ್ನು ಉಪಯೋಗಿಸಿಕೊಂಡರೂ ಉಪಯೋಗಿಸಿಕೊಳ್ಳಬೇಕಾದ ನೀರು ಇನ್ನೂ ಇದೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದು ಕೊಳ್ಳಬೇಕೆಂದು ಆಲೋಚನೆ ಮಾಡಿರತಕ್ಕ ಪ್ರಾಜೆಕ್ಟುಗಳಿಂದ ೮೪.೮೫ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಂಡರೂ ಇನ್ನು ಉಳಿಯತಕ್ಕಂತಹದ್ದು ೧೨೮.೫೩ ಟಿ. ಎಂ. ಸಿ. ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಆಲೋಚನೆ ಮಾಡುತ್ತಿರತಕ್ಕಂತಹದ್ದು ೬೭೦ ಟಿ. ಎಂ. ಸಿ. ರಾಜ್ಯದಲ್ಲಿ ಇದೆ. ಈಗಾಗಲೇ ನಾವು ಆಗಿನ ಕಾಲದಿಂದ ಮುಗಿಸಿಕೊಂಡು ಬಂದಿರತಕ್ಕಂತಹ ಅಣೆಕಟ್ಟು ಗಳಿಂದ ಒಟ್ಟು ೪,೧೧,೩೮೦ ಹೆಕ್ಟೇರ್ ನೀರಾವರಿ ಪ್ರದೇಶವಾಗಿದೆ. ಈಗ ಆನ್‌ಗೋಯಿಂಗ್ ಪ್ರಾಜೆಕ್ಟುಗಳು ಏನಿವೆ, ಅವುಗಳನ್ನು ಪೂರ್ಣ ಮಾಡಿದರೆ ಅದರಿಂದ ೧೯,೨೮,೬೪೨ ಹೆಕ್ಟೇರ್ ನೀರಾವರಿ ಯಾಗುತ್ತದೆ. ಇದು ಮೇಜರ್ ಇರಿಗೇಷನ್ ಪ್ರಾಜೆಕ್ಟುಗಳಿಂದ ಆಯಿತು. ನಂತರ ಮೀಡಿಯಂ ಇರಿಗೇಷನ್ ಪ್ರಾಜೆಕ್ಟುಗಳಿಂದ ೩ ೪೨,೦೨೧ ಹೆಕ್ಟೇರ್ ನೀರಾವರಿ ಪ್ರದೇಶವಾಗುತ್ತದೆ. ಒಟ್ಟು ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ನೀರನ್ನೂ ನಾವು ಬಳಕೆ ಮಾಡಿಕೊಂಡರೆ ೫೫ ಲಕ್ಷ ಹೆಕ್ಟೇರ್ ಪ್ರದೇಶ ನೀರಾವರಿ ಯಾಗುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಈಗಾಗಲೇ ಆನ್‌ಗೋಯಿಂಗ್ ಪ್ರಾಜೆಕ್ಟುಗಳಿಗೆ ನಾವು ಖರ್ಚು ಮಾಡಿರತಕ್ಕಂತಹದ್ದು ೭೯ ಕೋಟಿ ರೂಪಾಯಿಗಳು. ಈ ಆನ್‌ಗೋಯಿಂಗ್ ಪ್ರಾಜೆಕ್ಟು ಗಳೇನಿವೆ, ಅವುಗಳು ಮುಗಿಸುವುದಕ್ಕೆ ಇನ್ನೂ ಸುಮಾರು ೧೧೫೦ ಕೋಟಿ ರೂಪಾಯಿಗಳು ಬೇಕಾಗು ತ್ತವೆ. ಇನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಜೆಕ್ಟುಗಳನ್ನು ಏನು ಮಾಡಬೇಕೆಂದಿದ್ದೇವೆ ಅವುಗಳಿಗೆ ೧೨೫೦ ಕೋಟಿ ರೂಪಾಯಿಗಳು ಬೇಕಾಗುತ್ತದೆ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ನೀರನ್ನು ಏನು ಉಪಯೋಗ ಮಾಡಿಕೊಳ್ಳಬೇಕೆಂದಿದ್ದೇವೆ. ಅದನ್ನು ಬಿಟ್ಟು ಇನ್ನುಳಿದಿರತಕ್ಕಂತಹ ನೀರನ್ನೂ ಉಪಯೋಗ ಮಾಡಿಕೊಳ್ಳಬೇಕಾದರೆ ಸುಮಾರು ೨೦೦೦ ಕೋಟಿ ರೂಪಾಯಿಗಳು ಬೇಕಾಗು ತ್ತದೆ. ಇದು ಇರತಕ್ಕ ಪರಿಸ್ಥಿತಿ. ಇಷ್ಟೆಲ್ಲಾ ಹೇಳಿದರೆ ಸಮಸ್ಯೆಯ ಗಾತ್ರ ಏನು ಎಂಬುದು ಗೊತ್ತಾಗಲೆಂದು ಸೂಕ್ಷ್ಮವಾಗಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏನು ನಮ್ಮ ವಿರೋಧಪಕ್ಷದ ಉಪನಾಯಕರು ಸಭೆಯಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ೧೯೬೬-೬೭ನೇ ಇಸವಿಯಿಂದಲೂ ಖರ್ಚು ಮಾಡಿದ್ದರ ಬಗ್ಗೆ ಅಂಕಿ ಅಂಶಗಳನ್ನು ಇಟ್ಟುಕೊಂಡಿದ್ದೇನೆ. ಎಲ್ಲವನ್ನೂ ನಾನು ಓದುವುದಕ್ಕೆ ಪ್ರಾರಂಭ ಮಾಡುವುದಿಲ್ಲ. ಕಾರಣ ಕಾಲ ವಿಳಂಬವಾಗುತ್ತದೆ. ಅಲ್ಲಿಂದ ಇಲ್ಲಿಯವರೆಗೆ ಕೃಷ್ಣಾ ಬೇಸಿನ್‌ಗೆ ಖರ್ಚು ಮಾಡಿರತಕ್ಕಂತಹದ್ದು ಹಾಗೂ ಕಾವೇರಿ ಬೇಸಿನ್‌ಗೆ ಖರ್ಚು ಮಾಡಿರತಕ್ಕಂತಹ ಹಣದ ಅಂಕಿ ಅಂಶಗಳು ನನ್ನಲ್ಲಿ ಇವೆ. ೧೯೬೬-೬೭ನೇ ಸಾಲಿನಲ್ಲಿ ಕೃಷ್ಣಾ ಬೇಸಿನ್‌ಗೆ ೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಕಾವೇರಿ ಬೇಸಿನ್‌ಗೆ ಕೇವಲ ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಂತರ ೧೯೬೮-೬೯ನೇ ಸಾಲಿನಲ್ಲಿ ಕೃಷ್ಣಾ ಬೇಸಿನ್‌ಗೆ ೧೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕಾವೇರಿ ಬೇಸಿನ್‌ಗೆ ೨.೪೭ ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿದ್ದಾರೆ. ನಂತರ ೧೯೬೯-೭೦ನೇ ಸಾಲಿನಲ್ಲಿ ಕೃಷ್ಣಾ ಬೇಸಿನ್‌ಗೆ ೧೬.೬೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಕಾವೇರಿ ಬೇಸಿನ್‌ಗೆ ೪.೯೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ನಂತರ ೧೯೭೦-೭೧ನೇ ಸಾಲಿನಲ್ಲಿ ೧೬.೮೭ ಕೋಟಿ ರೂಪಾಯಿಗಳನ್ನು ಕೃಷ್ಣಾ ಬೇಸಿನ್‌ಗೆ ಖರ್ಚು ಮಾಡಿದ್ದರೆ, ಅದಕ್ಕಿಂತ ಬಹಳ ಕಡಿಮೆ ಹಣವನ್ನು ಕಾವೇರಿ ಬೇಸಿನ್‌ಗೆ ಖರ್ಚು ಮಾಡಿದ್ದಾರೆ. ಹೀಗೆ ಬಹಳ ಮೀಗರ್ ಅಮೌಂಟನ್ನು ನಮ್ಮ ಹಿಂದಿನವರು ಕಾವೇರಿ ಬೇಸಿನ್‌ಗೆ ತೊಡಗಿಸಿದ್ದಾರೆ. ಇದಕ್ಕೆ ಸ್ವಲ್ಪ ಹೆಚ್ಚಿನ ಶಕ್ತಿಯನ್ನು ಕೊಟ್ಟಿದ್ದು ೧೯೭೬-೭೭ ರಿಂದ ಈಚೆಗೆ. ಅಲ್ಲಿಂದ ಈಚೆಗೆ ಇದಕ್ಕೆ ಸ್ವಲ್ಪ ಹೆಚ್ಚಿನ ಶಕ್ತಿಯನ್ನು ಕೊಡುತ್ತಾ ಬಂದಿದ್ದಾರೆ. ೩೩ ಕೋಟಿ ಒಂದು

ಸಾರಿ. ೪೩ ಕೋಟಿ ರೂಪಾಯಿಗಳು ಮತ್ತೊಂದು ಸಾರಿ. ೧೯೭೮-೭೯ರಲ್ಲಿ ಕೃಷ್ಣಾ ಬೇಸಿನ್‌ಗೆ ೬೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದೇ ರೀತಿ ೧೯೭೯-೮೦ನೇ ಸಾಲಿನಲ್ಲಿ ೭೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ೧೯೮೦-೮೧ನೇ ಸಾಲಿನಲ್ಲಿ ೬೪ ಕೋಟಿ, ೧೯೮೧-೮೨ನೇ ಸಾಲಿನಲ್ಲಿ ೭೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹೀಗೆ ಸ್ವಲ್ಪ ಅಲ್ಲಿಂದ ಈಚೆಗೆ ಇದಕ್ಕೆ ಸ್ವಲ್ಪ ಪ್ರಾಶಸ್ತ್ಯವನ್ನು ಕೊಟ್ಟು ಹೆಚ್ಚಿನ ಹಣವನ್ನು ತೊಡಗಿಸತಕ್ಕ ಪರಿಸ್ಥಿತಿಗೆ ಹೋಗಿದೆ. ಈಗಾಗಲೇ ನಾನು ಒಟ್ಟು ಖರ್ಚು ಮಾಡಿದ್ದನ್ನು ತಿಳಿಸಿದ್ದೇನೆ. ಈ ಎರಡೂ ಬೇಸಿನ್‌ಗಳೂ ಸೇರಿದಂತೆ ೭೨೯ ಕೋಟಿ ರೂಪಾಯಿಗಳನ್ನು ಒಟ್ಟು ಖರ್ಚು ಮಾಡಿದ್ದೇವೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದೇನೆಂದರೆ ನಮ್ಮ ಸನ್ಮಾನ್ಯ ಸದಸ್ಯರು ತಪ್ಪು ಕಲ್ಪನೆಯಿಂದ ಪ್ರಾದೇಶಿಕ ಅಸಮತೋಲನವಾಗಿದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು, ಅದನ್ನು ತೊಡೆದು ಹಾಕತಕ್ಕದ್ದು ನನ್ನ ಕರ್ತವ್ಯ. ಆದ್ದರಿಂದ ಈ ವಿಷಯವನ್ನೂ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಹಳೇ ಮೈಸೂರು ಏರಿಯಾದಲ್ಲಿರತಕ್ಕಂತಹ ೯ ಜಿಲ್ಲೆಗಳನ್ನೊಳಗೊಂಡಂತೆ ೧೯೮೩-೮೪ನೇ ಸಾಲಿನಲ್ಲಿ ನಾವು ಖರ್ಚು ಮಾಡಿರತಕ್ಕಂತಹದ್ದು ೬೬ ಕೋಟಿ ೧೧ ಲಕ್ಷ ರೂಪಾಯಿಗಳು. ಇಂಟಿಗ್ರೇಟೆಡ್ ಏರಿಯಾದಲ್ಲಿ ೮೯ ಕೋಟಿ ೨೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದಕ್ಕಿಂತ ಹಿಂದೆ ಹೋಗುವುದಿಲ್ಲ. ಅದು ಅಪ್ರಕೃತವೆಂದು ನನ್ನ ಭಾವನೆ, ಹೊಸ ಮೈಸೂರು ಪ್ರದೇಶದಲ್ಲಿ ೧೯೮೩-೮೪ನೇ ಸಾಲಿನಲ್ಲಿ ೮೯ಕೋಟಿ ೨೯ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಈ ವರ್ಷ ಅಂದರೆ ೧೯೮೪-೮೫ನೇ ಸಾಲಿನಲ್ಲಿ ಹಳೇ ಮೈಸೂರು ಪ್ರದೇಶಕ್ಕೆ ೭೩ ಕೋಟಿ ೯೮ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಅದೇ ರೀತಿ ಇಂಟಿಗ್ರೇಟೆಡ್ ಏರಿಯಾದಲ್ಲಿ ಖರ್ಚು ಮಾಡಬೇಕೆಂದಿರುವ ಹಣ ೭೯ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇದು ಇರತಕ್ಕ ವಾಸ್ತವಾಂಶ. ಆಮೇಲೆ ಇದರಲ್ಲಿ ಸಂಪೂರ್ಣವಾಗಿ ಪಕ್ಷಪಾತವಿಲ್ಲದೆ, ತಾರತಮ್ಯ ಇಲ್ಲದೆ ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ. ಎಲ್ಲಾ ಭಾಗವೂ ಇವತ್ತು ಒಂದೇ. ಅದರಲ್ಲಿ ಯಾವುದೇ ಅಸಮತೋಲನಕ್ಕೆ ಅವಕಾಶವನ್ನು ಕೊಟ್ಟಿಲ್ಲವೆಂಬುದಕ್ಕೆ ಕೆಲವು ಉದಾಹರಣೆಗಳನ್ನು ಮಾತ್ರ ಕೊಡುತ್ತಿದ್ದೇನೆ. ನಾನು ಜಿಲ್ಲಾವಾರು ಅಂಕಿ ಅಂಶಗಳನ್ನು ತರಿಸಿದ್ದೇನೆ. ಸ್ಪಿಲ್ ಓವರ್ ವರ್ಕ್ಸ್. ಫ್ರೆಷ್‌ವರ್ಕ್ಸ್, ರೋಡ್ಸ್ ಅಂಡ್ ಬ್ರಿಡ್ಜಸ್ ಸೇರಿದಂತೆ, ಇವತ್ತು ಫ್ರೆಷ್‌ವರ್ಕ್ಸ್ ಅನ್ನು ಏನು ಈ ವರ್ಷ ತೆಗೆದುಕೊಳ್ಳಬೇಕೆಂದಿದ್ದೇವೆಂಬುದು ಅಪೆಂಡಿಕ್ಸ್ 'ಬಿ''ನಲ್ಲಿದೆ. ೪೧೫ ಲಕ್ಷ ರೂಪಾಯಿಗಳ ಕಾಮಗಾರಿಯನ್ನು ಗುಲ್ಬರ್ಗ ಜಿಲ್ಲೆಗೆ ಕೊಟ್ಟಿದ್ದೇವೆ. ಇದು ಮೊದಲನೆಯದು. ಎರಡನೆಯದು ಉತ್ತರ ಕನ್ನಡ ಜಿಲ್ಲೆ. ಇಲ್ಲಿಗೆ ೩೧೯ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮೂರನೆಯದು ಧಾರವಾಡ. ಇಲ್ಲಿಗೆ ೩೦೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಾಲ್ಕನೆಯ ಸ್ಥಾನ ಮೈಸೂರು ಜಿಲ್ಲೆಗೆ ಹೋಗುತ್ತದೆ. ಇಲ್ಲಿಗೆ ೨೯೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆಮೇಲೆ ೫ನೇ ಸ್ಥಾನ ಬೆಂಗಳೂರು ಜಿಲ್ಲೆ. ಇಲ್ಲಿಗೆ ೨೮೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ೬ನೇ ಸ್ಥಾನ ಹಾಸನ ಜಿಲ್ಲೆ. ಇಲ್ಲಿಗೆ ೨೬೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ೭ನೇ ಸ್ಥಾನ ದಕ್ಷಿಣ ಕನ್ನಡ ಜಿಲ್ಲೆ. ಇಲ್ಲಿಗೆ ೨೭೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದೇ ರೀತಿ ನೀರಾವರಿಯನ್ನು ತೆಗೆದುಕೊಳ್ಳುವುದಾದರೆ, ಫ್ರೆಷ್‌ವರ್ಕ್ಸ್, ಇರಿಗೇಷನ್, ಪಿ.ಡಬ್ಲ್ಯು.ಡಿ. ರೋಡ್ಸ್ ಅಂಡ್ ಬ್ರಿಡ್ಜಸ್ ಇವೆಲ್ಲ ಸೇರುವುದಾದರೂ ಕೂಡ ಆಗ ಗುಲ್ಬರ್ಗ ಮೊದಲನೆಯ ಸ್ಥಾನದಲ್ಲಿದೆ. ಇಲ್ಲಿಗೆ ೨೫ ಕೋಟಿ, ೬೬ ಲಕ್ಷ ರೂಪಾಯಿಗಳ ಕಾಮಗಾರಿ ಇದೆ. ನಂತರ ೨ನೇ ಸ್ಥಾನದಲ್ಲಿ ಇರತಕ್ಕಂತಹದ್ದು ಮೈಸೂರು ಜಿಲ್ಲೆ. ಇಲ್ಲಿ ೨೧ ಕೋಟಿ ೫೦ ಲಕ್ಷ ರೂಪಾಯಿಗಳ ಕಾಮಗಾರಿ ಇದೆ. ಮೈನರ್ ಇರಿಗೇಷನ್, ಕಮ್ಯುನಿಕೇಷನ್ ಇನ್‌ಕ್ಲೂಡಿಂಗ್ ರೋಡ್ಸ್ ಅಂಡ್ ಬ್ರಿಡ್ಜಸ್ ಹಾಗೂ ಸ್ಪಿಲ್ಲೋವರ್ ವರ್ಕ್ಸ್ ಸೇರಿದಂತೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಟೋಟಲ್ ಹೇಳುತ್ತಿದ್ದೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಹೌದು,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ತಾವು ಜಿಲ್ಲಾವಾರು ಅಲಾಟ್ ಮಾಡಿರತಕ್ಕಂತಹ ಹಣವನ್ನು ಹೇಳುತ್ತಿದ್ದೀರಿ. ಇದರ ಜೊತೆಯಲ್ಲಿ ಹೋದಸಾರಿ ಎಷ್ಟು ಅಲಾಟ್ ಮಾಡಿದ್ದೀರಿ ? ಅದರಲ್ಲಿ ಎಷ್ಟು ಖರ್ಚು ಮಾಡಿದ್ದಾರೆಂಬುದನ್ನೂ ಹೇಳಬೇಕು. ಗುಲ್ಬರ್ಗ ಜಿಲ್ಲೆಯಲ್ಲಿ ಹೋದವರ್ಷ ಒಂದು ಪೈಸೆಯನ್ನೂ ಕೂಡ ಖರ್ಚು ಮಾಡಲಿಲ್ಲ.

೬-೦೦ ಪಿ.ಎಂ.

ಶ್ರೀ ಹೆಚ್. ಡಿ. ದೇವೇಗೌಡ.—೧೯೮೩-೮೪ರ ಅಂಕಿಅಂಶಗಳನ್ನು ಏನು ಕೊಟ್ಟಿದ್ದೇನೆ ಅದು ಪೂರ್ತಿ ಖರ್ಚಾಗಿಲ್ಲ. ನಾನು ಹೊಸ ಕೆಲಸದ್ದು ಮಾತ್ರ ಹೇಳುತ್ತಿದ್ದೇನೆ. ನೀವು ರಸ್ತೆಗಳಿಗೆ ಮತ್ತು ಕಟ್ಟಡಗಳಿಗೆ ಎಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನು ಬೇಕಾದರೆ ಹೇಳುತ್ತೇನೆ. ಕೆಲಸ ನಡೆಯುತ್ತಿರುವುದು ಮತ್ತು ಹೊಸ ಕೆಲಸಗಳದ್ದು ಎಲ್ಲ ಸೇರಿಸಿದರೆ ಗುಲ್ಬರ್ಗ ಜಿಲ್ಲೆ ಮೊದಲನೆಯ ಸ್ಥಾನವನ್ನೂ ಮೈಸೂರು ಎರಡನೆಯ ಸ್ಥಾನವನ್ನು ಪಡೆಯುತ್ತದೆ. ನಾನು ಯಾವುದನ್ನೂ ಮುಚ್ಚುಮರೆ ಮಾಡುವುದಿಲ್ಲ. ೩ನೇ ಸ್ಥಾನ ಧಾರವಾಡಕ್ಕೆ ೪ನೇ ಸ್ಥಾನ ರಾಯಚೂರಿಗೆ ೬ನೇ ಸ್ಥಾನ ಉತ್ತರ ಕನ್ನಡ ಜಿಲ್ಲೆಗೆ, ೭ನೇ ಸ್ಥಾನ ಬೆಳಗಾವಿಗೆ, ೮ನೇ ಸ್ಥಾನ ಬಿಜಾಪುರಕ್ಕೆ, ೯ನೇ ಸ್ಥಾನ ಕೋಲಾರಕ್ಕೆ ಬರುತ್ತದೆ. ನನ್ನ ಹತ್ತಿರ ಪ್ರತಿ ಜಿಲ್ಲೆಯ ಮಾಹಿತಿಯೂ ಇದೆ. ಉದಾಹರಣೆಗೆ, ರಾಯಚೂರಿಗೆ ೧೩ ಕೋಟಿ, ಉತ್ತರ ಕನ್ನಡ ಜಿಲ್ಲೆಗೆ ೧೨.೯೮ ಕೋಟಿ, ಬೆಳಗಾವಿಗೆ ೧೨.೫೫ ಕೋಟಿ, ಬಿಜಾಪುರಕ್ಕೆ ೧೧.೩೩ ಕೋಟಿ, ಕೋಲಾರಕ್ಕೆ ೯.೪೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಅಂಕಿ ಅಂಶಗಳನ್ನು ಏತಕ್ಕೆ ಕೊಟ್ಟೆ ಎಂದರೆ ಏನು ಒಂದು ತಪ್ಪು ಅಭಿಪ್ರಾಯ ಈ ಸರ್ಕಾರದ ಮೇಲೆ ಇದೆ, ಸರ್ಕಾರ ಕೆಲವು ಪ್ರದೇಶಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುತ್ತಿಲ್ಲ ನೋಡಿಕೊಳ್ಳುವುದರಲ್ಲಿ ಭಿನ್ನಭೇದ ಇದೆ ಎಂದು ಹೇಳಿದರು, ಅದಕ್ಕಾಗಿ ಹೇಳುತ್ತಿದ್ದೇನೆ. ಭೀಮಣ್ಣ ಖಂಡ್ರೆಯವರು ಒಂದು ಕಠಿಣ್ಯವಾದ ಮಾತನ್ನಾಡಿ ಕರ್ನಾಟಕದಲ್ಲಿ ಹೋರಾಟ ಮಾಡತಕ್ಕ ಕಾಲ ಬಂದಿದೆ ಎಂದು ಹೇಳಿದರು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಕಾರಂಜಿ, ಬೆಣ್ಣೆತೊರೆ ಯೋಜನೆಗಳ ಬಗ್ಗೆ ಬಡ್ಜೆಟ್‌ವೈಸ್ ಫಿಗರ್ಸ್ ಕೊಡಿ.

ಶ್ರೀ ಹೆಚ್.ಡಿ. ದೇವೇಗೌಡ.—ಅದನ್ನೂ ಕೂಡ ಕೊಡುತ್ತೇನೆ. ಎಲ್ಲ ಅಂಕಿ ಅಂಶಗಳನ್ನು ಕೊಡಲು ನಾನು ಸಿದ್ಧನಿದ್ದೇನೆ. ಆದರೆ ಸಮಯ ಇಲ್ಲ. ಆದ್ದರಿಂದ, ಅಪ್ಪರ್ ಕೃಷ್ಣ ಘಟಪ್ರಭಾ, ಮಲಪ್ರಭಾ, ಬೆಣ್ಣೆತೊರೆ ಇತ್ಯಾದಿ ಯೋಜನೆಗಳಿಗೆ ಸಂಬಂಧಪಟ್ಟಹಾಗೆ ಬಡ್ಜೆಟ್ ವೈಸ್ ಫಿಗರ್ಸ್ ಅನ್ನು ತಮ್ಮ ಕಡೆ ಕಳುಹಿಸಿಕೊಡುತ್ತೇನೆ ಅದನ್ನು ತಾವು ಓದಿಕೊಳ್ಳಬಹುದು. ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇಲ್ಲಿ ರೀಜನಲ್ ಡಿಸ್‌ಪ್ಯಾರಿಟಿ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ ರಾಜ್ಯದ ಎಲ್ಲಾ ಭಾಗವನ್ನು ಇವತ್ತು ಏಕಮುಖವಾಗಿ ನೋಡಿಕೊಳ್ಳುತ್ತಿದ್ದೇವೆ. ವಿಶೇಷವಾಗಿ ಗುಲ್ಬರ್ಗ, ರಾಯಚೂರು ಜಿಲ್ಲೆಗಳು ಹಿಂದುಳಿದ ಭಾಗಗಳೆಂದು ಅವುಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೇವೆ. ಅಂದಮೇಲೆ ಯಾವುದೇ ರೀತಿಯ ಸಂಶಯ ಯಾರಲ್ಲೂ ಬೇಡವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅಪ್ಪರ್ ಕೃಷ್ಣಗೆ ಹೆಚ್ಚಿಗೆ ಎಷ್ಟು ಪರ್ಸೆಂಟೇಜ್ ಕೊಟ್ಟಿದ್ದೀರಿ ?

ಶ್ರೀ ಹೆಚ್.ಡಿ. ದೇವೇಗೌಡ.—ಅಂಕಿಅಂಶಗಳನ್ನು ಕಳುಹಿಸಿದ್ದೇನೆ, ನೋಡಿಕೊಳ್ಳಿ. ಇನ್ನೊಂದು ವಾದ ಏನು ಬಂತು ಎಂದರೆ ಆಯವ್ಯಯದಲ್ಲಿ ಕೆಲಸವನ್ನೇನೋ ಸೇರಿಸಿದ್ದಾರೆ. ಆದರೆ ಕೆಲಸವನ್ನು ಮಾಡಿಲ್ಲ ಎಂದು ಹೋದ ಸಾರಿ ಅಂದರೆ ೧೯೮೩ರ ಆಯವ್ಯಯದಲ್ಲಿ ೧೦೩೧ ಕೆಲಸಗಳನ್ನು ಸೇರಿಸಿದ್ದರೆ ೯೪೧ ಕೆಲಸಗಳನ್ನು ಮಂಜೂರ್ಮಾಡಿದ್ದೇವೆ. ಅಸ್ಫಾಲ್ಟಿಂಗ್ ಕೆಲಸಗಳು ೧೫೪ವನ್ನು ಸೇರಿಸಿದ್ದರೆ ೧೪೫ ಕೆಲಸಗಳಿಗೆ ಮಂಜೂರಾತಿ ಕೊಟ್ಟಿದ್ದೇವೆ. ರೋಡ್ ಫಾರ್ಮೇಷನ್‌ನ ೩೫೦ ಕೆಲಸಗಳನ್ನು ಸೇರಿಸಿದ್ದರೆ ೩೪೪ನ್ನು ಮಂಜೂರ್ಮಾಡಿದ್ದೇವೆ. ಸಕ್ಕರೆ ಕಾರ್ಖಾನೆ ಪ್ರದೇಶದ ೨೫ ರಸ್ತೆಗಳ ಕೆಲಸವನ್ನು ಸೇರಿಸಿದ್ದರೆ ೨೩ಕ್ಕೆ ಮಂಜೂರಾತಿ ಕೊಟ್ಟಿದ್ದೇವೆ. ಅದೇ ರೀತಿ, ೨೫೫ ಸೇತುವೆ ನಿರ್ಮಾಣದ ಕೆಲಸಗಳನ್ನು ಸೇರಿಸಿದ್ದರೆ ೨೦೦ಕ್ಕೆ ಮಂಜೂರಾತಿ ಕೊಟ್ಟಿದ್ದೇವೆ. ತಮಗೆ ಯಾವುದೇ ಕೆಲಸಗಳ ಬಗ್ಗೆ ಮನಸ್ಸಿನಲ್ಲಿ ಸಂಶಯ ಬೇಕಾಗಿಲ್ಲ. ಮೊಯಿಲಿಯವರಿಗೆ ಹಣಕಾಸಿನ ಸಚಿವರಾಗಿ ಕೆಲಸ ಮಾಡಿದ ಅನುಭವ ಇದೆ. ಕೆಲವು ಕೆಲಸಗಳನ್ನು ಆಯವ್ಯಯದಲ್ಲಿ ಸೇರಿಸಿದ್ದರೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂಬುದು ಅವರಿಗೆ ಗೊತ್ತಿದೆ. ಆಯವ್ಯಯದಲ್ಲಿ ಸೇರಿಸಿದಾಗ ಏನು ಮಾಡುತ್ತೇವೆಂದರೆ ಅದಕ್ಕೆ ಒಂದು ಅಂದಾಜು ವೆಚ್ಚವನ್ನು ಗೊತ್ತು ಮಾಡಿರುತ್ತೇವೆ. ಅದನ್ನು ಕಾರ್ಯಗತ ಮಾಡುವಾಗ ಸ್ವಲ್ಪ ಏರುಪೇರು ಆಗುತ್ತದೆ ಆಗ ಅದರ ಕಷ್ಟ ಗೊತ್ತಾಗುತ್ತದೆ. ಮತ್ತೆ ಅದು ಹಣಕಾಸಿನ ಇಲಾಖೆಗೆ ಹೋಗಿ ಕ್ಲಿಯರ್ ಆಗಬೇಕು. ಇವೆಲ್ಲ ಫಾರ್ಮಾಲಿಟೀಸ್ ಅನ್ನು ಮಾಡಬೇಕಾಗುತ್ತದೆ. ಇವತ್ತು ನಾವು ೧೦೩೦ ಕೆಲಸಗಳ ಪೈಕಿ ೯೪೧ ಕೆಲಸಗಳಿಗೆ ಮಂಜೂರಾತಿ ಕೊಟ್ಟಿದ್ದೇವೆಂದರೆ ಶೇಕಡ ೯೦ರಷ್ಟು ಕೆಲಸಗಳನ್ನು ಮಾಡಿದ ಹಾಗೆ ಆಯಿತು.

ಶ್ರೀ ಹೆಚ್.ಡಿ. ಚೌಡಯ್ಯ.—ಅದು ನಿಜವಾದ ಪ್ರಗತಿ ಅಲ್ಲ. ಮಂಜೂರಾತಿ ಕೊಟ್ಟಾಕ್ಷಣ ಕೆಲಸ ಮಾಡಿದ ಹಾಗೆ ಆಯಿತೆ ? ಅಷ್ಟಕ್ಕೆ ತೃಪ್ತಿ ಆಗುವುದಾದರೆ ನಾನು ಮಾತನಾಡುವುದಿಲ್ಲ, ತಾವು ಅನುಭವಸ್ಥರು.

ಶ್ರೀ ಹೆಚ್.ಡಿ. ದೇವೇಗೌಡ.—ನಾನು ಬೇಕಾದರೆ ಪ್ರತಿವರ್ಷ ಆಯವ್ಯಯದಲ್ಲಿ ಸೇರಿಸಿ ಮಂಜೂರಾಗಿರತಕ್ಕ ಕೆಲಸದ ವಿವರಗಳನ್ನು ಕೊಡುತ್ತೇನೆ ಆಗ ನಿಮಗೆ ಎಲ್ಲಾ ಗೊತ್ತಾಗುತ್ತದೆ. ೧೯೮೨-೮೩ರಲ್ಲಿ ಎಷ್ಟು ಕೆಲಸಗಳನ್ನು ಆಯವ್ಯಯದಲ್ಲಿ ಸೇರಿಸಿದ್ದೀರಿ ಮತ್ತು ಎಷ್ಟಕ್ಕೆ ಮಂಜೂರಾತಿ ಕೊಟ್ಟಿದ್ದೀರಿ ? ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಆಯವ್ಯಯದಲ್ಲಿ ಸೇರಿಸಿದಾಕ್ಷಣ ಮಂಜೂರಾತಿ ಮಾಡುವುದಕ್ಕಾಗುವುದಿಲ್ಲ. ಕೆಲವು ಭಾರಿ ಒಂದೆರಡು ಮೂರು ಸಾರಿ ಟೆಂಡರ್ ಕರೆಯಬೇಕಾಗುತ್ತದೆ. ಆಯವ್ಯಯದಲ್ಲಿ ಸೇರಿಸಿರತಕ್ಕ ಕೆಲಸಕ್ಕೆ ಕ್ಲಿಯರೆನ್ಸ್ ಕೊಟ್ಟಿರತಕ್ಕದನ್ನು ನೋಡಿದರೆ ಸರ್ಕಾರದ ಪ್ರಾಮಾಣಿಕ ಪ್ರಯತ್ನ ವ್ಯಕ್ತವಾಗುತ್ತದೆ.

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ಟೆಂಡರ್ ಕರೆದರೆ ಕೆಲಸ ತಡವಾಗುತ್ತದೆ. ೧೯೮೨ರ ಮಾರ್ಚ್‌ನಲ್ಲಿ ಮಂಜೂರಾಗಿರತಕ್ಕ ಕೆಲಸ ೧೯೮೪ರ ಮಾರ್ಚ್ ಆದರೂ ಪ್ರಾರಂಭವಾಗಿಲ್ಲ ಆದಕ್ಕೆ ಆಡಳಿತಾತ್ಮಕ ಮಂಜೂರಾತಿಯೂ ದೊರೆತಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಇನ್ನು ಫರ್‌ಫಾರ್ಮೆನ್ಸ್ ಬಡ್ಜೆಟ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಮಾಜಿ ನೀರಾವರಿ ಸಚಿವರು ಏನು ಫರ್‌ಫಾರ್ಮೆನ್ಸ್ ಆಗಿದೆ ಎಂಬ ಮಾತನ್ನು ಕೇಳಿದರು ಅಲ್ಲದೆ, ಎಲ್ಲಿಯೋ ಒಂದು ಮೀಟಿಂಗಿಗೆ ಹೋಗಿ ಗೇರುಬೀಜ ತಿಂದುಕೊಂಡು ಬರುತ್ತಾರೆಂದು ಹೇಳಿದರು. ಅವರೂ ಮಂತ್ರಿಗಳಾಗಿ ಅನುಭವ ಇದೆ. ಅವರು ಇಲಾಖಾಧಿಕಾರಿಗಳ ಬಗ್ಗೆ ತಿಳಿದುಕೊಂಡಿದ್ದಾರೆಂದು ಭಾವಿಸುತ್ತೇನೆ. ಅವರಿಂದ ಕೆಲಸ ಮಾಡಿಸಬೇಕೇ ಹೊರತು ಬೇರೆ ಯಾರಿಂದಲೂ ಮಾಡಿಸುವುದಕ್ಕಾಗುವುದಿಲ್ಲ. ತಾವು ಮಂತ್ರಿಗಳಾಗಿದ್ದ ಕಾಲದಲ್ಲಿ ಎಷ್ಟು ಫರ್‌ಫಾರ್ಮೆನ್ಸ್ ಆಗಿದೆ, ನಾವು ಮಂತ್ರಿಗಳಾಗಿರುವಾಗ ಎಷ್ಟಾಗಿದೆ ಎಂಬುದನ್ನು ಬೇಕಾದರೆ ಹೇಳುತ್ತೇನೆ. ಜನವರಿ ೧೯೮೧ ರಿಂದ ಡಿಸೆಂಬರ್ ೧೯೮೧, ಜನವರಿ ೧೯೮೨ ರಿಂದ ಡಿಸೆಂಬರ್ ೮೨, ಜನವರಿ ೧೯೮೩ ರಿಂದ ಡಿಸೆಂಬರ್ ೮೩ರ ವರೆಗಿನ ಪರ್‌ಫಾರ್ಮೆನ್ಸ್ ಅನ್ನು ಕೊಡುತ್ತೇನೆ. ಬರೀ ಒಂದು ವರ್ಷದ ಲೆಕ್ಕ ತೆಗೆದುಕೊಳ್ಳುವುದಿಲ್ಲ, ೩ ವರ್ಷದ್ದನ್ನೂ ಕೊಡುತ್ತೇನೆ. ಹಿಂದಿನ ಸರ್ಕಾರ ಮೇಜರ್ ಮತ್ತು ಮೀಡಿಯಂ ಪ್ರಾಜೆಕ್ಟುಗಳಿಗೆ ೧೨೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಸಕ್ತ ಹಣಕಾಸಿನ ವರ್ಷದ ಲೆಕ್ಕವನ್ನು ಕೊಡಿ ಹಳೆಯದನ್ನು ಕೊಟ್ಟರೆ ಏನು ಪ್ರಯೋಜನ ? ಆ ಕೆಲಸವನ್ನು ಮುಖ್ಯ ಮಂತ್ರಿಗಳು ಮಾಡಿದ್ದಾರೆ. ಅದರಿಂದ ಏನು ಉಪಯೋಗವಾಗುವುದಿಲ್ಲ ನಿಮ್ಮ ಹಿತಕ್ಕೆ ನಾನು ಹೇಳುವುದೇನೆಂದರೆ ೧೯೮೩ರ ಏಪ್ರಿಲ್‌ನಿಂದ ಮಾರ್ಚ್‌ವರೆಗೆ ಖರ್ಚಾದುದು ಏನಿದೆ ಆ ಲೆಕ್ಕ ಕೊಡಿ. ಹಳೆಯದೆಲ್ಲ ನಿಮ್ಮ ಲೆಕ್ಕಕ್ಕೆ ಹೋಗುವುದಿಲ್ಲ. ನೀವು ಅಧಿಕಾರಕ್ಕೆ ಬಂದಮೇಲೆ ಏನು ಮಾಡಿದ್ದೀರಿ ಎಂಬುದನ್ನು ಹೇಳಿ. ಕಳೆದ ಜನವರಿಯಿಂದ ಇಲ್ಲಿಯವರೆಗಿನ ಲೆಕ್ಕ ಕೊಟ್ಟರೆ ಅದು ನಿಮ್ಮ ಲೆಕ್ಕಕ್ಕೆ ಹೋಗುತ್ತದೆ, ಆ ಲೆಕ್ಕವನ್ನು ಕೊಟ್ಟರೆ ವಾಸ್ತವವಾದ ಖರ್ಚು ಎಷ್ಟು ಎಂಬುದು ಗೊತ್ತಾಗುತ್ತದೆ. ಅದನ್ನು ಬಿಟ್ಟು ಸಭೆಗೆ ಏಕೆ ತಪ್ಪು ಮಾಹಿತಿ ಕೊಟ್ಟು ಸಭೆಯನ್ನು ತಪ್ಪುದಾರಿಗೆ ಎಳೆಯುತ್ತೀರಿ ?

ಶ್ರೀ ಹೆಚ್.ಡಿ ದೇವೇಗೌಡ.—೧೯೮೦-೮೧ರದ್ದು ಎಂದರೆ ಜನವರಿ ೮೧ ರಿಂದ ಮಾರ್ಚ್ ೮೧ ರವರೆಗೆ ಖರ್ಚಾಗಿರುತ್ತದೆ. ಏಕೆಂದರೆ ಅದು ಪೂರ್ಣ ಕೆಲಸದ ಕಾಲ. ನಿಮ್ಮ ಕೈಗೆ ಸರ್ಕಾರ ಬಂದಾಗ ಆಗಿರತಕ್ಕ ಖರ್ಚುವೆಚ್ಚಗಳ ಲೆಕ್ಕವನ್ನೆಲ್ಲ ನಾನು ಇಲ್ಲಿ ಇಟ್ಟುಕೊಂಡಿದ್ದೇನೆ. ಸಮಾಧಾನವಾಗಿರಿ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಲೆಕ್ಕ distorted.

ಶ್ರೀ ಎಚ್. ಡಿ. ದೇವೇಗೌಡ.—ಒಂದು ವರ್ಷದ್ದು ನಾನು ಹೇಳಿದೆ. ಮುಂದಿನದನ್ನು ಈಗ ಹೇಳುತ್ತೇನೆ. ೧೧೬ ಕೋಟಿ ರೂಪಾಯಿಗಳನ್ನು ಇವರು ಖರ್ಚು ಮಾಡಿದ್ದಾರೆ. ಪೊಟೆನ್‌ಷಿಯಾಲಿಟಿ ಕ್ರಿಯೇಟ್ ಮಾಡಿದ್ದು ೪೧.೫೧೧ ಹೆಕ್ಟೇರುಗಳು. ೧೯೮೨ರಲ್ಲಿ ೧೨೧.೨೫ ಕೋಟಿ ಖರ್ಚು ಮಾಡಿದ್ದಾರೆ. ೪೩ ಸಾವಿರ ಹೆಕ್ಟೇರುಗಳಿಗೆ ನೀರಾವರಿ ಮಾಡಿದ್ದಾರೆ. ೧೯೮೩ರಲ್ಲಿ ೧೫೯.೩೭ ಕೋಟಿ ರೂಪಾಯಿ

ಖರ್ಚಾಗಿದೆ. ೭೦,೪೦೦ ಹೆಕ್ಟೇರುಗಳ ನೀರಾವರಿಯಾಗಿದೆ. ಏನೂ ಮಾಡಲೇ ಇಲ್ಲ, ಸುಮ್ಮನೆ ಗೇರುಬೀಜ ತಿಂದುಕೊಂಡು ಮನೆಗೆ ಹೋಗಿರಿ ಎಂದು ಹೇಳಿದರಲ್ಲ ಅದಕ್ಕೆ ಹೇಳಿದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಉತ್ತರ ಹೇಳಬೇಕು ಎಂದರೆ ಹೇಳುತ್ತೇನೆ ನಿಮಗೆ.

ಶ್ರೀ ಎಚ್. ಡಿ. ದೇವೇಗೌಡ.— ಪಿ.ಡಬ್ಲ್ಯು.ಡಿ. ಆಳ, ಉದ್ದ ಎಲ್ಲವನ್ನೂ ಇನ್ನೂ ಎರಡು ವರ್ಷ ಇದ್ದಿದ್ದರೆ ತಿಳಿದುಕೊಳ್ಳುತ್ತಿದ್ದೀರಿ. ಅದನ್ನು ತಿಳಿದುಕೊಳ್ಳಬೇಕಾದರೆ ಕಷ್ಟಪಡಬೇಕಾಗುತ್ತದೆ. ನಮ್ಮ ವಿರೋಧಪಕ್ಷದ ನಾಯಕರು ಈ ವರ್ಷ ಎಷ್ಟು ಖರ್ಚು ಮಾಡುತ್ತಿದ್ದೀರಿ ಎಂದು ಕೇಳಿದರು. ೧೫೩ ಕೋಟಿ ರೂಪಾಯಿಗಳನ್ನು ಈ ವರ್ಷ ನಾವು ಖರ್ಚು ಮಾಡುತ್ತೇವೆ. ಭಾರಿ ನೀರಾವರಿ, ಮಧ್ಯಮ ನೀರಾವರಿ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಮಾರ್ಚ್ ೩೧ನೇ ತಾರೀಖಿನವರೆಗೆ ೧೫೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ೧೯೮೩ನೇ ಏಪ್ರಿಲ್ ೧ನೇ ತಾರೀಖಿನಿಂದ ೩೧ನೇ ಮಾರ್ಚ್‌ವರೆಗೆ ಖರ್ಚು ಮಾಡುವ ಹಣ ನಾನು ಹೇಳಿದ್ದು. ಇನ್ನು ವಿಶ್ವಬ್ಯಾಂಕಿನ ನೆರವಿನಿಂದ ಮಾಡುವ ಸಣ್ಣ ನೀರಾವರಿ ಯೋಜನೆ ಬಗ್ಗೆ ಹೇಳುತ್ತೇನೆ. ಇದರಲ್ಲಿ ಎಷ್ಟರಮಟ್ಟಿಗೆ ನಾವು ಕೆಲಸ ಮಾಡಿದ್ದೇವೆ ಎಂಬುದನ್ನು ನೋಡೋಣ. ೧೯೮೨-೮೩ರಲ್ಲಿ ಅವರು ಮಂತ್ರಿಯಾಗಿದ್ದ ಕಾಲದಲ್ಲಿ ವಿಶ್ವಬ್ಯಾಂಕಿನ ನೆರವಿನಿಂದ ಖರ್ಚು ಮಾಡಿರತಕ್ಕ ಹಣ ೧೪೩ ಲಕ್ಷ ರೂಪಾಯಿಗಳು. ಆದರೆ ಇವತ್ತು ನಾವು ಈಗಾಗಲೇ ಖರ್ಚು ಮಾಡಿರತಕ್ಕದ್ದು ೫ ಕೋಟಿ ರೂಪಾಯಿಗಳು. ಹೋದವರ್ಷ ೧.೪೩ ಕೋಟಿ ರೂಪಾಯಿ ಖರ್ಚು ಮಾಡಿರುವ ಹಣದಲ್ಲಿ ನಮ್ಮದು ಮೂರು ತಿಂಗಳ ಪರ್‌ಫಾರ್ಮೆನ್ಸ್ ಕೂಡ ಸೇರುತ್ತದೆ. ನಾವು ಅಧಿಕಾರಕ್ಕೆ ಬಂದಮೇಲೆ ೬೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಇದೂ ಸೇರಿ ೧.೬೩ ಕೋಟಿ ರೂಪಾಯಿ ಆಗಿದ್ದರೆ ಈಗಾಗಲೇ ನಾವು ಈ ವರ್ಷ ೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗಹಣಕಾಸು ವರ್ಷದಲ್ಲಿ ಒಟ್ಟು ೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಮೈನರ್ ಇರಿಗೇಷನ್ ಪ್ರಾಜೆಕ್ಟಿಗೆವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸಿಂದ ಖರ್ಚ ಮಾಡುವ ಹಣ ನಾನು ಈಗ ಹೇಳಿದ್ದು. ಲಿಫ್ಟ್ ಇರಿಗೇಷನ್‌ನಲ್ಲಿ ಇದಕ್ಕೆ ಸಂಬಂಧಪಟ್ಟಂತೆ ೪೨೧ ಸ್ಕೀಮುಗಳು ಒಟ್ಟು ನಮ್ಮ ರಾಜ್ಯದಲ್ಲಿ ಇತ್ತು. ಇದು ಹಿಂದಿನ ಸರ್ಕಾರ ಮಾಡಿದ್ದೂ ಸೇರಿ. ಇದರಲ್ಲಿ ೮೩.೯೬೯ ಹೆಕ್ಟೇರುಗಳು ನೀರಾವರಿಯಾಗುತ್ತದೆ. ೩೧-೧-೧೯೮೪ರಲ್ಲಿ ೪೦೩ ಸ್ಕೀಮುಗಳಲ್ಲಿ ಕೆಲಸ ಮಾಡುತ್ತಿದ್ದು ಸಿಕ್ ಇರತಕ್ಕದ್ದು ೧೮, ಇದರಲ್ಲಿ ೧೧೯ ಲಕ್ಷ ರೂಪಾಯಿ ಪವರ್ ಚಾರ್ಜಸ್ ಕೊಟ್ಟಿದ್ದೇವೆ. ೨೨೩ ಹೊಸ ಸ್ಕೀಮುಗಳನ್ನು ತೆಗೆದುಕೊಳ್ಳಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ. ೧೯೮೩-೮೪ರಲ್ಲಿ ಇದಕ್ಕೆ ೧೨೪.೯೧ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ೧೯೮೪-೮೫ರಲ್ಲಿ ೧೫೦.೫೧ ಲಕ್ಷ ರೂಪಾಯಿ ಬಜೆಟ್ ಪ್ರಾವಿಷನ್ ಮಾಡಿದ್ದೇವೆ. ಈ ಮಧ್ಯೆ ೧ ಕೋಟಿ ೨೯ ಲಕ್ಷ ರೂಪಾಯಿಗಳನ್ನು ಪವರ್ ಚಾರ್ಜಸ್ under ೩೦೬ ನಾವೇ ಕಟ್ಟುತ್ತಿದ್ದೇವೆ. ರಿಪೇರ್ಸ್ ಮತ್ತು ಮೆಂಟೆನೆನ್ಸ್‌ನಲ್ಲಿ ಇದನ್ನು ಕಟ್ಟುತ್ತಿದ್ದೇವೆ. ವಾಟರ್ ರೇಟ್ ೩೦ ಕೋಟಿ ರೂಪಾಯಿ ಬರುತ್ತದೆ. ಇಷ್ಟೆಲ್ಲಾ ಕೆಲಸ ಮಾಡಿದರೂ ಯಾವುದೇ ಆದಾಯ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ ಮೆಂಟೆನೆನ್ಸ್ ಚಾರ್ಜಸ್ ನಾವು ಒಂದು ಎಕರೆಗೆ ೭೦ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇವತ್ತಿನ ದರದಲ್ಲಿ ಇದರಿಂದ ಸರಿಯಾಗಿ ಮೈಂಟೇನ್ ಮಾಡುವುದಕ್ಕಾಗುವುದಿಲ್ಲ. ೭ನೇನೀರಾವರಿ ಮಂತ್ರಿಗಳ ಕಾನ್‌ಫರೆನ್ಸ್‌ನಲ್ಲಿ ೧೦೦ ರೂಪಾಯಿಗಳನ್ನಾದರೂ excluding the cost of establishment ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಆ ದಿಸೆಯಲ್ಲಿ ಸರ್ಕಾರ ಹಣ ಖರ್ಚು ಮಾಡುವುದಕ್ಕೆ ಹಣದ ಕೊರತೆ ಇದ್ದರೂ ಪ್ರಯತ್ನ ಮಾಡುತ್ತೇವೆ. State Monitering Cell ಮಾಡಬೇಕೆಂದು ಮಾಡಿದ್ದೇವೆ. Physical performance, financial performance correlate ಮಾಡುವುದಕ್ಕೆ ಸೆಲ್ ಕ್ರಿಯೇಟ್ ಮಾಡಬೇಕೆಂದು ಮಾಡಿದ್ದೇವೆ. ಲೈನ್ ಮ್ಯಾನೇಜ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟನ್ನು ಗುಲ್ಬರ್ಗ ಜಿಲ್ಲೆಯ ಭೀಮರಾಯನ ಗುಡಿಯಲ್ಲಿ ತೆರೆಯಬೇಕೆಂದು ಮಾಡಿದ್ದೇವೆ. ಮೇನ್‌ಟೆನೆನ್ಸ್ ಮತ್ತು ವಾಟರ್ ಮ್ಯಾನೇಜ್‌ಮೆಂಟಿಗೆ ಅಧಿಕಾರಿಗಳನ್ನು ತರಬೇತಿ ಮಾಡುವುದಕ್ಕೆ ಈ ಒಂದು ಸಂಸ್ಥೆಯನ್ನು ಮಾಡಬೇಕೆಂದಿದ್ದೇವೆ. ಇದಲ್ಲದೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ರಚನೆ ಮಾಡಬೇಕೆಂದು ಮಾಡಿದ್ದೇವೆ. 'ಕಾಡಾ' ದಲ್ಲಿ ಕ್ರಾಪಿಂಗ್‌ಪ್ಯಾಟರ್ನ್ ಉಲ್ಲಂಘನೆ ಮಾಡುತ್ತಾರೆ. ಅಥವಾ ಇನ್ನು ಯಾವುದಾದರೂ ಕಾನೂನು ಉಲ್ಲಂಘನೆ ಮಾಡುತ್ತಾರೆ. ಅದಕ್ಕಾಗಿ ಮೊಬೈಲ್ ಕೋರ್ಟ್ ಮಾಡಬೇಕೇ ಅಥವಾ ಫ್ಲೈಯಿಂಗ್ ಸ್ಕ್ವಾಡ್ ಮಾಡಬೇಕೇ

ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಒಂದು ಕಡೆಯಿಂದ ಮುಚ್ಚಿಕೊಂಡು ಹೋಗಿ ಕೊನೇ ಹಂತದಲ್ಲಿ ನೀರು ತರಬೇಕೇ ಅಥವಾ ಡಿಸ್ಟ್ರಿಬ್ಯೂಟರ್‌ನಲ್ಲಿ ಏನಾದರೂ ಬದಲಾವಣೆ ಮಾಡಬೇಕೇ ಈ ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡುವುದಕ್ಕೆ ಎಕ್ಸ್‌ಪರ್ಟ್ಸ್ ಕಮಿಟಿಯನ್ನು ನೇಮಕ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಸರ್ಕಾರ ಈ ಬಗ್ಗೆ ಶೀಘ್ರವಾಗಿ ನಿರ್ಣಯ ಮಾಡಿ ತೀರ್ಮಾನವನ್ನು ಸಭೆಯ ಮುಂದೆ ಇಡುತ್ತದೆ. ಕಾಲ ಕಡಿಮೆ ಇರುವುದರಿಂದ ನೀರಾವರಿ ಬಗ್ಗೆ ಇಷ್ಟು ಮಾತ್ರ ಸೂಕ್ಷ್ಮವಾಗಿ ಹೇಳುತ್ತೇನೆ, ಇನ್ನೂ ನ್ಯಾಷನಲ್ ಹೈವೇ ಬಗ್ಗೆ ಮಾನ್ಯ ವಿರೋಧಪಕ್ಷದ ಉಪನಾಯಕರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ನೀವೇನೂ ಪ್ರಯತ್ನ ಮಾಡಲೇ ಇಲ್ಲ ಹಾಗೆ ಹೀಗೆ ಎಂದು ಹೇಳಿ ಸರ್ಕಾರದ ಬಗ್ಗೆ ಟೀಕೆ ಮಾಡಿದರು. ಬಹಳ ಸಂತೋಷ. ಆದರೆ ಆ ದಿಸೆಯಲ್ಲಿ ಕೆಲಸ ಮಾಡುವ ಪ್ರಯತ್ನ ಮಾಡಿದ್ದೇವೆ. ದುರ್ದೈವ ಎಂದರೆ ನಮ್ಮವರೇ ಮಂತ್ರಿಗಳಾಗಿದ್ದಾಗ ಒಂದು ಕಿಲೋಮೀಟರ್ ಕೂಡ ರಸ್ತೆ ಸೇರಿಸಲಿಲ್ಲ. ಕೇಂದ್ರದಲ್ಲಿ ನಮ್ಮವರು ಆಡಳಿತ ನಡೆಸಿದಂಥ ಕಾಲದಲ್ಲಿ ಮಾಡಿದ್ದನ್ನು ನಾನು ಹೇಳಿದ್ದು. ರಾಷ್ಟ್ರೀಯ ಹೆದ್ದಾರಿ ವಿಚಾರದಲ್ಲಿ ನಾನು ಅರ್ಜಿ ಬರೆಯಬಹುದೇ ಹೊರತು ಅಲ್ಲಿ ಕೂತು ಆರ್ಡರ್ಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ರಾಜ್ಯದಲ್ಲಿ ೧೯೬೭೮ ಕಿಲೋಮೀಟರ್ ರಾಷ್ಟ್ರೀಯ ಹೆದ್ದಾರಿಗಳಿವೆ. ಇದನ್ನು ಹೆಚ್ಚು ಮಾಡುವ ಬಗ್ಗೆ ಹಿಂದಿನ ಸರ್ಕಾರದವರೂ ಶಿಫಾರಸ್ಸು ಮಾಡಿದ್ದಾರೆ ನಾವೂ ಶಿಫಾರಸ್ಸು ಮಾಡಿದ್ದೇವೆ. ೨೪೩೮ ಕಿಲೋಮೀಟರ್ ಹೊಸದಾಗಿ ಸೇರಿಸಬೇಕೆಂದು ನಾವು ಪ್ರತಿಪಾದನೆ ಮಾಡಿದ್ದೇವೆ. ಕಾಲ ಕಡಿಮೆ ಇರುವುದರಿಂದ ಇದರ ಬಗ್ಗೆ ವಿವರಣೆ ಕೊಡುವುದಿಲ್ಲ. ಹಲವಾರು lingering works ಕಂಪ್ಲೀಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ೫೫ ಮೈನರ್ ವರ್ಕ್ಸ್ ಈ ವರ್ಷಕ್ಕೆ ಮಂಜೂರಾತಿ ಆಗಿದೆ. ಮೇಜರ್ ವರ್ಕ್ಸ್‌ಗೆ ೧ ಕೋಟಿ ರೂಪಾಯಿ ಎಸ್ಟಿಮೇಟ್ ಆಗಿದೆ. ಆ ಕೆಲಸವನ್ನು ತೆಗೆದುಕೊಳ್ಳುವ ಹಂತದಲ್ಲಿ ಕೆಲಸ ನಡೆಯುತ್ತಿದೆ. ನಾನು ಈ ವಿಚಾರದಲ್ಲಿ ವಿವರವಾಗಿ ಹೇಳದೆ ಹಾರಿಕೆ ಉತ್ತರ ಕೊಡುತ್ತಿದ್ದೇನೆ. ದಯವಿಟ್ಟು ಕ್ಷಮಿಸಬೇಕು. 'ಕಾಡಾ' ದಲ್ಲಿ ಅಚೀವ್‌ಮೆಂಟ್ ಏನಾಗಿದೆ ಎಂದು ಹೇಳಿದರು. 'ಕಾಡಾ' ಪ್ರಾರಂಭವಾದಾಗಿನಿಂದ ೧೯೮೦-೮೧ರಲ್ಲಿ ೬ ಕೋಟಿ ೯೪ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅಚೀವ್‌ಮೆಂಟ್ ೨೨,೫೬೦ ಹೆಕ್ಟೇರ್‌ಗಳಿಗೆ ಅನುಕೂಲವಾಗಿದೆ.

೧೯೮೧-೮೨ರಲ್ಲಿ [illegible] ಕೋಟಿ ೫೦ ಲಕ್ಷ ರೂಪಾಯಿ ಖರ್ಚು ಆಗಿದ್ದು ೫೬ ಸಾವಿರ ಹೆಕ್ಟೇರ್ ಅಚ್‌ಕಟ್ ಆಗಿದೆ. ಇದರಲ್ಲಿ ಫೀಲ್ಡ್ ಕಾಲುವೆಗಳ ನಿರ್ಮಾಣ ಹಾಗೂ ಇತರ ಕೆಲಸಗಳೂ ಸೇರಿವೆ. ೧೯೮೨-೮೩ರಲ್ಲಿ ೧೦ ಕೋಟಿ ೧೬ ಲಕ್ಷ ರೂಪಾಯಿ ಖರ್ಚು ಮಾಡಿದ್ದು ೩೬,೯೧೬ ಎಕರೆ ಅಚ್‌ಕಟ್ ಆಗಿದೆ. ೧೯೮೩-೮೪ರಲ್ಲಿ ೧೬ ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ನಾನು ಈಗ ಹೇಳಿದ ವಿಷಯ ಕಾಡಾಗೆ ಸಂಬಂಧಪಟ್ಟಿದ್ದು ಆಗಿದೆ. ಇಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

SRI M. VEERAPPA MOILY.—Achievement-wise, it is illusory, Of-couser for the public consumption, we can say July to June is the water year. To which Government the credit goes? The last year's credit will go to the previous Government. It [illegible] not go to your credit. I can understand if.........I can give credit: Otherwise, upto June 1983, the credit goes to us and not to you. just for arithmetic purpose, it is alright but for practical purpose, it will not serve any purpose.

ಶ್ರೀ ಎಚ್. ಡಿ. ದೇವೇಗೌಡ.—ಜೂನ್ ಟು ಜುಲೈ ತೆಗೆದುಕೊಳ್ಳುವ ಬಗ್ಗೆ ಹೇಳುತ್ತಿದ್ದೀರಿ. ನಾವು ೧೯೮೦-೮೧ರ ಬಗ್ಗೆ ಹೇಳುವಾಗ ೧೯೭೯-೮೦ರ ಬಗ್ಗೆ [illegible] ಮಾನ್ಯ ದೇವರಾಜ ಅರಸ್ ಅವರ ಆಡಳಿತದ ಕಾಲದ ಲೆಕ್ಕವನ್ನು ನಮ್ಮ ಖಾತೆಗೆ [illegible] ಹಾಗೆ ಆಗುತ್ತದೆಯಲ್ಲವೇ? what does it mean? When once I quote certain figures, there must be some relevance. If you want to dispute it, then I will pass it on to you.

SRI M. VEERAPPA MOILY.—You cannot credit for your bag.

ಶ್ರೀ ಎಚ್.ಡಿ.ದೇವೇಗೌಡ.—ಇನ್ನು ನಾನು ಲಿಂಗರಿಂಗ್ ವರ್ಕ್ಸ್ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. ಕಾಳಿ ಸೇತುವೆ ಬಗ್ಗೆ ಹೋದ ಸಾರಿ ೨೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಯಿತು. ನಂಜನಗೂಡಿನ ಸೇತುವೆ ಹೇಗೆ ಇತ್ತು ಎಂಬುದು ಮಾನ್ಯ ಮಹದೇವ್ ಅವರಿಗೇ ಗೊತ್ತುಂಟು. ಅದನ್ನು ಈಗ ಪೂರ್ತಿ ಮಾಡಲಾಗಿದೆ. ಇನ್ನು ಕೇರಳಾಪುರ ಬ್ರಿಡ್ಜ್ ಬಗ್ಗೆ ಹೇಳುವುದಾದರೆ ಇದು ೧೯೭೯ರಲ್ಲಿ ಮಂಜೂರು ಆಗಿದ್ದು, ಕಳೆದ ೧೯೮೩ ರಲ್ಲಿ ಕಂಪ್ಲೀಟ್ ಆಗಿದೆ. ಧಾರವಾಡ ಜಿಲ್ಲೆಯ ಸುಣ್ಣಕಲ್ ಸೇತುವೆ ಬಗ್ಗೆ ೬೬ ಲಕ್ಷ ರೂಪಾಯಿ ಖರ್ಚು ಆಗಿದ್ದು ಇದುವರೆವಿಗೂ ಆ ಸೇತುವೆ ಪೂರ್ಣವಾಗಿಲ್ಲ. ಮಾನ್ಯ ಸದಸ್ಯರು ಈ ಜನತಾ ಸರ್ಕಾರ ಆಮೆ ವೇಗದಲ್ಲಿ ಹೋಗುತ್ತಿದೆ ಎಂದು ಹೇಳಿದರು. ಇದೆಲ್ಲಾ ಏನು ವಿಧಾನವಾಗತಕ್ಕ ಲಕ್ಷಣವೇ? ಮಹದೇವಪುರ ಸೇತುವೆ ೧೯೭೦ರಲ್ಲಿ ಮಂಜೂರಾಯಿತು. ಅದರ ಬಗ್ಗೆ ೧೦–೧೨ ಲಕ್ಷ ರೂಪಾಯಿ ಖರ್ಚು ಆಗಿದೆ. ಆದರೆ ಈ ಸೇತುವೆ ಬಗ್ಗೆ ೧೯೮೩ರವರೆಗೆ ಯಾರೂ ತಿರುಗಿ ನೋಡಿರಲಿಲ್ಲವೆಂಬುದು ಮಾನ್ಯ ಚೌಡಯ್ಯನವರಿಗೆ ಗೊತ್ತು. ಇವತ್ತು ಅಲ್ಲಿ ಏಜೆನ್ಸಿ ಫಿಕ್ಸ್ ಮಾಡಿದ್ದು ಕೆಲಸ ನಡೆಯುತ್ತಿದೆ. ಅಲ್ಲಿ ಹಣ ಖರ್ಚು ಮಾಡಿ ೨–೩ ಪಿಲ್ಲರ್ಸ್ ಮಾತ್ರ ನಿಲ್ಲಿಸಿದ್ದಾರೆ. ಮುಂದಿನ ಕೆಲಸ ಈಗ ತೆಗೆದುಕೊಳ್ಳಲಾಗಿದೆ. ಇವತ್ತು ಅಲ್ಲಿ ಆಸಕ್ತಿಯಿಂದ ಕೆಲಸ ನಡೆಯುತ್ತಿದೆ. ಕಟ್ಟಿಗಾಜಿನಹಳ್ಳಿ ಸೇತುವೆ ಬಗ್ಗೆ ಮಾನ್ಯ ಹನುಮಂತಯ್ಯನವರು ರೈಲ್ವೆ ಮಂತ್ರಿಗಳಾಗಿದ್ದಾಗ ಅಡಿಗಲ್ಲು ಹಾಕಿದ್ದರು ಆದರೆ ಅದರ ಕೆಲಸ ಇವತ್ತು ಪ್ರಾರಂಭವಾಗಿದೆ. ಇದರ ಕಾಸ್ಟ್ ಸುಮಾರು ೧ ಕೋಟಿ ರೂಪಾಯಿ ಆಗುತ್ತದೆ. ಇದೇ ರೀತಿ ಇಗ್ಲೂರ್ ಪಿಕ್ ಅಪ್ ಇದೆ. ೪ ವರ್ಷದಲ್ಲಿ ಅಲ್ಲಿನ ಅಧಿಕಾರಿಗಳು ಅರ್ಧಂಬರ್ಧ ಕೆಲಸ ಮಾಡಿ ಹೋಗಿದ್ದಾರೆ. ಅಲ್ಲಿ ಸುಮಾರು ೧೮ ಲಕ್ಷ ರೂಪಾಯಿ ಖರ್ಚು ಮಾಡಿದ್ದು ಪತ್ತೆ ಇಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ ಈ ಒಂದು ಇಲಾಖೆಗೆ ಒಂದು ಹೊಸ ಸ್ವರೂಪ ಕೊಡಬೇಕಾಗಿದೆ ಎಂದು ಈ ಬಗ್ಗೆ ಜನತೆಯಲ್ಲಿ ಕೆಟ್ಟಭಾವನೆ ಇಟ್ಟುಕೊಳ್ಳಬಾರದು ಎನ್ನುವ ಬಗ್ಗೆ ನಾವು ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತೇನೆ. ನಾನು ಈ ಬಗ್ಗೆ ಹಿಂದಿನವರನ್ನು ದೂರುವುದಕ್ಕೆ ಹೋಗುವುದಿಲ್ಲ. ಅರ್ಕಾವತಿಗೆ ೧೯೭೭ರಲ್ಲಿ ಅಡಿಗಲ್ಲು ಹಾಕಿದ್ದು ೨೦–೨೨ ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಈ ಬಗ್ಗೆ ಟೆಂಡರ್‌ಗಳು ಫೈನಲೈಸ್ ಆಗಿದ್ದು ಈ ಕೇಸವನ್ನು ಆದಷ್ಟು ಬೇಗ ಪ್ರಾರಂಭ ಮಾಡುವವರಿದ್ದೇವೆ. ನಾನು ಈಗ ಲಿಂಗ್ರಿಂಗ್ ವರ್ಕ್ಸ್ ಬಗ್ಗೆ ಸುಮ್ಮನೆ ಸಟೇಷನ್ಸ್ ಕೊಟ್ಟೆ ಅಷ್ಟೇ. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಮೇಲೆ ಭಾಷಣ ಮಾಡುವ ಸಮಯದಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ೪ ಯೋಜನೆಗಳನ್ನು ಪ್ರಕಟಪಡಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಹಳ್ಳಿ ಹೆದ್ದಾರಿ ಯೋಜನೆ ಬಗ್ಗೆ ಹೇಳಬೇಕೆಂದರೆ ಇವತ್ತಿನ ದಿವಸ ೧೨೦೦ ಹಳ್ಳಿಗಳಿಗೆ ರಸ್ತೆಗಳೇ ಇಲ್ಲ ಅವಕ್ಕೆ ರಸ್ತೆ ಸಂಪರ್ಕ ಕಲ್ಪಿಸಬೇಕಾಗಿದೆ. ಈ ಬಗ್ಗೆ ಸುಮಾರು ೨೪೫೦ ಕಿಲೋಮೀಟರ್ ರಸ್ತೆ ಮಾಡಬೇಕು ಅದಕ್ಕೆ ಆಗತಕ್ಕ ವೆಚ್ಚ ಸುಮಾರು ೨೫ ಕೋಟಿ ರೂಪಾಯಿಗಳು. ೧ ಕಿ. ಮೀಟರ್ ರಸ್ತೆಗೆ ಸುಮಾರು ೧ ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ಲೆಕ್ಕ ಇಟ್ಟಿದ್ದೇವೆ. ಎಂದರೆ ಅಲ್ಲಿ ಸರ್ವಋತು ರಸ್ತೆಗಳು ಆಗಬೇಕಾಗುತ್ತದೆ. ಮಾನ್ಯ ಸದಸ್ಯರು ಮಾತನಾಡುವಾಗ ಈಗಾಗಲೇ ಎಂ. ಎನ್. ಪಿ. ರಸ್ತೆಗಳು ಹಾಗೂ ಇನ್ನಿತರ ರಸ್ತೆಗಳು ಈ ಬಗ್ಗೆ ಇವೆ ಎಂದು ನೀವು ಒಂದು ರೀತಿಯ mokery ಮಾಡುವುದಕ್ಕೆ ಹೊರಟಿದ್ದೀರಿ ಎಂದು ಹೇಳಿದರು. Minimum needs programme is a centrally assistance programme. ಅದು ನನಗೆ ಗೊತ್ತಿದೆ. ಅದನ್ನು ೧ ಸಾವಿರ ಜನಸಂಖ್ಯೆ ಇದ್ದರೆ ಮಾತ್ರ ತೆಗೆದುಕೊಳ್ಳಬೇಕೆಂದು ಇದೆ. ಹಾಗಿಲ್ಲದೇ ಅದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. This is bottleneck. ಎಂದರೆ ಆ ಪ್ರಶ್ನೆ ನಮ್ಮ ಮುಂದೆ ಇಲ್ಲ ೧ ಸಾವಿರ ಜನಸಂಖ್ಯೆಗಿಂತಾ ಕಡಿಮೆ ಇರತಕ್ಕ ಹಳ್ಳಿ ಇರಬಹುದು. ಹ್ಯಾಮ್ಲೆಟ್ ಇರಬಹುದು, ಈ ಎಲ್ಲಾ ಗ್ರಾಮಗಳಲ್ಲಿ ೨ ವರ್ಷದಲ್ಲಿ ನಾವು ಒಂದು ಜನತಾ ಕಾರ್ಯಕ್ರಮ ಎಂದು ಹೇಳಿ ಬಜೆಟ್‌ನಲ್ಲಿ ೨೫ ಲಕ್ಷ ರೂಪಾಯಿ ಇಟ್ಟಿದ್ದೇವೆ. ಈ ಬಗ್ಗೆ ವಿವರಕ್ಕೆ ನಾನು ಆಮೇಲೆ ಬರುತ್ತೇನೆ. ಇಷ್ಟು ಹಣ ಇಟ್ಟು ಈ ಒಂದು ಸ್ಕೀಮ್‌ನ್ನು ಘೋಷಣೆ ಮಾಡಿದ್ದೇವೆ. ಸುಮಾರು ೧೨೦೦ ಹಳ್ಳಿಗಳಿಗೆ ಸುಮಾರು ೨೪೫೦ ಕಿಲೋಮೀಟರ್ ರಸ್ತೆಯನ್ನು ೨ ವರ್ಷಗಳಲ್ಲಿ ಮಾಡಿ ಮುಂದುವರಿಸಿಕೊಂಡು ಹೋಗತಕ್ಕ ಕಾರ್ಯಕ್ರಮ ಇದು ಇನ್ನು ಸೇತುಬಂಧನದ ಬಗ್ಗೆ ನಮ್ಮ ನಾಯಕರು

ಬಹಳ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದರು. ನಾನ್ ಪಿ.ಡಬ್ಲ್ಯು.ಡಿ. ರಸ್ತೆಗಳು ಎಷ್ಟೇ ಅಗಲ ಇರಬಹುದು ೬ ಮೀಟರ್ ಇರಬಹುದು, ೩ ಮೀಟರ್ ಇರಬಹುದು, ೨ ಮೀಟರ್ ಇರಬಹುದು. ಈ ಬಗ್ಗೆ ೫ ಲಕ್ಷ ರೂಪಾಯಿಯನ್ನು ಪ್ರತಿವರ್ಷ ಇಟ್ಟುಕೊಂಡಿದ್ದೇವೆ. ಇವತ್ತಿನ ದಿವಸ ಹಳ್ಳಿಯಲ್ಲಿ ರೈತ ಬೆಳೆದದ್ದನ್ನು ಸಾಗಾಣಿಕೆ ಮಾಡಬೇಕಾಗುತ್ತದೆ, ಹಾಗೂ ಆತನಿಗೆ ಬೇಕಾಗತಕ್ಕ ಗೊಬ್ಬರವನ್ನು ಹಳ್ಳಿಗೆ ತೆಗೆದುಕೊಂಡು ಹೋಗಬೇಕಾಗುತ್ತದೆ, ಈ ಬಗ್ಗೆ ಆತನಿಗೆ ಬಹಳ ತೊಂದರೆ ಇದೆ. ಇದನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಈ ಒಂದು ಕಾರ್ಯಕ್ರಮದಿಂದ, ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲ ಆಗಬೇಕೆನ್ನುವ ದೃಷ್ಟಿಯಿಂದ ತಂದಂತಹ ಕಾರ್ಯಕ್ರಮ ಇದಾಗಿದೆ. ೨ ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮ ಮಾಡಬೇಕೆಂಬುದು ನಮ್ಮ ಪ್ರಾಮಾಣಿಕ ಉದ್ದೇಶವಾಗಿದ್ದು ಕೇವಲ ಘೋಷಣೆಗೋಸ್ಕರ ಇದನ್ನು ನಾವು ಇಡಬೇಕಾಗಿಲ್ಲ.

SRI MALLIKARJUNA M. KHARGE.—Each constituency will get Rs. 20,000.

ಶ್ರೀ ಎಚ್ ಡಿ. ದೇವೇಗೌಡ.—ಕ್ಷೇತ್ರವಾರು ಹಂಚುವ ವ್ಯವಸ್ಥೆ ಬಗ್ಗೆ ಹೇಳುತ್ತಿದ್ದೀರಿ. ಇವತ್ತು ೧ ಸೇತುವೆಗೆ ೨೫ ಸಾವಿರ ಖರ್ಚಾಗಬಹುದು ಅಥವಾ ೫ ಸಾವಿರ ಖರ್ಚಾಗಬಹುದು ಇಲ್ಲವೇ ಇನ್ನೂ ಕಡಿಮೆ ಖರ್ಚು ಆಗಬಹುದು. ಇವತ್ತು ಸರಾಸರಿ ೨೫ ಸಾವಿರಕ್ಕೆ ಒಂದು ಸೇತುವೆ ಎಂದರೂ ೧ ಲಕ್ಷಕ್ಕೆ ನಾಲ್ಕು ಸೇತುವೆಯಂತೆ ಸುಮಾರು ೮೦೦ ಸೇತುವೆಗಳಾಗುತ್ತವೆ. ಕೆಲವು ಕಡೆ ಪೈಪ್ ಕಲ್ವರ್ಟುಗಳನ್ನು ಹಾಕಿಸೇತುವೆ ನಿರ್ಮಾಣ ಮಾಡಹಬುದಾಗಿದೆ. It does not matter. Our intention is to spend money for this, ಇವತ್ತು ಈ ಬಗ್ಗೆ ಇಟ್ಟಿರತಕ್ಕ ಹಣ ಬಹಳ ಕಡಿಮೆ ಎಂದಿದ್ದಾರೆ. ಇದು ನಿಜ. ಈ ಕಾರ್ಯಕ್ರಮವನ್ನು ಬಡ್ಜೆಟಿನಲ್ಲಿ ಸೇರಿಸಿದ್ದೇವೆ. ಇನ್ನು ಗಂಗಾಕಲ್ಯಾಣ ಎಂಬು ಒಂದು ಕಾರ್ಯಕ್ರಮ ಇದೆ.

೬-೩೦ ಪಿ.ಎಂ.

ಗಂಗಾ ಕಲ್ಯಾಣ ಯೋಜನೆಯಲ್ಲಿ ೧೦೦೦ ಸಾಮೂಹಿಕ ಬಾವಿಗಳನ್ನು ಹರಿಜನ ಗಿರಿಜನರಿಗೆ, ಮತ್ತು ಹಿಂದುಳಿದವರಿಗೆ ತೆಗೆಯಬೇಕೆಂದು ಯೋಜನೆಯಲ್ಲಿ ಅಳವಡಿಸಿದ್ದೇವೆ. ರೆವಿನ್ಯೂ ಡಿಪಾರ್ಟ್‌ಮೆಂಟ್ ಮತ್ತಿತರ ಡಿಪಾರ್ಟ್‌ಮೆಂಟ್‌ನವರು ಬಾವಿಗಳನ್ನು ತೆಗೆಸತಕ್ಕದ್ದು ಬೇರೆ. ಸಾಲಗಳನ್ನು ತೆಗೆದುಕೊಂಡು ಸಾಲ ತೀರಿಸುವಾಗ ಸಬ್ಸಿಡಿ ಪಡೆದುಕೊಂಡು ತೆಗೆಯತಕ್ಕ ಬಾವಿಗಳು ಬೇರೆ. ಈಗ ನಾವೇ ಬಾವಿಗಳನ್ನು ತೆಗೆದು ಪಂಪುಸೆಟ್ಟುಗಳನ್ನು ಹಾಕಿಸಿ ಅದರ ಮೈನ್‌ಟೆನೆನ್ಸ್ ಮಾಡಬೇಕೆಂದು ಯೋಜನೆಯಲ್ಲಿ ಇಟ್ಟುಕೊಂಡಿದ್ದೇವೆ. ಅದರ ಬಗ್ಗೆ ಸೆಲೆಕ್ಟ್ ಮಾಡಲಿಕ್ಕೆ ಒಂದು ಸಮಿತಿ ಮಾಡುತ್ತೇವೆ. ಅದರಲ್ಲಿ ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನವರು ರೆವಿನ್ಯೂ ಡಿಪಾರ್ಟ್‌ಮೆಂಟಿನವರು, ಅದಕ್ಕೆ ಸಂಬಂಧಪಟ್ಟಂತೆ ಇತರೆ ಡಿಪಾರ್ಟ್‌ಮೆಂಟಿನವರು ಇರಬೇಕಾಗುತ್ತದೆ. ನಾನು ಸಾಕಷ್ಟು ಸ್ಥಳಗಳನ್ನು ನೋಡಿದ್ದೇನೆ. ಎಷ್ಟು ಕಡೆ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಕೆಲಸ ಪ್ರಾರಂಭ ಮಾಡಿದಮೇಲೆ ಹೇಳುತ್ತೇನೆ, ಇನ್ನು ಹತ್ತು ಸಾವಿರ ಕಿಲೋಮೀಟರ್ ರಸ್ತೆ ಹೊಸದಾಗಿ ತೆಗೆದು ಕೊಳ್ಳಬೇಕೆಂದು ಸರ್ಕಾರದ ಆಸೆ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಬಡ್ಜೆಟ್ ಭಾಷಣದಲ್ಲಿ ಒಂದು ಕಾನ್‌ಸ್ಟಿಟ್ಯುಯೆನ್ಸಿಗೆ ೨೫ ಕಿಲೋಮೀಟರ್ ರಸ್ತೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ೫೦ ಕಿಲೋಮೀಟರ್‌ವರೆಗೆ ಹೋಗೋಣ ಎಂದು ಹೇಳಿದ್ದೇನೆ. ೧೦ ಸಾವಿರ ಕಿಲೋಮೀಟರ್‌ವರೆಗೆ ರಾಜ್ಯದಲ್ಲಿ ಈ ರಸ್ತೆ ಕಾರ್ಯವನ್ನು ತೆಗೆದು ಕೊಳ್ಳಬೇಕೆಂದು ನನ್ನ ಮನಸ್ಸಿನ ಅನಿಸಿಕೆ ಇದೆ. ಅದಕ್ಕೆ ಅವರು ಸಮ್ಮತಿ ಕೊಟ್ಟಿದ್ದಾರೆ. ಇನ್ನು ಮೈನರ್ ಇರಿಗೇಷನ್ ಅಪೆಂಡಿಕ್ಸ್ (ಸಿ) ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ನಿಜ. ಒಂದು ಸಾವಿರ ರೂಪಾಯಿ ಟೋಕನ್ ಗ್ರಾಂಟ್ ಇಟ್ಟಿದ್ದೇವೆ, ೩೨ ಕೋಟಿ ರೂಪಾಯಿಗಳು ಮೈನರ್ ಇರಿಗೇಷನ್‌ಗೆ ಮತ್ತು ಹೊಸ ರೋಡ್ಸ್ ಅಂಡ್ ಬ್ರಿಡ್ಜಸ್‌ಗೆ ೩೦ ಕೋಟಿ ರೂಪಾಯಿಗಳನ್ನು ಹೀಗೆ ಒಟ್ಟು ೬೨ ಕೋಟಿ ರೂಪಾಯಿಗಳ ಒಂದು ಹೊಸ ಯೋಜನೆಯ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂಬ ಪ್ರಾಮಾಣಿಕ ಆಸ್ಥೆ ಇದೆ, ಇದು ಎಸ್ಟಿಮೇಟೆಡ್ ಕಾಸ್ಟ್. ಇನ್ನು ೧-೪-೮೪ರಿಂದ ಏಳನೇ ಫೈನಾನ್ಸ್ ಕಮಿಷನ್‌ನಿಂದ ಹಣ ಬರುವುದನ್ನು ನಿರೀಕ್ಷಿಸುತ್ತಿದ್ದೇವೆ. ಒಟ್ಟು ೬೨ ಕೋಟಿ ರೂಪಾಯಿಗಳ ಯೋಜನೆಯಲ್ಲಿ ಒಂದು ಕಾನ್‌ಸ್ಟಿಟ್ಯುಯೆನ್ಸಿಗೆ ಸುಮಾರು ೩೦ ಲಕ್ಷ ರೂಪಾಯಿ ಅಂದಾಜು ಬರುತ್ತದೆ. ಇರಿಗೇಷನ್ ಅಂಡ್ ಕಮ್ಯುನಿಕೇಷನ್

ಎರಡೂ ಸೇರಿ ಒಂದು ಕಾನ್‌ಸ್ಟಿಟ್ಯುಯೆನ್ಸಿಗೆ ೩೦ ಲಕ್ಷ ರೂಪಾಯಿ ಬರುತ್ತದೆ. ಇದರಲ್ಲಿ ಎಲ್ಲಿಯಾದರೂ ನ್ಯೂನತೆ ಇದ್ದರೆ ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರಾದ ಖರ್ಗೆಯವರ ಕಾನ್‌ಸ್ಟಿಟ್ಯೂಯೆನ್ಸಿಗೆ ೩೧ ಲಕ್ಷ ರೂಪಾಯಿ ಸೇರಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಗುಲ್ಬರ್ಗಕ್ಕೆ ಈ ವರ್ಷ ಎಷ್ಟು ಖರ್ಚು ಮಾಡುತ್ತೀರಾ ಅದನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗುಲ್ಬರ್ಗ ಜಿಲ್ಲೆಯಲ್ಲಿ ೯ ಆಸ್ಪತ್ರೆಗಳು ಸ್ಯಾಂಕ್ಷನ್ ಆಯಿತು ಒಂದು ಡಿಸ್ಟ್ರಿಕ್ಟ್ ಆಫೀಸ್ ಸ್ಯಾಂಕ್ಷನ್ ಆಯಿತು. ಆದರೆ ಯಾವ ಕೆಲಸ ಕೂಡ ಪ್ರಾರಂಭವಾಗಲಿಲ್ಲ ಬಡ್ಜೆಟ್ಟಿನಲ್ಲಿ ೪೦ ಲಕ್ಷ, ೩೦ ಲಕ್ಷ, ೩ ಲಕ್ಷ, ೨ ಲಕ್ಷ ಈ ರೀತಿ ಪ್ರಾವಿಜನ್ ಇದೆ. ಒಂದು ಕೂಡ ಪ್ರಾರಂಭವಾಗಿಲ್ಲ. ೩೧ ಲಕ್ಷ ಕೊಟ್ಟಿದ್ದೀರಿ ಆದರೆ ಒಂದು ಸಾವಿರ ರೂಪಾಯಿ ಪ್ರಾವಿಜನ್ ಮಾಡಿದ್ದೀರಿ. ಫೈನಾನ್ಸಿಯಲ್ ಕೋಡ್ ಪ್ರಕಾರ ಮೂರನೇ ಒಂದು ಭಾಗ ಬಡ್ಜೆಟ್ ಪ್ರಾವಿಜನ್ ಇದ್ದರೆ ಕೆಲಸ ಪ್ರಾರಂಭವಾಗುವುದು. ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಮತ್ತು ಟೆಕ್ನಿಕಲ್ ಸ್ಯಾಂಕ್ಷನ್ ಸಿಕ್ಕುವುದು. ಇಲ್ಲ ಅಂದರೆ ಅದು ಮುಂದಿನ ವರ್ಷ ಪ್ರಿಂಟ್ ಆಗುತ್ತದೆ, ಸ್ಪಿಲ್ ಓವರ್ ವರ್ಕ್‌ನಲ್ಲಿ ಇನ್‌ಕ್ಲೂಡ್ ಮಾಡುತ್ತಾರೆ.

ಶ್ರೀ ಹೆಚ್.ಡಿ. ದೇವೇಗೌಡ.—ಬಿಲ್ಡಿಂಗ್ ಬಗ್ಗೆ ಬಿಗಿ ಮುಷ್ಟಿ ಇಟ್ಟುಕೊಂಡಿದ್ದೇನೆ. ನಿಮ್ಮ ಜಿಲ್ಲೆಯ ಪ್ರಶ್ನೆಯೇ ಅಲ್ಲ. ಶಿವಮೊಗ್ಗಕ್ಕೆ ಮಿನಿ ವಿಧಾನ ಸೌಧ ಬಡ್ಜೆಟ್‌ನಲ್ಲಿ ಇನ್‌ಕ್ಲೂಡ್ ಆಗಿದೆ. ಬಿಲ್ಡಿಂಗ್‌ಗಳಿಗಿಂತಲೂ ಹೆಚ್ಚಾಗಿ ನಾವು ಸ್ವಲ್ಪ ಇರಿಗೇಷನ್ ಮತ್ತು ಕಮ್ಯುನಿಕೇಷನ್‌ಗೆ ಆದ್ಯತೆ ಕೊಡಬೇಕೆಂದು ಇದ್ದೇವೆ. ಮಿನಿ ವಿಧಾನ ಸೌಧಕ್ಕೆ ಕ್ಲಿಯರ್ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಿನಿ ವಿಧಾನ ಸೌಧ ಅಲ್ಲ, ಡಿಸ್ಟ್ರಿಕ್ಟ್ ಆಫೀಸ್ ಕಾಂಪ್ಲೆಕ್ಸ್ ಎಂದು ಮಾಡಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಿನಿ ವಿಧಾನ ಸೌಧ ಎಂದಾದರೂ ಕರೆದುಕೊಳ್ಳಿ ಅಥವಾ ಡಿಸ್ಟ್ರಿಕ್ಟ್ ಆಫೀಸ್ ಎಂದು ಬೇಕಾದರೂ ಕರೆದುಕೊಳ್ಳಿ, ನಾನು ಅದನ್ನು ಕ್ಲಿಯರ್ ಮಾಡಿಲ್ಲ, ಬಿಲ್ಡಿಂಗ್ಸ್‌ನಲ್ಲಿ ಸ್ವಲ್ಪ ನಮ್ಮ ಸಾಧನೆ ಹೇಳಿಕೊಳ್ಳುವ ಮಟ್ಟದಲ್ಲಿ ಇಲ್ಲ. ಆ ಹಣವನ್ನು ಬೇರೆ ಭಾಗಕ್ಕೆ ಡೈವರ್ಟ್ ಮಾಡಬೇಕೆಂಬುದು ನಮ್ಮ ಉದ್ದೇಶ. ಈ ಸದನದಲ್ಲಿ ಮಾತನಾಡುತ್ತಾ ಮಾನ್ಯ ವಿರೋಧ ಪಕ್ಷದ ಉಪನಾಯಕರು ಇರಿಗೇಷನ್‌ಗೆ ಹೆಚ್ಚು ಆದ್ಯತೆ ಕೊಡಿ ಎಂದು ಹೇಳಿದರು, ಆ ದೃಷ್ಟಿಯನ್ನು ಇಟ್ಟುಕೊಂಡೇ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿರೋಧ ಪಕ್ಷದ ಉಪನಾಯಕರು ಹೇಳಿದರು ಎಂದು ತಮಗೆ ಬೇಕಾದ್ದನ್ನು ತೆಗೆದುಕೊಂಡು ಹೇಳುವುದು, ಉಳಿದ ಭಾಗವನ್ನು ಬಿಟ್ಟುಬಿಡುವುದು ಈ ರೀತಿಯಾಗಿ ಆಗುತ್ತಿದೆ. ಆದರೆ ನೆಸೆಸಿಟಿ ಇದ್ದುದನ್ನು ತಾವು ಮಾಡುತ್ತಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಸೂಕ್ಷ್ಮವಾಗಿ ಇಲಾಖೆಯ ಆಡಳಿತ ಸುಧಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆಂದು ಹೇಳುತ್ತೇನೆ. ಮಾನ್ಯ ಸದಸ್ಯರು ರೆಗ್ಯುಲರ್ ಪಿಡಬ್ಲ್ಯುಡಿನಲ್ಲಿ ೨೬ ಜನ ಚೀಫ್ ಇಂಜಿನಿಯರ್ ಇದ್ದಾರೆಂದು ಹೇಳಿದರು. ಅಡ್‌ಹಾಕ್ ಆಗಿ ಕೆಲಸ ಮಾಡುತ್ತಿದ್ದ ೭ ಜನರನ್ನು ಕನ್‌ಫರಮ್ ಮಾಡತಕ್ಕ ನಿರ್ಣಯ ತೆಗೆದುಕೊಂಡಿದ್ದೇವೆ. ಆಡಳಿತದಲ್ಲಿ ಅತೃಪ್ತಿ ಇದೆ ಎಂದು ಹೇಳಿದ್ದರಲ್ಲಾ ಕನ್‌ಫರ್‌ಮೇಷನ್ ಆಗತಕ್ಕದ್ದು ಕೂಡ ಸಾಧ್ಯವಾಗಿರಲಿಲ್ಲ. Creation of a Chief Engineer in new zone for central mechanical organisation. ಇದನ್ನು ಮಾಡಲಿಲ್ಲ ಎಂದು ಹೇಳಿದಿರಿ, ಈಗ ನಾವು ಅದನ್ನು ಮಾಡಿದ್ದೇವೆ. ನಮ್ಮಲ್ಲಿ ಸುಮಾರು ೪೨ ಕೋಟಿ ರೂಪಾಯಿ ಮೆಷಿನರಿ ಇದ್ದರೆ, ಅದರ ಪೈಕಿ ೭ ಕೋಟಿ ರೂಪಾಯಿ ಅರ್ಥ್ ಮೂವಿಂಗ್ ಮೆಷಿನರಿ ಯೂಸ್ ಆಗದೇ ಬಿದ್ದಿದೆ. ಅಪ್ಪರ್ ಮುಳ್ಳಾಮರಿಯಲ್ಲಿ ಕಾಸ್ಟ್ಲಿಯೆಸ್ಟ್ ಇಂಪೋರ್ಟೆಡ್ ಮೆಷಿನ್ ಹಾಗೆಯೇ ಬಿದ್ದಿದೆ. ಚೀಫ್ ಇಂಜಿನಿಯರ್ ನೇಮಕ ಮಾಡುವ ಉದ್ದೇಶ ಮೆಕಾನಿಕಲ್ ಆರ್ಗನೈಜೇಷನ್ ಇದರಲ್ಲಿ ಪಿಲಾಫರೇಜ್ ಕಡಿಮೆ ಮಾಡಬೇಕು ಎಂದು ಮಾಡಿದೆ ಲಾರಿಗಳ ಯೂಸೇಜ್ ಆಗತಕ್ಕದ್ದು ತಿಂಗಳಲ್ಲಿ ನಾಲ್ಕು ದಿವಸ. ಕನಿಷ್ಟ ಪಕ್ಷ ತಿಂಗಳಿಗೆ ೧೫ ದಿವಸವಾದರೂ ಆಗಿದ್ದರೆ ಪರವಾಗಿಲ್ಲ—ಏನೋ ಬ್ರೇಕ್‌ಡೌನ್ ಎಂದು ತಿಳಿದುಕೊಳ್ಳಬಹುದಿತ್ತು. ತಿಂಗಳಿಗೆ ಮೂರು ನಾಲ್ಕು ದಿವಸ ಮಾತ್ರ ಉಪಯೋಗಿಸಿರುವುದು ಲಾಗ್‌ಬುಕ್‌ನ್ನು ರೆವ್ಯೂ ಮಾಡಿದಾಗ ಕಂಡುಬಂದಿದೆ. ಈ ರೀತಿ ಆಗತಕ್ಕ

ಓವರ್‌ಹೆಡ್ ಚಾರ್ಜ್ ಕಡಿಮೆ ಮಾಡಬೇಕು ಪ್ರಾಪರ್ ಯುಟಿಲೈಸೇಷನ್ ಆಗಬೇಕು. ಒಂದು ಪ್ರಾಜೆಕ್ಟ್‌ನಲ್ಲಿ ಅವಶ್ಯಕತೆ ಇಲ್ಲದೇ ಇದ್ದರೆ, ಇನ್ನೊಂದು ಪ್ರಾಜೆಕ್ಟ್‌ನಲ್ಲಿ ಅವಶ್ಯಕತೆ ಇರುತ್ತದೆ, ಒಂದಕ್ಕೊಂದು ಕೋ ಆರ್ಡಿನೇಷನ್ ಇರುವುದಿಲ್ಲ, ಇವುಗಳನ್ನೆಲ್ಲಾ ನೋಡಿಕೊಳ್ಳುವುದಕ್ಕೋಸ್ಕರ, ಅವರಿಗೆ ಜವಾಬ್ದಾರಿ ವಹಿಸುತ್ತಿದ್ದೇವೆ. To monitor the whole mechanical organisation, central organisation ನನ್ನು ಮಾಡಿದ್ದೇವೆ. ಇದರ ಜೊತೆಗೆ ನೀರಾವರಿ ಪ್ರದೇಶದಲ್ಲಿ ಸವಳು ಬಂದಿದ್ದರೆ ಒಬ್ಬ ರೈತ ಬಂದು ಭೂಮಿಯನ್ನು ಸರಿಪಡಿಸಲು ಲಾರಿ ಕೇಳುವಂತಾಗಿದ್ದಕ್ಕೆ ಮತ್ತು ನೀರಾವರಿ ಹೊಸದಾಗಿ ಬಂದಮೇಲೆ ಆ ಭಾಗದ ರೈತ ನಮಗೆ ಲಾರಿ ಕೊಡಬೇಕೆಂದು ಕೇಳಿದರೆ ಆ ರೈತ ೭೨೦ ರೂಪಾಯಿ ಕೊಡಬೇಕೆಂದು ಮಾಡಿದ್ದಾರೆ. ಅದೇ ಕಂಟ್ರಾಕ್ಟರಿಗೆ ೩೬೦ ರೂಪಾಯಿಗಳು ಎಂದಿದೆ.

ಇದನ್ನು ರಿವೈಸ್ ಮಾಡಬೇಕೆಂದು ಮಾಡುತ್ತಿದ್ದೇವೆ. ಏಕೆಂದರೆ ಹೊಸದಾಗಿ ಇದು ಬಂದಾಗ ಆ ಭಾಗದ ರೈತರು ಯಾರಾದರೂ ಬಂದು ನಮಗೆ ಲಾರಿ ಕೊಡಬೇಕೆಂದು ಕೇಳಿದರೆ ನಮ್ಮ ಕಾನೂನು ಚೌಕಟ್ಟಿನಲ್ಲಿ ಇದಕ್ಕೆ ಒಂದಕ್ಕೆರಡರಷ್ಟು ಕೊಡಬೇಕಾಗಿದೆ. ಕಂಟ್ರಾಕ್ಟರ್‌ಗಳಿಗಾದರೆ ೩೬೦ ರೂಪಾಯಿ ರೈತರಿಗಾದರೆ ೭೨೦ ರೂಪಾಯಿಯಂತೆ ಕೊಡಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ರೈತರು ಯಾರೂ ಕೂಡ ಅದನ್ನು ಕೇಳಬಾರದೆಂದು ಈ ರೀತಿ ಮಾಡಿದೆಯೆ!

ಶ್ರೀ ಹೆಚ್. ಡಿ. ದೇವೇಗೌಡ.—ಇದು ಹಿಂದಿನ ಸರ್ಕಾರದ್ದಲ್ಲ. ಕೋಡಲ್ ರೂಲ್ಸ್‌ನಲ್ಲೇ ಈ ರೀತಿ ಮಾಡಿಕೊಂಡು ಬಂದಿದ್ದಾರೆ. ಇದನ್ನು ನಾವೂ ಕೂಡ ಮಾಡಿದ್ದಲ್ಲ. ನಾನು ಯಾವುದೇ ಸರ್ಕಾರವನ್ನೂ ಕೂಡ ದೂಷಣೆ ಮಾಡುತ್ತಿಲ್ಲ. Just to discourage other persons other than contractyes. ರೈತರು ತೆಗೆದುಕೊಳ್ಳಬಾರದು ಎಂದು ಅಲ್ಲ. ಅಲ್ಲಿ ರೈತರಿಗೆ ಸವಳು ಭೂಮಿ ಬಂದಿದೆ. ನೀರು ಬಂದಮೇಲೆ, ಆ ಮಣ್ಣನ್ನು ಹೊರಗಡೆ ಹಾಕಬೇಕಾಗಿದೆ ಆದ್ದರಿಂದ ಲಾರಿಗಳನ್ನು ಕೊಡಿ ಎಂದು ಕೇಳಿದರೆ ಒಂದಕ್ಕೆರಡರಷ್ಟು ಛಾರ್ಜ್ ಕೊಡಬೇಕೆಂದು ಮಾಡಿದ್ದಾರೆ. ಹೊರಗಡೆಯವರು ಬಂದು ಕೇಳಿದರೆ ಅವರಿಗೆ ಬಹಳಷ್ಟು ಕಂಡೀಷನ್ಸ್ ಇವೆ. ಡಿಫೆನ್ಸ್ ಕಂಟ್ರಾಕ್ಟರುಗಳು ಬಂದು ಕೇಳಬಹುದು, ಅಥವಾ ಬೇರೆ ಇಲಾಖೆಗಳಲ್ಲಿ ಕೆಲಸಮಾಡುವಂಥ ಕಂಟ್ರಾಕ್ಟರ್‌ಗಳು ಬಂದು ಕೇಳಬಹುದು. ಇದನ್ನು ಅವರಿಗೆ ಕೊಡುವುದಕ್ಕೆ ಅವಕಾಶ ಇಲ್ಲ ಆದ್ದರಿಂದ ಸರ್ಕಾರ ಈ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಅರ್ಥ್ ಮೂವಿಂಗ್ ಎಕ್ವಿಪ್‌ಮೆಂಟ್ಸ್ ಸುಮಾರು ೨ ಕೋಟಿ ರೂಪಾಯಿ ಬೆಲೆ ಬಾಳುವಷ್ಟು ಯಂತ್ರೋಪಕರಣಗಳು ಹಾಗೆಯೇ ಉಪಯೋಗಕ್ಕೆ ಬಾರದೇ ಬಿದ್ದಿವೆ. ಆದ್ದರಿಂದ ಇವನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಯೋಚನೆ ಮಾಡಿ ಈಗ ಈ ಕೋಡಲ್ ರೂಲ್ಸ್‌ಗೆ ತಿದ್ದುಪಡಿಯನ್ನು ತರಬೇಕೆಂದು ಮಾಡಿದ್ದೇವೆ. ಕಳೆದಸಾರಿ ನಾನು ಏನು ಹೇಳಿದ್ದೆ ಅದನ್ನು ಮಾಡಿದ್ದೇನೆ. ಅಧಿಕಾರಿಗಳನ್ನು ಪೋಸ್ಟ್ ಮಾಡಿದ್ದೇವೆ. ಬೈಫರ್ಕೇಷನ್ ಆಫ್ ಇರಿಗೇಷನ್ ಅಂಡ್ ಪಿ.ಡಬ್ಲ್ಯು.ಡಿ. ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ ಇದನ್ನು ಏಪ್ರಿಲ್ ೧ ರಿಂದ ಜಾರಿಗೆ ತರುತ್ತೇವೆ. ಇದರ ಕಾನ್‌ಸೆಪ್ಟ್ ಯಾವರೀತಿ ಇದೆ ಎಂದರೆ ಒಂದೊಂದು ರೆವಿನ್ಯೂ ಡಿವಿಜನ್‌ಗೆ ಒಂದೊಂದು ಸರ್ಕಲ್ ಇರುತ್ತದೆ. ಇರಿಗೇಷನ್ ಸ್ಪೆಷಲ್ ಸೆಕ್ರೆಟರಿಯವರನ್ನು ಇರಿಗೇಷನ್ ಸೆಕ್ರೆಟರಿ ಎಂದು ಕರೆಯಬೇಕಾಗುತ್ತದೆ. ಒಬ್ಬರು ಚೀಫ್ ಇಂಜಿನಿಯರ್ ಇರುತ್ತಾರೆ. ೪ ಜನ ಸೂಪರಿಂಟೆಂಡೆಂಟ್ ಇಂಜಿನಿಯರ್‌ಗಳು ಇರುತ್ತಾರೆ. ಪ್ರತಿಯೊಂದು ಡಿವಿಜನ್‌ಗೆ ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರ್ ಮೈನರ್ ಇರಿಗೇಷನ್ ಕೆಲಸವನ್ನು ನೋಡಿಕೊಳ್ಳುವುದಕ್ಕೆ ಇರುತ್ತಾರೆ, ಈ ಒಂದು ಆಧಾರದಮೇಲೆ ಇದನ್ನು ತಕ್ಷಣ ಮಾಡುತ್ತೇವೆ. ಇದು ೧-೪-೮೪ರಿಂದ ಜಾರಿಗೆ ಬರುತ್ತದೆಂದು ತಿಳಿಸಬಯಸುತ್ತೇನೆ.

ಇನ್ನು ಪ್ರೊಮೋಷನ್ ಕೊಡುವ ವಿಚಾರದಲ್ಲಿ ಇಲಾಖೆಯಲ್ಲಿ ಯಾವುದೇ ವಿಳಂಬ ಇಲ್ಲದಂತೆ ಮಾಡಿದ್ದೇವೆ. ೨೫ ಜನರಿಗೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಎಂದು ಪ್ರೊಮೋಷನ್ ಕೊಟ್ಟಿದ್ದೇವೆ ೮೧ ಜನರಿಗೆ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳೆಂದು ಪ್ರೊಮೋಷನ್ ಕೊಟ್ಟಿದ್ದೇವೆ. ೨೭೦ ಜನರಿಗೆ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳೆಂದು ಪ್ರೊಮೋಷನ್ ಕೊಟ್ಟಿದ್ದೇವೆ.

ಇನ್ನು ಅನಿರೀಕ್ಷಿತ ಭೇಟಿಗಳನ್ನು ನೀಡುವಬಗ್ಗೆ ಹೇಳುವುದಾದರೆ ಹಿಂದಿನ ಸಂದರ್ಭದಲ್ಲಿ ಮಾಡಿದ್ದೇವೆ ಸರ್ಕಾರ ಈ ನಿರ್ಣಯವನ್ನು ತೆಗೆದುಕೊಂಡಮೇಲೆ ಮಾಡಿದ್ದೇವೆ. ಇದರ ಉದ್ದೇಶವೇನೆಂದರೆ, ಕೆಲಸದ ಕ್ವಾಲಿಟಿಯನ್ನು ಉತ್ತಮ ಪಡಿಸುವುದು, ಸುಳ್ಳು ಸ್ಟೇಟ್‌ಮೆಂಟ್‌ನ್ನು ಕೊಡುವುದು ಅಥವಾ ರಾಂಗ್ ಕ್ಲಾಸಿಫಿಕೇಷನ್ ಕೊಡು

ವುದು ಇನ್ನೂ ಮುಂತಾದುವನ್ನು ಸಾಧ್ಯವಾದಷ್ಟು ತಡೆಗಟ್ಟಬೇಕೆಂಬ ದೃಷ್ಟಿಯಿಂದ ಈವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ಸೂಪರಿಂಟೆಂಡೆಂಟ್ ಇಂಜನಿಯರ್‌ವರು ೨೦ ಅನೀರಿಕ್ಷಿತ ಭೇಟಿಗಳನ್ನೂ ಎಕ್ಸಿಕ್ಯುಟಿವ್ ಇಂಜನಿಯರ್‌ಗಳು ೩೦ ಅನಿರೀಕ್ಷಿತ ಭೇಟಿಗಳನ್ನೂ ಚೀಫ್ ಇಂಜನಿಯರ್‌ರವರು ೧೫ ಅನಿರೀಕ್ಷಿತ ಭೇಟಿಗಳನ್ನೂ ಮಾಡಬೇಕೆಂದು ವ್ಯವಸ್ಥೆ ಮಾಡಿ ವಿವಿಧ ಹಂತಗಳಲ್ಲಿ ಜವಾಬ್ದಾರಿಗಳನ್ನು ಕೊಟ್ಟಿದ್ದೇವೆ. ಈಗ ಇವರುಗಳು ೪೮೫ ಅನಿರೀಕ್ಷಿತ ಭೇಟಿಗಳನ್ನು ಮಾಡಿದ್ದಾರೆ ಇದರಲ್ಲಿ ಏನೇನು ನ್ಯೂನತೆ ಇದೆ ಅದನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆ.

ಇನ್ನು ಫ್ಲೈಯಿಂಗ್ ಸ್ಕ್ವಾಡ್ ಎಂದು ಮಾಡಿದ್ದೇವೆ. ಇದನ್ನೂ ಕೂಡ ಅದರ ಆಧಾರದ ಮೇಲೆ ಮಾಡಿದ್ದೇವೆ. ಇಪತ್ತು ೬೩ ಕೇಸ್‌ನಲ್ಲಿ ಫ್ಲೈಯಿಂಗ್ ಸ್ಕ್ವಾಡ್‌ನವರು ತನಿಖೆ ಮಾಡಿದ್ದಾರೆ. ಇದರಲ್ಲಿ ಶಿಸ್ತಿನ ಕ್ರಮದಲ್ಲಿ ೪೧ ಜನ ಒಳಗಾಗಿದ್ದಾರೆ. ಇದರಲ್ಲಿ ೩-೪ ಜನ ಆಫೀಸರಿಗಳೂ ಸೇರಿಕೊಂಡಿದ್ದಾರೆ. ಇವರು ಮೆಷರ್‌ಮೆಂಟ್‌ನ್ನು ಕೊಡುವಾಗ ಹೆಚ್ಚೂ ಕಡಿಮೆ ಕೊಟ್ಟಿರುತ್ತಾರೆ. ೭ ಕೇಸುಗಳಲ್ಲಿ ಆಪಾದಿತರಿಂದ ವಿವರಣೆಗಳನ್ನು ಕೇಳಿದ್ದೇವೆ. ರಾಂಗ್ ಮೆಷರ್‌ಮೆಂಟ್ ಕೊಟ್ಟವರಲ್ಲಿ ೩ ಜನರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ೨೧ ಕೇಸ್‌ಗಳಲ್ಲಿ ಎನ್‌ಕ್ವೈರಿ ರಿಪೋರ್ಟ್ ಬಂದಿದೆ, ಇನ್ನೂ ನಾವು ಅದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿಲ್ಲ. ರುಜುವಾತು ಆಗದೇ ಇರುವುದು ೮ ಕೇಸುಗಳು, ನಮ್ಮ ರಾಜ್ಯದ ಜಾಗೃತ ಆಯೋಗದವರಿಗೆ ೫ ಕೇಸುಗಳನ್ನು ಕಳುಹಿಸಿಕೊಟ್ಟಿದ್ದೇವೆ. ಅದರ ತನಿಖಾ ವರದಿ ಪರಿಶೀಲನಾ ಹಂತದಲ್ಲಿವೆ. ತನಿಖಾ ವರದಿಯು ತಯಾರಿಕೆಯಲ್ಲಿ ೮ ಕೇಸು ಇವೆ. ಒಟ್ಟು ೬೩ ಕೇಸುಗಳಲ್ಲಿ ಫ್ಲೈಯಿಂಗ್ ಸ್ಕ್ವಾಡ್‌ನವರು ಏನೇನು ಕ್ರಮತೆಗೆದುಕೊಂಡಿದ್ದಾರೆ ಎಂಬುದನ್ನು ನಾನು ಹೇಳಿದ್ದೇನೆ. ಕೆ. ಆರ್. ನಗರದಲ್ಲಿ ೪ ಜನ ಅಧಿಕಾರಿಗಳನ್ನು ೩ ಲಕ್ಷದಷ್ಟು ಎಕ್ಸೆಸ್ ಮೆಷರ್‌ಮೆಂಟ್‌ನ್ನು ಕೊಟ್ಟಿದ್ದಾರೆಂಬ ಫ್ಲೈಯಿಂಗ್ ಸ್ಕ್ವಾಡ್‌ನ ತನಿಖಾ ಆಧಾರದ ಮೇಲೆ ಸಸ್ಪೆಂಡ್ ಮಾಡಿದ್ದಾರೆ. ಇವರ ಬಗ್ಗೆ ಉಗ್ರಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಇನ್ನು ಮೇಜರ್ ಇರಿಗೇಷನ್ ಬಗ್ಗೆ ಹೇಳುವುದಾದರೆ ಒಂದೊಂದು ಜೋನ್‌ಗೆ ಒಂದೊಂದು ಪ್ರತ್ಯೇಕ ಕಮಿಟಿ ಮಾಡಬೇಕೆಂದು ಮಾಡಿದ್ದೇವೆ ಟೆಕ್ನಿಕಲ್ ಕಮಿಟಿಯಲ್ಲಿ ಇರತಕ್ಕವರು ಮೇಜರ್ ಇರಿಗೇಷನ್ ಕಂಟ್ರೋಲ್ ಬೋರ್ಡ್‌ನಲ್ಲಿ ಇರಬಾರದು. ಏತಕ್ಕೆ ಈ ರೀತಿ ಮಾಡಿದ್ದೇವೆಂದರೆ ಇಲ್ಲಿ ಡಬಲ್ ಸ್ಕ್ರುಟಿನಿ ಆಗಬೇಕು. ಈ ಕಮಿಟಿಗೆ ಬೇರೆ, ಆ ಕಮಿಟಿಗೆ ಬೇರೆ ಬೇರೆ ಸದಸ್ಯರು ಇರಬೇಕೆಂದು ಮಾಡಿದ್ದೇವೆ. ಈ ಒಂದು ವ್ಯವಸ್ಥೆಯನ್ನು ನಾವು ಜಾರಿಗೆತಂದಿದ್ದೇವೆ. We have introduced this two tier system to see that double c eck is prevailed. ಇದರಲ್ಲಿ ಯಾರೂ ಸಂಶಯ ಪಡಬೇಕಾಗಿಲ್ಲ. ಮಾನ್ಯ ಸದಸ್ಯರಾದ ಬಾಳೇಕುಂದ್ರಿಯವರು ಎರಡು ಕಡೆಯೂ ಛೇರ್ಮನ್ ಆಗಿದ್ದಾರೆ. ಆದರೆ ಇದರ ಸದಸ್ಯರನ್ನು ಮಾತ್ರ ಬೇರೆ ಬೇರೆ ಮಾಡಿದ್ದೇವೆ. ಬಾಗಲ್ಕೋಟೆಯನ್ನು ಷಿಫ್ಟ್ ಮಾಡುವುದಕ್ಕೆ ಒಂದು ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿದ್ದೇವೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಫೈನಾನ್ಷಿಯಲ್ ಪವರ್‌ನ್ನು ಸೂಪರಿಂಟೆಂಡೆಂಟ್ ಇಂಜಿನಿಯರ್‌ವರಿಗೆ ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಗೆ ಡೆಲಿಗೇಟ್ ಮಾಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ತಾ. ೨೨-೧೧-೮೩ರಲ್ಲಿ ಸರ್ಕಾರೀ ಆಜ್ಞೆಯನ್ನು ಹೊರಡಿಸಿದೆ. ನಾವು ಏನೇನು ಕೆಲಸ ಮಾಡುತ್ತೇವೆಂದು ಕಳೆದಸಾರಿ ನಾವು ಹೇಳಿದ್ದೆವು ಅದನ್ನೆಲ್ಲಾ ಜಾರಿಗೆ ತರುವ ಪ್ರಯತ್ನ ಮಾಡಿದ್ದೇವೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಕಂಟ್ರಾಕ್ಟರ್ ಮತ್ತು ಆಫೀಸರ್‌ಗಳನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ಲೀಗಲ್ ಲೆಜಿಸ್ಲೇಷನ್‌ನ್ನು ತರಬೇಕೆಂದು ಇಚ್ಛೆ ಇದೆ. ಏಕೆಂದರೆ. ಕೇವಲ ಅಧಿಕಾರಿಗಳನ್ನೇ ನಾವು ಬೈಯುವುದರಲ್ಲಿ ಏನೇನೂ ಅರ್ಥವಿಲ್ಲ. ಕಂಟ್ರಾಕ್ಟರ್‌ಗಳು ಮತ್ತು ಅಧಿಕಾರಿಗಳು ಸೇರಿದಾಗಲೇ ಈ ರೀತಿ ಸರ್ಕಾರಕ್ಕೆ ಮೋಸ ಮಾಡುವುದಕ್ಕೆ ರಾಂಗ್ ಕ್ಲಾಸಿಫಿಕೇಷನ್ ಕೊಡುವುದಕ್ಕೆ, ರಾಂಗ್ ಮೆಷರ್‌ಮೆಂಟ್ ಕೊಡುವುದಕ್ಕೆ ಅವಕಾಶವಾಗುತ್ತದೆ. ಎರಡೂ ಕೈ ಸೇರಿದರೆ ಚಪ್ಪಾಳೆ ಆಗುವಂತೆ ಇವರಿಬ್ಬರೂ ಸೇರಿದರೆ ಮಾತ್ರ ಇಂಥ ಅವ್ಯವಹಾರಗಳಾಗುವುದಕ್ಕೆ ಸಾಧ್ಯ ಇವರಿಬ್ಬರನ್ನೂ ಪ್ರಾಸಿಕ್ಯೂಷನ್ ಮತ್ತು ಕನ್ವಿಕ್ಷನ್ ಮಾಡುವುದಕ್ಕೆ ನಮ್ಮಲ್ಲಿ ಕೆಲವು ಮಾಡಿಫಿಕೇಷನ್‌ಗಳನ್ನು ಮಾಡಿದ್ದೇವೆ. ಇದಕ್ಕೆ ಕೆಲವು ತಿದ್ದುಪಡಿಯನ್ನು ಮಾಡಿದ್ದೇವೆ. ಇದರ ಬಗ್ಗೆ ಇನ್ನೇನು ಸರ್ಕಾರದ ಆಜ್ಞೆ ಹೊರಡುವುದರಲ್ಲಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವೇನೋ ಮಾಡುತ್ತೀರಿ. ಆದರೆ ಅದು ಜಾರಿಗೆ ಬರಬೇಕಲ್ಲಾ ?

ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನು ಮಾಡುತ್ತೇವೆ. ನಾನು ಇಲ್ಲದಿದ್ದರೂ ಅದು ಜಾರಿಗೆ ಬರುತ್ತದೆ,

ಶ್ರೀ ಎನ್. ಜಿ. ನಾಯಕ್.—ಸ್ವಾಮಿ, ಎಲ್ಲಾ ಹೇಳಿದಿರಿ ಆದರೆ ನಮ್ಮ ಅಪ್ಪರ್ ಭದ್ರಾ ವಿಚಾರ ಹೇಳಲೇ ಇಲ್ಲ,

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಫ್ಲೈಯಿಂಗ್ ಸ್ಕ್ವಾಡ್ ಮಾಡುವಾಗ ಎಲ್ಲರೂ ತಮಾಷೆ ಮಾಡಿದರು. ಅದಾದ ಮೇಲೆ ಈಗ ೪ ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ, ೪ ಜನರಿಗೆ ಇಂಕ್ರಿಮೆಂಟ್ ಕಟ್ ಮಾಡಿದ್ದೇವೆ. ಈಗ ನಾವು ಇಷ್ಟು ಕೆಲಸ ಮಾಡಿರಬಹುದು. ನಾವು ಹೋದಮೇಲೆ ನನಗಿಂತ ಬಿಗಿಯಾದವರು ಬರಬಹುದು. ಅವರು ಕ್ರಮ ತೆಗೆದುಕೊಳ್ಳುತ್ತಾರೆ. Our intention is to see that there should be some steps to prevent all these things.

ಶ್ರೀ ಜೆ. ಡಿ. ಸೋಮಪ್ಪ.—ಸ್ವಾಮಿ, ಕಳೆದ ಸಾರಿ ನಾನು ಇದನ್ನು ಸ್ವಾಗತ ಮಾಡಿದ್ದೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಸಾರಿ ಕಾವೇರಿ ಬೇಸಿನ್‌ನಲ್ಲಿ ೬೬ ಕೋಟಿ ರೂಪಾಯಿಗಳ ಕೆಲಸವನ್ನು ತೆಗೆದುಕೊಂಡಿದ್ದೇವೆ. ನಾವು ಖರ್ಚು ಮಾಡತಕ್ಕ ಹಣ ವ್ಯವಸ್ಥಿತವಾಗಿ ಖರ್ಚಾಗಬೇಕು. ಆಫೀಸರ್ಸ್ ಕಮಿಟಿ ಪ್ರತಿ ತಿಂಗಳೂ ರಿವ್ಯೂ ಮಾಡಬೇಕೆಂದು ಮಾಡಿದ್ದೇವೆ, ಪಿ.ಡಬ್ಲ್ಯು.ಡಿ. ಸೆಕ್ರೆಟರಿಯವರು ಇದ್ದಾರೆ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರೂ ಇದ್ದಾರೆ ಇರಿಗೇಷನ್ ಸೆಕ್ರೆಟರಿಯವರು ಇದ್ದಾರೆ, ಚೀಫ್ ಇಂಜನಿಯರ್, ಹೇಮಾವತಿ ಇವರು ಇದ್ದಾರೆ, ಚೀಫ್ ಇಂಜಿನಿಯರ್ ಇರಿಗೇಷನ್ (ಸೌತ್) ಇದ್ದಾರೆ. ಇವರು ಪ್ರತಿ ತಿಂಗಳೂ ಮಾನಿಟರಿ ಮಾಡಬೇಕಾಗುತ್ತದೆ. ಏಕೆಂದರೆ ಕೆಲವು ಕೆಲಸಗಳನ್ನು ಪೀಸ್ ವರ್ಕ್‌ಮೇಲೆ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಕಾಲವನ್ನು ಉಳಿಸುವುದಕ್ಕಾಗಿ ಕೆಲವು ಟೆಂಡರ್‌ಗಳಿಗೆ ೧೦ ದಿವಸ ಮಾತ್ರ ಕಾಲಾವಕಾಶ ಕೊಟ್ಟಿದ್ದೇವೆ. ಸುಮಾರು ೬ ಲಕ್ಷ ರೂಪಾಯಿವರೆಗೂ ಪೀಸ್ ವರ್ಕ್ ಕೊಡುವುದು, ಸುಮಾರು ೫ ಲಕ್ಷ ರೂಪಾಯಿವರೆಗೂ ಮೇಸನರಿ ವರ್ಕ್ಸ್‌ನ್ನು ಪೀಸ್ ವರ್ಕ್ ಕೊಡುವುದು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ನಿಮ್ಮದಾಯಿತು. ಅವರದು ಏನಾಯಿತು ಎಂಬುದನ್ನು ಹೇಳಿ.

ಶ್ರೀ ಹೆಚ್. ಡಿ. ದೇವೆಗೌಡ.—ಮಾನ್ಯ ಸದಸ್ಯರಾದ ಚೌಡಯ್ಯನವರು ಕಾಸ್ಟ್ ಬೆನಿಫಿಟ್ ರೇಷಿಯೋವನ್ನು ತರಬೇಕೆಂದು ಹೇಳಿದ್ದಾರೆ. ನಾವು ಅದನ್ನೂ ತಂದಿದ್ದೇವೆ. ಇದನ್ನು ಇನ್ನೂ ಹೆಚ್ಚಿಗೆ ಮಾಡಬೇಕೆಂದು ಕೇಳುತ್ತಿದ್ದಾರೆ. ಇದನ್ನು ಪರಿಶೀಲಿಸುತ್ತೇವೆ. ಈಗ ಒಂದು ಎಕರೆಗೆ ೫೬೦೦ ರೂಪಾಯಿವರೆಗೆ ಬರುತ್ತದೆ. ಸೀಲಿಂಗ್ ಲಿಮಿಟ್ ೨೪೦೦ ರೂ. ಇರಬೇಕು. ಆದರೆ ಈಗ ನಾವು ಸುಮಾರು ೫೬೦೦ ರೂ. ವರೆಗೂ ಖರ್ಚು ಮಾಡುವುದಕ್ಕೆ ಅವಕಾಶ ಇದೆ.

ವಿರೋಧಪಕ್ಷದ ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ರಂಗನಾಥ್‌ರವರು ಈ ಸಭೆಯಲ್ಲಿ ಆ ಯೋಜನೆಯ ಬಗ್ಗೆ ಬಹಳ ಟೀಕೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಏತಕ್ಕೆಂದರೆ ಅಂಬರಗೋಡು ಕಡಸವಳ್ಳಿ, ಅದು ನಮ್ಮ ಮಾನ್ಯ ತಿಮ್ಮಪ್ಪ ಹೆಗಡೆಯವರ ಕಾನ್‌ಸ್ಟಿಟ್ಯುಯೆನ್ಸಿ ಅವರು ಊರಿಗೆ ಹೋಗುವುದರೊಳಗಾಗಿ ಲಾಂಚ್ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದಾಗ ಒಂದು ರೀತಿಯಾಗಿ ಅದು ಸಾಧ್ಯವೇ ಇಲ್ಲ ಎನ್ನುವ ಭಾವನೆಯನ್ನು ಈ ಸಭೆಯಲ್ಲಿ ವ್ಯಕ್ತಪಡಿಸಿದರು. ಸ್ವಾಮಿ ತಾತ್ಕಾಲಿಕವಾದ ಒಂದು ವ್ಯವಸ್ಥೆಯನ್ನು ಅವರ ಊರಿಗೆ ಅವರ ಮುಖಂಡತ್ವದಲ್ಲಿಯೇ ಮಾಡಿಕೊಟ್ಟಿದ್ದೇವೆ. ಅನಂತರ ಸಂಚಾರ ಸೌಲಭ್ಯದ ಖಾಯಂ ವ್ಯವಸ್ಥೆಯನ್ನು ಮಾಡುವ ಸಲುವಾಗಿ ಸುಮಾರು ೨೫ ಟನ್ ಭಾರದ ಲಾಂಚ್ ತೆಗೆದು ಕೊಂಡುಹೋಗಿ ವರ್ಕ್ ಕಂಪ್ಲೀಟ್ ಮಾಡಿಕೊಡತಕ್ಕಂಥದ್ದಾಗಿರುತ್ತದೆ. ಅದು ಅಷ್ಟು ಸುಲಭವಾದ ಕೆಲಸವಲ್ಲ. ಮಾನ್ಯ ಬಂಗಾರಪ್ಪನವರೂ ಕೂಡ ಆಗುವುದಿಲ್ಲವೆಂದು ಹೇಳಿದ್ದರು. ಇದರ ಲಾಭವನ್ನು ಜನತೆ ಪಡೆಯುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಒಳ್ಳೆಯ ಕಾಂಪ್ಲಿಮೆಂಟ್ ಕೊಟ್ಟಿದ್ದೀರಿ. ನಾವು ಬೇಡವೆಂದು ಹೇಳುವುದಿಲ್ಲ. ಅದರ ಜೊತೆಯಲ್ಲಿ ಕಾಳಿ ಪ್ರಾಜೆಕ್ಟ್ ಏನು ಇದೆ ಅಲ್ಲೂ ಒಂದು ಸೇತುವೆ ಉಳಿದು

ಕೊಂಡಿರುತ್ತದೆ. ಅವನ್ನು ಕೂಡ ತಕ್ಷಣ ಮಾಡಿದರೆ ಜನರಿಗೆ ಬಹಳ ಪ್ರಯೋಜನವಾಗುತ್ತದೆ. ಇದಾದರೆ ಪ್ರಯಾಣಿಕರಿಗೆ ಸೌಕರ್ಯವಾಗುತ್ತದೆ, ಗೋಕರ್ಣಕ್ಕೆ ಹೋಗಲಿಕ್ಕೆ ಬಹಳ ಸುಲಭವಾಗುತ್ತದೆ. ಇದನ್ನು ಮಾಡಿದರೆ ಅಧಿಕಾರಿಗಳಿಗೆ ಶಾಭಾಸ್ ಗಿರಿ ಕೊಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದನ್ನೂ ಕೂಡ ಪರಿಶೀಲನೆ ಮಾಡುತ್ತೇನೆ.

ಇನ್ನು ಇಲಾಖೆಯ ಬಗ್ಗೆ ವಿಶೇಷವಾಗಿ ಒಂದು ಸಂಪೂರ್ಣವಾದ ಅರಿವು ಇಲ್ಲದೆ ಕೆಲವು ಸಂದರ್ಭಗಳಲ್ಲಿ ಮಾತನಾಡಿಕೊಳ್ಳುವುದಾಗಲಿ ರಾಜಕಾರಣಕ್ಕೋಸ್ಕರವಾಗಿ ಮಾತಾನಾಡಿಕೊಳ್ಳುವುದಾಗಲಿ ಈಗಾಗಲೇ ಒಂದು ಪರಿಪಾಠವಾಗಿ ಕಳೆದ ಒಂದು ವರ್ಷದಿಂದ ನಡೆದುಕೊಂಡುಬಂದಿರುತ್ತದೆ. ಇಲಾಖೆ ಕೇವಲ ರಸ್ತೆಗಳನ್ನು ಮಾಡುವುದರಲ್ಲಿಯೇ ಆಯಿತು.

ಶ್ರೀ ಎಂ. ವೀರಪ್ಪಮೊಯಿಲಿ.—ಇದರಲ್ಲಿ ತಾವು ಮಾತನಾಡುವಾಗ ಈ ಕಡೆಯವರಬಗ್ಗೆ ರಕ್ಷಣೆ ಮಾಡಬೇಕಾದ ಅವಶ್ಯಕತೆ ಇಲ್ಲ ಕಳೆದ ಒಂದು ವರ್ಷದಿಂದ ಪರಿಪಾಠವಾಗಿ ನಡೆದುಕೊಂಡುಬಂದಿರುತ್ತದೆಂದು ಬಹಳ ಸುಲಭವಾಗಿ ಹೇಳಿಬಿಟ್ಟಿರಿ.

ಶ್ರೀ ಎಚ್. ಡಿ. ದೇವೇಗೌಡ.— ಜನರು ಮಾತನಾಡಿದರೆ ಉತ್ತರವನ್ನು ಕೊಡಬೇಕಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ನಾವು ತಮ್ಮಿಂದ ಬಹಳ ಗಂಭೀರವಾಗಿ ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ. ತಾವುಕೂಡ ಅಷ್ಟೇ ಗಂಭೀರತೆಯಿಂದ ಉತ್ತರವನ್ನು ಕೊಡಬೇಕು,

ಶ್ರೀ ಎಚ್. ಡಿ. ದೇವೇಗೌಡ.—ಗಂಭೀರವಾಗಿಯೇ ಉತ್ತರವನ್ನು ಕೊಡುತ್ತಿರುವುದು. ಜವಾಬ್ದಾರಿಯುತವಾಗಿ ಸರ್ಕಾರದಲ್ಲಿ ಇರತಕ್ಕಂಥ ಹೇಳಿಕೆಯನ್ನೇ ಇಟ್ಟುಕೊಂಡು ಹೇಳುತ್ತಿದ್ದೇನೆ. ಬೇಜವಾಬ್ದಾರಿಯಿಂದ ಹೇಳುತ್ತಿಲ್ಲ. I have not said that it is irresponsible statement by the Hon. leader of the opposition.

ಶ್ರೀ ಎಂ. ವೀರಪ್ಪಮೊಯಿಲಿ.—ಇಂಥ ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಜನರಲ್ ಆಗಿ ಉತ್ತರವನ್ನು ಕೊಟ್ಟರೆ ಅದನ್ನು ಸ್ವೀಕಾರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಟೀಕೆ ಮಾಡಲಿಕ್ಕೆ ಮತ್ತು ವಿಶ್ಲೇಷಣೆ ಮಾಡಲಿಕ್ಕೆ ಅವಕಾಶವಿರುತ್ತದೆ. ಉತ್ತರವನ್ನು ಕೊಡುವಾಗ ಸಾರಸಗಟು ಉತ್ತರವನ್ನು ಕೊಡುವುದಾದರೆ ನಾವೂ ಕೂಡ ಮಾತನಾಡಬೇಕಾಗುತ್ತದೆ.

SRI H. D. DEVEGOWDA.—You have got every right to tell.

SRI M. VEERAPPA MOILY.—We have got so many things to tell.

ಶ್ರೀ ಎಚ್. ಡಿ. ದೇವೇಗೌಡ.—ಹಾಗೆ ಹೇಳುವಾಗ ಇಲಾಖೆಯಲ್ಲಿ ಹಾಗೆ ನಡೆದಿದೆ, ಮೇಲ್ ವರ್ಗದ ಜಾತಿಗೆ ಸೇರಿದಂಥವರಿಗೆ...

ಶ್ರೀ ಎಂ. ವೀರಪ್ಪಮೊಯಿಲಿ.—ನಿಮ್ಮ ಸರ್ಕಾರ ಹೇಳಿದ್ದನ್ನು ಕೇಳಿಕೊಂಡು ತುತ್ತೂರಿಯನ್ನು ಊದಲಿಕ್ಕೆ ನಾವು ಬಂದಿಲ್ಲವೆನ್ನುವುದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ತುತ್ತೂರಿಯನ್ನು ಊದಿ ಎಂದು ಹೇಳುತ್ತಿಲ್ಲ. ವರದಿಯ ಆಧಾರದಮೇಲೆ ಹೇಳುತ್ತಿದ್ದೇನೆ. I know the responsibility of the hon. leader of the opposition. ತುತ್ತೂರಿ ಊದಿ ಎಂದು ನಾನು ಹೇಳಲಿಲ್ಲ. ಈ ಸದನದಲ್ಲಿ ನಮ್ಮಿಂದ ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಅನ್ಯಾಯವಾಗಿದೆ. ಷೆಡ್ಯೂಲ್‌ಕ್ಯಾಸ್ಟ್‌ನವರಿಗೆ ಅನ್ಯಾಯವಾಗಿದೆ ಎಂದು ಹೇಳಿದಿರಲ್ಲ, ಅದಕ್ಕೆ ಹೇಳಿದೆ. ಇಷ್ಟೇ ಸ್ವಾಮಿ, ಬಡ್ತಿ ವಿಷಯ ಹೇಳುವಾಗ ಏನಾದರೂ ತಪ್ಪಿದ್ದರೆ ಹೇಳಿ, ತಿದ್ದಿಕೊಳ್ಳೋಣ, ಸ್ವಾಮಿ ಸರ್ಕಾರ ಷೆಡ್ಯೂಲ್ ಕ್ಯಾಸ್ಟ್ ಮತ್ತು ಬ್ಯಾಕ್‌ವರ್ಡ್‌ಕ್ಲಾಸ್ ಗ್ರಾಜ್ಯುಯೇಟ್ಸ್ ಮತ್ತು ಡಿಪ್ಲೊಮೋ ಹೋಲ್ಡರ್ಸ್ ಕಂಟ್ರಾಕ್ಟ್ ತೆಗೆದುಕೊಳ್ಳುವುದಾದರೆ ಕನ್‌ಸ್ಟ್ರಕ್ಷನ್ ಮೆಟೀರಿಯಲ್ಸ್‌ನ್ನು ಅವರಿಗೆ ಕ್ರೆಡಿಟ್ ಬೇಸಿಸ್‌ಮೇಲೆ ಕೊಡುತ್ತೇವೆಂದು ಒಂದು ಆಜ್ಞೆಯನ್ನು

೧೯–೨–೧೯೮೩ ರಲ್ಲಿ ಮಾಡಿದ್ದೇವೆ. All construction materials should be given on credit basis to these categories of contractors. ಗ್ರಾಜ್ಯುಯೇಟ್ಸ್‌ಗೆ ಒಂದು ಲಕ್ಷ ರೂಪಾಯಿಗಳ ವರೆಗೆ ಪೀಸ್ ವರ್ಕ್ ಕೆಲಸ ಕೊಡಬೇಕೆಂತಲೂ ೫೦. ಸಾವಿರ ರೂಪಾಯಿಗಳವರೆಗೆ ಡಿಪ್ಲೊಮಾ ಹೋಲ್ಡರ್ಸ್‌ಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ಜೊತೆಗೆ ಅವರಿಗೆ ೫ ಸಾವಿರ ರೂಪಾಯಿಗಳವರೆಗೆ ಲೇಬರ್ ಅಡ್ವಾನ್ಸ್ ಹಣವೆಂದು, ಏತಕ್ಕೆಂದರೆ ಅವರಲ್ಲಿ ಹಣ ವಿರುವುದಿಲ್ಲವೆಂದು ೫ ಸಾವಿರ ರೂಪಾಯಿಗಳನ್ನು ಕೊಡಬೇಕೆಂದೂ ಕೂಡ ಮಾಡಿರುತ್ತೇವೆ. ಬಹುಶಃ ಯಾರು ವರ್ಕ್ ಚಾರ್ಜಿನಲ್ಲಿರುತ್ತಾರೋ ಆ ಆಫೀಸರ್ ಮತ್ತು ಕಂಟ್ರಾಕ್ಟರ್ ಇಬ್ಬರೂ ಜಾಯಿಂಟ್ ಅಕೌಂಟ್ ಇಟ್ಟುಕೊಳ್ಳಬೇಕೆಂತಲೂ ಸರ್ಕಾರದವರು ಅದರೊಳಗೆ ಉಲ್ಲೇಖ ಮಾಡಿದ್ದಾರೆ. ೧೯–೧೨–೮೩ ರಲ್ಲಿ ಸರ್ಕಾರದವರು ಆರ್ಡರ್ಸನ್ನು ಇಷ್ಯೂ ಮಾಡಿದ್ದಾರೆ. ಮತ್ತೇ ಡೈರೆಕ್ಟ್ ರೆಕ್ರೂಟ್‌ಮೆಂಟ್ ಬಗ್ಗೆ ಸ್ವಲ್ಪ ವಿಳಂಬವಾಗುವುದಕ್ಕೆ ಮಾನ್ಯ ರಾಜ್ಯಪಾಲರು ವಿವರಣೆಗಳನ್ನು ಕೇಳಿದರು. ಅದಕ್ಕೆ ನಾವು ವಿವರಣೆಯನ್ನು ಕೊಟ್ಟಿದ್ದೇವೆ. ಅಂತಿಮ ಒಪ್ಪಿಗೆಯನ್ನು ಕೊಡಬೇಕಾಗಿದೆ. ೨೫–೨–೧೯೮೪ ರಲ್ಲಿ ಒಂದು ಆರ್ಡರನ್ನು ಇಷ್ಯೂ ಮಾಡಿದ್ದೇವೆ. 75% by promotion to the cadre of Assistant Engineer, 20% direct recruitment from the Karnataka Public Works, engineering department services, ೫ ಪರ್ಸೆಂಟ್ ಇನ್ ಸರ್ವೀಸ್‌ನವರಿಗೆ ಎಂದು ಹೇಳಿ ನೇಮಕಾತಿಗೆ ಕೇಡರ್ ಅಂಡ್ ರಿಕ್ರೂಟ್‌ಮೆಂಟನ್ನು ತಿದ್ದುಪಡಿಮಾಡಿ ಆಜ್ಞೆಯನ್ನು ಇಷ್ಯೂ ಮಾಡಿದ್ದೇನೆ. ಇದರಲ್ಲಿ ಎಲ್ಲ ನೇರನೇಮಕಾತಿಗಳಲ್ಲಿ ಅಂದರೆ ಜೂನಿಯರ್ ಇಂಜಿನಿಯರ್ಸ್, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನೀಯರ್ ಇರಬಹುದು. ಇದರಲ್ಲಿ ಇರತಕ್ಕಂಥ ೧೫+೩ ಒಟ್ಟು ೧೮ ಪರ್ಸೆಂಟ್ ಮಾತ್ರ ರಿಸರ್ವೇಷನ್ ಮಾಡಬೇಕೆಂದು ಇದ್ದುದನ್ನು ೨೦ ಪರ್ಸೆಂಟ್ ಷೆಡ್ಯೂಲ್ ಕ್ಯಾಸ್ಟ್‌ಗೆ ಷೆಡ್ಯೂಲ್ ಟ್ರೈಬ್ಸ್‌ಗೆ ೩ ಪರ್ಸೆಂಟ್ ಇದ್ದುದನ್ನು ೫ ಪರ್ಸೆಂಟ್ ಎಂದು ಮಾಡಿದ್ದೇವೆ ಒಟ್ಟು ಶೇಕಡಾ ೨೫ ರಂತೆ ರಿಸರ್ವೇಷನ್ ಮಾಡಬೇಕೆಂದು ತೀರ್ಮಾನ ಮಾಡಿರುತ್ತೇವೆ ಇದು ಒನ್ ಟೈಮ್ ಕನ್ಸೇಷನ್ ಅಲ್ಲ. ೧೮ ಪರ್ಸೆಂಟ್ ಪೂರ್ತಿಯಾಗುವವರೆಗೆ ನೇಮಕಾತಿ ಮಾಡಬೇಕಾಗುತ್ತದೆ. ಬಹುಶಃ ನಮ್ಮ ರಾಜ್ಯದಲ್ಲಿರುವ ಕಂಟ್ರಾಕ್ಟರ್ಸ್‌ಗಳಿಗೆ ಹೊಸ ಸವಲತ್ತುಗಳನ್ನು ಏನು ಕೊಡಬೇಕೆಂದು ಮಾಡಿರುತ್ತೇವೆಯೋ ಅದು ಇನ್ನು ಬೇರೆ ಯಾವ ರಾಜ್ಯದಲ್ಲೂ ಮಾಡಿಲ್ಲ. ಎಲ್ಲ ರಾಜ್ಯಗಳಲ್ಲಿಯೂ ಏನೇನು ಸವಲತ್ತುಗಳನ್ನು ಕೊಟ್ಟಿದ್ದಾರೆ ಎನ್ನುವುದಕ್ಕೆ ಇನ್‌ಫರ್‌ಮೇಷನ್ ತರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇಲ್ಲಿ ಏನಾಗಿದೆ ಎಂದರೆ ಅಧಿಕಾರಿಗಳ ಅಭಿಪ್ರಾಯ ಪಿ. ಡಬ್ಲ್ಯು. ಡಿ ಒಂದು ಇಲಾಖೆಯಲ್ಲಿ ಮಾಡಿದರೆ ಎಲ್ಲ ಇಲಾಖೆಗಳದೂ ಪ್ರಾಬ್ಲಮ್ ಬರುತ್ತದೆ. ಎಲ್ಲ ಇಲಾಖೆಗಳಲ್ಲೂ ಷಾರ್ಟೇಜ್ ಇದೆ ಎಂದು ಹೇಳಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಉತ್ತರ ಕೊಡತಕ್ಕಂಥ ಕಾಲದಲ್ಲಿ ಎಲ್ಲಾ ಇಲಾಖೆಯಲ್ಲೂ ನೇರ ನೇಮಕಾತಿ ಮಾಡತಕ್ಕಂಥ ಸಂಧರ್ಭದಲ್ಲಿ ೨೫ ಪರ್ಸೆಂಟ್ ರಿಸರ್ವೇಷನ್ ಮಾಡುತ್ತೇವೆಂದೂ ಘೋಷಣೆ ಮಾಡಿರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ರಿಸರ್ವೇಷನ್ ಆಫ್ ಪ್ರಮೋಷನ್ ಒಂದೇ ಕಾಲದಲ್ಲಿ ಏತಕ್ಕೆ ಮಾಡಲಿಲ್ಲವೆಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನೇರನೇಮಕಾತಿ ಜೂನಿಯರ್ ಇಂಜಿನಿಯರ್ಸ್. ಎಕ್ಸಿಕ್ಯುಟೀವ್ ಇಂಜಿನಿಯರ್ಸ್ ಬಗ್ಗೆ ಎಷ್ಟು ದೂರ ಹೋಗಬಹುದು ಎನ್ನುವುದು ಹೇಳುವುದಕ್ಕೆ ಆಗುವುದಿಲ್ಲ. ಈ ವರ್ಷ ಮಾಡಲು ಪ್ರಯತ್ನ ಮಾಡುತ್ತೇವೆ, ಫಸ್ಟ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿದ್ದು ಈ ಜನತಾ ಗೌವರ್ನಮೆಂಟ್ ಬಂದಮೇಲೆ. ಅನೌನ್ಸ್‌ಮೆಂಟ್ ಕೂಡ ಮಾಡಿದ್ದೇವೆ, One Muslim, one Kurba, One tapper, One scheduled Caste There is no Vakka_liga. There is no Lingayat. There is no Brahmin. This is going to be headed by the Chief Engineer, who is coming from a Scheduled Caste.

೩–೦೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಕಾಲದಲ್ಲಿ ಮಾಡಿದಂತೆ ನಿಮ್ಮ ಕಾಲದಲ್ಲಿಯೂ ಸ್ಪೆಷಲ್ ರಿಕ್ರೂಟ್‌ಮೆಂಟ್ ಏತಕ್ಕೆ ಮಾಡಲಿಲ್ಲ ?

ಶ್ರೀ ಎಚ್.ಡಿ. ದೇವೇಗೌಡ.—ನಿಮ್ಮ ಕಾಲದಲ್ಲಿ ಒಂದು ಸಲ ಮಾಡಿದ್ದರೆ ನಮ್ಮ ಕಾಲದಲ್ಲಿ ಎರಡು ಸಲ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಮಾಡಿದ್ದನ್ನೇ ನೀವೂ ಸಹ ಮಾಡುತ್ತಿದ್ದೀರಿ. ತಾವು ಹೊಸದಾಗಿ ಏನೂ ಮಾಡಲಿಲ್ಲ. ಹರಿಜನರ ಪೈಕಿ ಎಷ್ಟು ಜನ ಚೀಫ್-ಇಂಜಿನಿಯರ್‌ಗಳಿದ್ದಾರೆ? ಎಷ್ಟು ಜನ ಪೋಲೀಸ್ ಅಧಿಕಾರಿಗಳಿದ್ದಾರೆ? ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಎಷ್ಟು ಮಂದಿ ಇದ್ದಾರೆ? ಡಿವೈಎಸ್‌ಪಿ.ಗಳು ಎಷ್ಟು ಮಂದಿ ಇದ್ದಾರೆ ? ಹಾಗೂ ಇವರುಗಳನ್ನು ಎಲ್ಲೆಲ್ಲಿ ಹಾಕಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಎಚ್.ಡಿ. ದೇವೇಗೌಡ.—ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಂತೆ ಡಿಮ್ಯಾಂಡ್‌ಗಳ ಚರ್ಚೆ ಇಲ್ಲಿ ನಡೆಯುವಾಗ ಏನಾದರೂ ತಪ್ಪುಗಳಿದ್ದರೆ ಅದನ್ನು ಹೇಳತಕ್ಕಂಥ ಮತ್ತು ಸಂಬಂಧಪಟ್ಟ ಮಂತ್ರಿಗಳನ್ನು ತರಾಟೆಗೆ ತೆಗೆದುಕೊಳ್ಳುವಂತಹ ಅಧಿಕಾರ ಮಾನ್ಯ ಸದಸ್ಯರಿಗೆ ಇದ್ದೇ ಇದೆ. ಈಗ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಹರಿಜನ ಮತ್ತು ಗಿರಿಜನರಿಗೆ ಹೆಚ್ಚಿನ ರಿಜರ್‌ವೇಷನ್ ಇಟ್ಟಿದ್ದೇವೆ. ಇಂತಹ ಒಂದು ಕೆಲಸವನ್ನು ಬೇರೆ ರಾಜ್ಯಗಳಲ್ಲಿ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಕಾಲದಲ್ಲಿ ವಿದ್ಯಾ ಇಲಾಖೆಯಲ್ಲಿ ೬೮ ಪರ್ಸೆಂಟ್‌ವರೆಗೆ ರಿಜರ್‌ವೇಷನ್ ಇಟ್ಟು ಭರ್ತಿ ಮಾಡಲಾಯಿತು.

ಶ್ರೀ ಎಚ್ ಡಿ. ದೇವೇಗೌಡ.—ತಮ್ಮ ಕಾಲದಲ್ಲಿ ಒಂದು ಸಲ ಮಾಡಿದ್ದು ಮತ್ತೆ ಬಿಟ್ಟು ಹೋಯಿತು. ಸ್ಪೆಷಲ್ ರೆಕ್ರೂಟ್‌ಮೆಂಟ್‌ನ್ನು ಒಂದುವರ್ಷ ಮಾಡಿದ ನಂತರ ಮತ್ತೆ ಕೈಬಿಡಲಾಯಿತು. ಮಾನ್ಯ ಸದಸ್ಯರು ಮೊನ್ನೆಯವರೆಗೂ ಅಧಿಕಾರದಲ್ಲಿದ್ದರು. ಆದ್ದರಿಂದ ಮತ್ತೆ ಇದನ್ನು ಏಕೆ ಮಾಡಲಿಲ್ಲ. ಈಗ ನಾವು ಏನು ಕೆಲವು ಪ್ರಗತಿಪರವಾದಂಥ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ, ಅದನ್ನು ತಾವು ಒಪ್ಪಿಕೊಳ್ಳಬೇಕು. ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆ. ಈ ವಿಚಾರದಲ್ಲಿ ನಾವು ಬೇರೆ ರಾಜ್ಯಗಳಿಗಿಂತ ಮುಂದೆ ಹೋಗಿದ್ದೇವೆ.

ಇನ್ನು ಎನ್.ಎಂ.ಆರ್.ನಲ್ಲಿ ೨೪೦ ದಿನಗಳವರೆಗೆ ಕೆಲಸ ಮಾಡಿರುವಂತಹ ಎಷ್ಟು ಜನರಿದ್ದರೂ ಕೂಡ ಖಾಯಂ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಮತ್ತೆ ತಾ|| ೧೩-೧-೧೯೮೪ರಲ್ಲಿ ೩೩ ಜನ ಜೂನಿಯರ್ ಇಂಜಿನಿಯರ್‌ಗಳಿಗೆ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಪೋಸ್ಟ್‌ಗೆ ಪ್ರಮೋಷನ್ ಕೊಟ್ಟಿದ್ದೇವೆ. ಇದರಲ್ಲಿ ೧೯ ಜನ ಮುಸ್ಲಿಮರಿದ್ದಾರೆ. ಕಳೆದ ಒಂದು ವರ್ಷದಲ್ಲಿ ಹತ್ತು ಜನರಿಗೆ ಚೀಫ್-ಇಂಜಿನಿಯರ್‌ಗಳಾಗಿ ಪ್ರಮೋಷನ್ ಮಾಡಿದ್ದೇವೆ. ಈ ಹತ್ತು ಜನರಲ್ಲಿ ಒಬ್ಬರು ಮುಸ್ಲಿಮರು, ಒಬ್ಬರು ಹರಿಜನರು, ಒಬ್ಬರು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸೇರಿದವರು, ಒಬ್ಬರು ಮೈನಾರಿಟಿ ಗುಂಪಿಗೆ ಸೇರಿದವರು, ೩ ಜನ ಲಿಂಗಾಯಿತರು, ಇಬ್ಬರು ಬ್ರಾಹ್ಮಣರು, ಒಬ್ಬರು ವೈಶ್ಯ ಜನಾಂಗಕ್ಕೆ ಸೇರಿದವರು ಇದ್ದಾರೆ.

ಶ್ರೀ ಎಂ. ಮಹದೇವ್.—ಸೀನಿಯಾರಿಟಿ ಮೇಲೆ ತಾವು ಪ್ರಮೋಷನ್ ಕೊಟ್ಟಿದ್ದೀರಿ ಅಲ್ಲವೇ?

ಶ್ರೀ ಎಚ್.ಡಿ. ದೇವೇಗೌಡ.—ಇದು ಸೀನಿಯಾರಿಟಿ ಅಲ್ಲ, ಇದು ಸೆಲೆಕ್ಷನ್ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಸೇರಿ ಇವರನ್ನು ಸೆಲೆಕ್ಟ್ ಮಾಡುತ್ತಾರೆ. ಈ ವಿಚಾರ ಮಾನ್ಯ ಮೊಯ್ಲಿ ಅವರಿಗೂ ಸಹ ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಪ್ರಮೋಷನ್ ಕೊಡುವಾಗ ಸೀನಿಯಾರಿಟಿ ಲಿಸ್ಟನ್ನು ಮತ್ತು ರ್‍ಯಾಂಕ್ ಲಿಸ್ಟ್‌ನ್ನು ನೋಡಬೇಕಾಗುತ್ತದೆ. ಈ ಬಗ್ಗೆ ತಮ್ಮ ಮೇಲೆ ನಾನು ಆಪಾದನೆ ಮಾಡುತ್ತಿಲ್ಲ. ಆದರೆ ಸೀನಿಯಾರಿಟಿ ಲಿಸ್ಟ್‌ನ್ನು ಬಿಟ್ಟು ಹರಿಜನರೊಬ್ಬರಿಗೆ ಪ್ರಮೋಷನ್ ಕೊಡುವುದಕ್ಕೆ ಬರುವುದಿಲ್ಲ. ಇಂತಹವರು ಕೂಡ ಸೀನಿಯಾರಿಟಿ ಲಿಸ್ಟ್ ಆಧಾರದ ಮೇಲೆ ಪ್ರಮೋಷನ್ ಪಡೆಯಬೇಕಾಗುತ್ತದೆ. ಆದರೂ ಕೆಲವು ಸಂದರ್ಭಗಳಲ್ಲಿ ತಮಗೆ ಬೇಕಾದವರೊಬ್ಬರಿಗೆ ಪ್ರಮೋಷನ್ ಕೊಡಬೇಕಾಗಿದ್ದಲ್ಲಿ, ಅವರು ಸೀನಿಯಾರಿಟಿ ಲಿಸ್ಟ್‌ನಲ್ಲಿ ಕೆಳಗಿದ್ದರೂ ಕೂಡ ಅದನ್ನು ಓವರ್‌ಲುಕ್ ಮಾಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಓವರ್-ಲುಕ್ ಮಾಡುವ ಸಂದರ್ಭ ಬಂದಾಗ ಅದನ್ನು ಮಾಡಲೇ ಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಒಂದು ವೇಳೆ ತಮಗೆ ಬೇಕಾದ ಲಿಂಗಾಯಿತರು ಇಲ್ಲವೇ ಒಕ್ಕಲಿಗರಿಗೆ ಪ್ರಮೋಷನ್ ಕೊಡುವ ಸಲುವಾಗಿ ಸೀನಿಯಾರಿಟಿ ಪಟ್ಟಿಯಲ್ಲಿ ಮೇಲಿರುವ ಒಬ್ಬಬ್ಬರನ್ನು ಕೈಬಿಡುವುದಕ್ಕಾಗುವುದಿಲ್ಲ. ಆ ರೀತಿ ಮಾಡಿದ್ದೇ ಆದರೆ ಎಲ್ಲರೂ ಸೇರಿ ತಮ್ಮ ಮೇಲೆ ಗದಾಪ್ರಹಾರ ಮಾಡುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ.—ಹಾಗೆ ನೋಡಿದರೆ ಲಿಂಗಾಯಿತರೊಬ್ಬರು ಸೀನಿಯಾರಿಟಿಯಲ್ಲಿ ಮೇಲಿದ್ದರು. ಆದರೂ ಸಹ......

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಹಾಗಿದ್ದರೆ ಎಷ್ಟು ಜನ ಒಕ್ಕಲಿಗರನ್ನು ಓವರ್-ಲುಕ್ ಮಾಡಿ ಪ್ರಮೋಷನ್ ಕೊಟ್ಟಿದ್ದೀರಿ?

ಶ್ರೀ ಎಚ್.ಡಿ. ದೇವೇಗೌಡ.—ಒಬ್ಬರು ಒಕ್ಕಲಿಗರನ್ನು ಓವರ್-ಲುಕ್ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಪ್ರಬಲವಾದಂಥ ಕಾರಣವಿಲ್ಲದಿದ್ದರೆ ಓವರ್-ಲುಕ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್.ಡಿ. ಚೌಡಯ್ಯ.—ಯಾವುದೇ ಒಂದು ಜಾತಿಯವರು ಮಂತ್ರಿಗಳಾದ ಕೂಡಲೇ ಆ ಜಾತಿಯವರೆಲ್ಲಾ ಅಭಿವೃದ್ಧಿಯಾಗುವುದಿಲ್ಲ.

ಶ್ರೀ ಕೆ. ರಾಮಭಟ್.—ಇಲ್ಲಿ ಕೆಲವೇ ಜಾತಿಗಳ ಬಗ್ಗೆ ಚರ್ಚೆಯಾಗುತ್ತಿರುವಂತೆ ಕಾಣುತ್ತಿದೆ.

ಶ್ರೀ ಎಚ್.ಡಿ. ಚೌಡಯ್ಯ.—ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮೇಜರ್ ಕಮ್ಯುನಿಟಿಗಳನ್ನು ತುಳಿಯುತ್ತಿದೆ ಎಂಬತಕ್ಕಂಥ ಶಂಕೆ ಜನರಲ್ಲಿ ಬರುತ್ತಿದೆ. ಆದ್ದರಿಂದ ಈ ಜನತಾ ಸರ್ಕಾರಕ್ಕೆ ಮೇಜರ್ ಕಮ್ಯುನಿಟಿಗಳ ಮೇಲೆ ಸರ್ಜಸ್ ಮಾಡುವ ಉದ್ದೇಶವೇನಾದರೂ ಇದೆಯೇ ?

ಶ್ರೀ ಎಚ್. ಎಲ್. ತಿಮ್ಮೇಗೌಡ.—ವಿರೋಧಪಕ್ಷದ ಉಪನಾಯಕರು ಮಾತನಾಡುವಾಗ ಈ ಸರ್ಕಾರದವರು ಹರಿಜನ ಗುಂಪಿಗೆ ಸೇರಿದ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಚೀಫ್-ಇಂಜನಿಯರ್ ಗಳಿಗೆ ಅನ್ಯಾಯ ಮಾಡಿದ್ದಾರೆಂದು ಹೇಳಿದರು. ಆದರೆ ಮಾನ್ಯ ವಿರೋಧಪಕ್ಷದ ನಾಯಕರು ಪ್ರಮೋಷನ್‌ಗಳನ್ನು ಸೀನಿಯಾರಿಟಿ ಮೇಲೆ ಕೊಡಲಾಗಿದೆ ಎಂದು ಈಗ ಹೇಳಿದರು. ರೂಲ್ಸ್ ಪ್ರಕಾರವೇ ಪ್ರಮೋಷನ್‌ಗಳನ್ನು ಕೊಟ್ಟಿರುವಾಗ ನಿಮ್ಮ ಉಪನಾಯಕರು ಏತಕ್ಕೆ ಆ ರೀತಿ ಹೇಳಿದರು ?

ಶ್ರೀ ಎಂ. ವೀರಪ್ಪಮೊಯ್ಲಿ.—ಕೆಲವರನ್ನು ಯಾವಯಾವ ಸ್ಥಾನಗಳಲ್ಲಿ ಇಟ್ಟಿದ್ದಾರೆ, ಅದರ ಮೇಲೆ ಅನುಮಾನಗಳು ಬರುತ್ತಿವೆ ಎಂದು ಅವರು ಹೇಳಿದ್ದು.

ಶ್ರೀ ಸಿ. ಬೈರೇಗೌಡ.—ಪ್ರಮೋಷನ್‌ಗಳನ್ನು ಕೊಡುವಾಗ ಸೀನಿಯಾರಿಟಿ ಪಟ್ಟಿಗೆ ಏನಾದರೂ ದಕ್ಕೆ ಬಂದರೆ ಈ ರೀತಿಯೆಲ್ಲಾ ಆಗುತ್ತದೆ.

ಶ್ರೀ ಎಚ್.ಡಿ. ದೇವೇಗೌಡ.—ಯಾರುಯಾರನ್ನು ಯಾವಯಾವ ಜಾಗಗಳಲ್ಲಿ ಇಟ್ಟಿದ್ದೇವೆ ಎಂದು ಕೇಳಿದ್ದಾರೆ. ಅದಕ್ಕೆ ನಾನು ಉತ್ತರ ಕೊಡಬೇಕಾಗುತ್ತದೆ. ೧೯೮೨-೮೩ನೇ ಸಾಲಿನಲ್ಲಿ ೮ ಜನ ಹರಿಜನ ಸೂಪರಿಂಟೆಂಡಿಂಗ್ ಇಂಜನಿಯರ್‌ಗಳು ಹತ್ತು ವರ್ಕಿಂಗ್ ಸಬ್-ಡಿವಿಜನ್‌ಗಳಲ್ಲಿ ಕೆಲಸ ಮಾಡುತ್ತಿದ್ದರೆ ಇವೊತ್ತು ೧೬ ಜನರು ಕೆಲಸ ಮಾಡುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೇ ಹಿಂದೆ ಮುಖ್ಯ ಇಂಜನಿಯರ್ಸ್ ಇಬ್ಬರು ಇದ್ದರು. ಆದರೆ ಈಗ ಮೂರು ಜನ ಚೀಫ್ ಇಂಜನಿಯರ್ಸ್ ಕೆಲಸ ಮಾಡುತ್ತಿದ್ದಾರೆ. ಮತ್ತೆ ೧೩೨ ಜನ ಹರಿಜನ ಮತ್ತು ಗಿರಿಜನರಲ್ಲಿ ಈಗ ೧೪೭ ಜನ ಇಂಜನಿಯರ್ಸ್ ಕೆಲಸ ಮಾಡುತ್ತಿದ್ದಾರೆ. ಆದರೂ ಇವರು ಎಲ್ಲಾ ವರ್ಕಿಂಗ್ ಸಬ್ ಡಿವಿಜನ್‌ನಲ್ಲಿ ಇದ್ದಾರೆ. ಈಗ ನಾವು ೧೯೮೧-೮೨ನೇ ಸಾಲಿನಿಂದ ೧೯೮೩-೮೪ನೇ ಸಾಲಿನವರೆಗೂ ಲೆಕ್ಕಾಚಾರ ಮಾಡಿ ನೋಡಿದಾಗ ನಾವು ಹರಿಜನ ಮತ್ತು ಗಿರಿಜನರಿಗೆ ಯಾವುದೇ ರೀತಿಯ ಅನ್ಯಾಯವನ್ನು ಸಹ ಮಾಡಿಲ್ಲ. ಇವತ್ತು ನಮ್ಮ ಎಲ್ಲಾ ಸಬ್ ಡಿವಿಜನ್‌ಗಳಲ್ಲಿ ೧೪೬ ಜನ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನಿಯರ್ಸ್ ಕೆಲಸ ಮಾಡುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಮಾತನಾಡುವಾಗ ಈ

ಸಭೆಗೆ ತಪ್ಪು ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಮಲ್ಲಿ ಕಾರ್ಜುನ ಖರ್ಗೆಯವರ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಅಸಿಸ್ಟೆಂಟ್ ಇಂಜಿನಿಯರ್ಸ್ ಸಹ ಹರಿಜನ ಮತ್ತು ಗಿರಿಜನ ವರ್ಗಕ್ಕೆ ಸೇರಿದವರೇ.

SRI MALLIKARJUNA M. KHARGE.—Suppose he is not a scheduled caste.

SRI H.D. DEVEGOWDA.—If he has wrongly declared and if he is not a scheduled caste, ಆ ರೀತಿಯಾಗಿ ಸರ್ಟಿಫಿಕೇಟನ್ನು ಕೊಟ್ಟಿದ್ದರೆ ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

SRI MALLIKARJUNA M. KHARGE. He is from Sri Hanumanth Rao desai's constituency. Aland Executive Engineer.

SRI H.D. DEVEGOWDA.—The spenial secretary who is goiag to be named as secretary-Irrigation Department from 1st April, 1984 is a Kuruba by community. First man was a Brahmin. Second man was minority community man. Third man was a Vakkaliga. ಆದರೆ ಇವರೆಲ್ಲರನ್ನು ನಾವು ಬೇರೆ ಬೇರೆ ಜಾಗದಲ್ಲಿ ಇಟ್ಟಿದ್ದೇವೆ. ಆತ ನಾಲ್ಕನೆಯವರು ಆ ಲಿಸ್ಟಿನಲ್ಲಿ. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪೂರ್ಣವಾಗಿ ಅಧಿಕಾರಿಗಳ ಬಗ್ಗೆ ನಿರ್ಲಕ್ಷ್ಯ ಮನೋಭಾವನೆ ತಾಳಿದೆ ಎಂದು ಹೇಳುವುದು ಸರಿಯಾದುದು ಅಲ್ಲ. ಇನ್ನು ನಾನು ನನ್ನ ಇಲಾಖೆಯಲ್ಲಿ ಮಾಡಿರತಕ್ಕಂಥ ಕೆಲವಾರು ಸಾಧನಗಳ ಬಗ್ಗೆ ಈ ಸದನದ ಗಮನವನ್ನು ಸೆಳೆಯಬಯಸುತ್ತೇನೆ. ಆದರೆ ಕೆಲವರಲ್ಲಿ ಒಂದು ವಿಷಯ ತುಂಬಿಕೊಂಡಿದೆ. ಅದು ಏನೆಂದರೆ ದೇವೇಗೌಡರು ಯಾವಾಗಲೂ ಉನ್ನತ ವರ್ಗದ ಜನರಿಗೆ ಸಹಾಯ ಮಾಡುತ್ತಾರೆ, ಬಡವರಿಗೆ ಸಹಾಯ ಮಾಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ನಮ್ಮ ಇಲಾಖೆಯಲ್ಲಿ ಈಗ ಹೊಸದಾಗಿ ವರ್ಕರ್ಸ್ ಅಂಡ್ ಕಂಟ್ರಾಕ್ಟರ್ಸ್ ಬೆನಿವೊಲೆಂಟ್ ಫಂಡ್ ಸ್ಕೀಮ್ ಎಂದು ಮಾಡಿದ್ದೇವೆ. ಈ ಒಂದು ಸ್ಕೀಮನ್ನು ನಾವು ಜಾರಿಗೆ ತಂದ ಉದ್ದೇಶವಾದರೂ ಏನೆಂದರೆ ಯಾರು ಬಡವರ್ಗದ ಜನರು ಕಂಟ್ರಾಕ್ಟ್‌ದಾರರ ಬಳಿ ಕೆಲಸ ಮಾಡಿಕೊಂಡಿರುತ್ತಾರೋ ಅವರಿಗೆ ಮತ್ತು ಅವರ ಕುಟುಂಬದವರಿಗೆ ಏನಾದರೂ ಅನಾಹುತವಾದರೆ ಅವರ ಸ್ಥಿತಿಗತಿಗಳನ್ನು ಯಾರು ನೋಡುವುದಿಲ್ಲ. ಆದ್ದರಿಂದ ನಾವು ಈ ಯೋಜನೆಯನ್ನು ಜಾರಿಗೆ ತಂದು ಕಂಟ್ರಾಕ್ಟ್‌ದಾರರಿಂದ ಸ್ವಲ್ಪ ಹಣವನ್ನು ಸಂಗ್ರಹ ಮಾಡಿ ಯಾರಾದರೂ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಮೃತಪಟ್ಟರೆ ಅಥವಾ ಅಂಗಹೀನವಾದರೆ ಅವರಿಗೆ ಈ ಫಂಡ್‌ನಿಂದ ಪರಿಹಾರ ಧನವನ್ನು ಕೊಡುವಂಥ ವ್ಯವಸ್ಥೆಯನ್ನು ನಮ್ಮ ಜನತಾ ಸರ್ಕಾರ ಮಾಡಿದೆ. ನಾವು ಈ ಒಂದು ಫಂಡಿಗೆ ಕಂಟ್ರಾಕ್ಟ್‌ದಾರರಿಂದ ಒಂದು ಸಾವಿರ ರೂಪಾಯಿಗಳಿಗೆ ಒಂದು ರೂಪಾಯಿಯಂತೆ ಹಿಡಿದುಕೊಂಡು ಅವರಿಗೆ ಕೊಡುತ್ತೇವೆ. ಈ ಒಂದು ರೂಪಾಯಿ ಕಂಟ್ರಾಕ್ಟ್‌ದಾರರಿಗೆ ದೊಡ್ಡ ಹೊರೆಯಾಗುವುದಿಲ್ಲವೆಂದು ಸಹ ನಾನು ಭಾವಿಸಿದ್ದೇನೆ. ಮತ್ತೆ ಈ ಒಂದು ಸ್ಕೀಮ್‌ನಿಂದ ಬಡ ವರ್ಗದ ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯವನ್ನು ಒದಗಿಸಿ ಕೊಡಲಾಗುತ್ತದೆ. ಮತ್ತು ವೈದ್ಯಕೀಯ ಸೌಲತ್ತುಗಳನ್ನು ಕಲ್ಪಿಸಿ ಕೊಡಲಾಗುತ್ತದೆ. ಈ ಯೋಜನೆಯಿಂದ ಬಡ ಕೂಲಿಕಾರರಿಗೆ ಸಹಾಯ ಮಾಡಿದಂತೆ ಆಗುತ್ತದೆ. ನಾವು ಈ ಯೋಜನೆಯನ್ನು ಜಾರಿಗೆ ತಂದಿರತಕ್ಕಂಥದ್ದು ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡುತ್ತಿರುವ ಬಡ ಕೂಲಿಕಾರರಿಗೆ, ಬ್ರಿಡ್ಜ್‌ಗಳಲ್ಲಿ ಕೆಲಸ ಮಾಡುತ್ತಿರುವಂಥ ಜನರಿಗೆ ಮತ್ತು ಕಟ್ಟಡಗಳನ್ನು ಕಟ್ಟುತ್ತಿರುವಂಥ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಜನರಿಗೆ ಈ ಸೌಕರ್ಯ ಕಲ್ಪಿಸಿಕೊಡಲಾಗುವುದು. ಮತ್ತೆ ನಮ್ಮ ಜನತಾ ಸರ್ಕಾರ ಕಂಟ್ರಾಕ್ಟ್‌ದಾರರಿಗೆ ಅನುಕೂಲವಾಗುವಂಥ ಒಂದು ಹೊಸ ಯೋಜನೆಯನ್ನು ಜಾರಿಗೆ ತಂದಿದೆ. ಆ ಯೋಜನೆ ಯಾವುದೆಂದರೆ ಕಂಟ್ರಾಕ್ಟರ್ಸ್ ಕೋ ಆಪರೇಟೀವ್ ಬ್ಯಾಂಕ್ ಎಂದು. ಈ ಕಂಟ್ರಾಕ್ಟರ್ಸ್ ಕೋ ಆಪರೇಟೀವ್ ಬ್ಯಾಂಕ್‌ನಿಂದ ಸಣ್ಣ ಸಣ್ಣ ಕಂಟ್ರಾಕ್ಟ್‌ದಾರರಿಗೆ ಸಹಾಯವಾಗುತ್ತದೆ. ಈಗ ಸಾಮಾನ್ಯವಾಗಿ ನಾವು ನೋಡುತ್ತಿರುವಂತೆ ಕ್ಲಾಸ್ ತ್ರಿ ಮತ್ತು ಕ್ಲಾಸ್ ಫೋರ್ ಕಂಟ್ರಾಕ್ಟ್‌ದಾರರು ಬೇರೆ ಕಡೆಯಿಂದ ನೂರಕ್ಕೆ ೨೫ ಪರ್ಸೆಂಟ್ ಬಡ್ಡಿಯನ್ನು ಕೊಟ್ಟು ಹಣವನ್ನು ತೆಗೆದುಕೊಂಡು ಬಂದು ಕೆಲಸ ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಬಹಳ ಕಷ್ಟವಾಗುತ್ತದೆ. ಇದನ್ನು ತಪ್ಪಿಸಲು ಸರ್ಕಾರದವರು ಒಂದು ಕೋ ಆಪರೇಟೀವ್ ಬ್ಯಾಂಕನ್ನು ಸ್ಥಾಪನೆ ಮಾಡುತ್ತದೆ. ಆದರೆ ಈಗಾಗಲೇ ಸರ್ಕಾರ

ದವರು ಕಂಟ್ರಾಕ್ಟರ್ಸ್ ಕೋ-ಆಪರೇಟೀವ್ ಸೊಸೈಟಿ ಎಂದು ರಿಜಿಸ್ಟರ್ ಮಾಡಿಸಿದೆ. ಇದು ಮೊದಲು ೬ ತಿಂಗಳ ಕಾಲ ಸೊಸೈಟಿಯಾಗಿ ಕೆಲಸ ಮಾಡಿದ ನಂತರ ಇದನ್ನು ಬ್ಯಾಂಕ್ ಎಂದು ಕನ್‌ವರ್ಟ್ ಮಾಡ ಲಾಗುತ್ತದೆ. ಸಾಮಾನ್ಯವಾಗಿ ಸಣ್ಣ ಸಣ್ಣ ಕಂಟ್ರಾಕ್ಟುದಾರರು ಈ ಬ್ಯಾಂಕ್‌ನಿಂದ ಕಡಿಮೆ ಪ್ರಮಾಣ ದಲ್ಲಿ ಬಡ್ಡಿಯನ್ನು ಕೊಟ್ಟು ಸಾಲವನ್ನು ಪಡೆಯಬಹುದು. ಆ ನಂತರ ಈ ಕಂಟ್ರಾಕ್ಟುದಾರರ ಬಿಲ್ಲು ಗಳು ಈ ಬ್ಯಾಂಕ್‌ನಲ್ಲಿಯೇ ಪಾಸು ಮಾಡಲಾಗುತ್ತದೆ. ಆಗ ಕೋ-ಆಪರೇಟೀವ್ ಬ್ಯಾಂಕಿಗೆ ಬರ ಬೇಕಾದಂಥ ಹಣವನ್ನು ಹಿಡಿದುಕೊಂಡು ಉಳಿದ ಹಣವನ್ನು ಕಂಟ್ರಾಕ್ಟುದಾರರಿಗೆ ಕೊಡಲಾಗುವುದು.

ಶ್ರೀ ಹೆಚ್. ಡಿ. ಚೌಡಯ್ಯ.—ಸ್ವಾಮಿ ೧೦೦ಕ್ಕೆ ಒಂದು ರೂಪಾಯಿ ಹಿಡಿದುಕೊಂಡು ಚೆಕ್ ಗಳನ್ನು ಪಾಸ್ ಮಾಡಿಕೊಡುತ್ತಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಇದನ್ನು ತಪ್ಪಿಸುವುದಕ್ಕಾಗಿ ನಾವು ಈ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಈ ರೀತಿಯ ಎರಡು ಕಾರ್ಯಕ್ರಮಗಳನ್ನು ನಾವು ನಮ್ಮ ಇಲಾಖೆಯಲ್ಲಿ ರೂಪಿಸಿ ದ್ದೇವೆ. ಸ್ವಾಮಿ ನನ್ನ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ಸುಧಾರಣೆ ತರುವುದಕ್ಕೆ ಸಾಧ್ಯವಿದೆಯೋ ಆ ಎಲ್ಲಾ ಸುಧಾರಣೆಗಳನ್ನು ನಾನು ಮಾಡುತ್ತೇನೆ. ಮತ್ತು ನನ್ನ ಶಕ್ತಿಮೀರಿ ಪ್ರಯತ್ನ ಮಾಡುತ್ತೇನೆ ಎನ್ನುವ ಒಂದು ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ. ಇನ್ನು ನಾನು ಕೊನೆಯದಾಗಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಒಂದು ವರ್ಷದಲ್ಲಿ ನಾವು ನಮ್ಮ ರಾಜ್ಯದ ಜಲಾಶಯಗಳಿಗೆ ಖರ್ಚು ಮಾಡಿರತಕ್ಕಂಥದ್ದು ಕಾವೇರಿ ಬೇಸಿನ್‌ಗೆ ಸುಮಾರು ೨೧ ಕೋಟಿ ರೂಪಾಯಿಗಳು ಕೃಷ್ಣ ಬೇಸಿನ್‌ಗೆ ಸುಮಾರು ೧೦ ಕೋಟಿ ರೂಪಾಯಿಗಳು, ಮೈನರ್ ಇರಿಗೇಷನ್‌ಗೆ ಸುಮಾರು ೯ ಕೋಟಿ ರೂಪಾಯಿಗಳು, ಆದರೆ ಈ ಹಣವನ್ನು ನಾವು ಯೋಜನೆಯಲ್ಲಿ ಸೇರಿಸಿಲ್ಲ. ಆದರೂ ಕೂಡ ಸುಮಾರು ೪೦ ಕೋಟಿ ರೂಪಾಯಿಗಳ ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ. ನಮ್ಮ ಇಲಾಖೆಯಲ್ಲಿ ಒಳ್ಳೆಯ ಸುಧಾರಣೆ ತರಬೇಕೆಂದು ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ.

ನಾನು ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ. ೧೯೬೬ನೇ ಇಸವಿಯಲ್ಲಿ ಈ ಸದನದಲ್ಲಿ ನಾನು ಕಾವೇರಿ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟಹಾಗೆ ಒಂದು ಖಾಸಗಿ ನಿರ್ಣಯವನ್ನು ಮಂಡಿಸುವ ಅವಕಾಶ ಸಿಕ್ಕಿತ್ತು. ಸರ್ಕಾರ ಅದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದರಿಂದ ನಾನು ನನ್ನ ಖಾಸಗಿ ನಿರ್ಣಯವನ್ನು ವಿತ್‌ಡ್ರಾ ಮಾಡಿದ್ದೇನೆ. ಸರ್ಕಾರ ಆಶ್ವಾಸನೆ ಕೊಟ್ಟಿತ್ತು. ೧೯೬೬ನೇ ಏಪ್ರಿಲ್ ೮ನೇ ತಾರೀಖು ನಾನು ಮಂಡಿಸಿದಂತಹ ನಿರ್ಣಯ ಯುನಾನಿಮಸ್ ಆಗಿ ಅಡಾಪ್ಟ್ ಆಯಿತು. ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಆಗ ಇದ್ದರು. ಮಾನ್ಯಸದಸ್ಯರು ಈಗ ಇಲ್ಲೇ ಇದ್ದಾರೆ ಅವರಿಗೆ ಗೊತ್ತಿದೆ. ಇದೇ ಸದನದಲ್ಲಿ ಪಕ್ಷಾತೀತವಾಗಿ ಠರಾವು ಮಾಡಿ ತೀರ್ಮಾನ ಮಾಡಲಾಗಿತ್ತು.

"That this House urges upon the Government to devise all ways and means of utilising fully before 1974 the waters of Cauvery basin"

It is binding on the part of the Government. ಹಲವಾರು ಕಾರಣಗಳಿಂದ ಅದು ಆಗಲಿಲ್ಲ. ೬೬ ಕೋಟಿ ರೂಪಾಯಿ ಕೊಡುವ ಕಡೆ ಕೇವಲ ೭ ಕೋಟಿ ರೂಪಾಯಿ ಕೊಡಲಾಗಿದೆ. ಮೇಜರ್ ಅಂಡ್ ಮೀಡಿಯಮ್ ಪ್ರಾಜೆಕ್ಟ್‌ಗಳಿಗೆ ೭ ಕೋಟಿ ರೂಪಾಯಿ ಹಣವನ್ನು ಕೊಟ್ಟರೆ ಯಾವ ರೀತಿ ಕೆಲಸಕಾರ್ಯಗಳು ಆಗುತ್ತವೆ? ನಾವು ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಬರತಕ್ಕ ಪ್ರಾಜೆಕ್ಟ್‌ಗಳಿಗೆ ೭೩ ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ನಾವು ಕಾವೇರಿ ಜಲಾನಯನದ ಪ್ರಾಜೆಕ್ಟ್‌ಗಳನ್ನು ಅರ್ಥಮಾಡಿಕೊಂಡು ನಾವು ಈ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇನ್ನು ಹೆಚ್ಚು ಹಣ ಬೇಕಾಗುತ್ತದೆ. ಆದರೆ ಸಂಪನ್ಮೂಲದ ಇತಿಮಿತಿಯೊಳಗೆ ಈ ಒಂದು ತೀರ್ಮಾನ ವನ್ನು ತೆಗೆದುಕೊಂಡಿದ್ದೇವೆ. ನಾನು ಮುಖ್ಯಮಂತ್ರಿಗಳಿಗೆ ವೈಯಕ್ತಿಕವಾಗಿ ಮತ್ತು ಆ ಭಾಗದ ಜನರ ಪರವಾಗಿ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಚ್ಛಿಪಡುತ್ತೇನೆ. ಅದೇ ರೀತಿ ಕೃಷ್ಣ ಮೇಲ್ದಂಡೆ ಜಲಾನಯನ ಪ್ರದೇಶಕ್ಕೆ ೧೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಫೈನಾನ್ಸ್ ಕಮಿಷನ್ ಜೊತೆ ಪುನಃ ಚರ್ಚೆಮಾಡಿದ್ದೇವೆ. ಫೈನಾನ್ಸ್ ಕಮಿಷನ್ ಅವಾರ್ಡ್ ಹೊರಗಡೆ ಬಂದ ಮೇಲೆ ಇನ್ನೂ ಹೆಚ್ಚು ಹಣವನ್ನು ಕೊಡಿಸಲಿಕ್ಕೆ ಭರವಸೆ ಕೊಟ್ಟಿದ್ದಾರೆ. ಕೃಷ್ಣ ಮೇಲ್ದಂಡೆ

ಜಲಾನಯನ ಪ್ರಾಜೆಕ್ಟ್ Upper Krishna is a giant project. It is the proud of Karnataka. ಆ ಪ್ರಾಜೆಕ್ಟ್‌ನ ಬಗ್ಗೆ ಯಾರೂ ಅಸಮಾಧಾನಪಟ್ಟು ಕೇಳಬೇಕಾಗಿಲ್ಲ. ಈಗ ಇರತಕ್ಕ ಸಮಸ್ಯೆಗಳನ್ನು ಬಗೆಹರಿಸುವ ಹಂತದಲ್ಲಿದ್ದೇವೆ. ಈಗ ೨ ಕೋಟಿ ರೂಪಾಯಿ ಹೆಚ್ಚು ಹಣವನ್ನು ಇಟ್ಟಿದ್ದೇವೆ. ಮುಂದಿನ ವರ್ಷ ಜಾಸ್ತಿ ಹಣವನ್ನು ಕೊಡಲಾಗುವುದು. ಕಾರಂಜಿ ಪ್ರಾಜೆಕ್ಟ್‌ಗೆ ಒಂದೂವರೆ ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದೇವೆ. ಕಂಟ್ರಾಕ್ಟ್‌ರುಗಳಿಂದ ಯಾವುದೇ ರೀತಿಯ ತೊಂದರೆಯಾಗಿ ಕೆಲಸಕಾರ್ಯಗಳು ವಿಳಂಬವಾಗುವುದಕ್ಕೆ, ಅವರು ಅತೃಪ್ತರಾಗುವುದಕ್ಕೆ ಅವಕಾಶ ಕೊಡದ ರೀತಿಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಗೆ ೩ ಕೋಟಿ ರೂಪಾಯಿ ಹೆಚ್ಚು ಹಣವನ್ನು ಇಟ್ಟಿದ್ದೇವೆ. ಈಗ ಒಟ್ಟು ೧೦ ಕೋಟಿ ರೂಪಾಯಿ ಹಣವನ್ನು ಕೊಡಲಾಗಿದೆ. ಸಾಧ್ಯವಾದರೆ ಇನ್ನು ಸ್ವಲ್ಪ ಹೆಚ್ಚು ಹಣವನ್ನು ಕೊಡುವುದಕ್ಕೆ ಪ್ರಯತ್ನಮಾಡುತ್ತೇನೆ. ಒಟ್ಟಾರೆ ರಾಜ್ಯದ ಅಭಿವೃದ್ಧಿಗೆ ತಾರತಮ್ಯವಿಲ್ಲದ ರೀತಿಯಲ್ಲಿ ಕೆಲಸಮಾಡುವ ಹೊಣೆಗಾರಿಕೆ ಇದೆಯೆಂದು ತಿಳಿಸಿ ಈ ಸರ್ಕಾರ ಆ ರೀತಿ ನಡೆದುಕೊಳ್ಳುತ್ತದೆಂದು ಮತ್ತೊಮ್ಮೆ ತಿಳಿಸುತ್ತೇನೆ. ಒನೇ ಫೈನಾನ್ಸ್ ಕಮಿಷನ್ ಅವಾರ್ಡ್ ಬಂದನಂತರ ಮಾನ್ಯಮುಖ್ಯಮಂತ್ರಿಗಳು ಹಣವನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಹೊಸದಾಗಿ ೬೨ ಕೋಟಿ ರೂಪಾಯಿ ಹಣವನ್ನು ನಾವು ಕೊಡುತ್ತೇವೆ.

ಶ್ರೀ ಎಂ. ಮಹದೇವ್.—ನುಗು ಜಲಾಶಯದ ಸೆಕೆಂಡ್ ಸ್ಟೇಜ್ ಬಗ್ಗೆ ಮಂತ್ರಿಗಳು ಏನಾದರೂ ಹೇಳುತ್ತಾರೆಂದು ತಿಳಿದುಕೊಂಡಿದ್ದೆ, ತಾವು ಏನೂ ಹೇಳಲಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಹೇಳಬೇಕು.

ಶ್ರೀ ಬಿ. ಭೈರಪ್ಪಾಜಿ.—ಹೇಮಾವತಿ ಎಡದಂಡೆ ನಾಲಾ ಕೆಲಸ ನಿಧಾನವಾಗುತ್ತಿರುವ ಬಗ್ಗೆ ಮಾನ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕು.

ಶ್ರೀ ಎಚ್.ಡಿ. ದೇವೇಗೌಡ.—ಹೇಮಾವತಿ ಎಡದಂಡೆ ನಾಲಾ ಕೆಲಸದ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಯಾವ ಸಂಶಯವೂ ಬೇಡ. ಮಾನ್ಯ ಹುಚ್ಚಮಾಸ್ತಿಗೌಡರು ಅಲೈನ್‌ಮೆಂಟ್ ಯಾವರೀತಿ ಆಗಬೇಕು ಎನ್ನುವ ಪ್ರತಿಯೊಂದು ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಕಾವೇರಿ ಜಲಾನಯನ ಪ್ರದೇಶದ ಪ್ರಾಜೆಕ್ಟ್‌ಗಳನ್ನು ಮುಗಿಸಲಿಕ್ಕೆ ಸರ್ಕಾರ ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುತ್ತಿದೆ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಕಬಿನಿ ಫಸ್ಟ್ ಸ್ಟೇಜ್ ೧೯೮೫ರ ಜೂನ್‌ಗೆ ಮುಗಿಯುತ್ತದೆ. ೧೯೮೫ರಲ್ಲಿ ಮುಗಿಯದಿದ್ದರೆ ೧೯೮೬ರ ಮಾರ್ಚಿಯೊಳಗೆ ಮುಗಿಯುತ್ತದೆ. ಫಸ್ಟ್‌ಸ್ಟೇಜಿನ ಕೆಲಸ ಸಂಪೂರ್ಣವಾಗಿ ಮುಗಿಸಲಿಕ್ಕೆ ಕ್ರಮ ತೆಗೆದು ಕೊಳ್ಳುತ್ತೇವೆ. ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ ಅಷ್ಟು ಹಣವನ್ನು ಒದಗಿಸುತ್ತೇವೆ. ಅದರ ಬಗ್ಗೆ ವಾದವಿವಾದಗಳು ಬೇಡ. ಸೆಕೆಂಡ್ ಸ್ಟೇಜ್ ಏತ ನೀರಾವರಿ ಯೋಜನೆ ಕೆಲಸವನ್ನು ಕೈಗೆತ್ತಿಕೊಳ್ಳಲಿಕ್ಕೆ ಹೆಚ್ಚು ಸಂಪನ್ಮೂಲವನ್ನು ಕೂಡಿಸಿಕೊಂಡು ಆಲೋಚನೆ ಮಾಡೋಣ. ಈ ಬೇಡಿಕೆಯನ್ನು ವಿರೋಧಮಾಡುತ್ತೇನೆಂದು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಹೇಳತಕ್ಕದ್ದು ಏನಿದೆ, ಕೆಲಸಕಾರ್ಯಗಳು ಆಗುವುದು ಬೇಡವೆಂದು ಹೇಳುವುದಾದರೆ ಹೇಳಲಿ.

ಶ್ರೀ ಎಂ. ಮಹದೇವ್.—ನುಗು ಜಲಾಶಯಕ್ಕೆ ಕಬಿನಿ ನೀರನ್ನು ಡೈವರ್ಟ್ ಮಾಡುವುದಕ್ಕೆ ತಾವು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಎಚ್.ಡಿ. ದೇವೇಗೌಡ.—ರಾಜ್ಯದ ಅಭಿವೃದ್ಧಿ ವೆಚ್ಚಕ್ಕೋಸ್ಕರ ಮಂಜೂರಾತಿಯನ್ನು ಕೊಡುವಾಗ ಅದಕ್ಕೆ ಅವಿರೋಧವಾಗಿ ಒಪ್ಪಿಗೆ ಕೊಡಬೇಕೆಂದು ನಾನು ವಿರೋಧ ಪಕ್ಷದ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರೆಲ್ಲರೂ ನಾನು ಮಂಡಿಸಿರತಕ್ಕ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎನ್. ಜಿ. ನಾಯಕ್.—ಮಾನ್ಯಮಂತ್ರಿಗಳು ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳಬೇಕು.

ಉಪಾಧ್ಯಕ್ಷರು.—ಮಂತ್ರಿಗಳಿಂದ ಉತ್ತರ ಹೇಳಿಸುವುದಕ್ಕೆ ನಿಮ್ಮ ನಾಯಕರು ನಿಂತಿದ್ದಾರೆ ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಉಪಾಧ್ಯಕ್ಷರೆ ಮಾನ್ಯ ಬೊಮ್ಮಾಯಿಯವರಿಗೆ ಈಗ ಪ್ರಶ್ನೆಗಳನ್ನು ಕೇಳುವುದಕ್ಕೆ ಆಗುವುದಿಲ್ಲ. ಅವರಿಗೆ ಸಹಾಯ ಮಾಡೋಣವೆಂದು ನಾನು ಈ ಪ್ರಶ್ನೆ ಕೇಳುತ್ತಿದ್ದೇನೆ. ಮಾನ್ಯ ಬೊಮ್ಮಾಯಿಯವರು ಈಗ ನಿರಾಯುಧರಾಗಿದ್ದಾರೆ. ಮಾನ್ಯ ಬೊಮ್ಮಾಯಿಯವರು ಇಲ್ಲಿ ಕುಳಿತುಕೊಂಡಿದ್ದಾರೆ ಮಾನ್ಯ ಲೋಕೋಪಯೋಗಿ ಮಂತ್ರಿಗಳಾದ ದೇವೇಗೌಡರನ್ನು ಚೂರು ಚೂರು ಮಾಡಿಬಿಡುತ್ತಿದ್ದರು. ಈಗ ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗಳಿಗೆ ಏನು ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಏನು ಮಾಡಬೇಕಾಗಿದೆಯೋ ಅದನ್ನು ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಲಪ್ರಭಾ ಯೋಜನೆಗೆ ೧೯೮೨-೮೩ರಲ್ಲಿ ೧೧.೯೦ ಕೋಟಿ ರೂಪಾಯಿ ಕೊಡಲಾಗಿದೆ. ೧೯೮೩-೮೪ರಲ್ಲಿ ೧೧ ಕೋಟಿಗೆ ಇಳಿಸಿದ್ದಾರೆ. ೧೯೮೪-೮೫ರಲ್ಲಿ ೧೨.೦೫ ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದಾರೆ. ಈ ಹಣ ಯಾವ ಖರ್ಚಿಗೆ ಆಗುತ್ತದೆ ? ಮಾನ್ಯ ಬೊಮ್ಮಾಯಿಯವರಿಗೆ ತಾರತಮ್ಯ ಮಾಡಿದ್ದಾರೆಂದು ನನಗೆ ವ್ಯಥೆ. ಅವರು ಜನರನ್ನು ಎದುರಿಸಬೇಕಾಗುತ್ತದೆ. ಘಟಪ್ರಭಾ ಯೋಜನೆಗೆ ಹಣವನ್ನು ಯಾವರೀತಿ ಕೊಟ್ಟಿದ್ದಾರೆಂದರೆ ೧೯೮೨-೮೩ರಲ್ಲಿ ೬.೨೮ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ೧೯೮೩-೮೪ರಲ್ಲಿ ೮.೦೧ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ೧೯೮೪-೮೫ರಲ್ಲಿ ೯.೫೧ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಮಾನ್ಯ ಬೊಮ್ಮಾಯಿಯವರು ಉತ್ತರ ಕರ್ನಾಟಕ ಜನರನ್ನು ಎದುರಿಸಬೇಕಾಗುತ್ತದೆ. ಮಾನ್ಯ ಬೊಮ್ಮಾಯಿಯವರಿಗೆ ಬಹಳ ಅನ್ಯಾಯವಾಗಿದೆ. ಇದನ್ನು ಸರಿಪಡಿಸಿಕೊಳ್ಳಲಿಕ್ಕೆ ಏನು ಮಾಡುತ್ತೀರಿ ?

SRI H.D. DEVE GOWDA.—This year we have given 3 crores more both for Ghataprabha and Malaprabha. ಮಾನ್ಯ ವೀರಪ್ಪಮೊಯಿಲಿಯವರು ರಾಜಕೀಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರ ರಾಜಕೀಯ ನಡೆಯುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಗೆ ೧೦ ಕೋಟಿ ರೂಪಾಯಿ ಹಣವನ್ನು ಅಡಿಶನಲ್ ಆಗಿ ಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಹೆಚ್ಚಿಗೆ ಹಣ ಕೊಟ್ಟಿರುವುದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಕಾವೇರಿ ಜಲಾನಯನ ಪ್ರದೇಶಕ್ಕೆ ೨೧ ಕೋಟಿ ರೂಪಾಯಿ ಹಣ ಕೊಡಬೇಕಾದರೆ ಸಚಿವಸಂಪುಟದಲ್ಲಿ ಚರ್ಚೆಮಾಡಿ, ರಾಜ್ಯದ ಹಿತಾಸಕ್ತಿಯಿಂದ ಹಿಂದೆ ಆ ಕೆಲಸವನ್ನು ಕೈಬಿಟ್ಟಿದ್ದರಿಂದ ನಾವು ಆ ಕೆಲಸವನ್ನು ತೆಗೆದುಕೊಳ್ಳುವ ತೀರ್ಮಾನವನ್ನು ಮಾಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮುಂಬಯಿ ಕರ್ನಾಟಕಕ್ಕೆ ಸ್ವಲ್ಪ ನಿರ್ಲಕ್ಷ್ಯ ಮಾಡಿದಹಾಗೆ ಕಾಣುತ್ತದೆಂದು ನಾನು ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಆಗಲೇ ಫಿಗರ್ಸ್ ಓದಿದ್ದೇನೆ, ಧಾರವಾಡ, ಗುಲ್ಬರ್ಗಾ, ಬೆಳಗಾಂ ರಾಯಚೂರಿಗೆ ಎಷ್ಟು ಬಂದಿದೆ ಎಂದು ಹೇಳಿದ್ದೇನೆ. ಇದರ ಜೊತೆಗೆ Major and Medium projectsಗೆ 7th Finance Commission ನಿಂದ award ಬಂದ ಮೇಲೆ The Chief Minister has made, as I have already said, a categorical assurance to increase little more allocation for Krishna project. That we will apportion it in addition to this.

ಶ್ರೀ ಎಂ. ವೀರಪ್ಪಮೊಯಿಲಿ.—ಅವರು ನಾನ್ ಪ್ಲಾನ್‌ಗೆ ಕೊಡುತ್ತಾರೆ, ಪ್ಲಾನ್‌ಗೆ ಹೇಗೆ ಕೊಡುತ್ತಾರೆ ?

೭-೩೦ ಪಿ. ಎಂ.

ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನು ಹೇಗೆ ಮಾಡಬೇಕೋ ನಮಗೆ ಬಿಡಿ. ಘಟಪ್ರಭಾ, ಮಲಪ್ರಭಾ ಯೋಜನೆಗಳಿಗೆ ವಿಶ್ವಬ್ಯಾಂಕಿನಿಂದ ಸಹಾಯ ಪಡೆಯಬೇಕೆಂದು ಕೇಳಿ ವ್ಯವಹಾರ ಮಾಡುತ್ತಿದ್ದೇವೆ. ಇದರ ಬಗ್ಗೆ ನಿರ್ಲಕ್ಷ್ಯ ಮಾಡತಕ್ಕ ಪ್ರಶ್ನೆ ಇಲ್ಲ.

ಶ್ರೀ. ಬಿ. ಬಿ. ಚಿಮ್ಮನಕಟ್ಟಿ.—ಅಧ್ಯಕ್ಷರೇ, ಈಗ ಮಲಪ್ರಭಾ ಮತ್ತು ಘಟಪ್ರಭಾ ಪ್ರಾಜೆಕ್ಟ್‌ಗಳಲ್ಲಿ ಮಲಪ್ರಭಾ ಪ್ರಾಜೆಕ್ಟ್ ಕೆಲಸವನ್ನು ಪ್ಲಾನಿಂಗ್ ಕಮೀಶನ್ ಅವರೂ ಕೂಡ ೧೯೮೪-೮೫ರಲ್ಲಿ ಮಾಡಿ

ಮುಗಿಸಬೇಕೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರೂ ನಿರ್ದೇಶನ ನೀಡಿದ್ದಾರೆ. ೧೯೯೫ನೇ ಇಸವಿಯೊಳಗೆ ಘಟಪ್ರಭಾ ಮುಗಿಸಬೇಕೆಂದು ಟಾರ್ಜೆಟ್ ಫಿಕ್ಸ್ ಮಾಡಿದ್ದಾರೆ. ಇದಕ್ಕೆ ಇಷ್ಟು ಹಣ ನಿಗದಿ ಮಾಡಬೇಕೆಂದು ನಿರ್ದೇಶನ ಕೂಡ ಕೊಟ್ಟಿದ್ದಾರೆ. ಇಷ್ಟು ಇದ್ದಾಗ್ಯೂ ಕೂಡ ಹಣ ಕಡಿಮೆ ಕೊಟ್ಟಿದ್ದನ್ನು ನೋಡಿದರೆ, ನಮ್ಮ ಜಿಲ್ಲೆಗಂತೂ ಬಹಳ ಅನ್ಯಾಯವಾಗಿದೆ. ನಮಗೆ ಬಹಳ ಅನ್ಯಾಯವಾಗಿದೆ ಎಂದು ಸ್ಪಷ್ಟವಾಗಿ ಹೇಳದೇ ವಿಧಿಇಲ್ಲ. ಎರಡನೆಯದಾಗಿ ಈ ಅಪ್ಪರ್ ಕೃಷ್ಣಾ ಯೋಜನೆಗೆ ಯಾವಾಗ ಹೆಚ್ಚಿನ ಹಣ ಕೊಡುತ್ತೀರಿ ? ವರ್ಲ್ಡ್ ಬ್ಯಾಂಕ್‌ನಿಂದ ಹೆಚ್ಚಿನ ಹಣವನ್ನು ತೆಗೆದುಕೊಳ್ಳುತ್ತೇವೆ ಎಂದು ಆಸೆ ಇಟ್ಟಿದ್ದರು. ಅದು ಕೂಡ ನಿರಾಸೆಯಾಗತಕ್ಕಂಥ ಸಂದರ್ಭ ಬಂತು. ಈಗಲಾದರೂ ಕೂಡ ಮರುವಿಚಾರಣೆ ಮಾಡಿ ಈ ಜಿಲ್ಲೆಯಲ್ಲಿರತಕ್ಕಂಥ ಪರಿಸ್ಥಿತಿಯನ್ನು ನೋಡಿಕೊಂಡು ಹೆಚ್ಚಿನ ಹಣ ಕೊಡುವುದಕ್ಕೆ ಮಾನ್ಯ ಮಂತ್ರಿಗಳು ಮನಸ್ಸು ಮಾಡುತ್ತಾರೋ ಹೇಗೆ ? ಮೂರನೆಯದಾಗಿ ಹೋದ ವರ್ಷ ೧೯೮೩-೮೪ ರಲ್ಲಿ ಲಿಫ್ಟ್ ಇರಿಗೇಶನ್‌ನ್ನು ಸೊಸೈಟಿ ಮುಖಾಂತರ ಮಾಡಬೇಕೆಂದು ತಾವು ಕೂಡ ನಿರ್ದೇಶನ ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ತೀರ್ಮಾನ ತೆಗೆದುಕೊಂಡು ಲಿಫ್ಟ್ ಇರಿಗೇಶನ್‌ಗೆ ಮಂಜೂರಾತಿಯನ್ನು ಕೂಡ ಕೊಟ್ಟಿದ್ದೀರಿ. ಇದಕ್ಕೆ ಪೂರ್ತಿಯಾಗಿ ಹಣ ನಿಭಾಯಿಸುತ್ತೀರಾ ಹೇಗೆ ? ಏಕೆಂದರೆ ಹೋದವರ್ಷ ಲಿಫ್ಟ್ ಇರಿಗೇಶನ್ ತೆಗೆದುಕೊಳ್ಳಲಿಲ್ಲ. ಆಮೇಲೆ ಇರಿಗೇಶನ್ ಆ್ಯಕ್ಟ್ ಅಮೆಂಡ್‌ಮೆಂಟ್ ಮಾಡುವ ಬಗ್ಗೆ ಹೇಳಿಲ್ಲ.

ಶ್ರೀ ಹೆಚ್. ಡಿ, ದೇವೇಗೌಡ.—ಇದಕ್ಕೆ ಕಮಿಟಿ ಕಾನ್ಸ್ಟಿಟ್ಯೂಟ್ ಮಾಡುತ್ತೇವೆ.

ಶ್ರೀ ಕಡಪಟ್ಟಿ ಶಿವಸಂಗಪ್ಪ ಸಿದ್ದಪ್ಪ.—ಈಗ ಅಪ್ಪರ್ ಕೃಷ್ಣಾ ಮೊದಲನೇ ಹಂತ ಯಾವಾಗ ಮುಗಿಯುತ್ತದೆ ? ಮೊದಲನೇ ಹಂತದಲ್ಲಿ ೧೭ ಲಕ್ಷ ಎಕರೆಗೆ ನೀರಾವರಿಯಾಗುತ್ತದೆ. ಇದನ್ನು ಕೆ. ಜಿ. ಕಮೀಶನ್ ಪ್ರಕಾರ ಮಾಡುವುದಕ್ಕೆ ಉಪಯೋಗ ಮಾಡುವುದಕ್ಕೆ ಶಕ್ಯ ಇದೆಯೋ ಇಲ್ಲವೋ ತೆಲುಗು ಗಂಗಾ ಬಗ್ಗೆ ನಿರ್ಣಯ ಅಂಗೀಕಾರ ಮಾಡಿ ಹೆಚ್ಚು ನೀರು ಉಪಯೋಗ ಮಾಡುವುದಕ್ಕೆ ಶಕ್ಯ ಇದೆಯೋ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ನೀಡಬೇಕು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಕಾವೇರಿ ಬೇಸಿನ್‌ನಲ್ಲಿ ಪ್ರಾಜೆಕ್ಟ್ ನವೀಕರಣಕ್ಕೆ ಹೆಚ್ಚು ಹಣ ಖರ್ಚು ಮಾಡುವ ಬಗ್ಗೆ ಆಕ್ಷೇಪಣೆ ಇಲ್ಲ. ಆದರೆ ಭದ್ರಾದಲ್ಲಿ ಈ ನವೀಕರಣಕ್ಕೆ ಯಾವ ಹಣವನ್ನೂ ಪ್ರೊವೈಡ್ ಮಾಡಿಲ್ಲ. ಕಾವೇರಿ ಬೇಸಿನ್‌ನಲ್ಲಿ ಕೆ. ಎಸ್. ಆರ್. ಕೆಳಗಡೆ ೧೦ ಕೋಟಿ ಇಟ್ಟಿದ್ದೀರಿ. ಭದ್ರಾಕ್ಕೂ ಕೊಡುತ್ತೀರೋ ಹೇಗೆ ?

(ಗೊಂದಲ)

ಉಪಾಧ್ಯಕ್ಷರು.—ಒಬ್ಬೊಬ್ಬ ಸದಸ್ಯರಿಗೂ ಪ್ರತ್ಯೇಕವಾಗಿ ಉತ್ತರ ಕೊಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಲಿಫ್ಟ್ ಇರಿಗೇಶನ್‌ನ್ನು ಸರ್ಕಾರ ತೆಗೆದುಕೊಳ್ಳಬೇಕೋ ಅಥವಾ ಇಲಾಖೆಯೋ ತೆಗೆದುಕೊಳ್ಳಬೇಕೋ ಎಂದು ಪ್ರಶ್ನೆ ಕೇಳಿದ್ದಾರೆ. ಸರ್ಕಾರ ಇದರ ಬಗ್ಗೆ ತೀರ್ಮಾನ ಮಾಡಿಲ್ಲ. ಸರ್ಕಾರ ಇಲಾಖೆ ಮತಿಯಿಂದ ಮಾಡಬೇಕೆಂಬ ಅಭಿಪ್ರಾಯ ಇಟ್ಟುಕೊಂಡಿದೆಯೆಂದು ಇಷ್ಟು ಮಾತ್ರ ಹೇಳುತ್ತೇನೆ. ಇನ್ನು, ಇದರ ಬಗ್ಗೆ ಸರ್ಕಾರ ಸಚಿವ ಸಂಪುಟದಲ್ಲಿ ನಿರ್ಣಯ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು.— ಸಚಿವರು ಉತ್ತರ ಕೊಡಬೇಕಾದರೆ ಸದಸ್ಯರುಗಳು ಸುಮ್ಮನೆ ಕೂತುಕೊಳ್ಳುವುದಿಲ್ಲ. ಒಬ್ಬ ಸದಸ್ಯರು ಕೇಳಿದ ವಿವರಣೆಗೆ ಸಚಿವರು ಉತ್ತರ ಕೊಟ್ಟಮೇಲೆ ಮತ್ತೊಬ್ಬರು ಎದ್ದು ನಿಂತು ಕೊಂಡರೆ ಒಳ್ಳೆಯದು. ಅದಕ್ಕೆ ನಾನು ಹೇಳುವುದೇನೆಂದರೆ ಎಲ್ಲರೂ ಮೊದಲು ವಿವರಣೆ ಕೇಳಿ ಬಿಡಲಿ. ಮಾನ್ಯ ಮಂತ್ರಿಗಳು ಅದನ್ನು ಗುರುತು ಹಾಕಿಕೊಳ್ಳುತ್ತಾರೆ. ಇದು ಸೂಕ್ತವೆಂದು ನನಗನ್ನಿಸುತ್ತದೆ.

ಶ್ರೀ ಎಚ್. ನಾಗನಗೌಡ.—ಹೈದರಾಬಾದ್ ಕರ್ನಾಟಕ, ಬೊಂಬಾಯಿ ಕರ್ನಾಟಕದ ಬಗ್ಗೆ ಮಾತನಾಡಿದ್ದಾರೆ. ಆದರೆ ಬಳ್ಳಾರಿ ಜಿಲ್ಲೆ ಹೈದರಾಬಾದ್ ಕರ್ನಾಟಕಕ್ಕೂ ಸೇರಿ ಹೋಗಿಲ್ಲ, ಹಳೇ ಮೈಸೂರಿಗೂ ಸೇರಿ ಹೋಗಿಲ್ಲ. ನಮ್ಮ ಪರಿಸ್ಥಿತಿ ಚಿಂತಾಜನಕವಾಗಿದೆ. ತುಂಗಭದ್ರಾ ಬೋರ್ಡ್‌ನ್ನು ಅಬಾಲಿಶ್ ಮಾಡಬೇಕೆಂದು ನಾನು ಹೇಳಿದ್ದೆ.

ಶ್ರೀ ಬಸವರಾಜ ಶಂಕರಪ್ಪ ಪಾಟೀಲ್.—ಮಾನ್ಯ ಮಂತ್ರಿಗಳಲ್ಲಿ ಒಂದು ವಿಷಯವನ್ನು ಕೇಳಬೇಕೆಂದು ಇಚ್ಛೆಪಡುತ್ತೇನೆ. ಅವರು ಎಲ್ಲಾ ವಿಷಯಗಳ ಬಗ್ಗೆ ಹೇಳಿದರು ಆದರೆ ಪುನರ್ ವ್ಯವಸ್ಥೆ ಬಗ್ಗೆ ಹೇಳಲಿಲ್ಲ. ಅವರಿಗೆ ಏನೇನು ತೊಂದರೆ ಇದೆ, ಅದನ್ನು ಪರಿಹಾರ ಮಾಡಲಿಕ್ಕೆ ಕಾರ್ಯಕ್ರಮದ ಬಗ್ಗೆ ಅವರು ಪ್ರಸ್ತಾಪ ಮಾಡಿಲ್ಲ. ಮಾನ್ಯ ಮಂತ್ರಿಗಳು ಘಟಪ್ರಭಾ ಮುಳುಗಡೆ ಜನರ ಪರಿಸ್ಥಿತಿಯನ್ನು ಹೋಗಿ ನೋಡಿದ್ದಾರೆ. ಅಲ್ಲಿ ಲಿಫ್ಟ್ ಇರಿಗೇಶನ್ ಆಗಬೇಕಾಗಿದೆ, ರಸ್ತೆಗಳು ಆಗಬೇಕಾಗಿದೆ ಮತ್ತೆ ಅವರಿಗೆ ಹಣ ಸಿಗಬೇಕಾಗಿದೆ. ಇವುಗಳ ಬಗ್ಗೆ ಯಾವುದಾದರೂ ನಿರ್ದಿಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳಿಂದ ಅಪೇಕ್ಷಿಸುತ್ತೇನೆ. ಏಕೆಂದರೆ ಅವರು ಅಲ್ಲಿಗೆ ಹೋಗಿ ಬಂದಿದ್ದಾರೆ. ಆ ಜನರಿಗೆ ಸಮಾಧಾನ ಹೇಳಬೇಕು. ಅಲ್ಲಿ ಕುಡಿಯತಕ್ಕಂಥ ನೀರಿನ ವ್ಯವಸ್ಥೆ ಇಲ್ಲ.

ಶ್ರೀ ಎನ್. ಜಿ. ನಾಯಕ್.—ಅಧ್ಯಕ್ಷರೇ, ನಮ್ಮ ಜಿಲ್ಲೆಯನ್ನು ಯಾರೂ ಕೇಳುವವರೇ ಇಲ್ಲ. ನಾನೊಬ್ಬನೇ ಕೇಳುವುದು. ನಮ್ಮ ಜಿಲ್ಲೆಯಲ್ಲಿ ಮಳೆ ಬಹಳ ಕಡಿಮೆ.

ಉಪಾಧ್ಯಕ್ಷರು.—ನಾಯಕರೇ, ವಿವರಣೆ ಕೇಳುವುದಕ್ಕೆ ಮಾತ್ರ ಇಲ್ಲ ಅವಕಾಶ. ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎನ್. ಜಿ. ನಾಯಕ್.—ಆಯ್ತು ಸ್ವಾಮಿ. ನಮ್ಮದು ಬರಗಾಲಕ್ಕೆ ತುತ್ತಾದ ಪ್ರದೇಶ. ಅಪ್ಪರ್ ಭದ್ರಾ ಪ್ರಾಜೆಕ್ಟ್ ಆಗಬೇಕಾಗಿದೆ. ದಯವಿಟ್ಟು ಇದನ್ನು ಮಾಡಿಕೊಡಲೇ ಬೇಕು. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ನೀರಾವರಿ ಬಗ್ಗೆ ಕೂಲಂಕಷವಾಗಿ ಮಾತನಾಡಿದ್ದಾರೆ. ದಾವಣಗೆರೆಯಲ್ಲಿ ಬೈಪಾಸ್ ರೋಡ್ ಹದಿನೈದು ವರ್ಷಗಳಿಂದ ನಡೆಯುತ್ತಿದೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕೆಲಸ ಹಾಗೆಯೇ ನಿಂತಿದೆ. ಇನ್ನೆಷ್ಟು ಸಮಯದಲ್ಲಿ ಇದನ್ನು ಪೂರ್ತಿ ಮಾಡುತ್ತೀರೆಂದು ಮಾನ್ಯ ಸಚಿವರು ಹೇಳಬೇಕು. ಇದರಿಂದ ಎರಡು ಲೆವಲ್‌ಕ್ರಾಸ್ ರೋಡ್ ತಪ್ಪಿಸುವುದಕ್ಕೆ ಸಾಧ್ಯ ಇದೆ. ತಾವು ನೋಡಿದ್ದೀರಿ. ಅನೇಕ ವಾಹನ ಸಂಚಾರಕ್ಕೆ ಅಡಚಣೆ ಆಗುತ್ತದೆ. ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಈಗ ಹೆದ್ದಾರಿಗಳಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಆಗುತ್ತದೆ. ರಸ್ತೆ ಪಕ್ಕದಲ್ಲಿ ವಿಶಾಲವಾದ ಮೈದಾನಗಳನ್ನು ಹತ್ತು ಇಪ್ಪತ್ತು ಮೈಲು ದೂರದಲ್ಲಿ ಮಾಡಿದರೆ ಅಲ್ಲಿ ವಾಹನಗಳನ್ನು ನಿಲ್ಲಿಸಿದರೆ ಪ್ರಯಾಣಿಕರು ಸ್ವಲ್ಪ ವಿಶ್ರಾಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈಗ ವಾಹನಗಳನ್ನು ರಸ್ತೆಗಳಲ್ಲಿ ಹೋಟೆಲ್‌ಗಳ ಪಕ್ಕದಲ್ಲಿ ನಿಲ್ಲಿಸುತ್ತಾರೆ. ಇದರ ಬಗ್ಗೆ ತಾವು ಏನು ಅಭಿಪ್ರಾಯ ಕೊಡುತ್ತೀರಿ ? ನಂತರ, ದಿನಗೂಲಿ ಕೆಲಸಗಾರರು ಅನೇಕ ಜನ ರಸ್ತೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ನೀರಾವರಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಹತ್ತಿಪ್ಪತ್ತು ವರ್ಷಗಳಿಂದಲೂ ಕೂಡ ದಿನಗೂಲಿ ಕೆಲಸದಲ್ಲಿ ಇದ್ದಾರೆ. ಅವರೆಲ್ಲರನ್ನೂ ಖಾಯಂ ಕೆಲಸಗಾರರನ್ನಾಗಿ ಮಾಡಿ, ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಅವರಿಗೂ ಕೂಡ ಸರ್ಕಾರಿ ನೌಕರರಿಗೆ ಬರತಕ್ಕಂಥ ಸವಲತ್ತುಗಳನ್ನು ಕೊಡುವುದಕ್ಕೆ ಮಾನ್ಯ ಸಚಿವರು ಏನು ಅಭಿಪ್ರಾಯ ಪಡುತ್ತಾರೆ ? ಇನ್ನೆಷ್ಟು ದಿವಸಗಳಲ್ಲಿ ಈ ವ್ಯವಸ್ಥೆಯನ್ನು ಮಾಡುತ್ತೀರೆಂದು ನಾನು ಕೇಳುತ್ತೇನೆ.

ಶ್ರೀ ಕೆ. ರಾಮಭಟ್.—ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿರಲಿಲ್ಲ. ಪುತ್ತೂರಿನಲ್ಲಿ ಬೈಪಾಸ್ ರಸ್ತೆ ಮಾಡಬೇಕೆಂದು ಒತ್ತಾಯಿಸುತ್ತಲೇ ಬಂದಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಮಾಡಿಕೊಡುತ್ತೇನೆಂದು ಬರೆದು ಕೊಟ್ಟಿದ್ದಾರೆ. ಮಾನ್ಯ ದೇವೇಗೌಡರಿಗೆ ಏಕೆ ಈ ಧೈರ್ಯ ಬರಲಿಲ್ಲವೆಂದು ಗೊತ್ತಾಗಲಿಲ್ಲ. ಇದನ್ನು ಮಾಡಿಕೊಟ್ಟರೆ ಪುತ್ತೂರಿನಲ್ಲಿ ಜನರು ನಿಮ್ಮನ್ನು ಕೊಂಡಾಡುತ್ತಾರೆ.

ಶ್ರೀ ಎಂ. ಜಿ. ಸತ್ಯನಾರಾಯಣ.—ಈಗ ಇಷ್ಟು ಹೊತ್ತು ಚರ್ಚೆ ಆಯಿತು. ಆದರೆ ನಮ್ಮ ರಾಷ್ಟ್ರಶಿಲ್ಪಿಯಾದ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಎಲ್ಲರೂ ಮರತೇ ಬಿಟ್ಟಿದ್ದಾರೆ. ಅವರು ಇದ್ದ ಸಂದರ್ಭದಲ್ಲಿ ಸಣ್ಣ ನೀರಾವರಿ ಕೆಲಸಗಳ ಪೈಕಿ ನೆಲಮಂಗಲದ ಬಳಿ ನರಸಳ್ಳಿ ಹತ್ತಿರ ಕುಮುದ್ವತಿ ನದಿಗೆ ಸೇತುವೆ ಕಟ್ಟಬೇಕೆಂದು ತೀರ್ಮಾನ ಆಗಿತ್ತು.

ಏನೋ ಕಾರಣದಿಂದ ಅವರು ತೀರಿಹೋದರು. ಅವರು ಈ ಬಗ್ಗೆ ಹಲವಾರು ಕೆಲಸ ಮಾಡಿದ್ದಾರೆ. ಅವರ ನೆನಪಿಗೋಸ್ಕರವಾಗಿಯಾದರೂ ಮಾನ್ಯ ಮಂತ್ರಿಗಳು ಆ ಊರಿನಲ್ಲಿ ಈ ವರ್ಷದಲ್ಲೇ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಕಟ್ಟಡಗಳ ಬಗ್ಗೆ ಸ್ವಲ್ಪ ಹಣ ಕಡಿಮೆ ಇಟ್ಟಿದ್ದೀರಿ. ರಿಪೇರಿಗೂ ಸಹ ಅದು ಸಾಕಾಗುತ್ತದೋ ಇಲ್ಲವೋ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಬೆಂಗಳೂರಿನಲ್ಲಿರುವ ವಿಧಾನಸೌಧದ ಕಟ್ಟಡವನ್ನೂ ಸಹ ಸೇರಿಸಿಕೊಂಡು ಸರ್ಕಾರೀ ಕಟ್ಟಡಗಳು ಎಲ್ಲೆಲ್ಲಿ ಇವೆಯೋ ಅದರ ರಿಪೇರಿ ಕೆಲಸಗಳನ್ನು ೫ ವರ್ಷದವರೆಗೆ ಸ್ಥಗಿತ ಮಾಡಿ ಹಳ್ಳಿಗಳಲ್ಲಿರುವ ಶಾಲಾ ಕಟ್ಟಡಗಳು ರಿಪೇರಿ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ನಾಗರಾಜು.—ಸ್ವಾಮಿ, ನಮ್ಮ ಕೋಲಾರ ಜಿಲ್ಲೆಯಲ್ಲಿ ಅಪ್ಪರ ಭದ್ರಾ ಆಗಲಿ, ಕೃಷ್ಣಾ ಪ್ರಾಜೆಕ್ಟ್ ಆಗಲಿ, ಹೇಮಾವತಿ ಪ್ರಾಜೆಕ್ಟ್ ಆಗಲಿ, ಯಾವುದೂ ಇಲ್ಲ. ಮಾನ್ಯ ಮಂತ್ರಿಗಳು ಗಂಗಾ ಕಲ್ಯಾಣ ಅನ್ನುವ ಒಂದು ಯೋಜನೆಯನ್ನು ತರುತ್ತೇವೆ ಎಂದು ಏನು ಹೇಳಿದ್ದಾರೋ ಆ ಬಗ್ಗೆ ನಮ್ಮ ಕೋಲಾರ ಜಿಲ್ಲೆಗೆ ಮೊದಲ ಆದ್ಯತೆ ಕೊಡಬೇಕೆಂದು ಹೇಳುವುದಲ್ಲದೇ ನಮ್ಮ ಜಿಲ್ಲೆಗೆ ಇದಕ್ಕೆ ಹೆಚ್ಚು ಹಣವನ್ನು ಕೊಟ್ಟು ಈ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದು ನಾನು ಹೇಳಬಯಸುತ್ತೇವೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ನನ್ನ ಕ್ಷೇತ್ರ ಬಯಲುಸೀಮೆ. ಅಲ್ಲಿರುವ ಕೆರೆಗಳೆಲ್ಲಾ ಮಣ್ಣು ತುಂಬಿ ಹೂತು ಹೋಗಿವೆ. ಆದುದರಿಂದ ಆ ಕೆರೆಗಳಲ್ಲಿ ಮೊದಲು ಯಾವ ಪ್ರಮಾಣದಲ್ಲಿ ನೀರು ಬರುತ್ತಿತ್ತೋ ಅಷ್ಟು ಪ್ರಮಾಣದಲ್ಲಿ ಈಗ ನೀರು ಬರುತ್ತಾ ಇಲ್ಲ. ಆದುದರಿಂದ ಸರ್ಕಾರದಲ್ಲಿ ಹೂಳು ತೆಗೆಯುವ ಕಾರ್ಯಕ್ರಮ ಏನು ಇದೆ ಅದರ ಬಗ್ಗೆ ಆದ್ಯತೆ ಕೊಟ್ಟು ನಮ್ಮ ಭಾಗದಲ್ಲಿ ಆ ಕೆಲಸಗಳನ್ನು ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ನಮ್ಮ ರಾಜ್ಯದಲ್ಲಿ ಪೂರ್ವ ದಿಕ್ಕಿನಲ್ಲಿ ಹರಿಯುವ ನದಿಗಳ ನೀರು ಇರುವುದೇ ಜಾಸ್ತಿ. ಪಶ್ಚಿಮ ದಿಕ್ಕಿನಲ್ಲಿ ಹರಿಯುವ ನದಿಗಳ ನೀರು ಕಡಿಮೆ. ಯಾವ ಭಾಗದಲ್ಲಿ ಪಶ್ಚಿಮ ದಿಕ್ಕಿನಲ್ಲಿ ನದಿಗಳ ನೀರು ಹರಿಯುವದಿಲ್ಲವೋ ಆ ಭಾಗಕ್ಕೆ ಪೂರ್ವ ದಿಕ್ಕಿನಲ್ಲಿ ಹರಿಯುವ ನದಿಗಳ ನೀರನ್ನು ತಿರುಗಿಸಿದರೆ ಬೇಕಾದಷ್ಟು ನೀರಾವರಿ ಮಾಡಬಹುದು. ಇದರ ಬಗ್ಗೆ ತಜ್ಞರ ಅಭಿಪ್ರಾಯವೂ ಇದೆ. ಅದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿದೆ. ಆ ರೀತಿ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಮಾತಿನಲ್ಲಿ ನನಗೆ ಬಹಳ ನಂಬಿಕೆ ಇದೆ. ಈ ಕಾವೇರಿ ಬೆಸಿನ್‌ನಲ್ಲಿ ಬರತಕ್ಕಂಥಾ ನೀರನ್ನು ಉಪಯೋಗ ಮಾಡಿಕೊಳ್ಳುವುದರ ಬಗ್ಗೆ ೧೯೭೬ರಲ್ಲಿ ಈ ಮನೆಯಲ್ಲಿ ಒಂದು ರಸಲ್ಯೂಷನ್ ಆಗಿದೆ. ಅದರ ಬಗ್ಗೆ ಭದ್ರತೆ ಇದೆ. ಈಗ ಹೇಮಾವತಿ ಬಗ್ಗೆ ಹೇಳುವುದಾದರೆ ಅಲ್ಲಿ ಒಂದು ಟನಲ್ ಕೆಲಸ ನವಿಲ್ ಬಾಗೂರಿನಲ್ಲಿ ನಡೆಯುವ ಕೆಲಸ ೩೦೦ ಮೀಟರ್ ಅಷ್ಟು ಆಗ ಬೇಕಾಗಿತ್ತು. ಅದನ್ನು ಈಗ ೧೦೦ ಮೀಟರ್‌ಗೆ ಇಳಿಸಿದ್ದಾರೆ. ಕಾಲುವೆಯಲ್ಲಿ ಜಾಸ್ತಿ ಕೆಲಸ ಆಗುತ್ತಾ ಇಲ್ಲ. ಆದುದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಒಂದಕ್ಕೆ ೩ ರಷ್ಟು ಕೆಲಸ ಅಲ್ಲಿ ಏನು ಸ್ಥಗಿತವಾಗಿ ಅದನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ, ೧೯೮೫ರಲ್ಲೇ ಅವರಿಗೆ ನೀರು ಕೊಡುತ್ತೇವೆಂದು ಹೇಳಿದ್ದರು. ಈಗ ಅದು ೧೯೮೭ನೇ ಇಸವಿಗೆ ಬಂದಿದೆ. ಆವಾಗಲೂ ಆ ಕೆಲಸ ಆಗುತ್ತದೋ ಇಲ್ಲವೋ ಅನ್ನುವ ಅನುಮಾನ ಬಂದಿದೆ. ಈ ಕೆಲಸ ಏತಕ್ಕೆ ವಿಳಂಬವಾಗಿದೆ ಅನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳವರು ದಯಮಾಡಿ ಸ್ಪಷ್ಟಪಡಿಸಬೇಕು ಎಂದು ಕೇಳುತ್ತೇನೆ. ಇನ್ನು ಇದರಲ್ಲಿ ಬಾಕಿ ಕೆಲಸಗಳು ಏನು ಉಳಿದಿದೆ ಅದಕ್ಕೂ ಸಹ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ತುಮಕೂರು–ಬೆಂಗಳೂರು ಹೆದ್ದಾರಿಯಲ್ಲಿ ಸಾಮಾನ್ಯವಾಗಿ ಅಪಘಾತಗಳು ಆಗುತ್ತಲೇ ಇವೆ. ಇತ್ತೀಚೆಗೂ ೨-೩ ಆಕ್ಸಿಡೆಂಟ್ಸ್ ಆಯಿತು. ಆದುದರಿಂದ ಆ ರೋಡ್ ಅನ್ನು ಡಬಲ್ ರೋಡ್ ಮಾಡುವುದರ ಬಗ್ಗೆ ತಾವು ಈಗ ಏನು ಕಾರ್ಯಕ್ರಮ ಕೈಗೊಂಡಿದ್ದೀರಾ ಅದನ್ನು ಹೇಳಬೇಕು.

ಇನ್ನು ನನ್ನ ಕೆಲವು ಸ್ನೇಹಿತರು ಏನು ಹೇಳಿದರು ಎಂದರೆ ಎಲ್ಲ ಮಣ್ಣನ್ನೂ ಸಹ ಆ ರೈತರು ಒತ್ತುವರಿ ಮಾಡಿಕೊಂಡು ಬಾಗಕ್ಕೆ ಉಪಯೋಗಿಸುತ್ತಾ ಇರುವುದರಿಂದ ಆ ಕೆರೆಗಳಲ್ಲಿ ಹೂಳು ತುಂಬಿ ಹೋಗಿರುತ್ತದೆ, ಆ ಕೆರೆಗೆ ಮಣ್ಣು ತುಂಬಿಕೊಂಡು ಬಿಟ್ಟಿರುವುದರಿಂದ ಯಾವ ಪ್ರಮಾಣದಲ್ಲಿ ಆ ಕೆರೆಯಲ್ಲಿ ನೀರು ಉಳಿಯಬೇಕು ಆ ಪ್ರಮಾಣದಲ್ಲಿ ನೀರು ಇರುವುದಿಲ್ಲ ಎಂದು, ಇದರಿಂದ ಕೆರೆಗಳೆಲ್ಲಾ ಹಾಳಾಗಿ ಹೋಗುತ್ತಾ ಇದೆ. ಇದನ್ನು ತಡೆಯಲಿಕ್ಕೆ ಆ ಕೆರೆಗಳಲ್ಲಿ ಸರಿಯಾಗಿ ನೀರನ್ನು ತುಂಬಲಿಕ್ಕೆ ತಾವು ಏನು ಕಾರ್ಯಕ್ರಮ ಕೈಗೊಂಡಿದ್ದೀರಾ ಅನ್ನುವುದನ್ನು ಹೇಳಬೇಕು.

ಶ್ರೀ ಪ್ರತಾಪ್‌ಚಂದ್ರ ಶೆಟ್ಟಿ.—ಸ್ವಾಮಿ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರಾಹಿ ಯೋಜನೆಯನ್ನು ಕೈಬಿಟ್ಟಿದ್ದೀರಿ, ಆ ಕೆಲಸವನ್ನು ಯಾವಾಗ ತೆಗೆದುಕೊಂಡು ಮುಗಿಸುತ್ತೀರಿ ಅನ್ನುವುದನ್ನು ಹೇಳಬೇಕು.

ಶ್ರೀ ಬಿ. ಸ್ವಾಮಿರಾವ್.—ಸ್ವಾಮಿ, ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ತುಂಗ ಲಿಫ್ಟ್ ಇರ್ರಿಗೇಷನ್ ಸ್ಕೀಂ ಬಹಳ ಹಿಂದೆಯೇ ಆಗಬೇಕಾಗಿತ್ತು. ಅದು ಹಾಗೆಯೇ ಇದೆ, ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಾ ಅನ್ನುವುದನ್ನು ಹೇಳಬೇಕು.

ಶ್ರೀ ಜಿ. ಎಸ್. ಬಸವರಾಜು.—ಅಧ್ಯಕ್ಷರೇ, ಇದು ಒಂದು ಗಂಭೀರವಾದ ಪ್ರಶ್ನೆ. ನಾನು ಈ ಬಗ್ಗೆ ಹಿಂದೆ ಕೇಳಿದಾಗ ಮಾನ್ಯ ಮಂತ್ರಿಗಳು ಒಂದು ಆಶ್ವಾಸನೆ ಕೊಟ್ಟಿದ್ದರು. ಅದ್ಯಾವುದು ಎಂದರೆ ಜಮ್ಮದಹಳ್ಳಿ ಪ್ರಾಜೆಕ್ಟ್ ವಿಷಯದ ಬಗ್ಗೆ ಕೇಳಿದಾಗ ಆ ಕೆಲಸ ಮಾಡಿಕೊಡುತ್ತೇನೆಂದು ಹೇಳಿದ್ದರು. ಆ ಯೋಜನೆಯನ್ನು ಮಾಡಿದರೆ ಅದರಿಂದ ಸುಮಾರು ೬ ಸಾವಿರ ಎಕರೆ ಅಚ್ಚುಕಟ್ಟಿಗೆ ನೀರಾವರಿಯಾಗುತ್ತದೆ. ಈಗ ಬರೀ ೫೦೦ ಎಕರೆಗೆ ಮಾತ್ರ ಆಗುತ್ತಾ ಇದೆ. ಇದರ ಬಗ್ಗೆ ನಾನು ಹೇಳಿದ್ದಕ್ಕೆ ಓಬಿರಾಯನ ಒಂದು ಡಿವಿಯೇಷನ್ ಮಾಡಿದರೆ ಹೇಗೆ ? ಆದರಿಂದ ಅಲ್ಲಿ ೬ ಸಾವಿರ ಎಕರೆ ನೀರಾವರಿಯಾಗುತ್ತದೆ. ಇದರ ಬಗ್ಗೆ ತಾವು ಗಮನಕೊಟ್ಟು ಇದನ್ನು ಸಪ್ಲಿಮೆಂಟರಿ ಬಡ್ಜೆಟ್‌ಗೆ ಸೇರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಡಿ.ಸೋಮಪ್ಪ.—ಈ ಇರಿಗೇಷನ್‌ನಲ್ಲಿ ಒಂದು ಲಕ್ಷದವರೆಗೆ ಪೀಸ್‌ವರ್ಕ್ ತೆಗೆದುಕೊಳ್ಳಬಹುದು ಎಂದು ಮಾಡಿದ್ದೀರಿ. ಹಾಗೆಯೇ ರೆಗ್ಯುಲರ್‌ನಲ್ಲೂ ಕೂಡ ಪಿಸ್‌ವರ್ಕ್ ಕೊಡುವ ಹಾಗೆ ಮಾಡಿದರೆ ಉತ್ತಮ ಎಂದು ಹೇಳುತ್ತೇನೆ. ಇನ್ನು ತಾವು ಹಳ್ಳಿ ಹೆದ್ದಾರಿ ಬಗ್ಗೆ ಏನು ಹೇಳಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತು ನೀವು ಇದರಲ್ಲಿ ಸೇತುಬಂಧನ ಮಾಡುತ್ತೇವೆಂದು ಏನು ಹೇಳಿದ್ದೀರಿ ಅದು ಶಾಸಕಬಂಧನ ಆಗಬಾರದು ಎಂದು ಅಷ್ಟು ಮಾತ್ರ ಹೇಳಬಯಸುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕಳೆದ ತಿಂಗಳು ೧೬ನೇ ತಾರೀಖು ಮಂಡ್ಯಕ್ಕೆ ಭೇಟಿ ಕೊಟ್ಟಾಗ......

ಶ್ರೀ ಎ. ಮುನಿಯಪ್ಪ.—ಸ್ವಾಮಿ, ತಾವು ಕ್ಲಾರಿಫಿಕೇಷನ್ ಮಾತ್ರ ಕೇಳಿ ಅಂತ ಹೇಳಿದ್ದೀರಾ ? ಇದರ ಬಗ್ಗೆ ಭಾಷಣ ಮಾಡುತ್ತಿದ್ದಾರೆ ಅಲ್ಲದೆ ಭಾಷಣ ಮಾಡಿದವರಿಗೆ ಮತ್ತೆ ಮತ್ತೆ ಛಾನ್ಸ್ ಕೊಡುತ್ತಿದ್ದೀರಿ. ಇದರಿಂದ ಸಿಕ್ಕಿದವರಿಗೇನೇ ಮತ್ತೆ ಮತ್ತೆ ಛಾನ್ಸ್ ಬರುತ್ತಾ ಇದೆ. ಬಾಕಿಯವರಿಗೆ ಸಿಕ್ಕುತ್ತಾ ಇಲ್ಲ, ಈಗಾಗಲೇ ೮–೯ ಗಂಟೆಯಾಗಿದೆ, ನಾವು ಇನ್ನು ಎಷ್ಟು ಹೊತ್ತು ಕೂತುಕೊಳ್ಳಬೇಕು ಅನ್ನುವುದನ್ನು ಹೇಳುತ್ತೀರಾ ಸ್ವಾಮಿ ?

ಶ್ರೀ ಹೆಚ್. ಡಿ. ಚೌಡಯ್ಯ.—ಸಿಕ್ಕಿ ಸಿಕ್ಕಿದವರಿಗೇನೇ ಛಾನ್ಸ್ ಕೊಡುತ್ತೀರಿ ಎಂದರೆ ಏನು ಅರ್ಥ ಸ್ವಾಮಿ ? ನಾವೇನೂ ಇಲ್ಲಿ ಕುರಿ ಕಾಯುವುದಕ್ಕೆ ಬಂದಿದ್ದೇವೆಯೋ ಅಥವಾ ಬಟ್ಟೆ ಒಗೆಯುವುದಕ್ಕೆ ಬಂದಿದ್ದೇವೆಯೋ, ಏನು ಸ್ವಾಮಿ ಇದು ?

(ಗೊಂದಲ)

ಶ್ರೀ ಎ. ಮುನಿಯಪ್ಪ.—ಅಧ್ಯಕ್ಷರೇ, ನಾನು ಹೇಳಿದ್ದು ಇದರಲ್ಲಿ ಯಾರು ಭಾಗವಹಿಸಿದ್ದಾರೆ ಅವರಿಗೆ ಮತ್ತೆ ಕೇಳುವುದಕ್ಕೆ ಅವಕಾಶ ಕೊಡಬಾರದು, ಯಾರು ಭಾಗವಹಿಸುವುದಿಲ್ಲವೋ ಅಂಥಾವರಿಗೆ ಕೊಡಿ. ಅವರಿಗೆ ಸಿಟ್ಟು ಬಂದರೆ ನನಗೂ ಸಿಟ್ಟು ಬರುತ್ತದೆ, ಅವರು ಜಗಳವಾಡಬೇಕೆಂದಿದ್ದರೆ ನನಗೂ ಕೂಡ ಜಗಳವಾಡುವುದಕ್ಕೆ ಬರುತ್ತದೆ.

(ಗೊಂದಲ)

ಶ್ರೀ ಹೆಚ್. ಡಿ. ಚೌಡಯ್ಯ.—ಕೇಳಿದ್ದೀರಾ ಸ್ವಾಮಿ, ನಾವೇನೂ ಜಗಳ ಮಾಡುವುದಕ್ಕೆ ಬಂದಿದ್ದೇವೆಯೇ ? ನೀವೇ ಹೇಳಿ ಸ್ವಾಮಿ.

ಉಪಾಧ್ಯಕ್ಷರು.—ನೀವು ಹಿರಿಯ ಸದಸ್ಯರು, ಆ ರೀತಿಯಾಗಿ ಜಗಳ ಮಾಡಬೇಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎ. ಮುನಿಯಪ್ಪ.—ಸ್ವಾಮಿ. ಹೀಗೆ ಕೇಳುತ್ತಾ ಹೋದರೆ ರಾತ್ರಿ ೧೦-೧೨ ಗಂಟೆಯಾದರೂ ಮುಗಿಯುವುದಿಲ್ಲ. ಎಲ್ಲರೂ ಕೇಳುವುದಕ್ಕೆ ಶುರು ಮಾಡುತ್ತಾರೆ.

ಶ್ರೀ ಹೆಚ್. ಡಿ. ಚೌಡಯ್ಯ.—ಕೇಳಿದ್ದೀರಾ ಸ್ವಾಮಿ, ನಾವು ಇಲ್ಲಿಗೆ ಜನಗಳ ಪ್ರತಿನಿಧಿಗಳಾಗಿ ಬಂದಿದ್ದೇವೆ. ರಾತ್ರಿ ೧೨ ಗಂಟೆ ಅಲ್ಲ ೧-೨ ಗಂಟೆಯುವರಿಗಾದರೂ ಪರವಾಯಿಲ್ಲಾ, ರಾತ್ರಿಯೆಲ್ಲಾ ಕೂತುಕೊಂಡರೂ ಪರವಾಯಿಲ್ಲಾ, ನಾವು ಕೂತುಕೊಳ್ಳುವುದಕ್ಕೆ ತಯಾರು ಇದ್ದೇವೆ.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಬೇಗನೆ ಕ್ಲಾರಿಫಿಕೇಷನ್ ಕೇಳಿ ಮುಗಿಸಿ.

ಶ್ರೀ ಹೆಚ್. ಡಿ. ಚೌಡಯ್ಯ.—ಸ್ವಾಮಿ, ಈ ಒಂದು ಡಿಮ್ಯಾಂಡ್ ಅನ್ನು ಮೂರು ದಿವಸ ಇಟ್ಟುಕೊಂಡು ಮುಗಿಸುತ್ತಿದ್ದರು. ಈವೊತ್ತು ಈ ಡಿಮ್ಯಾಂಡ್ ಅನ್ನು ಬರೀ ಒಂದೇ ದಿವಸದಲ್ಲಿಯೇ ಇದರ ಡಿಸ್ಕಷನ್ ಪೂರ್ತಿ ಮುಗಿಸಬೇಕು ಎಂದರೆ ಏನು ಅರ್ಥ ಸ್ವಾಮಿ ? ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳುವುದಕ್ಕಾದರೂ ಸ್ವಲ್ಪ ಟೈಂ ಬೇಡವೇ !

ಉಪಾಧ್ಯಕ್ಷರು.—ನೀವು ಕೇಳಿ ಸ್ವಾಮಿ, ಬೇಗನೆ ಮುಗಿಸಿ ಸ್ವಾಮಿ.

ಶ್ರೀ ಕೆ. ಕೆಂಪೇಗೌಡ.—ಕೆ. ಆರ್. ಸಾಗರದ ಅಣೆಕಟ್ಟೆಯ ಮೇಲೆ ಭಾರಿ ವಾಹನಗಳು ಓಡಾಡುವುದರಿಂದ ಡ್ಯಾಮು ದಿನೇ ದಿನೇ ಕ್ಷೀಣವಾಗುವ ದುಸ್ಥಿತಿಗೆ ಬರುವ ಸಾಧ್ಯತೆ ಇದೆ ಎಂದು ಕೇಂದ್ರ ಸರ್ಕಾರದಿಂದ ಬಂದಿದ್ದಂತಹ ತಾಂತ್ರಿಕ ಸಮಿತಿಯವರೂ ಸಲಹೆ ಮಾಡಿದ್ದಾರೆ, ಭಾರಿ ವಾಹನಗಳು ಡ್ಯಾಂ ಮೇಲೆ ಓಡಾಡುವುದರಿಂದ ಡ್ಯಾಂನ ಆಯಸ್ಸು ಬಹಳ ಕಡಿಮೆಯಾಗುತ್ತದೆ. ಎನ್ನತಕ್ಕಂತಹ ಅಭಿಪ್ರಾಯವನ್ನೂ ಕೂಡ ತಾಂತ್ರಿಕ ಸಮಿತಿಯವರು ಕೊಟ್ಟಿದ್ದಾರೆ. ಆದ್ದರಿಂದ ಡ್ಯಾಂ ಕೆಳ ಭಾಗದಲ್ಲಿ ಸೇತುವೆಯ ವ್ಯವಸ್ಥೆಯನ್ನು ಮಾಡುವುದಕ್ಕೆ ಹಿಂದಿನ ಸರ್ಕಾರವೇ ಆ ಬಗ್ಗೆ ಯೋಚನೆ ಮಾಡಿತ್ತು. ನಮ್ಮ ಸರ್ಕಾರ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಕಾವೇರಿ ಪೂಜೆಯನ್ನು ಮಾಡುವುದಕ್ಕೆ ಬಂದಿದ್ದ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳೂ ಕೂಡ ಆಗ ಹಾಜರಿದ್ದರು. ಅವರು ಕೂಡ ಈ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಈ ವರ್ಷದ ಆಯವ್ಯಯದಲ್ಲಿ ಸೇರಿಸುತ್ತೇವೆಂದು ಹೇಳಿದ್ದರು. ಆದರೆ ಅದನ್ನು ಸೇರಿಸಿಲ್ಲ. ದಯಮಾಡಿ ಈ ಕೆಲಸವನ್ನು ಮಾಡಿಸಿಕೊಟ್ಟರೆ ಬಹಳಷ್ಟು ಜನಗಳಿಗೆ ಇದರಿಂದ ಉಪಕಾರವಾಗುತ್ತದೆ. ಡ್ಯಾಂ ಆಯುಸ್ಸು ಕೂಡ ಇದರಿಂದ ಹೆಚ್ಚಾಗುತ್ತದೆಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ದಯಮಾಡಿ ಈ ಕೆಲಸವನ್ನು ಕೂಡಲೇ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಚಿಕ್ಕ ಚಿಕ್ಕ ನೀರಾವರಿ ಕೆರೆಯನ್ನು ನಿರ್ಮಾಣ ಮಾಡುವ ಕಾಲಕ್ಕೆ ಎಷ್ಟೋ ಕಡೆ ಭೂಮಿಯನ್ನು ಕಳೆದುಕೊಂಡಿದ್ದಾಗೆ. ಆದರೆ ಅವರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ, ನಮ್ಮ ರೋಣ ತಾಲ್ಲೂಕಿನ ನಾಗಯ್ಯರಿ ಕೊಪ್ಪದ ಕೆರೆ ಇದೆ. ಕೆರೆ ಏನೋ ನಿರ್ಮಾಣವಾಯಿತು. ಅದರಲ್ಲಿ ಭೂಮಿಯನ್ನು ಕಳೆದುಕೊಂಡಂತಹವರಿಗೆ ಪರಿಹಾರ ಸಿಕ್ಕಿಲ್ಲ. ಹೀಗೆ ಅನೇಕ ಕಡೆ ಈ ರಾಜ್ಯದಲ್ಲಿ ಇದ್ದರೂ ಇರಬಹುದು, ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂದು ಕೇಳುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ.—ಇಲ್ಲಿಯವರೆಗೆ ಮೇಜರ್ ಇರಿಗೇಷನ್ ಬಗ್ಗೆ ಎಲ್ಲರೂ ಹೆಚ್ಚು ಮಾತನಾಡಿದರು. ಮೈನರ್ ಇರಿಗೇಷನ್ ಬಗ್ಗೆ ಯಾರೂ ಕೇಳಲಿಲ್ಲ. ಮೇಜರ್ ಇರಿಗೇಷನ್ ಅನ್ನು ಮಾಡುವುದಕ್ಕೆ ಬದಲು ಮೈನರ್ ಇರಿಗೇಷನ್ ಅನ್ನು ಎಲ್ಲ ಕಡೆ ಮಾಡುವುದರಿಂದ ದೇಶದ ಸಂಪತ್ತು ಹೆಚ್ಚಿಗೆಯಾಗುತ್ತದೆ. ಈ ಮಾತನ್ನು ಮೊನ್ನೆ ಹಿಡಕಲ್ ಡ್ಯಾಂ ಅನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡಿದಾಗ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರೂ ಕೂಡ ಹೇಳಿದ್ದಾರೆ. ಆದ್ದರಿಂದ ಹೆಚ್ಚಿನ ಆದ್ಯತೆಯನ್ನು ಸಣ್ಣ ನೀರಾವರಿ ಯೋಜನೆಯ ಬಗ್ಗೆ ಕೊಡುತ್ತಾರೆಯೇ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಮತ್ತೆ ನಮ್ಮ ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿಗಳೂ ಇಲ್ಲ. ರಾಜ್ಯ ಹೆದ್ದಾರಿಗಳೂ ಇಲ್ಲ. ಬೆಂಗಳೂರಿನಿಂದ ಮಾಗಡಿ ಮಾರ್ಗವಾಗಿ ಹುಲಿಯೂರು ದುರ್ಗ–ಮದ್ದೂರು–ಕುಣಿಗಲ್ ಈ ಪ್ರದೇಶಗಳಿಗೆ ಸಂಪರ್ಕ ಇರುವಂತಹ ಹಾಲಿ ರಸ್ತೆಯನ್ನು ರಾಜ್ಯ ಹೆದ್ದಾರಿ ಎಂಬುದಾಗಿ ಪರಿವರ್ತನೆ ಮಾಡಿ ಅದನ್ನು ಇಂಪ್ರೂವ್ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರ ನಿರೀಕ್ಷೆ ಮಾಡುತ್ತೇನೆ

ಒಬ್ಬ ಮಾನ್ಯ ಸದಸ್ಯರು.—ಘಟಪ್ರಭಾ ಯೋಜನೆಯನ್ನು ಮೊನ್ನೆ ರಾಷ್ಟ್ರದ ಪ್ರಧಾನಮಂತ್ರಿಗಳು ದೇಶಕ್ಕೆ ಅರ್ಪಿಸಿದಾಗ ಮಾನ್ಯ ಮಂತ್ರಿಗಳೂ ಕೂಡ ಆ ಸಭೆಯಲ್ಲಿ ಉಪಸ್ಥಿತರಿದ್ದರು. ಈ ಯೋಜನೆಯಲ್ಲಿ ಮುಳುಗಡೆಯಾಗಿರತಕ್ಕಂತಹ ೩೦ ಹಳ್ಳಿಗಳು ಇವೆ. ಆ ಹಳ್ಳಿಗಳಲ್ಲಿ ಇರತಕ್ಕಂತಹ ಜನರನ್ನು ಪುನರ್ವಸತಿ ಮಾಡಿದ್ದಾರೆ. ಆದರೂ ಅವರಿಗೆ ಒಂದು ಎಕರೆ ಕೂಡ ಈ ಯೋಜನೆಯ ಕಾಲುವೆಯಿಂದ ನೀರಾವರಿಯಾಗುವುದಿಲ್ಲ. ಆದ್ದರಿಂದ ಇವರಿಗೆ ಅನುಕೂಲ ಮಾಡಿಕೊಡುವುದಾದರೆ ಏತ ನೀರಾವರಿ ಯೋಜನೆ ಒಂದೇ ಮಾರ್ಗ. ಇದರ ಬಗ್ಗೆ ನಾನು ಈಗಾಗಲೇ ೩-೪ ಪತ್ರಗಳು ಮಾನ್ಯ ಮುಖ್ಯಮಂತ್ರಿಗಳವರಿಗೆ ಬರೆದಿದ್ದೇನೆ. ಅದನ್ನು ಮಾಡದಿದ್ದರೆ ಈ ಯೋಜನೆಯಲ್ಲಿ ಮನೆ ಮಠ ಹಾಗೂ ಭೂಮಿಯನ್ನು ಕಳೆದುಕೊಂಡಂತಹ ೩೦ ಹಳ್ಳಿಯ ಜನರಿಗೆ ಸಹಾಯವನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅವರಿಗೆ ಏತ ನೀರಾವರಿ ಯೋಜನೆ ಮೂಲಕವಾದರೂ ನೀರಾವರಿಯನ್ನು ಮಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಂತರಾಮರೆಡ್ಡಿ.—ನಮ್ಮ ಜಿಲ್ಲೆಯಲ್ಲಿ ಯಾವುದೇ ಪ್ರಾಜೆಕ್ಟುಗಳು ಇಲ್ಲ. ಆದ್ದರಿಂದ ಕೆರೆ ಅಂಗಳದಲ್ಲಿ ಸಾಮೂಹಿಕ ವ್ಯವಸಾಯ ಬಾವಿಗಳನ್ನು ತೆಗೆದುಕೊಂಡರೆ ಅದರಿಂದ ನೀರೂ ಕೂಡ ಹೆಚ್ಚಾಗಿ ಬರುವುದಕ್ಕೆ ಅವಕಾಶ ಇದೆ. ಆದ್ದರಿಂದ ಕೆರೆ ಅಂಗಳದಲ್ಲಿ ಸಾಮೂಹಿಕ ವ್ಯವಸಾಯ ಬಾವಿಗಳನ್ನು ಸರ್ಕಾರದಿಂದ ಅಥವಾ ಎನ್.ಆರ್.ಇ.ಪಿ ಯೋಜನೆಯಿಂದ ತೆಗೆದು ಅದರಿಂದ ಹೆಚ್ಚಿನ ಪ್ರಯೋಜನವನ್ನು ರಾಜ್ಯದ ಜನರಿಗೆ ಒದಗಿಸಿ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಜಿ. ರಾಮಲಿಂಗಯ್ಯ.—ನಮ್ಮ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಅತಿ ಕಡಿಮೆ ನೀರಾವರಿಯಾಗತಕ್ಕ ತಾಲ್ಲೂಕು. ಇಲ್ಲಿಯವರೆಗೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ಮಾತನಾಡುತ್ತಿರುವುದನ್ನು ಕೇಳಿ ನನ್ನ ಬಾಯಲ್ಲಿ ನೀರು ಬಂತು. ನಮ್ಮ ತಾಲ್ಲೂಕಿಗೂ ಕೂಡ ಏನಾದರೂ ಮಾಡಿ ಹೇಮಾವತಿ ಯೋಜನೆಯಿಂದಾಗಲಿ ಅಥವಾ ಅಪ್ಪರ ಭದ್ರಾ ಯೋಜನೆಯಿಂದಾಗಲಿ ನೀರನ್ನು ತರಿಸಿಕೊಟ್ಟು ಹೆಚ್ಚು ನೀರಾವರಿ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಏಕೆಂದರೆ ಮೊಳಕಾಲ್ಮೂರು ತಾಲ್ಲೂಕಿಗೆ ಅಪ್ಪರ್ ಭದ್ರಾ ಯೋಜನೆಯಿಂದ ನೀರನ್ನು ಕೊಡಬೇಕೆಂಬ ಯೋಚನೆ ಇದೆ ಎಂದು ಕೇಳಿದ್ದೇನೆ. ಅದನ್ನು ನಮ್ಮ ತಾಲ್ಲೂಕಿನ ಮೂಲಕ ಹಾದು ಹೋಗುವಂತೆ ಮಾಡಿದರೆ ಅನುಕೂಲವಾಗುತ್ತದೆಂದು ತಿಳಿಸುತ್ತಿದ್ದೇನೆ.

ಎರಡನೆಯದಾಗಿ ಬಿ.ಎಚ್. ರಸ್ತೆಯೊಳಗೆ ಅನೇಕ ಬ್ರಿಡ್ಜಸ್‌ಗಳು ಇವೆ. ಈ ಸಾರಿ ಬಡ್ಜೆಟ್ಟಿನಲ್ಲಿ ಇದನ್ನು ಸೇರಿಸುತ್ತಾರೆಂದು ನಾನು ಭಾವಿಸಿದ್ದೆ. ಸರಾಸರಿ ಗುಬ್ಬಿ ತಾಲ್ಲೂಕಿನ ಹಿರೇನಹಳ್ಳಿ ಎಂಬಲ್ಲಿ ಬಹಳ ಇಕ್ಕಟ್ಟಿನ ಬ್ರಿಡ್ಜ್ ಒಂದು ಇದೆ. ಇಲ್ಲಿ ಅನೇಕ ಸಾರಿ ವಾಹನ ಅಪಘಾತಗಳು ಆಗುತ್ತಿವೆ. ಅಲ್ಲೊಂದು ತಿರುವು ಇದೆ, ಅದನ್ನು ಇಂಪ್ರೂವ್ ಮಾಡಬೇಕು ಅಲ್ಲೊಂದು ಹೊಸದಾಗಿ ಸೇತುವೆ ಕಟ್ಟದಿದ್ದರೆ ಯಾವುದೇ ಸಂದರ್ಭದಲ್ಲಾದರೂ ದೊಡ್ಡ ಅನಾಹುತವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಮಂತ್ರಿಗಳು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಅವರಿಗೆ ಬೇರೆ ಕೆಲಸ ಇರಬಹುದು. ನಮಗೆ ಬೇರೆ ಕೆಲಸ ಏನೂ ಇಲ್ಲ. ಆತುರ ಕೂಡ ಇಲ್ಲ. ಬೆಳಗಿನವರೆಗೆ ಬೇಕಾದರೂ ಕೂಡೋಣ.

ಶ್ರೀ ಎಸ್ ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರಾದ ಮುನಿಯಪ್ಪನವರು ಸಿಕ್ಕಸಿಕ್ಕವರಿಗೆ ವಿವರವಾಗಿ ಮಾತನಾಡಿದಂತಹವರಿಗೆ ಮತ್ತೆ ಅವಕಾಶವನ್ನು ಕೊಡುವುದು ಬೇಡ, ಉಳಿದಂತಹವರಿಗೆ ಅವಕಾಶವನ್ನು ಕೊಡಿ ಅಂತ ಕೇಳುತ್ತಿದ್ದಾರೆ ಅಷ್ಟೆ. ಸಿಕ್ಕಸಿಕ್ಕವರಿಗೆ ಅಂತ ಹೇಳಿದ್ದು ಯಾರಿಗೆ ಈಗಾಗಲೇ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆಯೋ ಅವರಿಗೆ ಮತ್ತೆ ವಿವರಣೆಯನ್ನೂ ಕೇಳುವುದಕ್ಕೆ ಅವಕಾಶ ಕೊಡುವುದು ಬೇಡ ಅಂತ ಹೇಳಿದ್ದಾರೆ.